ವಿಷಯಾನುಕ್ರಮಣಿಕೆ

ಶ್ರೀಶಂಕರಾಚಾರ್ಯರವರ ಗ್ರಂಥಗಳು

# ಪ್ರಕರಣಗಳು

(ಜೀವನ್ಮುಕ್ತಾನಂದಲಹರಿ – ಮುಂತಾದ ಹನ್ನೊಂದು)

## ಸಂಪುಟ ೪

ಬರೆದವರು
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು:
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್)
ಹೊಳೆನರಸೀಪುರ–573211
2002
ದೂರವಾಣಿ: 0817–573820

# ಕೆಲವು ಪ್ರಕರಣ ಗ್ರಂಥಗಳು

೧. **ಪ್ರಕರಣಗಳು – ೧ನೆಯ ಸಂಪುಟ : ಉಪದೇಶಸಾಹಸ್ರಿ.** ಇದು ಪದ್ಯಭಾಗವೆಂದೂ ಗದ್ಯಭಾಗವೆಂದೂ ಎರಡು ಭಾಗಗಳಾಗಿವೆ. ಪದ್ಯ ಪ್ರಬಂಧವು ಶ್ರೀಶ್ರೀಗಳವರಿಂದ (ಪೂರ್ವಾಶ್ರಮ : ವೈ. ಸುಬ್ಬರಾವ್) ಕನ್ನಡಾನುವಾದ, ಟಿಪ್ಪಣಿ, ವಿವರಣೆ – ಮುಂತಾದ ಸೌಕರ್ಯಗಳೊಡನೆ ಪ್ರಥಮ ಬಾರಿಗೆ ೧೯೩೯ರಲ್ಲಿ ಒಂದನೆಯ ಭಾಗವು ಪ್ರಕಟಿತವಾಯಿತು. ೧೯೪೭ರಲ್ಲಿ ಎರಡನೆಯ ಮತ್ತು ೧೯೫೬ರಲ್ಲಿ ಮೂರನೆಯ ಭಾಗವೂ ಕ್ರಮವಾಗಿ ಪ್ರಕಟನವಾಗಿ ಪೂರ್ತಿಗೊಂಡಿತ್ತು. ೧೯೫೫ರಲ್ಲಿ ಮೂರು ಪದ್ಯಭಾಗಗಳನ್ನೂ ಒಟ್ಟುಗೂಡಿಸಿ ಮೂಲ, ಅನುವಾದ, ಅನ್ವಯ, ಟಿಪ್ಪಣಿ, ವಿವರಣೆಗಳೊಡನೆ ಒಂದೇ ಸಂಪುಟದಲ್ಲಿ ಹೊರತಂದಿದೆ. ವಿಚಾರಶೈಲಿಯಲ್ಲಿ ಪ್ರಸ್ಥಾನತ್ರಯಿಗಳೊಡನೆ ಸರಿತೂಗುವ ಗ್ರಂಥವಿದು.

(ಮೊದಲನೆಯ ಹೊಸ ಮುದ್ರಣ (೧೯೯೫) : ಪು. ಡೆಮ್ಮಿ ೧೬+೫೨೮)

ಇದೇ ಗ್ರಂಥದ ಗದ್ಯಭಾಗವು ೧೯೮೩ರಲ್ಲಿ ಪ್ರತ್ಯೇಕ ಗ್ರಂಥವಾಗಿ ಪ್ರಕಟವಾಗಿದ್ದು ಈಗ ಮೂರನೆಯ ಬಾರಿಗೆ ಮುದ್ರಣವಾಗಿ ಹೊರಬಂದಿದೆ. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೇದಾಂತತತ್ತ್ವವನ್ನು ವಿಚಾರಮಾಡಲಾಗಿದೆ. ಪ್ರಸ್ಥಾನತ್ರಯಭಾಷ್ಯಗಳಂತೆಯೇ ಪರಿಶುದ್ಧವೇದಾಂತತತ್ತ್ವವನ್ನು ನಿರೂಪಿಸಲಾಗಿದೆ.

(ಮೂರನೆಯ ಮುದ್ರಣ : (೨೦೦೧) ಪು. ಡೆಮ್ಮಿ ೧೨ + ೧೮೨)

೨. **ಪ್ರಕರಣಗಳು : ೨ನೆಯ ಸಂಪುಟ :** ಇದರಲ್ಲಿ ಸ್ವಾತ್ಮನಿರೂಪಣ, ಮನೀಷಾಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ – ಈ ಆರು ಪ್ರಕರಣಗಳಿವೆ. ಪ್ರತಿಯೊಂದಕ್ಕೂ ಅರ್ಥ, ಟಿಪ್ಪಣಿಗಳು, ವಿಚಾರ ಪ್ರಚೋದಕವಾದ ಪೀಠಿಕೆ ಮುಂತಾದವುಗಳಿವೆ.

(ಎರಡನೆಯ ಮುದ್ರಣ : (೨೦೦೨) ಪು. ಡೆಮ್ಮಿ ೨೬+೧೧೦)

೩. **ಪ್ರಕರಣಗಳು : ೩ನೆಯ ಸಂಪುಟ ಅಥವಾ ವಿವೇಕಚೂಡಾಮಣಿ :** ಶ್ರೀಶಂಕರಾಚಾರ್ಯರಚಿತವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ತನ್ನ ಸರಳವಾದ ಶೈಲಿಯಿಂದ ತತ್ತ್ವಪ್ರತಿಪಾದನೆ ಮಾಡುವದರಿಂದ ಬಹುಜನ ಪ್ರಿಯವಾದ ಪ್ರಕರಣವಾಗಿದೆ. 'ಗೀತಾ ತಾತ್ಪರ್ಯ ಬೋಧಿನಿ' ಕರ್ತೃಗಳಾದ ಶ್ರೀಶಂಕರಾನಂದರ ಕೃತಿಯಿದು – ಎಂಬುದನ್ನು ಶ್ರೀಶ್ರೀಗಳವರು ಪರಿಶಿಷ್ಟದಲ್ಲಿ ಎರಡೂ ಗ್ರಂಥಗಳ ಭಾಗಗಳ ಪರಸ್ಪರ ಹೋಲಿಕೆಯಿಂದ ಪ್ರತಿಪಾದಿಸಿದ್ದಾರೆ. ಮುಮುಕ್ಷುಗಳಿಗೂ ವಿಚಾರಪರರಾದ ಸಂಶೋಧಕರಿಗೂ ಅಗತ್ಯವಾಗಿ ಬೇಕಾದ ಗ್ರಂಥವಾಗಿದೆ.

(ಮೂರನೆಯ ಮುದ್ರಣ : (೧೯೯೩) ಪು. ಡೆಮ್ಮಿ ೧೮+೨೨೦)

೪. **ಪ್ರಕರಣಗಳು – ೪ನೆಯ ಸಂಪುಟ :** ಇದರಲ್ಲಿ ಜೀವನ್ಮುಕ್ತಾನಂದಲಹರೀ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀವಿಗರ್ಹ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ,

ಅಧ್ಯಾತ್ಮಗ್ರಂಥಾವಳಿ

ಶ್ರೀಶಂಕರಾಚಾರ್ಯವಿರಚಿತ

# ಪ್ರಕರಣಗಳು

(ಜೀವನ್ಮುಕ್ತಾನಂದಲಹರಿ – ಮುಂತಾದ ಹನ್ನೊಂದು)

ಸಂಪುಟ ೪

ಸಂಸ್ಕೃತಮೂಲ, ಅನುವಾದ, ಟಿಪ್ಪಣಿ, ಸಾರ, ಪರಿಶಿಷ್ಟ –
ಮುಂತಾದವುಗಳೊಡನೆ

ಸಂಪಾದಕರು
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ 107

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
(ಪಬ್ಲಿಕ್ ಛಾರಿಟಬಲ್ ಟ್ರಸ್ಟ್), ಹೊಳೆನರಸೀಪುರ
2002
ದೂರವಾಣಿ: 0817–573820

ಮೊದಲನೆಯ ಸಂಸ್ಕರಣ 1961 (1000 ಪ್ರತಿಗಳು)
ಎರಡನೆಯ ಮುದ್ರಣ 2002 (1000 ಪ್ರತಿಗಳು)

ಪುಟಗಳು : 12 + 170

ಬೆಲೆ : ರೂ. 40

© ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
**All Rights Reserved**

ಅಕ್ಷರಜೋಡಣೆ :
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, 3ನೇ ಮುಖ್ಯರಸ್ತೆ, ನಾಗಸಂದ್ರ
ತ್ಯಾಗರಾಜನಗರ ಅಂಚೆ, ಬೆಂಗಳೂರು – 560 028
✆ 6764 650

ಮುದ್ರಣಸ್ಥಾನ :
**ಸ್ಟ್ಯಾಂಡರ್ಡ್ ಪ್ರಿಂಟರ್ಸ್**
ಶಂಕರಮಠದ ರಸ್ತೆ, ಬೆಂಗಳೂರು – 560 004
✆ 6521 527

# ಮೊದಲ ಮಾತು

ಈ ಸಂಪುಟದಲ್ಲಿ ಶ್ರೀಶಂಕರಾಚಾರ್ಯರ ಕೃತಿಗಳೆಂದು ಪ್ರಸಿದ್ಧವಾಗಿರುವ **ಜೀವನ್ಮುಕ್ತಾನಂದಲಹರಿ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ, ಮಹಾವಾಕ್ಯದರ್ಪಣ** – ಎಂಬ ಹನ್ನೊಂದು ಪ್ರಕರಣಗಳನ್ನು ಅಡಕಮಾಡಿರುತ್ತದೆ. ಈ ಪ್ರಕರಣಗಳಲ್ಲಿ ತತ್ತ್ವೋಪದೇಶ, ಮಹಾವಾಕ್ಯದರ್ಪಣ – ಇವೆರಡನ್ನೂ ಬಿಟ್ಟರೆ ಮಿಕ್ಕವು ಬಹಳ ಸಣ್ಣವಾಗಿವೆ. ಆದ್ದರಿಂದ ಅವುಗಳ ವಿಷಯದಲ್ಲಿ ಒಂದೆರಡು ವಾಕ್ಯಗಳನ್ನು ಮೊದಲು ಬರೆದು ಮಿಕ್ಕೆರಡರ ವಿಚಾರವನ್ನು ಕೊನೆಯಲ್ಲಿ ಮಾಡುವೆವು.

## ೧. ಜೀವನ್ಮುಕ್ತಾನಂದಲಹರಿ

ಇದರಲ್ಲಿರುವ ಹದಿನಾರು ಶ್ಲೋಕಗಳಲ್ಲಿ, ಜ್ಞಾನದಿಂದ ಜೀವನ್ಮುಕ್ತನಾದವನು ಹೇಗೆ ವ್ಯವಹರಿಸುವನೆಂಬುದನ್ನು ವಿವರಿಸಿದೆ. ಹದಿನೇಳನೆಯ ಪದ್ಯದಲ್ಲಿ ಈ ಗ್ರಂಥದಲ್ಲಿ ವರ್ಣಿಸಿರುವ ಜೀವನ್ಮುಕ್ತಾವಸ್ಥೆಯಲ್ಲಿರುವವನೇ ಯೋಗಿ, ತ್ಯಾಗಿ, ಕವಿ – ಎಂದು ಹೇಳಿದೆ. ಜೀವನ್ಮುಕ್ತನಾದವನು ಯಾವ ಅವಸ್ಥೆಯಲ್ಲಿದ್ದರೂ ವ್ಯಾಮುಗ್ಧನಾಗುವದಿಲ್ಲ – ಎಂಬುದೇ ಪ್ರಕರಣದ ಒಟ್ಟರ್ಥ.

'ಶೈವಂ ರೂಪಮ್', 'ಶಿವಮಯಮ್', 'ಶಿವಶಿವಶಿವೇತ್ಯೇವ ವಿಲಪನ್', 'ಪರಮಶಿವಸಂಸ್ಥಾಮ್' – ಎಂದು ಶಿವನಾಮವನ್ನೇ ಪರಮಾತ್ಮನಿಗೆ ಉಪಯೋಗಿಸಿರುವದೂ ಶಬ್ದಾನುಕ್ರಮಣಿಕೆಯಲ್ಲಿ ತೋರಿಸಿರುವಂತೆ ಭಾಷ್ಯದಲ್ಲಿ ಪ್ರಯೋಗವಿಲ್ಲದ ಕೆಲವು ಶಬ್ದಗಳನ್ನು ಪ್ರಯೋಗಿಸಿರುವದೂ ಇದು ಆಚಾರ್ಯರ ಗ್ರಂಥವಲ್ಲವೇನೊ !– ಎಂದು ಶಂಕಿಸುವವರಿಗೆ ಸಾಧಕವಾಗಿವೆ.

## ೨. ಯತಿಪಂಚಕ

ಸರ್ವಕರ್ಮಸಂನ್ಯಾಸವನ್ನು ಮಾಡಿ ಬ್ರಹ್ಮಚಿಂತನೆಯಲ್ಲಿರುವ ನಿಷ್ಕಿಂಚನರೇ ಧನ್ಯರು– ಎಂಬುದನ್ನು ತಿಳಿಸುವ ಪ್ರಕರಣವಿದು. ಇದರಲ್ಲಿಯೂ 'ಪಞ್ಚಾಕ್ಷರಂ ಪಾವನಮ್', 'ಪತಿಂ ಪಶೂನಾಮ್' ಎಂಬ ಪ್ರಯೋಗಗಳಿರುವದರಿಂದ ಹಿಂದಿನ ಪ್ರಕರಣಕ್ಕೆ ತಿಳಿಸಿರುವ ಶಂಕೆಯು ಇದಕ್ಕೂ ಅನ್ವಯಿಸುತ್ತದೆ. 'ಏಕಾಂತೇ ಸುಖಮಾಸ್ಯತಾಮ್' ಎಂಬ ಶ್ಲೋಕಪಾದವನ್ನು ಶಂಕರಾನಂದರು ಗೀತಾತಾತ್ಪರ್ಯಬೋಧಿನಿಯಲ್ಲಿ ೧೩–೨೪ರಲ್ಲಿ ಉದಾಹರಿಸಿರುವದರಿಂದ ಈ ಪ್ರಕರಣವು ಅವರಿಗಿಂತ ಹಿಂದಿನದೆಂಬುದು ಸ್ಪಷ್ಟ.

ಮುಖ್ಯವಾಗಿ ಯತಿಗಳಿಗಾಗಿ ಬರೆದಿರುವ ಈ ಎರಡು ಗ್ರಂಥಗಳಲ್ಲಿ ಯತಿಗಳಿಗೆ ವಿಹಿತವಾಗಿರುವ ಪ್ರಣವಜಪವೇಕೆ ಪರಾಮೃಷ್ಟವಾಗಲಿಲ್ಲವೆಂಬುದೊಂದು ಶಂಕೆ.

## ೩. ಮಾಯಾಪಂಚಕ

ಮಾಯೆಯು 'ಲೋಕದಲ್ಲಿ ಆಗಲಾರದೆಂದು ಜನರು ತಿಳಿಯುವದನ್ನು ಕೂಡ ಹೊಂದಿಸಿ ತೋರಿಸುತ್ತದೆ' – ಎಂಬುದನ್ನು ತಿಳಿಸುವ ಪ್ರಕರಣ. ಭಾಷ್ಯದಲ್ಲಿ ಪ್ರಯೋಗಿಸದೆ ಇರುವ ಶಬ್ದಗಳು ಕೆಲವು ಇದರಲ್ಲಿ ಪ್ರಯುಕ್ತವಾಗಿವೆ.

## ೪. ನಿರ್ವಾಣಮಂಜರಿ

'ಅಹಂ ಬ್ರಹ್ಮಾಸ್ಮಿ' ಎಂಬರ್ಥವನ್ನು ಗಟ್ಟಿಗೊಳಿಸುವ ಪ್ರಕರಣವಿದು. ಗ್ರಂಥದ ಶ್ಲೋಕಸಂಖ್ಯೆಯ ವಿಷಯಕ್ಕೆ ಒಮ್ಮತವಿಲ್ಲ. ಇದರಲ್ಲಿಯೂ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಾಣದ ಶಬ್ದಗಳಿವೆ. 'ಅಂಗತ್ರಯ', 'ಲಿಙ್ಗಭಙ್ಗ', 'ಸ್ವಭೇದಾದಿ ಶೂನ್ಯಮ್' – ಇಂಥ ಪ್ರಯೋಗಗಳು ವ್ಯಾಖ್ಯಾನಪ್ರಸ್ಥಾನದ ಗಂಧವುಳ್ಳವಾಗಿವೆ.

## ೫. ಬ್ರಹ್ಮಜ್ಞಾನಾವಳೀಮಾಲೆ

ಇದರಲ್ಲಿ ಆತ್ಮತತ್ತ್ವಾನುಸಂಧಾನಕ್ಕೆ ಅನುಕೂಲಿಸುವ ೧೬ ಶ್ಲೋಕಗಳಿವೆ. 'ಅಹಮೇವಾಹಮವ್ಯಯಃ' ಎಂಬ ಧ್ರುವಪದವು ಶ್ಲೋಕಗಳಲ್ಲಿದೆ. ಹಿಂದಿನ ಪ್ರಕರಣಕ್ಕೆ ಹೇಳಿದ ಭಾಷ್ಯಾದೃಷ್ಟಶಬ್ದಪ್ರಯೋಗದ ಶಂಕೆ ಇದಕ್ಕೂ ಅನ್ವಯಿಸುತ್ತದೆ.

## ೬. ಅನಾತ್ಮಶ್ರೀವಿಗರ್ಹಣ

ಆತ್ಮಸಾಕ್ಷಾತ್ಕಾರವನ್ನು ಮಾಡಿಕೊಳ್ಳದವನಿಗೆ ಅನಾತ್ಮಶ್ರೀಸಂಪತ್ತು ಎಷ್ಟಿದ್ದರೂ ವ್ಯರ್ಥ– ಎಂದು ಹೇಳುವದೇ ಪ್ರಕರಣದ ಗುರಿ. 'ಆತ್ಮಸಾಕ್ಷಾತ್ಕಾರಃ', 'ಭಸ್ಮಾಚ್ಛಾದಿತಮ್'– ಇಂಥ ಪ್ರಯೋಗಗಳು ಗ್ರಂಥದ ಅರ್ವಾಚೀನತ್ವಕ್ಕೆ ಗುರುತೆಂದು ಕೆಲವರು ಶಂಕಿಸುತ್ತಾರೆ.

## ೭. ಪ್ರೌಢಾನುಭೂತಿ

ಇದು ಸ್ವರೂಪಾನುಸಂಧಾನದ ರೀತಿಯನ್ನು ಗುರುವು ಶಿಷ್ಯನಿಗೆ ತಿಳಿಸಿದಂತೆ ಬರೆದಿರುವ ಪ್ರಕರಣ. ಇದರಲ್ಲಿಯೂ ಭಾಷ್ಯತ್ರಯದಲ್ಲಿಲ್ಲದ ಕೆಲವು ಶಬ್ದಪ್ರಯೋಗಗಳೂ ದೃಷ್ಟಾಂತಗಳೂ ಇವೆ.

## ೮. ಉಪದೇಶಪಂಚಕ

ಇದನ್ನು "ಸಾಧನಸೋಪಾನಪಂಚಕ"ವೆಂದೂ ಕರೆಯುವದುಂಟು. ಸಾಧನಗಳನ್ನು

ಮೆಟ್ಟಿಲುಮೆಟ್ಟಿಲಾಗಿ ಉಪದೇಶಿಸಿರುವದರಿಂದ ಆ ಹೆಸರು ಅನ್ವರ್ಥವಾಗಿಯೂ ಇದೆ. ಭಾಷ್ಯೋಪದೇಶಕ್ಕೆ ವಿರುದ್ಧವಾಗಿ ಏನೂ ಕಾಣುವದಿಲ್ಲ.

## ೯. ಸ್ವರೂಪಾನುಸಂಧಾನ

'ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ' ಎಂಬ ಪಲ್ಲವಿಯಿರುವ ಆತ್ಮತತ್ತ್ವಾನುಸಂಧಾನಪರವಾದ ಪ್ರಕರಣ. ಇದನ್ನು 'ಸ್ವರೂಪಾನುಸಂಧಾನರೂಪವಾದ ಸ್ತುತಿ' ಎಂದು ಕರೆದಿದೆ. 'ಅಹಂಬ್ರಹ್ಮವೃತ್ತಿಯಿಂದಲೇ ತುರೀಯತತ್ತ್ವವು ಸಿಕ್ಕುವದೆಂದು ಹೇಳುವದು ಭಾಷ್ಯವಿರುದ್ಧವಾಗಿದೆಯೆಂದು ಕೆಲವರು ಶಂಕಿಸುತ್ತಾರೆ ; ಆದರೆ ಯಾವ ವೃತ್ತಿಗೂ ಗೋಚರವಲ್ಲವೆಂಬರ್ಥದಲ್ಲಿಯೇ ಅದನ್ನುಪಯೋಗಿಸಿದೆಯೆಂದೂ ಹೇಳಬಹುದು. ಸಮಾಧಿಯಲ್ಲಿರುವವರೆಗೆ ಪೂರ್ಣತತ್ತ್ವವು ತೋರುವದೆಂಬ ವಾಕ್ಯವನ್ನೂ ಹೀಗೆಯೇ ಹೊಂದಿಸಿಕೊಳ್ಳುವದಕ್ಕಾಗುತ್ತದೆ.

## ೧೦. ತತ್ತ್ವೋಪದೇಶ

'ತತ್ತ್ವಮಸಿ' ಎಂಬ ಮಹಾವಾಕ್ಯದ ಅರ್ಥವನ್ನು ಗುರುವು ಶಿಷ್ಯನಿಗೆ ಉಪದೇಶ ಮಾಡಿದಂತೆ ಬರೆದಿರುವ ಪ್ರಕರಣವಿದು. ದೇಹಾದಿಗಳು ಆತ್ಮನಲ್ಲವೆಂಬುದನ್ನು ಹನ್ನೆರಡು ಶ್ಲೋಕಗಳಿಂದ ತಿಳಿಸಿ ಇವೆಲ್ಲಕ್ಕೂ ಸಾಕ್ಷಿಯಾಗಿರುವ ಚೈತನ್ಯವೇ ತ್ವಂಪದಕ್ಕೆ ಅರ್ಥವೆಂಬುದನ್ನು ಮುಂದೆ ಮೂರು ಶ್ಲೋಕಗಳಿಂದ ತಿಳಿಸಿದೆ. ಆಮೇಲೆ ಬ್ರಹ್ಮಾತ್ಮೈಕ್ಯಕ್ಕೆ ಶ್ರುತಿಯೇ ಪ್ರಮಾಣವೆಂದು ತಿಳಿಸಿ ತತ್ತ್ವಂ ಪದಗಳ ವಾಚ್ಯಾರ್ಥವನ್ನೂ ಲಕ್ಷ್ಯಾರ್ಥವನ್ನೂ ತಿಳಿಸಿದೆ. ಆಮೇಲೆ ಪದಗಳೆರಡಕ್ಕೂ ಸಾಮಾನಾಧಿಕರಣ್ಯ, ಪದಾರ್ಥಗಳಿಗೆ ವಿಶೇಷಣವಿಶೇಷ್ಯ, ಪದಾರ್ಥಗಳಿಗೂ ಪ್ರತ್ಯಗಾತ್ಮನಿಗೂ ಲಕ್ಷ್ಯಲಕ್ಷಣದ ಸಂಬಂಧ – ಎಂದು ವಿವೇಚನೆಯನ್ನು ಮಾಡಿದೆ. ಆಮೇಲೆ ಜಹಲ್ಲಕ್ಷಣೆ, ಅಜಹಲ್ಲಕ್ಷಣೆ, ಭಾಗಲಕ್ಷಣೆ – ಎಂಬ ಮೂರು ಬಗೆಯ ಲಕ್ಷಣೆಗಳ ಸ್ವರೂಪವನ್ನು ತಿಳಿಸಿ ಮೂರನೆಯದಾದ ಭಾಗಲಕ್ಷಣೆಯೇ ಪ್ರಕೃತದಲ್ಲಿ ಹೊಂದುತ್ತದೆ ಎಂದು ತಿಳಿಸಿದೆ. ಸದಾನಂದವಿರಚಿತವಾದ ''ವೇದಾಂತಸಾರ''ದಲ್ಲಿ ಹೀಗೆಯೇ ವರ್ಣಿಸಿದೆ. ಭಾಷ್ಯಗಳಲ್ಲಿ ಮಾತ್ರ ಈ ಕ್ರಮವು ಕಾಣಿಸುವದಿಲ್ಲ.

ಮಹಾವಾಕ್ಯಗಳಿಂದ ತತ್ತ್ವಂಪದಾರ್ಥಗಳ ಐಕ್ಯವು ಕಾಣುತ್ತಿದ್ದರೂ ಗುರುವಿನ ಕರುಣೆಯಿಲ್ಲದೆ ಅದು ತಿಳಿಯಲಾರದು – ಎಂದು (೪೪ ರಿಂದ ೪೬ ರವರೆಗಿನ) ಮೂರು ಶ್ಲೋಕಗಳಲ್ಲಿ ಹೇಳಿದೆ. ಸತ್ಯವಾದ ಅದ್ವೈತವೇ ಶ್ರುತ್ಯರ್ಥ, ಅನಿರ್ವಾಚ್ಯವಾದ ದ್ವೈತವಲ್ಲ – ಎಂದು ಮುಂದೆ ತಿಳಿಸಿ ಸತ್ತು, ಅಸತ್ತು, ಸದಸತ್ತು – ಮೂರೂ ಅಲ್ಲದ್ದೇ ಅನಿರ್ವಾಚ್ಯವು ಎಂದು (೫೦ ರಿಂದ ೫೨ ರವರೆಗೆ) ಹೇಳಿರುವದು ಭಾಷ್ಯದಲ್ಲಿ ಎಲ್ಲಿಯೂ ಕಾಣುವದಿಲ್ಲ ;

ವ್ಯಾಖ್ಯಾನಪ್ರಸ್ಥಾನಕ್ಕೇ ಇದು ಮೀಸಲು. ಇದಾದ ಮೇಲೆ ಬ್ರಹ್ಮಾತ್ಮತ್ವೋಪದೇಶ, ಛಾಂದೋಗ್ಯದಲ್ಲಿರುವ ಗಾಂಧಾರದೇಶೀಯನ ದೃಷ್ಟಾಂತದ ವಿವರಣೆ, ದಾರ್ಷ್ಟಾಂತಿಕದಲ್ಲಿ ಅದರ ಯೋಜನೆ, ಜ್ಞಾನಿಯ ದೃಷ್ಟಿಯಿಂದ ಬಂಧಮೋಕ್ಷಗಳು ಪರಮಾರ್ಥವಲ್ಲವೆಂಬ ಉಪದೇಶ, ಶ್ರವಣ, ಮನನ ನಿದಿಧ್ಯಾಸನಗಳಿಂದ ಸಾಕ್ಷಾತ್ಕಾರವನ್ನು ಮಾಡಿಕೊಂಡು ಕೃತಕೃತ್ಯನಾಗಬೇಕೆಂಬ ಹೇಳಿಕೆ, ಆಮೇಲೆ ಉಪಸಂಹಾರದಲ್ಲಿ ಗುರುವಿನ ಪ್ರಶಂಸೆ – ಹೀಗೆ ಅನುಕ್ರಮವಿದೆ.

ಗ್ರಂಥಶರೀರದ ಕೊನೆಯಲ್ಲಿ 'ಭಾವಾದ್ವೈತಂ ಸದಾ ಕುರ್ಯಾತ್ ಕ್ರಿಯಾದ್ವೈತಂ ನ ಕರ್ಹಿಚಿತ್ । ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ ॥' ಭಾವಾದ್ವೈತವನ್ನು ಯಾವಾಗಲೂ ಮಾಡಬೇಕು, ಕ್ರಿಯಾದ್ವೈತವನ್ನು ಎಂದಿಗೂ ಮಾಡಬಾರದು ; ಅದ್ವೈತವು ಮೂರು ಲೋಕದಲ್ಲಿಯೂ ಉಂಟು, ಗುರುವಿನೊಡನೆ ಅದ್ವೈತವಿಲ್ಲ– ಎಂಬ ಶ್ಲೋಕವೊಂದು ಇಲ್ಲಿ ಕಾಣಬರುತ್ತದೆ. ಭಾವಾದ್ವೈತ, ಕ್ರಿಯಾದ್ವೈತ– ಎಂಬ ಶಬ್ದಗಳು ಭಾಗವತದಲ್ಲಿಯೂ ಇವೆ. ಆದರೆ ಇಲ್ಲಿ ಇವುಗಳ ವಿವರಣೆ ಹೀಗಿದೆ : 'ಭಾವಾದ್ವೈತಂ ಕ್ರಿಯಾದ್ವೈತಂ ದ್ರವ್ಯಾದ್ವೈತಂ ತಥಾತ್ಮನಃ। ವರ್ತಯನ್ ಸ್ವಾನುಭೂತ್ಯೇಹ ತ್ರೀನ್ ಸ್ವಪ್ನಾನ್ ಧುನುತೇ ಮುನಿಃ । ಕಾರ್ಯಕಾರಣವಸ್ತ್ವೈಕ್ಯಮರ್ಶನಂ ಪಟತನ್ತುವತ್ । ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ ॥ ಯದ್ಬ್ರಹ್ಮಣಿ ಪರೇ ಸಾಕ್ಷಾತ್ ಸರ್ವಕರ್ಮಸಮರ್ಪಣಮ್। ಮನೋವಾಕ್ತನುಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ॥ ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಮ್ । ಯತ್ಸ್ವಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ॥' ಭಾವಾದ್ವೈತ, ಕ್ರಿಯಾದ್ವೈತ, ದ್ರವ್ಯಾದ್ವೈತ– ಈ ಮೂರನ್ನೂ ಮಾಡುವದರಿಂದ ಮುನಿಯಾದವನು ಮೂರು ಕನಸುಗಳನ್ನೂ ನೀಗುವನು. ಕಾರ್ಯಕಾರಣಗಳಲ್ಲಿ ವಿಕಲ್ಪವು ವಸ್ತುವಲ್ಲವಾದ್ದರಿಂದ ಎರಡೂ ಒಂದೇ ಎಂದು ಬಟ್ಟೆನೂಲುಗಳ ದೃಷ್ಟಾಂತದಿಂದ ತಿಳಿಯುವದು ಭಾವಾದ್ವೈತವೆನಿಸುವದು. ಮನೋವಾಕ್ಕಾಯಗಳಿಂದಾಗುವ ಸರ್ವಕರ್ಮಗಳನ್ನೂ ಪರಬ್ರಹ್ಮಕ್ಕೇ ಅರ್ಪಿಸುವದು ಕ್ರಿಯಾದ್ವೈತವೆನಿಸುವದು. ತಾನು, ಹೆಂಡತಿ, ಮಕ್ಕಳು, ಮತ್ತು ಎಲ್ಲಾ ದೇಹಿಗಳಿಗೂ ತನ್ನ ಅರ್ಥಕಾಮಗಳು ಸಮಾನವೆಂದು ತಿಳಿಯುವದು ದ್ರವ್ಯಾದ್ವೈತವೆನಿಸುವದು (ಭಾಗ. ೭–೧೫–೬೨ ರಿಂದ ೬೪). ಪ್ರಕೃತಪ್ರಕರಣದಲ್ಲಿ ಈ ಅರ್ಥದಲ್ಲಿ ಕ್ರಿಯಾದ್ವೈತಶಬ್ದವನ್ನು ಬಳಸಿಲ್ಲವೆಂಬುದು ಸ್ಪಷ್ಟ. ಆದರೆ **ಯೋಗಶಿಖೋಪನಿಷತ್ತಿನಲ್ಲಿ** ''ನಾದ್ವೈತವಾದಂ ಕುರ್ವೀತ ಗುರುಣಾ ಸಹ ಕುತ್ರಚಿತ್। ಅದ್ವೈತಂ ಭಾವಯೇದ್ಭಕ್ತ್ಯಾ ಗುರೋರ್ದೇವಸ್ಯ ಚಾತ್ಮನಃ॥'' (ಯೋ.ಶಿ. ೫–೪೯) ಎಂದಿದೆ. ಗುರುವಿನೊಡನೆ ಅದ್ವೈತವಾದವನ್ನು ಎಂದಿಗೂ

ಮಾಡಬಾರದು ; ಗುರು, ದೇವ, ತಾನು – ಎಲ್ಲರಿಗೂ ಅದ್ವೈತವನ್ನು ಭಕ್ತಿಯಿಂದ ಭಾವಿಸುತ್ತಿರಬೇಕು – ಎಂದಿದೆ. ಗ್ರಂಥಕರ್ತರು ಈ ವಾಕ್ಯವನ್ನೇ ಹೀಗೆ ಬರೆದಿರಬಹುದೆ? ಗುರುಗಳು ತನಗಿಂತ ಹೆಚ್ಚಿನವರೆಂದೇ ವ್ಯವಹಾರದಲ್ಲಿ ಬಗೆಯುತ್ತಿರಬೇಕು. ಅವರ ಮತ್ತು ನಮ್ಮ ಆತ್ಮನು ಒಬ್ಬನೇ ಎಂಬ ಭಾವಾದ್ವೈತಕ್ಕೇನೂ ಅಡ್ಡಿಯಿಲ್ಲ– ಎಂಬುದು ಶ್ಲೋಕದ ಅಭಿಪ್ರಾಯವಾಗಿರಬಹುದೆ ?– ಇದನ್ನು ವಿದ್ವಾಂಸರು ಆಲೋಚಿಸಬೇಕು. ಅಂತೂ ಗ್ರಂಥವು ಆಚಾರ್ಯರಿಗಿಂತ ಬಹಳ ಈಚಿನದು ಎಂಬುದಕ್ಕೆ ಸಂಶಯವಿಲ್ಲ.

## ೧೧. ಮಹಾವಾಕ್ಯದರ್ಪಣ

### ಗ್ರಂಥದ ಕೈಬರಹದ ಪುಸ್ತಕಗಳು

ಈ ಗ್ರಂಥವು ಶ್ರೀಮಚ್ಛಂಕರಭಗವತ್ಪಾದಕೃತವೆಂದು ಪ್ರಸಿದ್ಧಿ. ಇದನ್ನು ನಮ್ಮ ಪರಿಚಿತರಾಗಿದ್ದ ಬೊಂಬಾಯಿ ಶಾಮರಾಯರೆಂಬವರು ಅಚ್ಚುಹಾಕಿದ ಗ್ರಂಥವೊಂದರಿಂದ ಬರೆದುಕೊಂಡದ್ದನ್ನು ತಂದುಕೊಟ್ಟು ಇಪ್ಪತ್ತೈದುವರ್ಷಗಳ ಮೇಲಾಯಿತು. ಅಂದಿನಿಂದಲೂ ಈ ಗ್ರಂಥವು ವಿವೇಕಚೂಡಾಮಣಿಯನ್ನು ಬರೆದವರಿಂದಲೇ ರಚಿತವಾಗಿದೆ ಎಂದು ನಮಗೆ ದೃಢವಿಶ್ವಾಸವಿದ್ದದ್ದರಿಂದ ಇದನ್ನು ಶೋಧಿಸಬೇಕೆಂಬ ಕುತೂಹಲವುಂಟಾಯಿತಾದರೂ ಈವರೆಗೂ ಆ ಕೆಲಸವು ನೆರವೇರಲಿಲ್ಲ. ಹೊಳೆನರಸೀಪುರದಲ್ಲಿ ಒಬ್ಬರು ಮತ್ತೊಂದು ಅಚ್ಚಿನ ಪ್ರತಿಯನ್ನು ಕೊಟ್ಟರು. ಇವುಗಳಲ್ಲಿ ಒಂದು ಪ್ರತಿಯು ಕ್ರಿ. ಶ. ೧೮೯೬ರಲ್ಲಿ ಮದ್ರಾಸಿನಲ್ಲಿ ಕಲ್ಯಾಣ ಸುಂದರಶಾಸ್ತ್ರಿಗಳಿಂದ ಅಚ್ಚಾದದ್ದು ; ಇನ್ನೊಂದು ಮದ್ರಾಸಿನಲ್ಲಿಯೇ ವಾವಿಳ್ಳ ರಾಮಶಾಸ್ತ್ರಿಗಳಿಂದ ಕ್ರಿ. ಶ. ೧೮೮೨ರಲ್ಲಿ ಮುದ್ರಾಪಿತವಾದದ್ದು. ಮೊದಲನೆಯದು ಅಶುದ್ಧಬಹುಳವಾಗಿದೆ ; ಅದು ಎರಡನೆಯದರ ನಕಲು ಎಂದೇ ಕಾಣುತ್ತಿದೆ. ಈ ಎರಡು ಪ್ರತಿಗಳ ಸಹಾಯದಿಂದಲೇ ಈಗ ನಾವು ಮಹಾವಾಕ್ಯದರ್ಪಣವನ್ನು ಹೊರಕ್ಕೆ ತಂದಿರುತ್ತೇವೆ.

ಗ್ರಂಥಕರ್ತೃಗಳು ಯಾರೆಂಬುದನ್ನು ಗ್ರಂಥದಿಂದಲೇ ನಿರ್ಧರಿಸುವದಕ್ಕೆ ಬರುವಂತಿಲ್ಲ. ಕೊನೆಯಲ್ಲಿರುವ ಪುಷ್ಪಿಕೆಯಲ್ಲಿ ''ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಶ್ರೀಮದದ್ವೈತವಿದ್ಯಾಚಾರ್ಯ ಶ್ರೀಭಾಷ್ಯಕಾರ ಶಂಕರಭಗವತ್ಪಾದವಿರಚಿತಂ ಮಹಾವಾಕ್ಯದರ್ಪಣಂ ಸಮಾಪ್ತಮ್'' ಎಂದು ಅಚ್ಚಾಗಿದೆ. ಮದರಾಸಿನಲ್ಲಿರುವ ಕೈಬರಹದ ಪ್ರತಿಯಲ್ಲಿ ''ಇತಿ ಶ್ರೀಪರಮಹಂಸಪರಿವ್ರಾಜಕಾಚಾರ್ಯ ಶ್ರೀಮತ್....... ಚಾರ್ಯವಿರಚಿತಂ ಮಹಾವಾಕ್ಯದರ್ಪಣಂ ಸಂಪೂರ್ಣಮ್'' ಎಂದಿರುವದಾಗಿ ಹತ್ತುವರ್ಷದ ಕೆಳಗೇ ಅಡ್ಯಾರ್

1. ಅಡಿಯಾರ್ ಲೈಬ್ರರಿಯಲ್ಲಿರುವ ಕೈಬರಹದ ಪ್ರತಿಯಲ್ಲಿ 'ಧರ್ಮಸಂಶ್ರವಣಂಜ್ಞಾನಂ' ಎಂದಿದೆ– ಎಂದು ಅಲ್ಲಿಂದ ಬಂದ ಪತ್ರದಿಂದ ತಿಳಿದುಬಂದಿದೆ ; ನಕಲುಮಾಡಿದವರು ಮೂಲದ ಬರಹವನ್ನು ಚೆನ್ನಾಗಿ ಓದಿಕೊಳ್ಳದ್ದರಿಂದ ಆ ತಪ್ಪು ಆಗಿರಬಹುದು. ಅಲ್ಲಿಯೂ 'ದರ್ಶನಂ ಶ್ರವಣಂ' ಎಂತಲೇ ಇದ್ದಿರಬೇಕು.

ಲೈಬ್ರರಿಯ ಡೈರೆಕ್ಟರವರಿಂದ ತಿಳಿದುಬಂದಿತ್ತು. ಅದ್ವೈತವಿದ್ಯಾಚಾರ್ಯ ಎಂಬ ಬಿರುದು ಶಂಕರಭಗವತ್ಪಾದರವರಿಗೆ ಇಲ್ಲ ; ಮೂಲಕೋಶದಲ್ಲಿ ಅವರ ಹೆಸರೂ ಇಲ್ಲದ್ದರಿಂದ ಗ್ರಂಥದ ಆಧಾರದಿಂದಲೇ ಹೀಗೆ ಗ್ರಂಥಕರ್ತೃಗಳ ಹೆಸರನ್ನು ಗೊತ್ತುಮಾಡುವದಾಗುವ ದಿಲ್ಲವೆಂಬುದು ಸ್ಫುಟವಾಯಿತು.

## ಗ್ರಂಥದ ಹೆಸರು ಮತ್ತು ಪ್ರತಿಪಾದ್ಯವಿಷಯ

ಗ್ರಂಥದ ಹೆಸರು 'ಮಹಾವಾಕ್ಯದರ್ಪಣ'ವೆಂದೇ ಇದ್ದಿತೆ? ಇದು ಈಗಿರುವ ಸ್ಥಿತಿಯಲ್ಲಿ ಪೂರ್ಣವೆಂದು ನಂಬಬಹುದೆ? – ಎಂಬುದು ಮತ್ತೊಂದು ಪ್ರಶ್ನೆ. ಮೈಸೂರು, ಮದರಾಸ್– ಎರಡು ಕಡೆಗಳಲ್ಲಿ ವಿಚಾರಿಸಿದ್ದರಲ್ಲಿ ಮೂಲಪ್ರತಿಗಳಲ್ಲಿ ಆದ್ಯಂತಶ್ಲೋಕಗಳು ಈಗ ಅಚ್ಚಾಗಿರುವ ಪ್ರತಿಯಂತೆಯೇ ಇವೆಯೆಂದು ತಿಳಿದುಬಂದಿದೆ. ಎರಡನೆಯ ಶ್ಲೋಕದ ಆರಂಭದಲ್ಲಿ 'ಶ್ರೀಗುರುಃ' ಅಥವಾ 'ಶ್ರೀಗುರುರುವಾಚ' ಎಂದಿರುವದನ್ನು ನಾವು ಕೈಬಿಟ್ಟಿರುತ್ತೇವೆ. ಆ ಮಾತು ತಟ್ಟನೆ ಇಲ್ಲಿ ಬರಲಾರದಾದ್ದರಿಂದ ಹಿಂದೆ ಗುರುಶಿಷ್ಯರ ಸಂವಾದದ ಭಾಗವು ಇನ್ನಷ್ಟು ಇದ್ದಿತೆಂದು ಕಲ್ಪಿಸಬೇಕಾಗುತ್ತದೆ. 'ಪ್ರಸ್ತುತಂ ತೇ ಪ್ರವಕ್ಷ್ಯಾಮಿ' (೨೧) ಪ್ರಕೃತವಾದದ್ದನ್ನು ನಿನಗೆ ಹೇಳುವೆನು ಕೇಳು – ಎಂದು ಗ್ರಂಥದ ನಡುವೆಯಿರುವದರಿಂದಲೂ ಈ ಗ್ರಂಥವು ಗುರುಶಿಷ್ಯ ಸಂವಾದರೂಪವಾಗಿ ಬರೆದದ್ದುಎಂದು ಹೇಳಬೇಕಾಗುತ್ತದೆ. ಹೀಗೆಯೇ 'ಅವೇಹಿ ವಿದ್ವನ್' (೩೯) ಎಲೈ ವಿವೇಕಿಯೆ, ಹೀಗೆಂದು ತಿಳಿ – ಎಂದು ಮುಂತಾಗಿ ಗುರುವು ಶಿಷ್ಯನನ್ನು ಸಂಬೋಧಿಸಿ ಹೇಳಿದಂತೆ ತೋರುವ ವಾಕ್ಯಗಳು ಗ್ರಂಥದಲ್ಲಿ ಅಲ್ಲಲ್ಲಿ ಕಾಣಬರುತ್ತವೆ. ಇನ್ನೊಂದು ವಾಕ್ಯವೂ ಈ ಕಲ್ಪನೆಗೆ ಬೆಂಬಲವನ್ನು ಕೊಡುತ್ತದೆ. 'ಯತ್ತು ಪೃಷ್ಟಂ ತ್ವಯಾ ಪೂರ್ವಂ ಪ್ರಕೃತಿಪ್ರವಿಲಾಪನಮ್ । ತದಿದಾನೀಂ ಪ್ರವಕ್ಷ್ಯಾಮಿ' (೩೦೯) ಹಿಂದೆ **ಪ್ರಕೃತಿಪ್ರವಿಲಯ**ವನ್ನು ಕೇಳಿದ್ದೆಯಲ್ಲ, ಅದನ್ನು ಈಗ ಹೇಳುವೆನು – ಎಂದಿರುವದನ್ನು ನೋಡಿದರೆ ಶಿಷ್ಯನು ಪ್ರಕೃತಿಪ್ರವಿಲಾಪನವನ್ನು ಕುರಿತು ಹಿಂದೆ ಕೇಳಿದ್ದನೆಂದು ಒಪ್ಪಲೇಬೇಕಾಗುತ್ತದೆ. ಆದರೆ ಅಂಥ ಪ್ರಶ್ನೆಯಾದರೂ ಈ ಗ್ರಂಥದಲ್ಲಿ ಕಾಣುತ್ತಿಲ್ಲ. ಗ್ರಂಥದಲ್ಲಿ ಪ್ರಕೃತಿಪ್ರವಿಲಯವನ್ನು ಸಂಗ್ರಹವಾಗಿ (೩೧೧ನೆಯ ಶ್ಲೋಕದಲ್ಲಿ) ತಿಳಿಸಿದ ಬಳಿಕ ಗ್ರಂಥಸಮಾಪ್ತಿಯನ್ನು ಕೂಡ ಸೂಚಿಸದೆ ಅಲ್ಲಿಗೇ ತಟ್ಟನೆ ಗ್ರಂಥವು ನಿಂತಿರುವದನ್ನು ನೋಡಿದರೆ ಗ್ರಂಥವು ಇನ್ನೂ ಮುಂದಕ್ಕೆ ಇದೆಯೆಂದೇ ಹೇಳಬೇಕಾಗುತ್ತದೆ.

ಹೀಗೆ ಎಲ್ಲಾ ದೃಷ್ಟಿಗಳಿಂದಲೂ ಗ್ರಂಥವು ಆದ್ಯಂತರಹಿತವಾಗಿ ಅಪೂರ್ಣವಾಗಿದೆ ಎಂದು ನಿಶ್ಚಯಿಸಬೇಕಾಗಿರುವದರಿಂದ ಗ್ರಂಥವು ಪೂರ್ಣವಾಗಿ ಯಾವದಾದರೊಂದು ಪುಸ್ತಕಭಂಡಾರದಲ್ಲಿ ಸಿಕ್ಕೀತೆಂಬ ಆಶೆಯಿದೆಯಾದರೂ ಈವರೆಗೆ ಮಾಡಿದ ಅನ್ವೇಷಣೆಯು ನಿಷ್ಫಲವಾಗಿರುವದರಿಂದ ಇದನ್ನು ನಾವು ಮುಗಿಸಿದ್ದರೂ ಪೂರ್ಣಭಾಗವು ನಮಗೆ

ಸಿಕ್ಕಿಲ್ಲವೆಂದೇ ಕಲ್ಪಿಸಬೇಕಾಗಿದೆ. ಗ್ರಂಥದಲ್ಲಿ ಇನ್ನೂ ಯಾವಯಾವ ವಿಷಯಗಳಿದ್ದವೋ, ನಿರ್ಣಯಿಸುವದಕ್ಕೆ ಅವಕಾಶವಿಲ್ಲವಾಗಿದೆ. ಗ್ರಂಥದಲ್ಲಿ 'ತತ್ತ್ವಮಸಿ' ಎಂಬ ವಾಕ್ಯದ ಅರ್ಥವನ್ನು ವಿವರಿಸಿರುವದನ್ನು ಕಂಡು ಇದಕ್ಕೆ ''ಮಹಾವಾಕ್ಯದರ್ಪಣ''ವೆಂಬ ಹೆಸರನ್ನು ಯಾರೋ ಅಪೂರ್ಣಗ್ರಂಥವನ್ನು ನೋಡಿದವರು ಕಲ್ಪಿಸಿರುತ್ತಾರೋ, ಅಥವಾ ಅದೇ ಗ್ರಂಥದ ಹೆಸರೋ, ಎಂಬುದನ್ನು ಕೂಡ ಸದ್ಯದ ಸ್ಥಿತಿಯಲ್ಲಿ ನಾವು ನಿಶ್ಚಯಿಸುವದಕ್ಕೆ ಬರುವಂತಿಲ್ಲ.

## ಈ ಗ್ರಂಥಕ್ಕೂ ವಿವೇಕಚೂಡಾಮಣಿಗೂ ಹೋಲಿಕೆ

ಇದು ಹೇಗಾದರೂ ಇರಲಿ, ಈ ಗ್ರಂಥವನ್ನೂ ವಿವೇಕಚೂಡಾಮಣಿಯನ್ನು ಬರೆದವರೇ ರಚಿಸಿರುತ್ತಾರೆಂಬ ವಿಷಯದಲ್ಲಿ ನಮಗೆ ಯಾವ ಸಂಶಯವೂ ಉಳಿದಿರುವದಿಲ್ಲ. ಏಕೆಂದರೆ ಈ ಗ್ರಂಥದಲ್ಲಿಯೂ **ಶ್ರೀಶಂಕರಾನಂದರ ಗೀತಾತಾತ್ಪರ್ಯಬೋಧಿನಿಯ** (೧) ಭಾಷಾಶೈಲಿ, (೨) ಪಾರಿಭಾಷಿಕಶಬ್ದಗಳು, (೩) ಬಿಡಿ ಉಪನಿಷತ್ತುಗಳನ್ನು ಉದಾಹರಿಸಿರುವದು, (೪) ಸೂತಸಂಹಿತೆ, ಭಾಗವತ, ಯೋಗವಾಸಿಷ್ಠ – ಇವುಗಳನ್ನು ಉದಾಹರಿಸಿರುವದು – ಈ ನಾಲ್ಕು ವಿಶೇಷಗಳು ಕಂಡುಬರುತ್ತವೆ. **ವಿವೇಕಚೂಡಾಮಣಿಯಲ್ಲಿ ಬಳಸಿರುವ ವೇದಾಂತಪ್ರಕ್ರಿಯೆಯೇ** ಇಲ್ಲಿಯೂ ಕಾಣುತ್ತಿದ್ದು ಆಚಾರ್ಯರು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಬಳಸಿರುವ ಪ್ರಕ್ರಿಯೆಗಿಂತ ವಿಲಕ್ಷಣವಾಗಿರುತ್ತದೆ. ಶಂಕರಾನಂದರ ''ಗೀತಾತಾತ್ಪರ್ಯಬೋಧಿನಿ''ಯನ್ನು ಅವಲೋಕಿಸಿದಷ್ಟೂ ಈ ಮೂರು ಗ್ರಂಥಗಳ ಕರ್ತೃವಾದವರು ಒಬ್ಬರೇ ಎಂಬುದು ದೃಢವಾಗುತ್ತದೆ. ಮಹಾವಾಕ್ಯದರ್ಪಣಗ್ರಂಥದ ವಿಷಯಗಳ ಪರಿವಿಡಿಯು ವಿವೇಕಚೂಡಾಮಣಿಯಷ್ಟು ಕ್ರಮಬದ್ಧವಾಗಿಲ್ಲ; ಆದ್ದರಿಂದ ಇದನ್ನು ಮೊದಲು ಬರೆದು ಕೈಕುದುರಿದಮೇಲೆಯೇ ವಿವೇಕಚೂಡಾಮಣಿಯನ್ನು ಅವರು ಬರೆದಿರಬೇಕೆಂದು ಊಹಿಸುವದಕ್ಕೂ ಬರುವಂತಿದೆ.

## ಈ ಸಂಸ್ಕರಣದ ವಿಶೇಷಗಳು

ಈ ನಮ್ಮ ತೀರ್ಮಾನವನ್ನು ಸ್ಫುಟಗೊಳಿಸುವದಕ್ಕಾಗಿ ವಿವೇಕಚೂಡಾಮಣಿಯಂತೆ ಈ ಗ್ರಂಥವನ್ನೂ **ತಲೆಬರಹಗಳಿಂದ ಪ್ರತಿಪಾದ್ಯವಿಷಯಗಳನ್ನು ವಿಂಗಡಿಸಿ (೨) ಶ್ಲೋಕಸಂಖ್ಯೆಯ ಅನುಕ್ರಮವನ್ನು ಅರ್ಥಕ್ಕನುಗುಣವಾಗಿ ಮಾರ್ಪಡಿಸಿ (೩) ಅಡಿಟಿಪ್ಪಣಿಗಳಲ್ಲಿ** ಅರ್ಥವಿವೇಚನೆಯನ್ನೂ ಗೀತಾತಾತ್ಪರ್ಯಬೋಧಿನಿಯ ಸಮಾನಾರ್ಥಕವಾಕ್ಯಗಳ ಪರಾಮರ್ಶವನ್ನೂ ಮಾಡಿ (೪) ಗ್ರಂಥದ ಸಾರವನ್ನು ಸಂಗ್ರಹಿಸಿಕೊಟ್ಟು (೫) **ಶ್ಲೋಕಗಳ ಅನುಕ್ರಮಣಿಕೆ, ಪ್ರಮಾಣವಾಕ್ಯಸ್ಥಾನಸೂಚಿ,**

ಗೀತಾ ತಾತ್ಪರ್ಯಬೋಧಿನಿಯಿಂದ ಆರಿಸಿದ ಭಾಗಗಳು, ಮುಖ್ಯಶಬ್ದಗಳ ಅಕ್ಷರಾನುಕ್ರಮಣಿಕೆ – ಇವುಗಳನ್ನೊಳಗೊಂಡ ಪರಿಶಿಷ್ಟವನ್ನು ಜೋಡಿಸಿರುತ್ತೇವೆ.

## ಉಪಸಂಹಾರ

ಈ ಸಂಪುಟದಲ್ಲಿರುವ ಹನ್ನೊಂದು ಪ್ರಕರಣಗಳಿಗೂ ಶ್ಲೋಕಾನುಕ್ರಮಣಿಕೆ ಮತ್ತು ಶಬ್ದಾನುಕ್ರಮಣಿಕೆ – ಇವನ್ನು ಕೊಟ್ಟಿರುವದರಿಂದ ಗ್ರಂಥಗಳ ವಿಷಯವನ್ನು ತಿಳಿಯಬೇಕೆನ್ನುವವರಿಗೇ ಅಲ್ಲದೆ, ಭಾಷ್ಯಪ್ರಸ್ಥಾನಕ್ಕೂ ಈ ಪ್ರಕರಣಗಳ ಪ್ರಸ್ಥಾನಕ್ಕೂ ಇರುವ ವೈಲಕ್ಷಣ್ಯವನ್ನು ನಿಶ್ಚಯಿಸಬೇಕೆನ್ನುವವರಿಗೂ ಇದರಿಂದ ಪ್ರಯೋಜನವಾದೀತೆಂದು ನಂಬಿರುತ್ತೇವೆ. ಗ್ರಂಥವು ''ಅಧ್ಯಾತ್ಮಪ್ರಕಾಶ'' ಮಾಸಪತ್ರಿಕೆಯಲ್ಲಿ ಭಾಗಭಾಗವಾಗಿ ಅಚ್ಚಾಗಿರುವದೇ ಮುಂತಾದ ಕಾರಣಗಳಿಂದ ಇಲ್ಲಿ ಕಾಣಬಹುದಾದ ಕುಂದುಕೊರತೆಗಳನ್ನು ಮುಂದಿನ ಸಂಸ್ಕರಣದಲ್ಲಿ ಸರಿಪಡಿಸಿಕೊಳ್ಳಬೇಕಾಗಿದೆ.

ಈ ಅಲ್ಪಸೇವೆಯಿಂದ ಶ್ರೀಶಂಕರಭಗವತ್ಪಾದರಿಗೆ ಸ್ವಲ್ಪಮಟ್ಟಿಗಾದರೂ ಸಂತುಷ್ಟಿಯಾದರೆ ನಾವು ಧನ್ಯರು.

ಶಾರ್ವರಿಸಂವತ್ಸರದ ಪುಷ್ಯ ಬಹುಳ ೧೦
೧೨–೧–೧೯೬೧ ಗ್ರಂಥಸಂಪಾದಕರು

---

## ಎರಡನೆಯ ಮುದ್ರಣಕ್ಕೆ ಮುನ್ನುಡಿ

1961ರಲ್ಲಿ ಮೊದಲ ಬಾರಿಗೆ ಮುದ್ರಿತವಾಗಿದ್ದ ಈ ಗ್ರಂಥವು ಈಗ ಎರಡನೆಯ ಬಾರಿಗೆ ಪುನರ್ಮುದ್ರಿತವಾಗಿ ವಾಚಕರಿಗೆ ಸಮರ್ಪಿಸಲ್ಪಟ್ಟಿದೆ. ಬ್ರಹ್ಮೀಭೂತ ಪೂಜ್ಯ ಶ್ರೀಶ್ರೀ ಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರ ಎಲ್ಲಾ ಗ್ರಂಥಗಳೂ ಎಲ್ಲಾ ಕಾಲಕ್ಕೂ ವಾಚಕರಿಗೆ ದೊರೆಯುತ್ತಿರಬೇಕೆಂಬುದೇ ನಮ್ಮ ಧ್ಯೇಯವಾಗಿದೆ. ಆದ್ದರಿಂದ ಗ್ರಂಥ ಪ್ರಕಟನೆಗೆ ಪ್ರಥಮ ಸ್ಥಾನವನ್ನು ನೀಡಲಾಗಿದೆ. ವಾಚಕರು ಎಂದಿನಂತೆ ಈ ಗ್ರಂಥವನ್ನು ಸ್ವೀಕರಿಸಿ ಅಧ್ಯಾತ್ಮವಿದ್ಯೆಯ ಪ್ರಚಾರಕಾರ್ಯಕ್ಕೆ ಪ್ರೋತ್ಸಾಹವನ್ನು ನೀಡಬೇಕಾಗಿ ಕೋರಿದೆ.

ತಾ. 27–12–02 ಪ್ರಕಾಶಕರು

# ವಿಷಯಗಳ ಪರಿವಿಡಿ


| | ವಿಷಯ | ಪುಟಗಳು |
|---|---|---|
| ೧. | ಜೀವನ್ಮುಕ್ತಾನಂದಲಹರಿ | ೧–೮ |
| ೨. | ಯತಿಪಂಚಕ (ಕೌಪೀನಪಂಚಕ) | ೯–೧೦ |
| ೩. | ಮಾಯಾಪಂಚಕ | ೧೧–೧೨ |
| ೪. | ನಿರ್ವಾಣಮಂಜರಿ | ೧೨–೧೬ |
| ೫. | ಬ್ರಹ್ಮಜ್ಞಾನಾವಳೀಮಾಲೆ | ೧೬–೧೯ |
| ೬. | ಅನಾತ್ಮಶ್ರೀವಿಗರ್ಹಣ | ೨೦–೨೪ |
| ೭. | ತತ್ತ್ವೋಪದೇಶ | ೨೫–೪೩ |
| ೮. | ಪ್ರೌಢಾನುಭೂತಿ | ೪೩–೫೦ |
| ೯. | ಉಪದೇಶಪಂಚಕ | ೫೦–೫೩ |
| ೧೦. | ಸ್ವರೂಪಾನುಸಂಧಾನ | ೫೩–೫೬ |
| ೧೧. | ಯತಿಪಂಚಕದಿಂದ ಸ್ವರೂಪಾನುಸಂಧಾನ ಪೂರ ಶ್ಲೋಕಾನುಕ್ರಮಣಿಕೆ ಮತ್ತು ಶಬ್ದಾನುಕ್ರಮಣಿಕೆ | ೫೭–೬೩ |
| ೧೨. | ಮಹಾವಾಕ್ಯದರ್ಪಣ | ೬೪–೧೭೦ |


---

# ಓದುಗರಿಗೆ

ಇಲ್ಲಿರುವ ಪ್ರಕರಣಗಳಲ್ಲಿ ಕೆಲವು ಸಣ್ಣವಾಗಿದ್ದು ಅವುಗಳ ಶ್ಲೋಕಾನುಕ್ರಮಣಿಕೆ ಮತ್ತು ಶಬ್ದಾನುಕ್ರಮಣಿಕೆಗಳನ್ನು ಒಟ್ಟಿಗೆ ಒಂದುಕಡೆ ಕೊಟ್ಟಿದೆ. ಶಬ್ದಾನುಕ್ರಮಣಿಕೆಗಳಿಂದ ಏರ್ಪಡುವ ಉಪಸಿದ್ಧಾಂತಗಳನ್ನು ಪೀಠಿಕೆಯಲ್ಲಿ ಕೊಟ್ಟಿದೆ.

ಮಹಾವಾಕ್ಯದರ್ಪಣವು ಅಪೂರ್ಣಗ್ರಂಥವಾದರೂ ವಿವೇಕಚೂಡಾಮಣಿಯ ಸಾಲಿಗೆ ಸೇರತಕ್ಕದ್ದು. ಟಿಪ್ಪಣಿಗಳಲ್ಲಿ ಕೊಟ್ಟಿರುವ ವಿ. ಎಂಬ ಸಂಕೇತದಲ್ಲಿ ತೋರಿಸಿರುವ ವಿವೇಕಚೂಡಾಮಣಿಯ ಶ್ಲೋಕಗಳಿಗೆ ಹೋಲಿಸುವದರಿಂದಲೂ ಈ ಎರಡು ಗ್ರಂಥಗಳನ್ನೂ ಒಂದರ ಜೊತೆಗೆ ಒಂದನ್ನು ಹೋಲಿಸಿ ವಿಚಾರಮಾಡುವದರಿಂದಲೂ ಶಂಕರಾನಂದರ ಪ್ರಕ್ರಿಯೆಗೂ ಶಂಕರಾಚಾರ್ಯರ ಪ್ರಕ್ರಿಯೆಗೂ ಇರುವ ವೈಲಕ್ಷಣ್ಯವು ಚೆನ್ನಾಗಿ ಮನದಟ್ಟಾಗುವದು.

---

## ಸಂಕೇತಗಳ ವಿವರಣೆ

| ಸಂಕೇತ | ವಿವರಣೆ |
|---|---|
| ಅ. | ಅಷ್ಟೇಕರ್ ಕಂಪನಿ, ಪೂನಾ ಇವರ ಪುಸ್ತಕದ ಮುದ್ರಿತಪಾಠ. |
| ಈ. | ಈಶಾವಾಸ್ಯೋಪನಿಷತ್ತು |
| ಉತ್ಪತ್ತಿ. | ವಾಸಿಷ್ಠ ರಾಮಾಯಣ, ಉತ್ಪತ್ತಿಪ್ರಕರಣ |
| ಉ.ಬ್ರ. | ಸೂತಸಂಹಿತೆ, ಯಜ್ಞವೈಭವಖಂಡ, ಉಪರಿಭಾಗ, ಬ್ರಹ್ಮಗೀತೆ. |
| ಕ.ಕಾ.ಕಾಠ. | ಕಾಠಕೋಪನಿಷತ್ತು |
| ಕೇ. | ಕೇನೋಪನಿಷತ್ತು |
| ಕೈ | ಕೈವಲ್ಯೋಪನಿಷತ್ತು |
| ಗೀ. | ಭಗವದ್ಗೀತೆ |
| ಛಾಂ. | ಛಾಂದೋಗ್ಯೋಪನಿಷತ್ತು |
| ತೈ. | ತೈತ್ತಿರೀಯೋಪನಿಷತ್ತು |
| ತೈ.ನಾ. | ತೈತ್ತಿರೀಯ ನಾರಾಯಣಪನ್ನ |
| ನಿ.ಉ. | ವಾಸಿಷ್ಠ ರಾಮಾಯಣ, ನಿರ್ವಾಣಪ್ರಕರಣ, ಉತ್ತರಾರ್ಧ |
| ನಿ.ಪೂ. | ,, ,, ,, ಪೂರ್ವಾರ್ಧ |
| ನೃ.ಉ. | ನೃಸಿಂಹೋತ್ತರತಾಪಿನೀಯೋಪನಿಷತ್ತು |
| ಪಾ. | ಪಾಠಾಂತರ |
| ಬೃ. | ಬೃಹದಾರಣ್ಯಕೋಪನಿಷತ್ತು |
| ಭಾಗ. | ಶ್ರೀಮದ್ಭಾಗವತ |
| ಮ.ದ. | ಮಹಾವಾಕ್ಯದರ್ಪಣ |
| ಮಾಂ.ಮಂ. | ಮಾಂಡೂಕ್ಯೋಪನಿಷತ್ತು, ಮಂತ್ರ |
| ಮುಮುಕ್ಷು. | ವಾಸಿಷ್ಠರಾಮಾಯಣ, ಮುಮುಕ್ಷುವ್ಯವಹಾರಪ್ರಕರಣ |
| ಮುಂ. | ಮುಂಡಕೋಪನಿಷತ್ತು |
| ಯೋ.ವಾ. | ಯೋಗವಾಸಿಷ್ಠ ಅಥವಾ ವಾಸಿಷ್ಠರಾಮಾಯಣ |
| ಯೋ.ಸೂ. | ಪಾತಂಜಲಯೋಗಸೂತ್ರ |
| ವಾ॥ | ವಾಣೀವಿಲಾಸಪ್ರೆಸ್, ಶ್ರೀರಂಗ – ಇವರ ಮುದ್ರಿತಪಾಠ |
| ವಿ. | ವಿವೇಕಚೂಡಾಮಣಿ |
| ವಿ.ಪು. | ವಿಷ್ಣುಪುರಾಣ |
| ಶಂ.ಗೀ. | ಶಂಕರಾನಂದರ ಗೀತಾತಾತ್ಪರ್ಯಬೋಧಿನಿ |
| ಶ್ಲೋ. | ಶ್ಲೋಕ |
| ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಸೂ.ಭಾ. | ಬ್ರಹ್ಮಸೂತ್ರ ಶಾಂಕರಭಾಷ್ಯ |

॥ ಓಮ್ ॥

# ಜೀವನ್ಮುಕ್ತಾನಂದಲಹರಿ

**ಪುರೇ ಪೌರಾನ್ ಪಶ್ಯನ್ನರಯುವತಿನಾಮಾಕೃತಿಮಯಾನ್**
**ಸುವೇಷಾನ್ ಸ್ವರ್ಣಾಲಂಕರಣಕಲಿತಾಂಶ್ಚಿತ್ರಸದೃಶಾನ್ ।**
**ಸ್ವಯಂ ಸಾಕ್ಷೀ[1] ದ್ರಷ್ಟೇತ್ಯಪಿ ಚ ಕಲಯಂಸ್ತೈಃ ಸಹ ರಮನ್**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧॥**

೧. ಪುರದಲ್ಲಿ ಸ್ತ್ರೀಪುರುಷರೆಂಬ ನಾಮರೂಪಗಳಿಂದೊಡಗೂಡಿ[2] ಉತ್ತಮವೇಷಗಳಿಂದಲೂ ಚಿನ್ನದ ಭೂಷಣಗಳಿಂದಲೂ ಕೂಡಿರುವ ಚಿತ್ರದಂತೆ ಕಾಣುತ್ತಿರುವ[3] ಪುರಜನರನ್ನು ಕಾಣುತ್ತಾ, ತಾನು ಸಾಕ್ಷಿಯಾದ ದ್ರಷ್ಟೃವೆಂದು ತಿಳಿದುಕೊಂಡು ಅವನೊಡನೆ ಆಡುತ್ತಿರುವ[4], ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ವನೇ ವೃಕ್ಷಾನ್ ಪಶ್ಯನ್ ದಲಫಲಭರಾನ್ನಮ್ರಸುಶಿಖಾನ್**
**ಘನಚ್ಛಾಯಾಚ್ಛನ್ನಾನ್ ಬಹುಲಕಲಕೂಜದ್ದ್ವಿಜಗಣಾನ್ ।**
**ಭಜನ್ ಘಸ್ರೇ ರಾತ್ರಾವವನಿತಲತಲ್ಪೈಕಶಯನೋ**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೨॥**

೨. ಅರಣ್ಯದಲ್ಲಿ ಎಲೆ, ಹಣ್ಣು– ಇವುಗಳಿಂದ ತುಂಬಿ, ಬಾಗಿರುವ ಕೊಂಬೆಗಳುಳ್ಳವಾಗಿ, ದಟ್ಟವಾದ ನೆರಳಿನಿಂದ ಮರೆಯಾಗಿರುವ, ಮರಗಳನ್ನು ಕಾಣುತ್ತಾ ಬಹಳ ಇಂಪಾಗಿ ದನಿಗೈಯುತ್ತಿರುವ ಪಕ್ಷಿಗಳ ಗುಂಪುಗಳನ್ನು ಸೇವಿಸುತ್ತಾ, ಹಗಲಲ್ಲೂ ರಾತ್ರೆಯಲ್ಲಿಯೂ ಭೂತಲವೆಂಬ ಒಂದೇ ಹಾಸಿಗೆಯಲ್ಲಿ ಮಲಗುತ್ತಿರುವನಾಗಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

---

1. 'ಸಾಕ್ಷಾದ್ದ್ರಷ್ಟಾ' ಎಂದೂ ಪಾಠವಿದೆ ; ನೇರಾಗಿ ನೋಡುವವನು ಎಂದು ಅದಕ್ಕೆ ಅರ್ಥ.
2. ವ್ಯವಹಾರದಲ್ಲಿ ಎಷ್ಟು ಭೇದಗಳಿದ್ದರೂ ಎಲ್ಲವೂ ನಾಮರೂಪಗಳು ಮಾತ್ರ ; ಆತ್ಮನಲ್ಲಿ ಯಾವ ಭೇದವೂ ಇಲ್ಲ. ಆತ್ಮನು ಒಬ್ಬನೇ.
3. ಚಿತ್ರವನ್ನು ನೋಡಿ ಸಂತೋಷಪಡುವೆವೇ ಹೊರತು ರಾಗದ್ವೇಷಗಳನ್ನು ತಳೆಯುವದಿಲ್ಲ ; ಹಾಗೆ.
4. ವ್ಯವಹಾರದಲ್ಲಿದ್ದರೂ ರಾಗದ್ವೇಷಗಳಿಲ್ಲದೆ ಇರುತ್ತಾ ಎಂದು ಅಭಿಪ್ರಾಯ.

**ಕದಾಚಿತ್ ಪ್ರಾಸಾದೇ ಕ್ವಚಿದಪಿ ಚ ಸೌಧೇಷು ಧನಿನಾಂ**
**ಕದಾ ಕಾಲೇ ಶೈಲೇ ಕ್ವಚಿದಪಿ ಚ ಕೂಲೇಷು ಸರಿತಾಮ್ ।**
**ಕುಟೀರೇ ದಾನ್ತಾನಾಂ ಮುನಿಜನವರಾಣಾಮಪಿ ವಸನ್**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೩॥**

೩. ಒಂದೊಂದು ವೇಳೆ ಅರಮನೆಯಲ್ಲಿಯೂ ಒಂದೊಂದು ವೇಳೆ ಧನವಂತರ ಮಹಡಿಯ ಮನೆಗಳಲ್ಲಿಯೂ ಒಂದೊಂದು ವೇಳೆ ಬೆಟ್ಟದಮೇಲೂ ಒಂದೊಂದು ವೇಳೆ ನದಿಗಳ ದಂಡೆಗಳ ಮೇಲೂ (ಒಂದೊಂದು ವೇಳೆ) ದಾಂತರಾದ ಮುನಿಜನಶ್ರೇಷ್ಠರುಗಳ ಗುಡಿಸಲಲ್ಲಿಯೂ ವಾಸಮಾಡುತ್ತಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕ್ವಚಿದ್ಬಾಲೈಃ ಸಾರ್ಧಂ ಕರತಲಗತಾಲೈಃ ಸಹಸಿತೈಃ**
**ಕ್ವಚಿತ್ತಾರುಣ್ಯಾಲಙ್ಕೃತನರವಧೂಭಿಃ ಸಹ ರಮನ್ ।**
**ಕ್ವಚಿದ್ವೃದ್ಧೈಶ್ಚಿನ್ತಾಕುಲಿತಹೃದಯೈಶ್ಚಾಪಿ ವಿಲಪನ್**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೪॥**

೪. ಒಂದೊಂದು ವೇಳೆ ಕೈಚಪ್ಪಾಳೆಹಾಕಿಕೊಂಡು ನಗುತ್ತಿರುವ ಹುಡುಗರೊಡನೆ, ಒಂದೊಂದು ವೇಳೆ ಯೌವನದಿಂದ ಅಲಂಕೃತರಾಗಿರುವ ಸ್ತ್ರೀಪುರುಷರೊಡನೆ ಆಡುತ್ತಲೂ ಒಂದೊಂದು ವೇಳೆ ಚಿಂತಾಕ್ರಾಂತವಾದ ಹೃದಯವುಳ್ಳ ಮುದುಕರೊಡನೆ ಅಳುತ್ತಲೂ ಇದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

ಕದಾಚಿದ್ ವಿದ್ವದ್ಭಿರ್ವಿವಿದಿಷುಭಿರತ್ಯನ್ತವಿರತೈಃ[1]
ಕದಾಚಿತ್ಕಾವ್ಯಾಲಙ್ಕೃತಿರಸರಸಾಲೈಃ ಕವಿವರೈಃ ।
ಕದಾಚಿತ್ಸತ್ತರ್ಕೈ[2]ರನುಮಿತಿಪರೈಸ್ತಾರ್ಕಿಕವರೈ–
ರ್ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೫॥

೫. ಒಂದೊಂದು ವೇಳೆ ಜ್ಞಾನಿಗಳೊಡನೆ, (ಒಂದೊಂದು ವೇಳೆ) ಅತ್ಯಂತ ವಿರಕ್ತರಾದ ಜಿಜ್ಞಾಸುಗಳೊಡನೆ ಒಂದೊಂದು ವೇಳೆ ಕಾವ್ಯ, ಅಲಂಕಾರ, ರಸ– ಇವುಗಳಲ್ಲಿ ರಸಿಕರಾದ ಕವಿವರರೊಡನೆ, ಒಂದೊಂದು ವೇಳೆ ಸತ್ತರ್ಕಗಳಿಂದ

1. 'ನಿರತೈಃ' ಎಂಬ ವಾ॥ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಅ॥ ಪಾಠವು ಅರ್ಥವಾಗುವಂತಿಲ್ಲ. 2. 'ವದನ್ ವಾದಾಂಸ್ತರ್ಕೈಃ' ಎಂದು ಅ॥ ಪಾಠ.

ಅನುಮಾನಮಾಡುತ್ತಿರುವ ತಾರ್ಕಿಕಶ್ರೇಷ್ಠರೊಡನೆ– ಹೀಗೆಲ್ಲ ಇರುತ್ತಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾ ಧ್ಯಾನಾಭ್ಯಾಸೈಃ ಕ್ವಚಿದಪಿ ಸಪರ್ಯಾಂ ವಿಕಸಿತೈಃ**
**ಸುಗನ್ಧೈಃ ಸತ್ಪುಷ್ಪೈಃ ಕ್ವಚಿದಪಿ ದಲೈರೇವ ವಿಮಲೈಃ[1] ।**
**ಪ್ರಕುರ್ವನ್ ದೇವಸ್ಯ ಪ್ರಮುದಿತಮನಾಃ ಸಂಸ್ತುತಿಪರೋ[2]**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೬॥**

೬. ಒಂದು ವೇಳೆ ಧ್ಯಾನಾಭ್ಯಾಸಗಳಿಂದಲೂ ಒಂದೊಂದು ವೇಳೆ ಅರಳಿದ ಸುವಾಸನೆಯ ಒಳ್ಳೆಯ ಹೂಗಳಿಂದಲೂ ಒಂದೊಂದು ವೇಳೆ ನಿರ್ಮಲವಾದ ಬರಿಯ ಪತ್ರೆಗಳಿಂದಲೂ ದೇವನ ಅರ್ಚನೆಯನ್ನು ಮಾಡುತ್ತಾ ಸ್ತೋತ್ರಪರನಾಗಿ ಸಂತುಷ್ಟಮನಸ್ಕನಾಗಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಶಿವಾಯಾಃ ಶಮ್ಭೋರ್ವಾ ಕ್ವಚಿದಪಿ ಚ ವಿಷ್ಣೋರಪಿ ಕದಾ**
**ಗಣಾಧ್ಯಕ್ಷಸ್ಯಾಪಿ ಪ್ರಕಟತಪನಸ್ಯಾಪಿ[3] ಚ ಕದಾ**
ಪಠನ್ ವೈ ನಾಮಾಲಿಂ ನಯನರಚಿತಾನನ್ದಸಲಿಲೋ
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೭॥**

೭. ಒಮ್ಮೆ ಶಕ್ತಿಯ, ಒಮ್ಮೆ ಶಂಭುವಿನ, ಇನ್ನೊಮ್ಮೆ ವಿಷ್ಣುವಿನ, ಮತ್ತೊಮ್ಮೆ ಗಣಪತಿಯ ಇನ್ನೂ ಒಂದು ಸಲ ಉದಯನಾದ ಸೂರ್ಯನ ನಾಮಾವಳಿಯನ್ನು ಪಠಿಸುತ್ತಾ ಕಣ್ಣುಗಳಲ್ಲಿ ಆನಂದಬಾಷ್ಪವನ್ನು ಸುರಿಸುತ್ತಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾ ಗಙ್ಗಾಮ್ಭೋಭಿಃ ಕ್ವಚಿದಪಿ ಚ ಕೂಪೋತ್ಥಸಲಿಲೈಃ**
**ಕ್ವಚಿತ್ಕಾಸಾರೋತ್ಥೈಃ ಕ್ವಚಿದಪಿ ಸದುಷ್ಣೈಶ್ಚ[4] ಶಿಶಿರೈಃ ।**
ಭಜನ್ ಸ್ನಾನಂ ಭೂತ್ಯಾ ಕ್ವಚಿದಪಿ ಚ ಕರ್ಪೂರನಿಭಯಾ
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೮॥**

---

1. 'ವಿಮಲಃ' ಪಾ॥ 2. 'ಸಂನತಿ' ಪಾ॥
3. 'ಪ್ರಕಟಿತವರಸ್ಯಾಪಿ' ಪಾಠವು ಸರಿಯಲ್ಲ.
4. 'ಕದುಷ್ಣೈಃ' ಎಂದು ಪಾಠವಿದ್ದು ಹೀಗೆ ಮಾರ್ಪಟ್ಟಿರಬಹುದೆ ?

೮. ಒಮ್ಮೆ ಗಂಗೆಯ ನೀರಿನಲ್ಲಿ, ಇನ್ನೊಮ್ಮೆ ಭಾವಿಯ ನೀರಿನಲ್ಲಿ, ಮತ್ತೊಮ್ಮೆ ಕೆರೆಯ ನೀರಿನಲ್ಲಿ, ಒಮ್ಮೆ ಬಿಸಿನೀರಿನಲ್ಲಿ ಮತ್ತೊಮ್ಮೆ ತಣ್ಣೀರಿನಲ್ಲಿ, ಕೆಲವು ವೇಳೆ ಕರ್ಪೂರದಂತೆ ಬೆಳ್ಳಗಿರುವ ವಿಭೂತಿಯಿಂದ, ಸ್ನಾನವನ್ನು ಮಾಡುತ್ತಿದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾಚಿಜ್ಜಾಗ್ರತ್ಯಾಂ ವಿಷಯಕರಣೈಃ ಸಂವ್ಯವಹರನ್**
**ಕದಾಚಿತ್ಸ್ವಪ್ನಸ್ಥಾನಪಿ ಚ ವಿಷಯಾನೇವ ಚ ಭಜನ್ ।**
**ಕದಾಚಿತ್ಸೌಷುಪ್ತಂ ಸುಖಮನುಭವನ್ನೇವ ಸತತಂ**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೯॥**

೯. ಒಮ್ಮೆ ಎಚ್ಚರದಲ್ಲಿ ಇಂದ್ರಿಯವಿಷಯಗಳಿಂದ ವ್ಯವಹರಿಸುತ್ತಲೂ ಇನ್ನೊಮ್ಮೆ ಸ್ವಪ್ನದಲ್ಲಿರುವ ವಿಷಯಗಳನ್ನೇ ಸೇವಿಸುತ್ತಲೂ ಮತ್ತೊಮ್ಮೆ ಸುಷುಪ್ತಿಯ ಸುಖವನ್ನೇ ಅನುಭವಿಸುತ್ತಲೂ ಇದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾಪ್ಯಾಶಾವಾಸಾಃ ಕ್ವಚಿದಪಿ ಚ ದಿವ್ಯಾಮ್ಬರಧರಃ**
**ಕ್ವಚಿತ್ಪಞ್ಚಾಸ್ಯೋತ್ಥಾಂ ತ್ವಚಮಪಿ ದಧಾನಃ ಕಟಿತಟೇ ।**
ಮನಸ್ವೀ ನಿಃಸಙ್ಗಃ ಸುಜನಹೃದಯಾನನ್ದಜನಕೋ
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೦॥**

೧೦. ಒಂದುಬಾರಿ ದಿಗಂಬರನಾಗಿ ಮತ್ತೊಂದು ಬಾರಿ ದಿವ್ಯವಸ್ತ್ರವನ್ನು ಧರಿಸಿದವನಾಗಿ, ಇನ್ನೊಂದು ಬಾರಿ ಸಿಂಹದಿಂದ ತೆಗೆದ ಚರ್ಮವನ್ನು ಸೊಂಟಕ್ಕೆ ಸುತ್ತಿಕೊಂಡವನಾಗಿ – ಹೀಗಿದ್ದರೂ ಸ್ವತಂತ್ರೇಚ್ಛನಾಗಿ ನಿಃಸಂಗನಾಗಿ ಸಜ್ಜನರ ಹೃದಯಕ್ಕೆ ಆನಂದವನ್ನುಂಟುಮಾಡುತ್ತಾ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

ಕದಾಚಿತ್ಸತ್ತ್ವಸ್ಥಃ ಕ್ವಚಿದಪಿ ರಜೋವೃತ್ತಿಷು ಗತ–
ಸ್ತಮೋವೃತ್ತಿಃ ಕ್ವಾಪಿ ತ್ರಿತಯರಹಿತಃ ಕ್ವಾಪಿ ಚ ಪುನಃ ।
**ಕದಾಚಿತ್ಸಂಸಾರೀ ಶ್ರುತಿಪಥವಿಹಾರೀ ಕ್ವಚಿದಹೋ**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೧॥**

೧೧. ಒಂದುವೇಳೆ ಸತ್ತ್ವಗುಣದಲ್ಲಿದ್ದುಕೊಂಡವನಾಗಿ, ಇನ್ನೊಂದು ವೇಳೆ ರಜೋಗುಣದ ವೃತ್ತಿಗಳಲ್ಲಿರುತ್ತಾ, ಯಾವಾಗಲೋ ಒಮ್ಮೆ ತಮೋ

ವೃತ್ತಿಯಲ್ಲಿಯೂ ಇರುತ್ತಾ ಮತ್ತೂ ಕೆಲವು ವೇಳೆಗಳಲ್ಲಿ ಈ ಮೂರು ಗುಣಗಳೂ ಇಲ್ಲದವನಾಗಿ[1] ಕೆಲವು ವೇಳೆ ಸಂಸಾರಿಯಾಗಿದ್ದುಕೊಂಡು, ಕೆಲವು ವೇಳೆ ವೇದಾಂತಮಾರ್ಗದಲ್ಲಿ ವಿಹರಿಸುತ್ತಿರುವವನಾಗಿ, ಆಹಾ ! ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾಚಿನ್ಮೌನಸ್ಥಃ ಕ್ವಚಿದಪಿ ಚ ವಾಗ್ವಾದನಿರತಃ**
**ಕದಾಚಿತ್ಸಾನನ್ದಂ ಹಸಿತರಭಸಸ್ತ್ಯಕ್ತವಚನಃ[2] ।**
**ಕದಾಚಿಲ್ಲೋಕಾನಾಂ ವ್ಯವಹೃತಿಸಮಾಲೋಕನಪರೋ**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೨॥**

೧೨. ಒಂದೊಂದು ವೇಳೆ ಮೌನಿಯಾಗಿರುತ್ತಾ ಒಂದೊಂದು ವೇಳೆ ವಾಗ್ವಾದದಲ್ಲಿ ನಿರತನಾಗಿದ್ದುಕೊಂಡು ಒಂದೊಂದು ವೇಳೆ ಮಾತನ್ನು ಬಿಟ್ಟು ಆನಂದದಿಂದ ಗಟ್ಟಿಯಾಗಿ ನಗುತ್ತಾ, ಒಂದೊಂದು ವೇಳೆ ಜನರ ವ್ಯವಹಾರ ವನ್ನು ನೋಡುತ್ತಾ ಹೀಗೆಲ್ಲ ಇದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿ ಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

**ಕದಾಚಿಚ್ಚ ಸ್ತ್ರೀಣಾಂ ವಿಕಚಮುಖಪದ್ಮೇಷು ಕವಲಂ[3]**
**ಕ್ಷಿಪಂಸ್ತಾಸಾಂ ಕ್ವಾಪಿ ಸ್ವಯಮಪಿ ಚ ಗೃಹ್ಣನ್ ಸ್ವಮುಖತಃ ।**
**ತದದ್ವೈತಂ ರೂಪಂ ನಿಜಪರವಿಹೀನಂ ಪ್ರಕಟಯನ್**
**ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೩॥**

೧೩. ಒಂದೊಂದು ವೇಳೆ ಸ್ತ್ರೀಯರ ಅರಳಿದ ಮುಖಕಮಲಗಳಲ್ಲಿ ಅನ್ನದ ತುತ್ತನ್ನಿಡುತ್ತಾ, ಒಂದೊಂದು ವೇಳೆ ಅವರು ಕೊಟ್ಟ ತುತ್ತನ್ನು ತನ್ನ ಬಾಯಿ ಯಿಂದಲೇ ಗ್ರಹಿಸುತ್ತಾ ತಾನು, ಮತ್ತೊಬ್ಬರು – ಎಂಬ ಭೇದವಿಲ್ಲದ ಆ ಅದ್ವೈತ ರೂಪವನ್ನು ಪ್ರಕಟಿಸುತ್ತಾ ಇದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿ ಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

---

1. ತ್ರಿಗುಣಾತೀತನ ಲಕ್ಷಣವನ್ನು ಗೀತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೇಳಿದೆ. ಅದನ್ನು ನೋಡಬೇಕು. ತ್ರಿಗುಣಾತೀತರಾದವರು ವ್ಯವಹಾರದಲ್ಲಿ ಶುದ್ಧಸತ್ತ್ವ ಪ್ರಧಾನರಾಗಿಯೇ ಇರುತ್ತಾರೆ.
2. 'ಕದಾಚಿತ್ಸಾನನ್ದೇ ಹಸತಿ ರಭಸಾ ತ್ಯಕ್ತವಚಸಾ' ಎಂಬ ಅ॥ ಪಾಠಕ್ಕಿಂತ ಇದೇ ಮೇಲು.
3. 'ಕದಾಚಿಚ್ಛಕ್ತೀನಾಂ ವಿಕಚಮುಖಪದ್ಮೇಷು ಕಮಲಂ' ಎಂಬ ವಾ॥ ಪಾಠಕ್ಕೆ ಅರ್ಥವು ಸರಿಯಾಗಿ ಹೊಂದುವದಿಲ್ಲ.

ಕ್ವಚಿಚ್ಛೈವೈಃ ಸಾರ್ಧಂ ಕ್ವಚಿದಪಿ ಚ ಶಾಕ್ತೈಃ ಸಹ ರಮನ್[1]
ಕದಾ ವಿಷ್ಣೋರ್ಭಕ್ತೈಃ ಕ್ವಚಿದಪಿ ಚ ಸೌರ್ಯೈಃ ಸಹ ವಸನ್ ।
ಕದಾಚಿದ್ಗಾಣೇಶೈ[2]ರ್ಗತಸಕಲಭೇದೋಽದ್ವಯತಯಾ
ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೪॥

೧೪. ಕೆಲವು ವೇಳೆಗಳಲ್ಲಿ ಶೈವರೊಡನೆ, ಕೆಲವು ವೇಳೆಗಳಲ್ಲಿ ಶಾಕ್ತರೊಡನೆ ಇದ್ದು ಸಂತಸಪಡುತ್ತಾ, ಕೆಲವು ವೇಳೆಗಳಲ್ಲಿ ವಿಷ್ಣುವಿನ ಭಕ್ತರೊಡನೆಯೂ ಕೆಲವು ವೇಳೆಗಳಲ್ಲಿ ಸೂರ್ಯೋಪಾಸಕರೊಡನೆಯೂ ವಾಸಮಾಡುತ್ತಾ, ಕೆಲವು ವೇಳೆಗಳಲ್ಲಿ ಗಾಣಾಪತ್ಯರೊಡನೆಯೂ ಇರುತ್ತ ಅದ್ವಯನಾಗಿರುವದರಿಂದ ಯಾವದೊಂದು ಭೇದವೂ ಇಲ್ಲದವನಾಗಿ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

ನಿರಾಕಾರಂ ಕ್ವಾಪಿ ಕ್ವಚಿದಪಿ ಚ ಸಾಕಾರಮಮಲಂ
ನಿಜಂ ಶೈವಂ ರೂಪಂ ವಿವಿಧಗುಣಭೇದೇನ ಬಹುಧಾ ।
ಕದಾಶ್ಚರ್ಯಂ ಪಶ್ಯನ್ ಕಿಮಿದಮಿತಿ ಹೃಷ್ಯನ್ನಪಿ ಕದಾ
ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೫॥

೧೫. ಒಮ್ಮೆ ನಿರಾಕಾರವಾದ, ಮತ್ತೊಮ್ಮೆ ನಿರ್ಮಲವಾದ[3] ಸಾಕಾರವಾದ ತನ್ನ ಶಿವರೂಪವನ್ನು ಬಗೆಬಗೆಯ ಗುಣಭೇದಗಳಿಂದ ಬಲುಬಗೆಯಾಗಿರುವದನ್ನು ಕಾಣುತ್ತಾ ಒಮ್ಮೆ ಇದೇನು ?– ಎಂದು ಆಶ್ಚರ್ಯವನ್ನು ಕಾಣುತ್ತಾ ಒಮ್ಮೊಮ್ಮೆ ಆನಂದವನ್ನು ಪಡೆಯುತ್ತಾ[4] ಇದ್ದರೂ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

ಕದಾಽದ್ವೈತಂ ಪಶ್ಯನ್ನಖಿಲಮಪಿ ಸತ್ಯಂ ಶಿವಮಯಂ
ಮಹಾವಾಕ್ಯಾರ್ಥಾನಾಮವಗತಿಸಮಭ್ಯಾಸವಶತಃ ।
ಗತದ್ವೈತಾಭಾಸಃ ಶಿವ ಶಿವ ಶಿವೇತ್ಯೇವ ವಿಲಪನ್
ಮುನಿರ್ನ ವ್ಯಾಮೋಹಂ ಭಜತಿ ಗುರುದೀಕ್ಷಾಕ್ಷತತಮಾಃ ॥೧೬॥

1. 'ವಸನ್' ಎಂದು ವಾ॥ ಪಾಠ.
2. 'ಕದಾ ಗಾಣಾಪತ್ಯೈಃ' ಎಂದು ಪಾಠಾಂತರ ; ಅರ್ಥಭೇದವಿಲ್ಲ.
3. ಶುದ್ಧಸತ್ತ್ವಗುಣಯುಕ್ತವಾದ.
4. ತನ್ನ ಆತ್ಮನೇ ಆದ ಪರಶಿವನ ರೂಪಗಳು ಇಷ್ಟು ಇವೆಯಲ್ಲ !– ಎಂದು ಆಶ್ಚರ್ಯವನ್ನೊಮ್ಮೆ, ಹರ್ಷವನ್ನೊಮ್ಮೆ– ಹೀಗೆ ತೋರಿಸುತ್ತಾ ಎಂದರ್ಥ.

೧೬. ಕೆಲವು ವೇಳೆಗಳಲ್ಲಿ (ಈ ಪ್ರಪಂಚ)ವೆಲ್ಲವನ್ನೂ ಸತ್ಯವೂ ಶಿವಮಯವೂ ಆದ ಅದ್ವೈತವೇ ಎಂಬುದನ್ನು ಮಹಾವಾಕ್ಯಗಳ ಅರ್ಥದ ಜ್ಞಾನದ ಅಭ್ಯಾಸದ[1] ವಶದಿಂದ ಕಂಡುಕೊಂಡು ದ್ವೈತಾಭಾಸವನ್ನು ತೊಲಗಿಸಿಕೊಂಡು 'ಶಿವ, ಶಿವ, ಶಿವ !' ಎಂದೇ ಹೇಳಿಕೊಳ್ಳುತ್ತಿರುವವನಾಗಿ ಗುರುದೀಕ್ಷೆಯಿಂದ ಅಜ್ಞಾನವನ್ನು ನೀಗಿಕೊಂಡಿರುವ ಮುನಿಯು ಭ್ರಾಂತಿಯನ್ನು ಹೊಂದುವದಿಲ್ಲ.

ಇಮಾಂ ಮುಕ್ತಾವಸ್ಥಾಂ ಪರಮಶಿವಸಂಸ್ಥಾಂ ಗುರುಕೃಪಾ–
ಸುಧಾಪಾಙ್ಗಾವಾಪ್ಯಾಂ ಸಹಜಸುಖವಾಪ್ಯಾಮನುದಿನಮ್ ।
ಮುಹುರ್ಮಜ್ಜನ್ ಮಜ್ಜನ್ಭಜತಿ ಸುಕೃತೀ[2] ಚೇನ್ನರವರ–
ಸ್ತದಾ ಯೋಗೀ ತ್ಯಾಗೀ ಕವಿರಿತಿ ವದನ್ತೀಹ ಕವಯಃ[3] ॥೧೭॥

೧೭. ಗುರುಕೃಪೆಯ ಅಮೃತಕಟಾಕ್ಷದಿಂದ ಪಡೆದುಕೊಳ್ಳಬೇಕಾಗಿರುವ ಈ ಮುಕ್ತಾವಸ್ಥೆಯಾದ ಪರಮಶಿವನಿಷ್ಠೆಯನ್ನು ಸಹಜಾನಂದವಾಪಿಯಲ್ಲಿ ದಿನ ದಿನವೂ ಮುಳುಮುಳುಗಿ ಸುಕೃತಿಯಾದ ಮನುಷ್ಯಶ್ರೇಷ್ಠನು ಪಡೆದುಕೊಳ್ಳುತ್ತಾನಾದರೆ, ಆಗ ಅವನೇ ಯೋಗಿಯು, ತ್ಯಾಗಿಯು, ಕವಿಯು[4] ಎಂದು ಬಲ್ಲವರು ಹೇಳುವರು.

ಇತಿ ಜೀವನ್ಮುಕ್ತಾನಂದಲಹರೀ

1. ಇದು ವಿಚಾರಣೀಯವಿಷಯ ; ಜ್ಞಾನದ ಅಭ್ಯಾಸವು ಆಚಾರ್ಯರ ಸಿದ್ಧಾಂತದಲ್ಲಿಲ್ಲ.
2. 'ಸುಕೃತೈಃ' ಎಂಬ ಪಾಠಕ್ಕಿಂತ ಇದ ಮೇಲು.
3. ಈ ಶ್ಲೋಕವಾದಮೇಲೆ ಹೆಚ್ಚಿನ ಪ್ರಕ್ಷಿಪ್ತಶ್ಲೋಕವೊಂದು ಆ॥ ಪಾಠದಲ್ಲಿದೆ :

'ಮೌನೇ ಮೌನೀ ಗುಣಿನಿ ಗುಣವಾನ್ ಪಣ್ಡಿತೇ ಪಣ್ಡಿತಶ್ಚ
ದೀನೇ ದೀನಃ ಸುಖಿನಿ ಸುಖವಾನ್ ಭೋಗಿನಿ ಪ್ರಾಪ್ತಭೋಗಃ ।
ಮೂರ್ಖೇ ಮೂರ್ಖೋ ಯುವತಿಷು ಯುವಾ ವಾಗ್ಮಿನಿ ಪ್ರೌಢವಾಗ್ಮೀ
ಧನ್ಯಃ ಕೋಽಪಿ ತ್ರಿಭುವನಜಯೀ ಯೋಽವಧೂತೇಽವಧೂತಃ ॥'

4. ಜ್ಞಾನಿಯು.

## ಶ್ಲೋಕಾನುಕ್ರಮಣಿಕೆ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಇಮಾಂ ಮುಕ್ತಾವಸ್ಥಾಮ್ | ೧೭ | ಕದಾ ಧ್ಯಾನಾಭ್ಯಾಸೈಃ | ೬ |
| ಕದಾ ಗಙ್ಗಾಮ್ಭೋಭಿಃ | ೮ | ಕದಾಽಪ್ಯಾಶಾವಾಸಾಃ | ೧೦ |
| ಕದಾಚಿಚ್ಚ ಸ್ತ್ರೀಣಾಂ | ೧೩ | ಕ್ವಚಿಚ್ಛೈವೈಃ ಸಾರ್ಧಂ | ೧೪ |
| ಕದಾಚಿತ್ ಪ್ರಾಸಾದೇ | ೩ | ಕ್ವಚಿದ್ವಾಲೈಃ ಸಾರ್ಧಂ | ೪ |
| ಕದಾಚಿಜ್ಜಾಗರ್ತ್ಯಾಂ | ೯ | ನಿರಾಕಾರಂ ಕ್ವಾಪಿ | ೧೫ |
| ಕದಾಚಿತ್ಸತ್ತ್ವಸ್ಥಃ | ೧೧ | ಪುರೇ ಪೌರಾನ್ ಪಶ್ಯನ್ | ೧ |
| ಕದಾಚಿದ್ವಿದ್ವದ್ಭಿಃ | ೫ | ವನೇ ವೃಕ್ಷಾನ್ ಪಶ್ಯನ್ | ೨ |
| ಕದಾಚಿನ್ಮೌನಸ್ಥಃ | ೧೨ | ಶಿವಾಯಾಃ ಶಮ್ಭೋರ್ವಾ | ೭ |
| ಕದಾಽದ್ವೈತಂ ಪಶ್ಯನ್ | ೧೬ | | |


---

## ಶಬ್ದಾನುಕ್ರಮಣಿಕೆ

ಇಲ್ಲಿ * ಹೀಗೆ ಗುರುತುಮಾಡಿರುವ ಶಬ್ದಗಳಿಗೆ ಭಾಷ್ಯದಲ್ಲಿ ಪ್ರಯೋಗವಿಲ್ಲ.

**ಅನುಮಿತಿಪರಾಃ**—
ಅನುಮಾನದಿಂದ ತತ್ತ್ವವನ್ನು ಕಂಡುಹಿಡಿಯುವದರಲ್ಲಿ ತಾತ್ಪರ್ಯವುಳ್ಳವರು, ೫.

**ಅರ್ಥಾವಗತಿಸಮಭ್ಯಾಸಃ**—
ವಾಕ್ಯಾರ್ಥಜ್ಞಾನವನ್ನು ಅಭ್ಯಾಸಮಾಡುವದು, ೧೬.

* **ಗುರುದೀಕ್ಷಾಕ್ಷತತಮಾಃ**—
ಗುರುವಿನ ದೀಕ್ಷೆಯಿಂದ ಅಜ್ಞಾನವನ್ನು ಕಳೆದುಕೊಂಡವ, ೧ ರಿಂದ ೧೬.

* **ಜಾಗರ್ತಿಃ**—
ಎಚ್ಚರದವಸ್ಥೆ, ೯.

**ತಾರ್ಕಿಕವರಾಃ**—
ತಾರ್ಕಿಕರಲ್ಲಿ ಶ್ರೇಷ್ಠರು, ೫.

**ದ್ರಷ್ಟಾ**—
ನೋಡುವ ಆತ್ಮ ೧.

* **ನಿಜಪರವಿಹೀನಮ್**—
ತನ್ನದು ಮತ್ತೊಬ್ಬರದು ಎಂಬ ಭೇದವಿಲ್ಲದ (ಅದ್ವೈತ), ೧೩.

* **ಮಹಾವಾಕ್ಯಾನಿ**—
ತತ್ತ್ವಮಸ್ಯಾದಿಯಾದ ಜೀವೇಶ್ವರೈಕ್ಯವನ್ನು ಹೇಳುವ ವಾಕ್ಯಗಳು, ೧೬.

* **ವಾಗ್ವಾದಃ**—
ಚರ್ಚೆ, ೧೨.

**ಸಪರ್ಯಾ**—
ಪೂಜೆ, ೬.

**ಸಾಕ್ಷಿ**—
ನೇರಾಗಿ ನೋಡುವ ಆತ್ಮ ೧.

॥ ಓಮ್ ॥

# ಯತಿಪಂಚಕಮ್

## (ಕೌಪೀನಪಂಚಕ)

ವೇದಾನ್ತವಾಕ್ಯೇಷು ಸದಾ ರಮನ್ತೋ
ಭಿಕ್ಷಾನ್ನಮಾತ್ರೇಣ ಚ ತುಷ್ಟಿಮನ್ತಃ ।
ವಿಶೋಕಮನ್ತಃಕರಣೇ ರಮನ್ತಃ[1]
ಕೌಪೀನವನ್ತಃ ಖಲು ಭಾಗ್ಯವನ್ತಃ ॥೧॥

೧. ವೇದಾಂತವಾಕ್ಯಗಳಲ್ಲಿ ಯಾವಾಗಲೂ ರತಿಯುಳ್ಳವರಾಗಿಯೂ ಬರಿಯ ಭಿಕ್ಷಾನ್ನದಿಂದಲೇ ಸಂತುಷ್ಟರಾಗಿಯೂ ಯಾವ ಶೋಕವೂ ಇಲ್ಲದೆ ತಮ್ಮ ಅಂತಃಕರಣದಲ್ಲಿಯೇ ರತಿಯನ್ನು ಹೊಂದುತ್ತಾ[2] ಇರುವ ಕೌಪೀನವಂತರೇ ಭಾಗ್ಯವಂತರು.

ಮೂಲಂ ತರೋಃ ಕೇವಲಮಾಶ್ರಯನ್ತಃ
ಪಾಣಿದ್ವಯಂ ಭೋಕ್ತುಮಮತ್ರಯನ್ತಃ ।
ಕನ್ಥಾಮಿವ ಶ್ರೀಮಪಿ ಕುತ್ಸಯನ್ತಃ
ಕೌಪೀನವನ್ತಃ ಖಲು ಭಾಗ್ಯವನ್ತಃ ॥೨॥

೨. ವೃಕ್ಷಮೂಲವೊಂದನ್ನೇ ಆಶ್ರಯಿಸುತ್ತಾ[3] ಎರಡು ಕೈಗಳಿಂದಾದ ಬೊಗಸೆಯನ್ನೇ ಭೋಜನಪಾತ್ರೆಯನ್ನಾಗಿ ಮಾಡಿಕೊಂಡು ಕಂತೆಯಂತೆ ಶ್ರೀಯನ್ನು ಕೂಡ ಕೀಳಾಗಿ ಕಾಣುತ್ತಿರುವ[4] ಕೌಪೀನವಂತರೇ ಭಾಗ್ಯವಂತರು.

---

1. 'ವಿವೇಕವನ್ತಃ ಕರಣೈಕವನ್ತಃ' ಎಂಬ ವಾ॥ ಪಾಠ ಸರಿಯಲ್ಲ.
2. ವಾ॥ ಪಾಠಕ್ಕೆ ವಿವೇಕವಂತರೂ ಕರಣವೊಂದೇ ಉಳ್ಳವರೂ ಎಂದು ಅರ್ಥವಾಗುತ್ತದೆ ; ಅದು ಸರಿಯಲ್ಲವೆಂದು ನಾವು ಬಿಟ್ಟಿದೇವೆ.
3. ವೃಕ್ಷಮೂಲವೆಂದರೆ ಪ್ರಣವವು ಎಂದು ಬೋಧಾಯನಾದಿಸ್ಮೃತಿಗಳಲ್ಲಿದೆ.
4. ಸಂನ್ಯಾಸಿಗಳು ಚಳಿಯನ್ನು ಕಳೆದುಕೊಳ್ಳುವದಕ್ಕೆ ಕೌದಿಯನ್ನು ಹೊದೆದುಕೊಳ್ಳಬಹುದು ಎಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಅದರಲ್ಲಿ ಅನಾದರವಿರುವವರು ಎಂದರೆ ಶೀತೋಷ್ಣದ್ವಂದ್ವಗಳನ್ನು ಸಹನೆಮಾಡಿಕೊಳ್ಳುವ ತಿತಿಕ್ಷೆಯುಳ್ಳವರು ಎಂದರ್ಥ. ಶ್ರೀಯನ್ನು ಕೀಳಾಗಿ ಕಾಣುವವರೆಂದರೆ ವಿರಕ್ತರು ಎಂದರ್ಥ.

ದೇಹಾದಿಭಾವಂ ಪರಿಮಾರ್ಜಯನ್ತಃ
ಆತ್ಮಾನಮಾತ್ಮನ್ಯವಲೋಕಯನ್ತಃ ।
ನಾನ್ತಂ ನ ಮಧ್ಯಂ ನ ಬಹಿಃ ಸ್ಮರನ್ತಃ
ಕೌಪೀನವನ್ತಃ ಖಲು ಭಾಗ್ಯವನ್ತಃ ॥೩॥

೩. ದೇಹವೇ ಮುಂತಾದವುಗಳಲ್ಲಿ ನಾನೆಂಬ ಭಾವವನ್ನು ತೊಳೆದು ಹಾಕಿಕೊಂಡು, ಆತ್ಮನನ್ನು ತಮ್ಮಲ್ಲಿಯೇ ನೋಡುತ್ತಾ[1] ಒಳಗಾಗಲಿ ನಡುವೆಯಾಗಲಿ ಹೊರಗಾಗಲಿ ಯಾವದನ್ನೂ ಸ್ಮರಿಸದೆ ಇರುವ[2] ಕೌಪೀನವಂತರೇ ಭಾಗ್ಯವಂತರು.

ಸ್ವಾನನ್ದಭಾವೇ ಪರಿತುಷ್ಟಿಮನ್ತಃ
ಸಂಶಾನ್ತಸರ್ವೇನ್ದ್ರಿಯದೃಷ್ಟಿಮನ್ತಃ ।
ಅಹರ್ನಿಶಂ ಬ್ರಹ್ಮಣಿ ಯೇ ರಮನ್ತಃ
ಕೌಪೀನವನ್ತಃ ಖಲು ಭಾಗ್ಯವನ್ತಃ ॥೪॥

೪. ಆತ್ಮಾನಂದದ ಅನುಸಂಧಾನದಲ್ಲಿ ಪರಿತುಷ್ಟಿಯನ್ನು ಹೊಂದಿದವರಾಗಿ, ಸಕಲೇಂದ್ರಿಯಗಳ ದೃಷ್ಟಿಯನ್ನೂ ಶಾಂತಿಗೊಳಿಸಿಕೊಂಡು, ಯಾರು ಹಗಲೂ ಇರುಳೂ ಬ್ರಹ್ಮದಲ್ಲಿಯೇ ರಮಿಸುತ್ತಿರುವರೋ ಅಂಥ ಕೌಪೀನವಂತರೇ ಭಾಗ್ಯವಂತರು.

ಪಞ್ಚಾಕ್ಷರಂ ಪಾವನಮುಚ್ಚರನ್ತಃ
ಪತಿಂ ಪಶೂನಾಂ ಹೃದಿ ಭಾವಯನ್ತಃ ।
ಭಿಕ್ಷಾಶನಾ ದಿಕ್ಷು ಪರಿಭ್ರಮನ್ತಃ
ಕೌಪೀನವನ್ತಃ ಖಲು ಭಾಗ್ಯವನ್ತಃ ॥೫॥

೫. ಪವಿತ್ರವಾದ ಪಂಚಾಕ್ಷರವನ್ನು ಉಚ್ಚರಿಸುತ್ತಾ, ಪಶುಪತಿಯನ್ನು ಹೃದಯದಲ್ಲಿ ಭಾವಿಸಿಕೊಳ್ಳುತ್ತಾ ಭಿಕ್ಷಾನ್ನವನ್ನು ಮಾತ್ರ ಉಣ್ಣುತ್ತಾ ದಿಕ್ಕು ದಿಕ್ಕುಗಳಲ್ಲಿ ಸಂಚರಿಸುತ್ತಿರುವ ಕೌಪೀನವಂತರೇ ಭಾಗ್ಯವಂತರು.

**ಇತಿ ಯತಿಪಞ್ಚಕಮ್**

1. ಶಾಂತ್ಯಾದಿಗಳಿಂದ ತನ್ನಲ್ಲಿಯೇ ಆತ್ಮನನ್ನು ಕಂಡುಕೊಳ್ಳಬೇಕೆಂದು ಬೃಹದಾರಣ್ಯಕ (೪-೪-೨೩)ರಲ್ಲಿ ಹೇಳಿದೆ.
2. ಮನಸ್ಸಿನಲ್ಲಿ ಮೂಡಿಸಿಕೊಳ್ಳದೆ ಇರುವ, ಸರ್ವವ್ಯಾಪಕನಾದ ಪರಮಾತ್ಮನನ್ನೇ ಸ್ಮರಿಸುತ್ತಿರುವ.

# ಮಾಯಾಪಂಚಕ

ನಿರುಪಮನಿತ್ಯನಿರಂಶಕೇಽಪ್ಯಖಣ್ಡೇ
ಮಯಿ ಚಿತಿ ಸರ್ವವಿಕಲ್ಪನಾದಿಶೂನ್ಯೇ ।
ಘಟಯತಿ ಜಗದೀಶಜೀವಭೇದಂ
ತ್ವಘಟಿತಘಟನಾಪಟೀಯಸೀ ಮಾಯಾ ॥೧॥

೧. ಹೋಲಿಕೆಯಿಲ್ಲದವನೂ ನಿತ್ಯನೂ ಅಂಶರಹಿತನೂ ಅಖಂಡನೂ ಆಗಿರುವ ಚಿದ್ರೂಪನಾದ ಯಾವ ವಿಕಲ್ಪಾದಿಗಳೂ ಇಲ್ಲದ ನನ್ನಲ್ಲಿಯೂ ಜಗತ್ತು, ಈಶ್ವರ, ಜೀವ – ಎಂಬ ಭೇದವನ್ನು ಕೂಡಿಸಿ ತೋರಿಸುತ್ತಿದೆಯಲ್ಲ ! ಮಾಯೆಯು ಹೊಂದದೆ ಇರುವದನ್ನು ಕೂಡ ಹೊಂದಿಸಿ ತೋರಿಸತಕ್ಕದ್ದು.

ಶ್ರುತಿಶತನಿಗಮಾನ್ತಶೋಧಕಾನ–
ಪ್ಯಹಹ ಧನಾದಿನಿದರ್ಶನೇನ ಸದ್ಯಃ ।
ಕಲುಷಯತಿ ಚತುಷ್ಪದಾದ್ಯಭಿನ್ನಾ–
ನಘಟಿತಘಟನಾಪಟೀಯಸೀ ಮಾಯಾ ॥೨॥

೨. ನೂರುಗಟ್ಟಲೆಯ ಶ್ರುತಿಗಳನ್ನು ಶೋಧಿಸಬಲ್ಲವರನ್ನು ಕೂಡ ಹಣವೇ ಮುಂತಾದುವನ್ನು ತೋರಿಸಿ ಕೂಡಲೆ ನಾಲ್ಕುಕಾಲಿನ ಪ್ರಾಣಿಗಳೇ ಮುಂತಾದವುಗಳಿಗೆ ಸಮಾನರನ್ನಾಗಿ ಮಾಡಿ ಕಲ್ಮಷಗೊಳಿಸಿಬಿಡುವದಲ್ಲ ! ಮಾಯೆಯು ಹೊಂದದೆ ಇರುವದ್ದನ್ನು ಕೂಡ ಹೊಂದಿಸಿ ತೋರಿಸತಕ್ಕದ್ದು.

ಸುಖಚಿದಖಣ್ಡಬೋಧಮದ್ವಿತೀಯಂ
ವಿಯದನಿಲಾದಿವಿನಿರ್ಮಿತೇ ನಿಯೋಜ್ಯ ।
ಭ್ರಮಯತಿ ಭವಸಾಗರೇ ನಿತಾನ್ತಂ
ತ್ವಘಟಿತಘಟನಾಪಟೀಯಸೀ ಮಾಯಾ ॥೩॥

೩. ಆನಂದವೂ ಚಿದ್ರೂಪವೂ[1] ಅಖಂಡಚೈತನ್ಯವೂ ಅದ್ವಿತೀಯವೂ ಆದ ಬ್ರಹ್ಮವನ್ನು ಆಕಾಶ, ವಾಯು– ಮುಂತಾದ ಭೂತಗಳಿಂದ ನಿರ್ಮಿತವಾದ (ಶರೀರದಲ್ಲಿರುವಂತೆ) ಕಟ್ಟುಮಾಡಿ ಸಂಸಾರಸಾಗರದಲ್ಲಿ ಅತಿಶಯವಾಗಿ ತೊಳಲುವಂತೆ ಮಾಡುತ್ತಿರುವದಲ್ಲ ! ಮಾಯೆಯು ಹೊಂದದೆ ಇರುವದನ್ನು ಕೂಡ ಹೊಂದಿಸಿ ತೋರಿಸತ್ಕದ್ದು.

1. ಚಿದ್ರೂಪವೆಂದರೂ ಬೋಧವೆಂದರೂ ಒಂದೇ. ಈ ಶಬ್ದವು ಲೇಖಕರ ಕೈತಪ್ಪಿನಿಂದ ಬೇರೆಯಾಗಿರಬಹುದೆ ?

ಅಪಗತಗುಣವರ್ಣಜಾತಿಭೇದೇ
ಸುಖಚಿತಿ ವಿಪ್ರವಿಡಾದ್ಯಹಙ್ಕೃತಿಂ ಚ ।
ಸ್ಫುಟಯತಿ ಸುತದಾರಗೇಹಮೋಹಂ
ತ್ವಘಟಿತಘಟನಾಪಟೀಯಸೀ ಮಾಯಾ ॥೪॥

೪. (ಮೂರು) ಗುಣಗಳಿಲ್ಲದ ವರ್ಣ, ಜಾತಿ (?) ಇವುಗಳ ಭೇದಗಳಿಲ್ಲದ ಚಿದಾನಂದಸ್ವರೂಪದಲ್ಲಿ ಬ್ರಾಹ್ಮಣನು, ವೈಶ್ಯನು – ಮುಂತಾದ ಅಭಿಮಾನವನ್ನೂ ಮಕ್ಕಳು, ಹೆಂಡಿರು, ಮನೆ – ಎಂಬ ಮೋಹವನ್ನೂ ತೋರಿಸುವದಲ್ಲ! ಮಾಯೆಯು ಹೊಂದದೆ ಇರುವದನ್ನು ಕೂಡ ಹೊಂದಿಸಿ ತೋರಿಸತಕ್ಕದ್ದು.

ವಿಧಿಹರಿಹರವಿಭೇದಮಪ್ಯಖಣ್ಡೇ
ಬತ ವಿರಚಯ್ಯ ಬುಧಾನಪಿ ಪ್ರಕಾಮಮ್ ।
ಭ್ರಮಯತಿ ಹರಿಹರಭೇದಭಾವಾ–
ನಘಟಿತಘಟನಾಪಟೀಯಸೀ ಮಾಯಾ ॥೫॥

೫. ಆಹ ! ಬ್ರಹ್ಮ ವಿಷ್ಣು ಶಿವ – ಎಂಬ ಭೇದವನ್ನು ಅಖಂಡತತ್ತ್ವದಲ್ಲಿಯೂ ರಚನೆಮಾಡಿ ವಿವೇಕಿಗಳನ್ನು ಕೂಡ ಅತಿಶಯವಾಗಿ ಹರಿಹರಭೇದ ಭಾವನೆಯುಳ್ಳವರನ್ನಾಗಿ ಮಾಡಿಡುವದಲ್ಲ ! ಮಾಯೆಯು ಹೊಂದದೆ ಇರುವದನ್ನು ಕೂಡ ಹೊಂದಿಸಿ ತೋರಿಸತಕ್ಕದ್ದು.

ಇತಿ ಮಾಯಾಪಞ್ಚಕಮ್

# ನಿರ್ವಾಣಮಂಜರಿ

ಅಹಂ ನಾಮರೋ ನೈವ ಮರ್ತ್ಯೋ ನ ದೈತ್ಯೋ
ನ ಗನ್ಧರ್ವಯಕ್ಷಃ (?) ಪಿಶಾಚಪ್ರಭೇದಃ ।
ಪುಮಾನ್ನೈವ ನ ಸ್ತ್ರೀ ತಥಾ ನೈವ ಷಣ್ಢಃ
ಪ್ರಕೃಷ್ಟ[1]ಪ್ರಕಾಶಸ್ವರೂಪಃ ಶಿವೋಽಹಮ್ ॥೧॥

೧. ನಾನು ದೇವತೆಯಲ್ಲ, ಮನುಷ್ಯನಲ್ಲ, ದೈತ್ಯನಲ್ಲ, ಗಂಧರ್ವಯಕ್ಷರೂ ಅಲ್ಲ , ಪಿಶಾಚವಿಶೇಷವೂ ಅಲ್ಲ . ಪುರುಷನಲ್ಲ, ಸ್ತ್ರೀಯಲ್ಲ, ನಪುಂಸಕನೂ ಅಲ್ಲ. ಹೆಚ್ಚಿನ ಪ್ರಕಾಶದ ಸ್ವರೂಪನಾದ ಶಿವನು ನಾನು.

1. 'ಪ್ರಕೃಷ್ಟಃ' ಎಂದು ವಾ ॥

ಅಹಂ ನೈವ ಬಾಲೋ ಯುವಾ ನೈವ ವೃದ್ಧೋ
ನ ವರ್ಣೀ ನ ಚ ಬ್ರಹ್ಮಚಾರೀ ಗೃಹಸ್ಥಃ ।
ವನಸ್ಥೋಽಪಿ ನಾಹಂ ನ ಸಂನ್ಯಸ್ತಧರ್ಮಾ
ಜಗಜ್ಜನ್ಮನಾಶೈಕಹೇತುಃ ಶಿವೋಽಹಮ್ ॥೨॥

೨. ನಾನು ಹುಡುಗನಲ್ಲ, ಹರೆಯದವನೂ ಅಲ್ಲ, ಮುದುಕನೂ ಅಲ್ಲ, ವರ್ಣಭೇದವುಳ್ಳವನಲ್ಲ ; ಬ್ರಹ್ಮಚಾರಿಯಲ್ಲ, ಗೃಹಸ್ಥನಲ್ಲ, ವಾನಪ್ರಸ್ಥನಲ್ಲ, ಕರ್ಮಸಂನ್ಯಾಸವನ್ನು ಮಾಡಿದವನೂ ಅಲ್ಲ. ಜಗತ್ತಿನ ಹುಟ್ಟುಪ್ರಲಯಗಳಿಗೆ ಮುಖ್ಯಕಾರಣನಾದ ಶಿವನೇ ನಾನು.

+ಅಹಂ ನೈವ ಮೇಯಸ್ತಿರೋಭೂತಮಾಯೋ[1]
ತಥೈವೇಕ್ಷಿತುಂ ಮಾಂ ಪೃಥಙ್ನಾಸ್ತ್ಯುಪಾಯಃ ।
ಸಮಾಶ್ಲಿಷ್ಟಕಾಯತ್ರಯೋಽಪ್ಯದ್ವಿತೀಯಃ
ಸದಾತೀನ್ದ್ರಿಯಃ ಸರ್ವರೂಪಃ ಶಿವೋಽಹಮ್ ॥೩॥

೩. ನಾನು ಪ್ರಮೇಯರೂಪನಲ್ಲ, ಮಾಯಾರಹಿತನು, ಮತ್ತು ನನ್ನನ್ನು ನೋಡುವದಕ್ಕೆ ಮತ್ತೊಂದು ಸಾಧನವೂ ಇಲ್ಲ. ಶರೀರತ್ರಯದಿಂದ[2] ಕೂಡಿರುವನಾದರೂ ಅದ್ವಿತೀಯನು, ಯಾವಾಗಲೂ ಅತೀಂದ್ರಿಯನೂ ಸರ್ವರೂಪನೂ ಆದ ಶಿವನು ನಾನು.

ಅಹಂ ನೈವ ಮನ್ತಾ ನ ಗನ್ತಾ ನ ವಕ್ತಾ
ನ ಕರ್ತಾ ನ ಭೋಕ್ತಾ ನ ಮುಕ್ತಾಶ್ರಮಸ್ಥಃ ।
ಯಥಾಹಂ ಮನೋವೃತ್ತಿಭೇದಸ್ವರೂಪ-
ಸ್ತಥಾ ಸರ್ವವೃತ್ತಿಪ್ರದೀಪಃ ಶಿವೋಽಹಮ್ ॥೪॥

೪. ನಾನು ಮನನಮಾಡತಕ್ಕವನಲ್ಲ, ನಡೆಯುವವನಲ್ಲ, ಮಾತಾಡುವವನಲ್ಲ, ಕರ್ತೃವಲ್ಲ, ಭೋಕ್ತೃವಲ್ಲ, ಸಂನ್ಯಾಸಾಶ್ರಮದಲ್ಲಿರುವವನೂ ಅಲ್ಲ. ನಾನು ಹೇಗೆ ಮನೋವೃತ್ತಿಭೇದಗಳುಳ್ಳ ಸ್ವರೂಪದವನಾಗಿರುತ್ತೇನೊ (?) ಹಾಗೆಯೇ[3] ಸರ್ವವೃತ್ತಿಗಳನ್ನೂ ಬೆಳಗುವ ಶಿವನು ನಾನು.

+ ಈ ಗುರುತುಹಾಕಿರುವ ಶ್ಲೋಕಗಳು ಪೂನಾದ ಅಷ್ಟೇಕರಪ್ರಕಾಶಿತ ಪಾಠದಲ್ಲಿಲ್ಲ.

1. 'ಮಾಯಾ' ಪಾ॥ 2. ಭಾಷ್ಯಪ್ರಸ್ಥಾನದಲ್ಲಿ 'ಕಾಯತ್ರಯ' ಎಂಬ ಮಾತು ಕಾಣುವದಿಲ್ಲ.

3. ವೃತ್ತಿಗಳುಳ್ಳವನು ವ್ಯವಹಾರದೃಷ್ಟಿಯಿಂದ ; ಹಾಗೆಯೇ ವೃತ್ತಿಗಳನ್ನು ಬೆಳಗುವವನು ಎಂಬುದು ಹೊಂದುವದಿಲ್ಲ. ವೃತ್ತಿಗಳುಳ್ಳವನಾಗಿ ತೋರುತ್ತಿದ್ದರೂ ಪರಮಾರ್ಥವಾಗಿ ಅವನ್ನೆಲ್ಲ ಬೆಳಗುವವನು – ಎಂಬ ಭಾವವನ್ನು ಕಲ್ಪಿಸಬೇಕು.

+ನ ಮೇ ಲೋಕಯಾತ್ರಾಪ್ರವಾಹಪ್ರವೃತ್ತಿ–
ರ್ನ ಮೇ ಬನ್ಧಬುದ್ಧ್ಯಾ ದುರೀಹಾನಿವೃತ್ತಿಃ
ಪ್ರವೃತ್ತ್ಯಾ[1] ನಿವೃತ್ತ್ಯಾಸ್ಯ ಚಿತ್ತಸ್ಯ ವೃತ್ತಿ–
ರ್ಯತಸ್ತ್ವನ್ವಹಂ ತತ್ಸ್ವರೂಪಃ ಶಿವೋಽಹಮ್ ॥೫॥

೫. ನನಗೆ ಲೋಕವ್ಯವಹಾರದ ಪ್ರವಾಹದಲ್ಲಿ ಪ್ರವೃತ್ತಿಯೂ ಇಲ್ಲ, ನನಗೆ ಬಂಧಕವಿದೆಂಬ ಬುದ್ಧಿಯಿಂದ ಕೆಟ್ಟಕರ್ಮದಿಂದ ನಿವೃತ್ತಿಯೂ ಇಲ್ಲ. ಪ್ರವೃತ್ತಿಯಿಂದಲೂ ನಿವೃತ್ತಿಯಿಂದಲೂ ಈ ಚಿತ್ತವೃತ್ತಿಯು ಯಾವಾಗಲೂ ಏತರಿಂದ ಇದ್ದುಕೊಂಡಿರುವದೋ ಆ ಸ್ವರೂಪದ ಶಿವನು ನಾನು.

*ನಿದಾನಂ ಯದಜ್ಞಾನಕಾರ್ಯಸ್ಯ ಕಾರ್ಯಂ
ವಿನಾ ಯಸ್ಯ ಸತ್ತ್ವಂ ಸ್ವತೋ ನೈವ ಭಾತಿ ।
ಯದಾದ್ಯನ್ತಮಧ್ಯಾನ್ತರಾಲಾನ್ತರಾಲ–
ಪ್ರಕಾಶಾತ್ಮಕಂ ಸ್ಯಾತ್ತದೇವಾಹಮಸ್ಮಿ ॥೬॥

೬. ಅಜ್ಞಾನಕಾರ್ಯಕ್ಕೆ ಯಾವದು ಕಾರಣವೋ, ಕಾರ್ಯವು ಯಾವದರ ಇರವಿಲ್ಲದೆ ತನಗೆತಾನೆ ತೋರಿಕೊಳ್ಳಲಾರದೋ, ಯಾವದು ಮೊದಲು, ಕೊನೆ, ನಡುವೆ, ನಡುವಿನ ನಡುವೆ– ಎಲ್ಲವನ್ನೂ ಬೆಳಗುತ್ತಿರುವದಾಗಿರುವದೋ ಅದೇ ನಾನಾಗಿರುವೆನು.

+ಯತೋಽಹಂ ನ ಬುದ್ಧಿರ್ನ ಮೇ ಕಾರ್ಯಸಿದ್ಧಿ–
ರ್ಯತೋ ನಾಹಮಙ್ಗಂ ನ ಮೇ ಲಿಙ್ಗಭಙ್ಗಃ[2]।
ಹೃದಾಕಾಶವರ್ತೀ ಗತಾಙ್ಗತ್ರಯಾರ್ತಿಃ
ಸದಾ ಸಚ್ಚಿದಾನನ್ದಮೂರ್ತಿಃ ಶಿವೋಽಹಮ್ ॥೭॥

೭. ನಾನು ಬುದ್ಧಿಯಲ್ಲವಾದ್ದರಿಂದ ನನಗೆ ಕರ್ಮದ ಫಲವು ಆಗಬೇಕಾದ ದ್ದಿರುವದಿಲ್ಲ.[3] ನಾನು ಶರೀರವಲ್ಲವಾದ್ದರಿಂದ ನನಗೆ ಲಿಂಗಶರೀರದ ಭಂಗ ವಾಗಬೇಕಾದದ್ದು ಇಲ್ಲ.[4] ಹೃದಯಾಕಾಶದಲ್ಲಿರುವವನೂ ಶರೀರತ್ರಯದ ವ್ಯಥೆ ಯಿಲ್ಲದವನೂ ಯಾವಾಗಲೂ ಸಚ್ಚಿದಾನಂದಮೂರ್ತಿಯೂ ಆಗಿರುವ ಶಿವನು ನಾನು.

1. 'ಪ್ರವೃತ್ತಿರ್ನಿವೃತ್ತ್ಯಾ' ಎಂಬಿದನ್ನು ಹೀಗೆ ತಿದ್ದಿಕೊಂಡಿದೆ.
2. 'ಭಙ್ಗಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
3. ವಿಜ್ಞಾನವೆಂಬ ಬುದ್ಧಿಯೇ ಕರ್ಮವನ್ನು ಮಾಡಿ ಫಲವನ್ನು ಪಡೆಯುತ್ತದೆ – ಎಂಬ ಅಭಿಪ್ರಾಯವಿರಬಹುದು. ತೈ.೨–೫ರ ಸೂಚನೆಯೆಂದು ತೋರುತ್ತದೆ.
4. ಇಲ್ಲಿ ಹೇತುಸಾಧ್ಯಗಳ ಸಂಬಂಧವು ಸ್ಪಷ್ಟವಾಗಿಲ್ಲ ; ಸ್ಥೂಲಶರೀರವು ಲಿಂಗಶರೀರವನ್ನು ಆಶ್ರಯಿಸಿಕೊಂಡೇ ಇರುತ್ತದೆ ಎಂಬ ಅಭಿಪ್ರಾಯವಿರಬಹುದೆ ?

+ಯದಾಸೀದ್ವಿಲಾಸಾದ್ವಿಕಾರೋ[1] ಜಗದ್ಯ–
ದ್ವಿಕಾರಾಶ್ರಯಂ[2] ನಾದ್ವಿತೀಯತ್ವತಃ ಸ್ಯಾತ್ ।
ಮನೋಬುದ್ಧಿಚಿತ್ತಾಹಮಾಕಾರವೃತ್ತಿ–
ಪ್ರವೃತ್ತಿರ್ಯತಃ ಸ್ಯಾತ್ತದೇವಾಹಮಸ್ಮಿ ॥೮॥

೮. ಯಾವದು ವಿಲಾಸದಿಂದ ಜಗತ್ತೆಂಬ ವಿಕಾರವಾಗಿರುವದೋ[3], ಯಾವದು ಅದ್ವಿತೀಯವಾಗಿರುವದರಿಂದ ವಿಕಾರಕ್ಕೆ ಆಶ್ರಯವಾಗಲಾರದೋ[4], ಯಾವದರಿಂದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ– ಎಂಬೀ ಆಕಾರದ ವೃತ್ತಿಗಳ ಪ್ರವೃತ್ತಿಯು ಆಗುವದೋ ಅದೇ ನಾನಾಗಿರುವೆನು.

ಯದನ್ತರ್ಬಹಿರ್ವ್ಯಾಪಕಂ ನಿತ್ಯಶುದ್ಧಂ
ಯದೇಕಂ ಸದಾ ಸಚ್ಚಿದಾನನ್ದಕನ್ದಮ್ ।
ಯತಃ ಸ್ಥೂಲಸೂಕ್ಷ್ಮಪ್ರಪಞ್ಚಸ್ಯ ಭಾನಂ
ಯತಸ್ತತ್ಪ್ರಸೂತಿಸ್ತದೇವಾಹಮಸ್ಮಿ ॥೯॥

೯. ಯಾವದು ಒಳಗೂ ಹೊರಗೂ ವ್ಯಾಪಿಸಿಕೊಂಡಿರುವದೋ, ನಿತ್ಯ ಶುದ್ಧವಾಗಿರುವದೋ, ಯಾವದು ಒಂದೂ ಯಾವಾಗಲೂ ಸಚ್ಚಿದಾನಂದ ಮೂಲವೂ ಆಗಿರುವದೋ, ಯಾವದರಿಂದ ಸ್ಥೂಲಸೂಕ್ಷ್ಮಪ್ರಪಂಚವು ತೋರುತ್ತಿರುವದೋ, ಯಾವದರಿಂದ ಅದು ಉಂಟಾಗಿರುವದೋ ಅದೇ ನಾನಾಗಿರುವೆನು.

+ಯದರ್ಕೇನ್ದುವಿದ್ಯುತ್ಪ್ರಭಾಜಾಲಮಾಲಾ–
ವಿಲಾಸಾಸ್ಪದಂ ಯತ್ಸ್ವಭೇದಾದಿಶೂನ್ಯಮ್ ।
ಸಮಸ್ತಂ ಜಗದ್ಯಸ್ಯ ಪಾದಾತ್ಮಕಂ ಸ್ಯಾ–
ದ್ಯತಃ ಶಕ್ತಿಭಾನಂ ತದೇವಾಹಮಸ್ಮಿ ॥೧೦॥

೧೦. ಯಾವದು ಸೂರ್ಯ, ಚಂದ್ರ, ಮಿಂಚು–ಇವುಗಳ ಪ್ರಕಾಶ ಸಮೂಹದ ಮಾಲಿಕೆಯ ವಿಲಾಸಕ್ಕೆ ಆಶ್ರಯವಾಗಿರುವದೋ, ಯಾವದು ಸ್ವಗತ ಭೇದವೇ ಮುಂತಾದದ್ದಿಲ್ಲದ್ದಾಗಿರುವದೋ ಸಮಸ್ತಜಗತ್ತೂ ಯಾವದರ ಪಾದ ಮಾತ್ರವೋ[5], ಯಾವದರಿಂದ ಶಕ್ತಿಯು ತೋರುವದೋ[6] ಅದೇ ನಾನಾಗಿರುವೆನು.

1. 'ವಿಕಾರಂ' ಎಂಬುದನ್ನು 'ವಿಕಾರೋ' ಎಂದು ತಿದ್ದಿಕೊಂಡಿದೆ.
2. 'ಆಶ್ರಯೋ' ಎಂದಿದ್ದರೆ ಉತ್ತಮ. 3. ಯಾವದು ಮಾಯಾವಿಲಾಸದಿಂದ ಜಗತ್ತೆಂಬ ಕಾರ್ಯವಾಗಿ ತೋರುತ್ತದೆಯೋ ಎಂಬ ಅಭಿಪ್ರಾಯವಿರಬಹುದು.
4. ತನ್ನಲ್ಲಿ ಯಾವ ಅವಯವಗಳೂ ಇಲ್ಲದ್ದರಿಂದಲೂ ತನಗಿಂತ ಬೇರೊಂದು ವಿಕಾರವನ್ನುಂಟು ಮಾಡುವ ವಸ್ತುವಿಲ್ಲದ್ದರಿಂದಲೂ ಆ ಬ್ರಹ್ಮಕ್ಕೆ ಯಾವ ವಿಕಾರವೂ ಆಗುವಂತಿಲ್ಲ.
5. 'ಪಾದೋಽಸ್ಯ ವಿಶ್ವಾಭೂತಾನಿ' ಎಂಬ ಪುರುಷಸೂಕ್ತವಾಕ್ಯದ ಸೂಚನೆ.
6. ಈ ಅಭಿಪ್ರಾಯವು ಹಿಂದೆಯೇ ಬಂದಿದೆ.

ಯತಃ ಕಾಲಮೃತ್ಯುರ್ಬಿಭೇತಿ ಪ್ರಕಾಮಂ
ಯತಶ್ಚಿತ್ತಬುದ್ಧೀನ್ದ್ರಿಯಾಣಾಂ ವಿಲಾಸಃ ।
ಹರಿಬ್ರಹ್ಮರುದ್ರೇನ್ದ್ರಚನ್ದ್ರಾದಿನಾಮ-
ಪ್ರಕಾಶೋ ಯತಃ ಸ್ಯಾತ್ತದೇವಾಹಮಸ್ಮಿ ॥೧೧॥

೧೧. ಯಾವದಕ್ಕೆ ಕಾಲಮೃತ್ಯುವೂ ಅತಿಶಯವಾಗಿ ಅಂಜುತ್ತಿರುವದೋ, ಯಾವದರಿಂದ ಚಿತ್ತ, ಬುದ್ಧಿ, ಇಂದ್ರಿಯ– ಇವುಗಳ ವಿಲಾಸವು ತೋರುತ್ತಿರುವದೋ[1] ಯಾವದರಿಂದ ಹರಿ, ಬ್ರಹ್ಮ ರುದ್ರ, ಇಂದ್ರ, ಚಂದ್ರ – ಮುಂತಾದ ನಾಮಗಳ ಪ್ರಕಾಶವಾಗಿರುವದೋ ಅದೇ ನಾನಾಗಿರುವೆನು.

ಯದಾಕಾಶವತ್ಸರ್ವಗಂ ಶಾನ್ತರೂಪಂ
ಪರಂಜ್ಯೋತಿರಾಕಾರಶೂನ್ಯಂ ವರೇಣ್ಯಮ್ ।
ಯದಾದ್ಯನ್ತಶೂನ್ಯಂ ಪರಂ ಶಙ್ಕರಾಖ್ಯಂ
ಯದನ್ತರ್ವಿಭಾವ್ಯಂ ತದೇವಾಹಮಸ್ಮಿ ॥೧೨॥

೧೨. ಯಾವದು ಆಕಾಶದಂತೆ ಸರ್ವವ್ಯಾಪಿಯೋ ಶಾಂತರೂಪವಾಗಿರುವದೋ, ಹೆಚ್ಚಿನ ಜ್ಯೋತಿಯೂ ಆಕಾರಶೂನ್ಯವೂ ಶ್ರೇಷ್ಠವೂ ಆಗಿರುವದೋ, ಯಾವದು ಆದ್ಯಂತಗಳಿಲ್ಲದ್ದೋ ಹೆಚ್ಚಿನ ಶಂಕರನೆಂಬ ಹೆಸರುಳ್ಳದ್ದೋ– ಯಾವದು ಒಳಗೆ ಧ್ಯಾನಿಸತಕ್ಕದ್ದೋ ಅದೇ ನಾನಾಗಿರುವೆನು.

ಇತಿ ನಿರ್ವಾಣಮಞ್ಜರೀ

---

# ಬ್ರಹ್ಮಜ್ಞಾನಾವಳೀಮಾಲೆ

ಸಕೃಚ್ಛ್ರವಣಮಾತ್ರೇಣ ಬ್ರಹ್ಮಜ್ಞಾನಂ ಯತೋ ಭವೇತ್ ।
ಬ್ರಹ್ಮಜ್ಞಾನಾವಳೀಮಾಲಾ ಸರ್ವೇಷಾಂ ಮೋಕ್ಷಸಿದ್ಧಯೇ ॥೧॥

೧. ಒಂದುಸಲ ಕೇಳಿದಮಾತ್ರದಿಂದ ಯಾವದರಿಂದ ಬ್ರಹ್ಮಜ್ಞಾನವಾಗುವದೋ, ಆ ಬ್ರಹ್ಮಜ್ಞಾನಾವಳೀಮಾಲೆಯನ್ನು ಎಲ್ಲರಿಗೂ ಮೋಕ್ಷವು ದೊರೆಯಲೆಂದು (ಪ್ರಾರಂಭಿಸಲಾಗಿದೆ).

ಅಸಙ್ಗೋಽಹಮಸಙ್ಗೋಽಹಮಸಙ್ಗೋಽಹಂ ಪುನಃಪುನಃ ।
ಸಚ್ಚಿದಾನನ್ದರೂಪೋಽಹಮಹಮೇವಾಹಮವ್ಯಯಃ ॥೨॥

1. ಈ ಅಭಿಪ್ರಾಯವು ಹಿಂದೆಯೇ ಬಂದಿದೆ.

೨. ನಾನು ಅಸಂಗನು, ನಾನು ಅಸಂಗನು. ಮತ್ತೆಮತ್ತೆ ನೋಡಿದರೂ ನಾನು ಅಸಂಗನೇ. ನಾನು ಸಚ್ಚಿದಾನಂದರೂಪನು. ಅವ್ಯಯನಾದ ನಾನೇ ನಾನು.

**ನಿತ್ಯಶುದ್ಧವಿಮುಕ್ತೋಽಹಂ ನಿರಾಕಾರೋಽಹಮವ್ಯಯಃ ।**
**ಭೂಮಾನನ್ದಸ್ವರೂಪೋಽಹಮಹಮೇವಾಹಮವ್ಯಯಃ ॥೩॥**

೩. ನಾನು ಯಾವಾಗಲೂ ಶುದ್ಧನು, ಮುಕ್ತನು, ನಾನು ನಿರಾಕಾರನು, ಅವ್ಯಯನು. ನಾನು ಮಿಗಿಲಿಲ್ಲದ ಆನಂದಸ್ವರೂಪನು. ಅವ್ಯಯನಾದ ನಾನೇ ನಾನು.

**ನಿತ್ಯೋಽಹಂ ನಿರವದ್ಯೋಽಹಂ ನಿರಾಕಾರೋಽಹಮಚ್ಯುತಃ**
**ಪರಮಾನನ್ದರೂಪೋಽಹಮಹಮೇವಾಹಮವ್ಯಯಃ ॥೪॥**

೪. ನಾನು ನಿತ್ಯನು, ನಾನು ದೋಷರಹಿತನು, ನಾನು ನಿರಾಕಾರನು, ಅಚ್ಯುತನು. ನಾನು ಪರಮಾನಂದರೂಪನು. ಅವ್ಯಯನಾದ ನಾನೇ ನಾನು.

**ಶುದ್ಧಚೈತನ್ಯರೂಪೋಽಹಮಾತ್ಮಾರಾಮೋಽಹಮೇವ ಚ ।**
**ಅಖಣ್ಡಾನನ್ದರೂಪೋಽಹಮಹಮೇವಾಹಮವ್ಯಯಃ ॥೫॥**

೫. ನಾನು ಬರಿಯರಿವಿನ ಸ್ವರೂಪದವನು, ನಾನು ತನ್ನಲ್ಲಿ ತಾನು ಆಡುತ್ತಿರುವವನೇ, ಕಡಿವಡೆಯದ ಆನಂದಸ್ವರೂಪನು ನಾನು. ಅವ್ಯಯನಾದ ನಾನೇ ನಾನು.

**ಪ್ರತ್ಯಕ್ಚೈತನ್ಯರೂಪೋಽಹಂ ಶಾನ್ತೋಽಹಂ ಪ್ರಕೃತೇಃ ಪರಃ ।**
**ಶಾಶ್ವತಾನನ್ದರೂಪೋಽಹಮಹಮೇವಾಹಮವ್ಯಯಃ ॥೬॥**

೬. ನಾನು ಒಳಗಿನ ಚೈತನ್ಯದ ಸ್ವರೂಪವು. ನಾನು ಶಾಂತನು, ಪ್ರಕೃತಿಗಿಂತ ಮೀರಿರುವವನು. ನಿತ್ಯವಾದ ಆನಂದದ ಸ್ವರೂಪನು ನಾನು. ಅವ್ಯಯನಾದ ನಾನೇ ನಾನು.

**ತತ್ತ್ವಾತೀತಃ ಪರಾತ್ಮಾಹಂ ಮಧ್ಯಾತೀತಃ[1] ಪರಃ ಶಿವಃ ।**
**ಮಾಯಾತೀತಃ ಪರಂಜ್ಯೋತಿರಹಮೇವಾಹಮವ್ಯಯಃ ॥೭॥**

೭. ತತ್ತ್ವವನ್ನು ಮೀರಿರುವ ಪರಮಾತ್ಮನು ನಾನು. ಮಧ್ಯಾತೀತನಾದ(?) ಪರಶಿವನು ನಾನು. ಮಾಯೆಯನ್ನು ಮೀರಿರುವ ಹೆಚ್ಚಿನ ಬೆಳಕು ನಾನು. ಅವ್ಯಯನಾದ ನಾನೇ ನಾನು.

---

1. ಇದು 'ವಿದ್ಯಾತೀತಃ' ಎಂದಿರಬೇಕೆಂದು ತೋರುವದು.

ನಾನಾರೂಪ(?)[1] ವ್ಯತೀತೋಽಹಂ ಚಿದಾಕಾರೋಽಹಮಚ್ಯುತಃ ।
ಸುಖರೂಪಸ್ವರೂಪೋಽಹಮಹಮೇವಾಹಮವ್ಯಯಃ ॥೮॥

೮. ನಾನಾರೂಪಗಳನ್ನು ಮೀರಿರುವವನು ನಾನು. ಚಿದ್ರೂಪನಾದ ಅಚ್ಯುತನು ನಾನು. ಸುಖರೂಪದ ಸ್ವರೂಪವು ನಾನು. ಅವ್ಯಯನಾದ ನಾನೇ ನಾನು.

ಮಾಯಾ ತತ್ಕಾರ್ಯದೇಹಾದಿ ಮಮ ನಾಸ್ತ್ಯೇವ ಸರ್ವದಾ ।
ಸ್ವಪ್ರಕಾಶೈಕರೂಪೋಽಹಮಹಮೇವಾಹಮವ್ಯಯಃ ॥೯॥

೯. ಮಾಯೆ, ಅದರ ಕಾರ್ಯವಾದ ದೇಹಾದಿಗಳು ನನಗೆ ಎಂದಿಗೂ ಇಲ್ಲ. ನಾನು ಬರಿಯ ಸ್ವಪ್ರಕಾಶರೂಪನೇ, ಅವ್ಯಯನಾದ ನಾನೇ ನಾನು.

ಗುಣತ್ರಯವ್ಯತೀತೋಽಹಂ ಬ್ರಹ್ಮಾದೀನಾಂ ಚ ಸಾಕ್ಷ್ಯಹಮ್ ।
ಅನನ್ತಾನನ್ತ[2] ರೂಪೋಽಹಮಹಮೇವಾಹಮವ್ಯಯಃ ॥೧೦॥

೧೦. ನಾನು ಮೂರು ಗುಣಗಳನ್ನೂ ಮೀರಿರುವವನು, ನಾನು ಬ್ರಹ್ಮನೇ ಮೊದಲಾದವರಿಗೂ ಸಾಕ್ಷಿಯು. ಅನಂತಾನಂತರೂಪನು ನಾನು, ಅವ್ಯಯನಾದ ನಾನೇ ನಾನು.

ಅನ್ತರ್ಯಾಮಿಸ್ವರೂಪೋಽಹಂ ಕೂಟಸ್ಥಃ ಸರ್ವಗೋಽಪ್ಯಹಮ್ ।
ಪರಮಾತ್ಮಸ್ವರೂಪೋಽಹಮಹಮೇವಾಹಮವ್ಯಯಃ ॥೧೧॥

೧೧. ನಾನು (ಪೃಥಿವ್ಯಾದಿಗಳಲ್ಲಿರುವ) ಅಂತರ್ಯಾಮಿಯ ಸ್ವರೂಪವು. ನಾನು ಯಾವ ವಿಕಾರವೂ ಇಲ್ಲದ ಸರ್ವವ್ಯಾಪಿಯಾಗಿರುವೆನು. ನಾನು ಪರಮಾತ್ಮಸ್ವರೂಪನು. ಅವ್ಯಯನಾದ ನಾನೇ ನಾನು.

ನಿಷ್ಕಲೋಽಹಂ ನಿಷ್ಕ್ರಿಯೋಽಹಂ ಸರ್ವಾತ್ಮಾಽಽದ್ಯಃ ಸನಾತನಃ ।
ಅಪರೋಕ್ಷಸ್ವರೂಪೋಽಹಮಹಮೇವಾಹಮವ್ಯಯಃ ॥೧೨॥

೧೨. ನಾನು ಅವಯವಗಳಿಲ್ಲದವನು. ನಾನು ಕ್ರಿಯೆಯಿಲ್ಲದವನು. ನಾನು ಎಲ್ಲಕ್ಕೂ ಆತ್ಮನು. ಮೊದಲಿರುವವನು, ಶಾಶ್ವತನಾಗಿರುವವನು. ಅಪರೋಕ್ಷವಾದ ಸ್ವರೂಪವುಳ್ಳವನು. ಅವ್ಯಯನಾದ ನಾನೇ ನಾನು.

ದ್ವನ್ದ್ವಾದಿಸಾಕ್ಷಿರೂಪೋಽಹಮಚಲೋಽಹಂ ಸನಾತನಃ ।
ಸರ್ವಸಾಕ್ಷಿಸ್ವರೂಪೋಽಹಮಹಮೇವಾಹಮವ್ಯಯಃ ॥೧೩॥

1. ಇದು 'ನಾಮರೂಪ' ಎಂದಿದ್ದಿರಬಹುದೆ ?
2. 'ಅನನ್ತಾನನ್ದ' ಎಂಬ ಪಾಠಾಂತರವೂ ಇಲ್ಲಿ ಇದ್ದಿರಬಹುದು.

೧೩. ನಾನು ದ್ವಂದ್ವಗಳೇ ಮುಂತಾದವುಗಳಿಗೆ ಸಾಕ್ಷಿಯಾಗುವವನು. ನಾನು ಅಚಲನು, ಸನಾತನನು. ನಾನು ಎಲ್ಲಕ್ಕೂ ಸಾಕ್ಷಿಸ್ವರೂಪನಾಗಿರುವವನು. ಅವ್ಯಯನಾದ ನಾನೇ ನಾನು.

**ಪ್ರಜ್ಞಾನಘನ ಏವಾಹಂ ವಿಜ್ಞಾನಘನ ಏವ ಚ ।**
**ಅಕರ್ತಾಽಹಮಭೋಕ್ತಾಹಮಹಮೇವಾಹಮವ್ಯಯಃ ॥೧೪॥**

೧೪. ನಾನು ಪ್ರಜ್ಞಾನದ ಗಟ್ಟಿಯೇ ; ವಿಜ್ಞಾನದ ಗಟ್ಟಿಯೇ. ನಾನು ಕರ್ತೃವಲ್ಲ, ನಾನು ಭೋಕ್ತೃವಲ್ಲ. ಅವ್ಯಯನಾದ ನಾನೇ ನಾನು.

**ನಿರಾಧಾರಸ್ವರೂಪೋಽಹಂ ಸರ್ವಾಧಾರೋಽಹಮೇವ ಚ ।**
**ಆಪ್ತಕಾಮಸ್ವರೂಪೋಽಹಮಹಮೇವಾಹಮವ್ಯಯಃ ॥೧೫॥**

೧೫. ನಾನು ಯಾವ ಆಧಾರವೂ ಇಲ್ಲದ ಸ್ವರೂಪದವನು. ನಾನೇ ಎಲ್ಲಕ್ಕೂ ಆಧಾರವು. ನಾನು ಕಾಮಗಳನ್ನೆಲ್ಲ ಪಡೆದುಕೊಂಡಿರುವ ಸ್ವರೂಪದವನು. ಅವ್ಯಯನಾದ ನಾನೇ ನಾನು.

**ತಾಪತ್ರಯವಿನಿರ್ಮುಕ್ತೋ ದೇಹತ್ರಯವಿಲಕ್ಷಣಃ ।**
**ಅವಸ್ಥಾತ್ರಯಸಾಕ್ಷ್ಯಸ್ಮಿ ಚಾಹಮೇವಾಹಮವ್ಯಯಃ ॥೧೬॥**

೧೬. (ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ) ಮೂರು ತಾಪಗಳಿಂದ ಎಂದೆಂದಿಗೂ ಬಿಡುಗಡೆಹೊಂದಿರುವವನು ನಾನು. (ಸ್ಥೂಲ, ಸೂಕ್ಷ್ಮ, ಕಾರಣ ಎಂಬ) ಮೂರು ದೇಹಗಳಿಗಿಂತ[1] ವಿಲಕ್ಷಣಸ್ವರೂಪನು. (ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ) ಮೂರು ಅವಸ್ಥೆಗಳಿಗೂ ಸಾಕ್ಷಿಯಾಗಿರುವೆನು. ಅವ್ಯಯನಾದ ನಾನೇ ನಾನು.

**ಅನ್ತರ್ಜ್ಯೋತಿರ್ಬಹಿರ್ಜ್ಯೋತಿಃ ಪ್ರತ್ಯಗ್ಜ್ಯೋತಿಃ ಪರಾತ್ಪರಃ ।**
**ಜ್ಯೋತಿರ್ಜ್ಯೋತಿಃ ಸ್ವಯಂಜ್ಯೋತಿರಾತ್ಮಜ್ಯೋತಿಃ ಶಿವೋಽಸ್ಮ್ಯಹಮ್[2] ॥೧೭॥**

೧೭. ಒಳಗಿನ ಬೆಳಕು, ಹೊರಗಿನ ಬೆಳಕು, ಎಲ್ಲಕ್ಕೂ ಹೆಚ್ಚಿನ ಒಳಬೆಳಕು, ಹೆಚ್ಚಿನದಕ್ಕೂ ಹೆಚ್ಚಿನದು, ಬೆಳಕುಗಳ ಬೆಳಕು, ತಾನೇ ಬೆಳಗುವ ಬೆಳಕು, ತನ್ನ ಸ್ವರೂಪದ ಬೆಳಕು – ಇಂಥ ಶಿವನು ನಾನು.

**ಇತಿ ಬ್ರಹ್ಮಜ್ಞಾನಾವಳೀಮಾಲಾ**

------

1. ಮೂರು ದೇಹವೆಂಬುದು ಭಾಷ್ಯಪ್ರಸ್ಥಾನದಲ್ಲಿ ಕಾಣುವದಿಲ್ಲ.

2. ಈ ಶ್ಲೋಕವು ಮೂಲಕ್ಕೆ ಸೇರಿರುವಂತೆ ಕಾಣುವದಿಲ್ಲ. 'ಅಹಮೇವಾಹ ಮವ್ಯಯಃ' ಎಂಬ ಧ್ರುವಪದವು ಇಲ್ಲಿಲ್ಲ. ಇದರ ಹಿಂದಿನ (1) ದೃಗ್ದೃಶ್ಯೌ (2) ಅಹಂ ಸಾಕ್ಷೀತಿ (3) ಘಟಕುಡ್ಯಾದಿಕಂ (4) ಬ್ರಹ್ಮ ಸತ್ಯಂ – ಎಂಬ ನಾಲ್ಕು ಶ್ಲೋಕಗಳು ಅಚ್ಚಿನ ಪುಸ್ತಕದಲ್ಲಿವೆಯಾದರೂ ಅವು 'ವೇದಾಂತಡಿಂಡಿಮ'ಕ್ಕೆ ಸೇರಿದವಾದ್ದರಿಂದ ಬಿಟ್ಟುಬಿಟ್ಟೆದೇವೆ.

# ಅನಾತ್ಮಶ್ರೀವಿಗರ್ಹಣ

ಲಬ್ಧಾ ವಿದ್ಯಾ ರಾಜಮಾನ್ಯಾ ತತಃ ಕಿಂ
ಪ್ರಾಪ್ತಾ ಸಂಪತ್ ಪ್ರಾಭವಾಢ್ಯಾ ತತಃ ಕಿಮ್ ।
ಭುಕ್ತಾ ನಾರೀ ಸುನ್ದರಾಙ್ಗೀ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧॥

೧. ರಾಜರು ಗೌರವಿಸುವ ವಿದ್ಯೆಯನ್ನು ಪಡೆದದ್ದಾಯಿತು ; ಅದರಿಂದೇನು? ಅಧಿಕಾರದಿಂದ ಮೆರೆಯುವ ಸಂಪತ್ತು ದೊರಕಿತು ; ಅದರಿಂದೇನು? ಸುಂದರಾಂಗಿಯಾದ ನಾರಿಯನ್ನು ಭೋಗಿಸಿದ್ದಾಯಿತು. ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕಾರಮಾಡಿಕೊಳ್ಳಲೇ ಇಲ್ಲವಷ್ಟೆ ?

ಕೇಯೂರಾದ್ಯೈರ್ಭೂಷಿತೋ ವಾ ತತಃ ಕಿಂ
ಕೌಶೇಯಾದ್ಯೈರಾವೃತೋ ವಾ ತತಃ ಕಿಮ್ ।
ತೃಪ್ತೋ ಮೃಷ್ಟಾನ್ನಾದಿನಾ ವಾ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೨॥

೨. ಭುಜಕೀರ್ತಿಯೇ ಮುಂತಾದ ಒಡವೆಗಳನ್ನು ಇಟ್ಟುಕೊಂಡದ್ದಾಯಿತು; ಅದರಿಂದೇನು ? ಪಟ್ಟೆಪೀತಾಂಬರವೇ ಮುಂತಾದವುಗಳನ್ನು ಹೊದೆದುಕೊಂಡಾಯಿತು ; ಅದರಿಂದೇನು ? ಮೃಷ್ಟಾನ್ನವೇ ಮುಂತಾದವುಗಳನ್ನುಂಡು ತೃಪ್ತಿಯಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ದೃಷ್ಟ್ವಾ ನಾನಾ ಚಾರುದೇಶಾಸ್ತತಃ ಕಿಂ
ಪುಷ್ಟಾ ಚೇಷ್ಟಾ ಬನ್ಧುವರ್ಗಾಸ್ತತಃ ಕಿಮ್ ।
ನಷ್ಟಂ ದಾರಿದ್ರ್ಯಾದಿದುಃಖಂ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧॥

೩. ಮನೋಹರವಾದ ನಾನಾದೇಶಗಳನ್ನು ನೋಡಿದ್ದಾಯಿತು ; ಅದರಿಂದೇನು ? ತನ್ನ ನೆಂಟರಿಷ್ಟರನ್ನು ಸಾಕಿ ಸಲಹಿದ್ದಾಯಿತು ; ಅದರಿಂದೇನು ? ಬಡತನವೇ ಮುಂತಾದ ದುಃಖವು ನೀಗಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಸ್ನಾತಂ[1] ತೀರ್ಥೇ ಜಹ್ನುಜಾದೌ ತತಃ ಕಿಂ
ದಾನಂ ದತ್ತಂ ದ್ವ್ಯಷ್ಟಸಂಖ್ಯಂ ತತಃ ಕಿಮ್ ।
ಜಪ್ತಾ ಮನ್ತ್ರಾಃ ಕೋಟಿಶೋ ವಾ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೪॥

೪. ಗಂಗಾದಿತೀರ್ಥದಲ್ಲಿ ಮಿಂದದ್ದಾಯಿತು ; ಅದರಿಂದೇನು ? ಹದಿನಾರು ಸಂಖ್ಯೆಯ ದಾನಗಳನ್ನೂ ಮಾಡಿದ್ದಾಯಿತು ; ಅದರಿಂದೇನು ? ಕೋಟಿಗಟ್ಟಲೆಯಾಗಿ ಮಂತ್ರಗಳನ್ನು ಜಪಿಸಿದ್ದಾಯಿತು ; ಅದರಿಂದಾದರೂ ಏನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಗೋತ್ರಂ ಸಮ್ಯಗ್ಭೂಷಿತಂ ವಾ ತತಃ ಕಿಂ
ಗಾತ್ರಂ ಭಸ್ಮಾಚ್ಛಾದಿತಂ ವಾ ತತಃ ಕಿಮ್ ।
ರುದ್ರಾಕ್ಷಾದಿಃ ಸದ್ಧೃತೋ ವಾ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೫॥

೫. ತನ್ನ ಗೋತ್ರಕ್ಕೆ ಒಳ್ಳೆಯ ಅಲಂಕಾರವಾಯಿತು ; ಅದರಿಂದೇನು ? ಶರೀರವನ್ನು ಭಸ್ಮದಿಂದ ಬಳಿದುಕೊಂಡದ್ದಾಯಿತು ; ಅದರಿಂದೇನು ? ರುದ್ರಾಕ್ಷವೇ ಮುಂತಾದವನ್ನು ಚೆನ್ನಾಗಿ ಧರಿಸಿದ್ದಾಯಿತು ; ಅದರಿಂದಾದರೂ ಏನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಅನ್ನೈರ್ವಿಪ್ರಾಸ್ತರ್ಪಿತಾ ವಾ ತತಃ ಕಿಂ
ಯಜ್ಞೈರ್ದೇವಾಸ್ತೋಷಿತಾ ವಾ ತತಃ ಕಿಮ್ ।
ಕೀರ್ತ್ಯಾ ವ್ಯಾಪ್ತಾಃ ಸರ್ವಲೋಕಾಸ್ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೬॥

೬. ಬ್ರಾಹ್ಮಣರನ್ನು ಬಗೆಬಗೆಯ ಅನ್ನಗಳ ಭೋಜನದಿಂದ ತೃಪ್ತಿಗೊಳಿಸಿದ್ದಾಯಿತು ; ಅದರಿಂದೇನು ? ಯಜ್ಞಗಳಿಂದ ದೇವತೆಗಳನ್ನು ಸಂತೋಷಗೊಳಿಸಿದ್ದಾಯಿತು ; ಅದರಿಂದಾದರೂ ಏನು ? ಕೀರ್ತಿಯಿಂದ ಸರ್ವಲೋಕಗಳೂ ವ್ಯಾಪ್ತವಾದವು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಕಾಯಃ ಕ್ಲಿಷ್ಟಶ್ಚೋಪವಾಸೈಸ್ತತಃ ಕಿಂ
ಲಬ್ಧಾಃ ಪುತ್ರಾಃ ಸ್ವೀಯಪತ್ನ್ಯಾಸ್ತತಃ ಕಿಮ್ ।
ಪ್ರಾಣಾಯಾಮಃ ಸಾಧಿತೋ ವಾ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೭॥

1. 'ಸ್ನಾತಃ' ಎಂಬ ವಾ॥ ಪಾಠಕ್ಕಿಂತ ಈ ಅ॥ ಪಾಠವೇ ಮೇಲು.

೭. ಶರೀರವನ್ನು ಉಪವಾಸಗಳಿಂದ ಕ್ಲೇಶಪಡಿಸಿದ್ದಾಯಿತು ; ಅದರಿಂದೇನು ? ತನ್ನ ಪತ್ನಿಯಲ್ಲಿ ಗಂಡುಮಕ್ಕಳನ್ನು ಪಡೆದುಕೊಂಡದ್ದಾಯಿತು ; ಅದರಿಂದೇನು ? ಪ್ರಾಣಾಯಾಮವನ್ನು ಸಾಧಿಸಿದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲಿಲ್ಲವಷ್ಟೆ ?

**ಯುದ್ಧೇ ಶತ್ರುರ್ನಿರ್ಜಿತೋ ವಾ ತತಃ ಕಿಂ**
**ಭೂಯೋ ಮಿತ್ರೈಃ ಪೂರಿತೋ ವಾ ತತಃ ಕಿಮ್ ।**
**ಯೋಗೈಃ ಪ್ರಾಪ್ತಾಃ ಸಿದ್ಧಯೋ ವಾ ತತಃ ಕಿಂ**
**ಯೇ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೭॥**

೮. ಯುದ್ಧದಲ್ಲಿ ಶತ್ರುವನ್ನು ಗೆದ್ದದ್ದಾಯಿತು ; ಅದರಿಂದೇನು ? ಬಹಳ ಮಿತ್ರರನ್ನು ತುಂಬಿಕೊಂಡದ್ದಾಯಿತು ; ಅದರಿಂದೇನು ? ಯೋಗಗಳಿಂದ ಸಿದ್ಧಿಗಳನ್ನು ಪಡೆದುಕೊಂಡದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಲೇ ಇಲ್ಲವಷ್ಟೆ ?

**ಅಬ್ಧಿಃ ಪದ್ಭ್ಯಾಂ ಲಙ್ಘಿತೋ ವಾ ತತಃ ಕಿಂ**
**ವಾಯುಃ ಕುಮ್ಭೇ ಸ್ಥಾಪಿತೋ ವಾ ತತಃ ಕಿಮ್ ।**
**ಮೇರುಃ ಪಾಣಾವುದ್ಧೃತೋ ತೋ ವಾ ತತಃ ಕಿಂ**
**ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೯॥**

೯. ಸಮುದ್ರವನ್ನು ಕಾಲುಗಳಿಂದಲೇ ದಾಟಿದ್ದಾಯಿತು ; ಅದರಿಂದೇನು? ವಾಯುವನ್ನು ಕುಂಭಕದಲ್ಲಿ ನಿಲ್ಲಿಸಿಕೊಂಡದ್ದಾಯಿತು ; ಅದರಿಂದೇನು ? ಮೇರುವನ್ನು ಕೈಯಲ್ಲಿ ಎತ್ತಿದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

**ಕ್ಷ್ವೇಲಃ ಪೀತೋ ದುಗ್ಧವದ್ವಾ ತತಃ ಕಿಂ**
**ವಹ್ನಿರ್ಜಗ್ಧೋ ಲಾಜವದ್ವಾ ತತಃ ಕಿಮ್ ।**
**ಪ್ರಾಪ್ತಶ್ಚಾರಃ ಪಕ್ಷಿವತ್ಖೇ ತತಃ ಕಿಂ**
**ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೦॥**

೧೦. ವಿಷವನ್ನು ಹಾಲಿನಂತೆ ಕುಡಿದದ್ದಾಯಿತು ; ಅದರಿಂದೇನು ? ಬೆಂಕಿಯನ್ನು ಅರಳಿನಂತೆ ಅಗಿದು ನುಂಗಿದ್ದಾಯಿತು ; ಅದರಿಂದೇನು ? ಹಕ್ಕಿಗಳಂತೆ ಆಕಾಶದಲ್ಲಿ ಸಂಚಾರವನ್ನು ಪಡೆದುಕೊಂಡಂತೆ ಆಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಬದ್ಧಾಃ ಸಮ್ಯಕ್ಪಾವಕಾದ್ಯಾಸ್ತತಃ ಕಿಂ
ಸಾಕ್ಷಾದ್ವಿದ್ಧಾ ಲೋಹವರ್ಯಾಸ್ತತಃ ಕಿಮ್ ।
ಲಬ್ಧಃ ಕ್ಷೇಪೋಽಞ್ಜನಾದ್ಯೈಸ್ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೧॥

೧೧. ಅಗ್ನಿಸ್ತಂಭವೇ ಮುಂತಾದವುಗಳನ್ನು ಚೆನ್ನಾಗಿ ಮಾಡಿದ್ದಾಯಿತು ; ಅದರಿಂದೇನು ? ಶ್ರೇಷ್ಠವಾದ ಲೋಹಗಳನ್ನು ನೇರಾಗಿ ಕೊರೆದದ್ದಾಯಿತು ; ಅದರಿಂದೇನು ? ಅಂಜನವೇ ಮುಂತಾದವುಗಳಿಂದ ನಿಕ್ಷೇಪವನ್ನು ಪಡೆದು ಕೊಂಡದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿ ಕೊಳ್ಳಲೇ ಇಲ್ಲವಷ್ಟೆ ?

ಭೂಪೇನ್ದ್ರತ್ವಂ ಪ್ರಾಪ್ತಮುರ್ವ್ಯಾಂ ತತಃ ಕಿಂ
ದೇವೇನ್ದ್ರತ್ವಂ ಸಂಭೃತಂ ವಾ ತತಃ ಕಿಮ್ ।
ಮುಣ್ಡೇನ್ದ್ರತ್ವಂ ಚೋಪಲಬ್ಧಂ (?) ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೨॥

೧೨. ಭೂಮಿಯಲ್ಲಿ ಅರಸನ ಸ್ಥಾನವನ್ನು ಪಡೆದುಕೊಂಡದ್ದಾಯಿತು ; ಅದರಿಂದೇನು ? ದೇವೇಂದ್ರಪದವಿಯನ್ನು ಸಾಧಿಸಿದ್ದಾಯಿತು ; ಅದರಿಂದೇನು? ಯತೀಂದ್ರತ್ವವನ್ನು ಕೂಡ ಪಡೆದುಕೊಂಡದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಮನ್ತ್ರೈಃ ಸರ್ವಃ ಸ್ತಮ್ಭಿತೋ ವಾ ತತಃ ಕಿಂ
ಬಾಣೈರ್ಲಕ್ಷ್ಯೋ ಭೇದಿತೋ ವಾ ತತಃ ಕಿಮ್ ।
ಕಾಲಜ್ಞಾನಂ ಚಾಪಿ ಲಬ್ಧಂ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೩॥

೧೩. ಮಂತ್ರಗಳಿಂದ ಎಲ್ಲರನ್ನೂ ಹಿಡಿದು ನಿಲ್ಲಿಸಿದ್ದಾಯಿತು ; ಅದರಿಂದೇನು? ಬಾಣಗಳಿಂದ ಗುರಿಯನ್ನು ಹೊಡೆದದ್ದಾಯಿತು ; ಅದರಿಂದೇನು ? ಕಾಲಜ್ಞಾನವನ್ನು ಪಡೆದುಕೊಂಡದ್ದಾಯಿತು ; ಅದರಿಂದೇನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

ಕಾಮಾತಙ್ಕಃ ಖಣ್ಡಿತೋ ವಾ ತತಃ ಕಿಂ
ಕೋಪಾವೇಶಃ ಕುಣ್ಠಿತೋ ವಾ ತತಃ ಕಿಮ್ ।
ಲೋಭಾಶ್ಲೇಷೋ ವರ್ಜಿತೋ ವಾ ತತಃ ಕಿಂ
ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೪॥

೧೪. ಕಾಮದ ಅಂಜಿಕೆಯನ್ನು ಕತ್ತರಿಸಿಕೊಂಡದ್ದಾಯಿತು ; ಅದರಿಂದ ತಾನೆ ಏನು ? ಕೋಪದ ಆವೇಶವನ್ನು ಮೊಟಕುಮಾಡಿಕೊಂಡದ್ದಾಯಿತು ; ಅದರಿಂದ ತಾನೆ ಏನು ? ಲೋಭದ ಅಪ್ಪುಗೆಯನ್ನು ಬಿಡಿಸಿಕೊಂಡದ್ದಾಯಿತು ; ಅದರಿಂದ ತಾನೆ ಏನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ?

**ಮೋಹಧ್ವಾನ್ತಃ ಪೇಷಿತೋ ವಾ ತತಃ ಕಿಂ**
**ಜಾತೋ ಭೂಮೌ ನಿರ್ಮದೋ ವಾ ತತಃ ಕಿಮ್ ।**
**ಮಾತ್ಸರ್ಯಾರ್ತಿರ್ಮೀಲಿತಾ (?) ವಾ ತತಃ ಕಿಂ**
**ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೫॥**

೧೫. ಮೋಹದ ಕತ್ತಲೆಯನ್ನು ಕುಟ್ಟಿಹಾಕಿದ್ದಾಯಿತು ; ಅದರಿಂದ ತಾನೆ ಏನು ? ಭೂಮಿಯಲ್ಲೆಲ್ಲ ಮದವರ್ಜಿತನೆಂದಾಯಿತು ; ಅದರಿಂದ ತಾನೆ ಏನು ? ಮಾತ್ಸರ್ಯದ ಸಂಕಟವನ್ನು ಕಿತ್ತುಹಾಕಿದ್ದಾಯಿತು ; ಅದರಿಂದ ತಾನೆ ಏನು ? ಅದರಿಂದ ತನ್ನ ಆತ್ಮನನ್ನು-ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

**ಧಾತುರ್ಲೋಕಃ ಸಾಧಿತೋ ವಾ ತತಃ ಕಿಂ**
**ವಿಷ್ಣೋರ್ಲೋಕೋ ವೀಕ್ಷಿತೋ ವಾ ತತಃ ಕಿಮ್ ।**
**ಶಮ್ಭೋರ್ಲೋಕಃ ಶಾಸಿತೋ ವಾ ತತಃ ಕಿಂ**
**ಯೇನ ಸ್ವಾತ್ಮಾ ನೈವ ಸಾಕ್ಷಾತ್ಕೃತೋಽಭೂತ್ ॥೧೬॥**

೧೬. ಬ್ರಹ್ಮನ ಲೋಕವನ್ನು ಸಾಧಿಸಿಕೊಂಡದ್ದಾಯಿತು ; ಅದರಿಂದ ತಾನೆ ಏನು ? ವಿಷ್ಣುವಿನ ಲೋಕವನ್ನು ಕಂಡದ್ದಾಯಿತು ; ಅದರಿಂದತಾನೆ ಏನು ? ಶಿವನ ಲೋಕವನ್ನು ಆಳಿದ್ದಾಯಿತು ; ಅದರಿಂದತಾನೆ ಏನು ? ಅದರಿಂದ ತನ್ನ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಲೇ ಇಲ್ಲವಷ್ಟೆ ?

**ಯಸ್ಯೇದಂ ಹೃದಯೇ ಸಮ್ಯಗನಾತ್ಮಶ್ರೀವಿಗರ್ಹಣಮ್ ।**
**ಸದೋದೇತಿ ಸ ಏವಾತ್ಮಸಾಕ್ಷಾತ್ಕಾರಸ್ಯ ಭಾಜನಮ್ ॥೧೭॥**

೧೭. ಯಾವನ ಹೃದಯದಲ್ಲಿ ಈ ಅನಾತ್ಮಶ್ರೀನಿಂದೆಯು ಚೆನ್ನಾಗಿ ಯಾವಾಗಲೂ ಉಂಟಾಗಿರುವದೋ ಅವನೇ ಆತ್ಮಸಾಕ್ಷಾತ್ಕಾರಕ್ಕೆ ಪಾತ್ರನು.

**ಅನ್ಯೇ ತು ಮಾಯಿಕಜಗದ್ಭ್ರಾನ್ತಿವ್ಯಾಮೋಹಮೋಹಿತಾಃ ।**
**ನ ತೇಷಾಂ ಜಾಯತೇ ಕ್ವಾಪಿ ಸ್ವಾತ್ಮಸಾಕ್ಷಾತ್ಕೃತಿರ್ಭುವಿ ॥೧೮॥**

೧೮. ಮಿಕ್ಕವರೋ ಎಂದರೆ ಮಾಯಿಕವಾದ ಜಗತ್ತಿನ ಭ್ರಾಂತಿಯ ವ್ಯಾಮೋಹದಿಂದ ಮೋಹಿತರಾಗಿರುತ್ತಾರೆ. ಅವರಿಗೆ ಈ ಭೂಮಿಯಮೇಲೆ ಎಂದಿಗೂ ಆತ್ಮಸಾಕ್ಷಾತ್ಕಾರವು ಉಂಟಾಗಲಾರದು.

**ಇತಿ ಅನಾತ್ಮಶ್ರೀವಿಗರ್ಹಣಮ್**

# ತತ್ತ್ವೋಪದೇಶ

**ತತ್ತ್ವಂಪದಾರ್ಥಶುದ್ಧ್ಯರ್ಥಂ ಗುರುಃ ಶಿಷ್ಯಂ ವಚೋಽಬ್ರವೀತ್ ।**
**ವಾಕ್ಯೇ ತತ್ತ್ವಮಸೀತ್ಯತ್ರ ತ್ವಂಪದಾರ್ಥಂ ವಿವೇಚಯ ॥೧॥**

೧. ತತ್, ತ್ವಂ – ಎಂಬ ಪದಗಳ ಅರ್ಥವನ್ನು ಶೋಧನಮಾಡುವದಕ್ಕಾಗಿ ಗುರುವು ಶಿಷ್ಯನನ್ನು ಕುರಿತು ಇಂತೆಂದನು : 'ತತ್ತ್ವಮಸಿ' ಎಂಬೀ ವಾಕ್ಯದಲ್ಲಿ ತ್ವಂಪದದ ಅರ್ಥವನ್ನು ವಿವೇಚನೆಮಾಡು.

## ತ್ವಂಪದಾರ್ಥ–ದೇಹವಿವೇಕ

**ನ ತ್ವಂ ದೇಹೋಽಸಿ ದೃಶ್ಯತ್ವಾದುಪಜಾತ್ಯಾದಿಮತ್ತ್ವತಃ ।**
**ಭೌತಿಕತ್ವಾದಶುದ್ಧತ್ವಾದನಿತ್ಯತ್ವಾತ್ತಥೈವ ಚ ॥೨॥**

೨. ನೀನು ದೇಹವಲ್ಲ, ಏಕೆಂದರೆ (ಅದು) ದೃಶ್ಯವಾಗಿದೆ, ಜನ್ಮವೇ ಮುಂತಾದದ್ದುಳ್ಳದ್ದು, ಭೂತಗಳಿಂದಾದದ್ದು, ಅಶುದ್ಧವಾದದ್ದು, ಮತ್ತು ಅನಿತ್ಯವಾದದ್ದು.

**ಅದೃಶ್ಯೋ ರೂಪಹೀನಸ್ತ್ವಂ ಜಾತಿಹೀನೋಽಪ್ಯಭೌತಿಕಃ ।**
**ಶುದ್ಧನಿತ್ಯೋಽಸಿ[1] ದೃಗ್ರೂಪೋ ಘಟೋ ಯದ್ವನ್ನ ದೃಗ್ಭವೇತ್ ॥೩॥**

೩. ನೀನು ದೃಶ್ಯನಲ್ಲ, ರೂಪವಿಲ್ಲದವನು, ಜನ್ಮರಹಿತನು, ಭೂತಗಳಿಂದಾಗಿರುವವನಲ್ಲ, ಶುದ್ಧನೂ ನಿತ್ಯನೂ ದೃಗ್ರೂಪನೂ ಆಗಿರುವೆ. ನೋಡುವವನು ಹೇಗೆ (ನೋಡಲ್ಪಡುವ) ಗಡಿಗೆಯಾಗಲಾರನೋ (ಹಾಗೆ ನೀನು ದೇಹವಲ್ಲ).

## ತ್ವಂಪದಾರ್ಥ–ಇಂದ್ರಿಯವಿವೇಕ

**ನ ಭವಾನಿನ್ದ್ರಿಯಾಣ್ಯೇಷಾಂ ಕರಣತ್ವೇನ ಹಿ[2] ಶ್ರುತಿಃ ।**
**ಪ್ರೇರಕಸ್ತ್ವಂ ಪೃಥಕ್ತೇಭ್ಯೋ ನ ಕರ್ತಾ ಕರಣಂ ಭವೇತ್ ॥೪॥**

೪. ನೀನು ಇಂದ್ರಿಯಗಳಲ್ಲ, ಇವುಗಳು ಕರಣವೆಂದಲ್ಲವೆ ಶ್ರುತಿ? (ಅವುಗಳ) ಪ್ರೇರಕನು ನೀನಾದ್ದರಿಂದ ಅವುಗಳಿಗಿಂತ ಬೇರೆ. ಕರ್ತೃವು ಕರಣವಾಗಲಾರನು.

1. 'ಶುದ್ಧೋ ನಿತ್ಯೋಽಸಿ' ಎಂದಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.
2. 'ಯಾ ಶ್ರುತಿಃ' ಎಂಬ ಅಚ್ಚಿನ ಪಾಠಕ್ಕೆ ಅರ್ಥವಾಗುವದಿಲ್ಲ. ಈಗ ನಾವು 'ಹಿ' ಎಂದು ತಿದ್ದಿಕೊಂಡಿದ್ದೇವೆ. ಈ ಪಾಠಕ್ಕೂ ಅಷ್ಟು ಸರಳವಾಗಿ ಅನ್ವಯವಾಗುವದಿಲ್ಲ. ಮೂಲವು ಲೇಖಕರ ಪ್ರಮಾದದಿಂದ ಏನೋ ತಪ್ಪಾಗಿ ಬಿದ್ದಿರಬೇಕು.

ನಾನ್ಯೈತಾನ್ಯೇಕರೂಪಸ್ತ್ವಂ ಭಿನ್ನಸ್ತೇಭ್ಯಃ ಕುತಃ ಶೃಣು ।
ನ ಚೈಕೇನ್ದ್ರಿಯರೂಪಸ್ತ್ವಂ ಸರ್ವತ್ರಾಹಂಪ್ರತೀತಿತಃ ॥೫॥
ನ ತೇಷಾಂ ಸಮುದಾಯೋಽಪಿ ತೇಷಾಮನ್ಯತಮಸ್ಯ ಚ ।
ವಿನಾಶೇಽಪ್ಯಾತ್ಮಧೀಸ್ತಾವದಸ್ತಿ ಸ್ಯಾನ್ನೈವಮನ್ಯಥಾ ॥೬॥

೫–೬. ಅವುಗಳು ನಾನಾರೂಪವಾಗಿವೆ, ನೀನು ಏಕರೂಪನಾಗಿರುವೆಯಾಗಿ ಅವುಗಳಿಗಿಂತ ಬೇರೆಯೇ. ಏಕೆಂದರೆ ಕೇಳು : ನೀನು ಒಂದು ಇಂದ್ರಿಯದ ರೂಪದವನಲ್ಲ ; ಏಕೆಂದರೆ ಎಲ್ಲೆಲ್ಲಿಯೂ ನಾನು ಎಂಬ ಅರಿವಿದೆ.[1] (ನೀನು) ಅವುಗಳ ಸಮೂಹವೂ ಅಲ್ಲ ; ಏಕೆಂದರೆ ಅವುಗಳಲ್ಲಿ ಒಂದು ನಾಶವಾದರೂ ಆತ್ಮಬುದ್ಧಿಯೇನೋ ಇದ್ದೇ ಇರುತ್ತದೆ ; ಹೀಗಲ್ಲದಿದ್ದರೆ ಹೀಗಿರಬಾರದು.[2]

ಪ್ರತ್ಯೇಕಮಪಿ ತಾನ್ಯಾತ್ಮಾ ನೈವ ತತ್ರ ನಯಂ ಶೃಣು ।
ನಾನಾಸ್ವಾಮಿಕದೇಹೋಽಯಂ ನಶ್ಯೇದ್ಭಿನ್ನಮತಾಶ್ರಯಃ ॥೭॥
ನಾನಾತ್ಮಾಭಿಮತಂ ನೈವ ವಿರುದ್ಧವಿಷಯತ್ವತಃ ।
ಸ್ವಾಮ್ಯೈಕ್ಯೇ ತು ವ್ಯವಸ್ಥಾ ಸ್ಯಾದೇಕಪಾರ್ಥಿವದೇಶವತ್ ॥೮॥

೭–೮. ಅವುಗಳಲ್ಲಿ ಒಂದೊಂದು ಬೇರೆಬೇರೆಯಾಗಿ ಆತ್ಮನೆಂಬುದೂ ಸರಿಯಲ್ಲ. ಆ ವಿಷಯದಲ್ಲಿ ಯುಕ್ತಿಯನ್ನು (ಹೇಳುತ್ತೇನೆ) ಕೇಳು. ಈ ದೇಹಕ್ಕೆ ಬೇರೆ ಬೇರೆಯ ಒಡೆಯರಾದರೆ ಬೇರೆಬೇರೆ ಅಭಿಪ್ರಾಯಗಳಿಗೆ ಎಡೆಯಾಗಿ ನಾಶವಾಗಬೇಕಾಗುವದು.[3] ನಾನಾ ಆತ್ಮರುಗಳಿಗೆಲ್ಲರಿಗೂ ಅಭಿಮಾನವಾದದ್ದು ಇರುವದಿಲ್ಲ ; ಏಕೆಂದರೆ (ಅವರ ಅಭಿಪ್ರಾಯಗಳಿಗೆ) ವಿರುದ್ಧವಾದ ವಿಷಯಗಳಿರಬಹುದು.[4] ಆದರೆ ಒಬ್ಬನೇ ಒಡೆಯನೆಂದಾದರೆ, ಒಬ್ಬನೇ ರಾಜನಿರುವ ದೇಶದಂತೆ ವ್ಯವಸ್ಥೆಯಿದ್ದೀತು.

1. ನಾನು ಕೇಳುತ್ತೇನೆ, ನಾನು ನೋಡುತ್ತೇನೆ – ಎಂದು ಒಂದೊಂದು ಇಂದ್ರಿಯದ ವೃತ್ತಿಯಲ್ಲಿಯೂ ಅಭಿಮಾನವಿರುತ್ತದೆ ಎಂದರ್ಥ.

2. ಇಂದ್ರಿಯಸಮೂಹವೇ ನೀನಾಗಿದ್ದರೆ, ಅವುಗಳಲ್ಲಿ ಒಂದು ಹೋದಮಾತ್ರಕ್ಕೇ ಆತ್ಮಬುದ್ಧಿ ಇಲ್ಲವಾಗುತ್ತಿತ್ತು – ಎಂದರ್ಥ.

3. ಒಬ್ಬ ಆತ್ಮನು ಕೂರಬೇಕೆಂದರೆ ಇನ್ನೊಬ್ಬನು ನಡೆಯಬೇಕೆನ್ನುವನು – ಇತ್ಯಾದಿಯಾಗಿ ಶರೀರವನ್ನು ಅನೇಕಾತ್ಮರು ಜಗ್ಗಾಡಿ ಅದನ್ನು ಹಾಳುಮಾಡಿಬಿಡಬಹುದು.

4. ಅನೇಕರು ಯಜಮಾನರಿರುವ ಕಡೆ ಎಲ್ಲರಿಗೂ ಒಂದೇ ಅಭಿಪ್ರಾಯವು ಇರಬೇಕೆಂಬ ನಿಯಮವೇನೂ ಇಲ್ಲ ; ಗಣರಾಜ್ಯಗಳಲ್ಲಿ ವೈಮತ್ಯವಿರುವದನ್ನು ಇದಕ್ಕೆ ದೃಷ್ಟಾಂತವಾಗಿ ಕೊಡಬಹುದು.

## ತ್ವಂಪದಾರ್ಥ–ಮನಆದಿವಿವೇಕ

**ನ ಮನಸ್ತ್ವಂ ನ ವಾ ಪ್ರಾಣೋ ಜಡತ್ವಾದೇವ ಚೈತಯೋಃ ।**
**ಗತಮನ್ಯತ್ರ ಮೇ ಚಿತ್ತಮಿತ್ಯನ್ಯತ್ವಾನುಭೂತಿತಃ ॥೯॥**

೯. ನೀನು ಮನಸ್ಸಲ್ಲ, ಪ್ರಾಣವೂ ಅಲ್ಲ ; ಏಕೆಂದರೆ ಇವೆರಡೂ ಜಡವಾಗಿರುತ್ತವೆ. 'ನನ್ನ ಚಿತ್ತವು ಬೇರೊಂದು ಕಡೆಗೆ ಹೋಗಿತ್ತು' ಎಂದು ಅದು (ಆತ್ಮನಿಗಿಂತ) ಬೇರೆ ಎಂಬ ಅನುಭವವೂ ಇದೆ.

**ಕ್ಷುತ್ತೃಡ್ಭ್ಯಾಂ ಪೀಡಿತಃ ಪ್ರಾಣೋ ಮಮಾಯಂ ಚೇತಿ ಭೇದತಃ ।**
**ತಯೋರ್ದ್ರಷ್ಟಾ ಪೃಥಕ್ತಾಭ್ಯಾಂ ಘಟದ್ರಷ್ಟಾ ಘಟಾದ್ಯಥಾ ॥೧೦॥**

೧೦. ನನ್ನ ಈ ಪ್ರಾಣವು ಹಸಿವುನೀರಡಿಕೆಗಳಿಂದ ಪೀಡಿತವಾಗಿರುತ್ತದೆ, ಇದು ನನ್ನದು– ಎಂದೂ ಭೇದ(ದ ಅನುಭವ)ವಿರುವದರಿಂದಲೂ (ಇವು ನೀನಲ್ಲ). ಇವೆರಡರ ದ್ರಷ್ಟೃವಾಗಿರುವ (ನೀನು) ಗಡಿಗೆಯನ್ನು ನೋಡುತ್ತಿರುವವನು ಹೇಗೆ ಗಡಿಗೆಗಿಂತ ಬೇರೆಯೋ ಹಾಗೆ ಅವುಗಳಿಗಿಂತ ಬೇರೆ.

**ಸುಪ್ತೌ ಲೀನಾಸ್ತಿ ಯಾ ಬೋಧೇ ಸರ್ವಂ ವ್ಯಾಪ್ನೋತಿ ದೇಹಕಮ್ ।**
**ಚಿಚ್ಛಾಯಯಾ ಚ ಸಂಬದ್ಧಾ ನ ಸಾ ಬುದ್ಧಿರ್ಭವಾನ್ ದ್ವಿಜ ॥೧೧॥**

೧೧. ಎಲೈ ದ್ವಿಜನೆ, ಯಾವದು ನಿದ್ರೆಯಲ್ಲಿ ಲಯವಾಗಿರುತ್ತದೆಯೋ, ಎಚ್ಚರವಾಗುತ್ತಲೂ ಚಿತ್ತಿನ ನೆರಳಿನಿಂದ ಕೂಡಿಕೊಂಡು ದೇಹವನ್ನೆಲ್ಲ ವ್ಯಾಪಿಸಿರುತ್ತದೆಯೋ, ಆ ಬುದ್ಧಿಯು ನೀನಲ್ಲ.

**ನಾನಾರೂಪವತೀ ಬೋಧೇ ಸುಪ್ತೌ ಲೀನಾತಿಚಞ್ಚಲಾ ।**
**ಯತೋ ದೃಗೇಕರೂಪಸ್ತ್ವಂ ಪೃಥಕ್ತಸ್ಯಾಃ[1] ಪ್ರಕಾಶಕಃ ॥೧೨॥**

೧೨. (ಅದು) ಎಚ್ಚರದಲ್ಲಿ ಬಹುಚಂಚಲವಾಗಿದ್ದುಕೊಂಡು ಬೇರೆ ಬೇರೆಯ ರೂಪವನ್ನು ಧರಿಸಿರುತ್ತದೆ. ನಿದ್ರೆಯಲ್ಲಿ ಲಯವಾಗಿರುತ್ತದೆ. ನೀನು ದೃಕ್ಕೆಂಬ ಒಂದೇ ರೂಪದಿಂದಿರುತ್ತೀಯೆ ; ಆದ್ದರಿಂದ ನೀನು ಅದಕ್ಕಿಂತ ಬೇರೆ, ಅದನ್ನು ಬೆಳಗುವವನು.

## ತ್ವಂಪದಾರ್ಥ–ಸಾಕ್ಷಿಸ್ವರೂಪ

**ಸುಪ್ತೌ ದೇಹಾದ್ಯಭಾವೇಽಪಿ ಸಾಕ್ಷೀ ತೇಷಾಂ ಭವಾನ್ ಯತಃ ।**
**ಸ್ವಾನುಭೂತಿಸ್ವರೂಪತ್ವಾನ್ನಾನ್ಯಸ್ತಸ್ಯಾಸ್ತಿ ಭಾಸಕಃ ॥೧೩॥**

1. 'ತಸ್ಯ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

೧೩. ನಿದ್ರೆಯಲ್ಲಿ ದೇಹಾದಿಗಳು ಇಲ್ಲದಿದ್ದರೂ ನೀನು ಅವಕ್ಕೆ ಸಾಕ್ಷಿಯಾಗಿರುವದರಿಂದ ಸ್ವಾನುಭವರೂಪನಾಗಿರುವ ಆ (ಸಾಕ್ಷಿಗೆ) ಮತ್ತೊಬ್ಬ ಬೆಳಗಿ ತೋರುವವನು ಇರುವದಿಲ್ಲ.

**ಪ್ರಮಾಣಂ ಬೋಧಯನ್ತಂ ತಂ ಬೋಧಂ ಮಾನೇನ ಯೇ ನರಾಃ[1] ।**
**ಬುಭುತ್ಸನ್ತೇ ತ ಏಧೋಭಿರ್ದಗ್ಧುಂ ವಾಞ್ಛನ್ತಿ ಪಾವಕಮ್ ॥೧೪॥**

೧೪. ಪ್ರಮಾಣವನ್ನು ತಿಳಿಸಿಕೊಡುವ ಆ ಸಾಕ್ಷಿಯನ್ನು ಪ್ರಮಾಣದಿಂದ ಅರಿಯಬೇಕೆಂದು ಯಾವ ಜನರು ಇಚ್ಛಿಸುತ್ತಾರೋ ಅವರು ಕಟ್ಟಿಗೆಗಳಿಂದ ಬೆಂಕಿಯನ್ನು ಸುಡುವದಕ್ಕೆ ಇಚ್ಛಿಸುವವರಾಗಿರುತ್ತಾರೆ.[2]

**ವಿಶ್ವಮಾತ್ಮಾನುಭವತಿ ತೇನಾಸೌ ನಾನುಭೂಯತೇ ।**
**ವಿಶ್ವಂ ಪ್ರಕಾಶಯತ್ಯಾತ್ಮಾ ತೇನಾಸೌ ನ ಪ್ರಕಾಶ್ಯತೇ ॥೧೫॥**

೧೫. ಪ್ರಪಂಚವನ್ನು ಆತ್ಮನು ಅನುಭವಿಸುತ್ತಾನೆ, ಆ (ಪ್ರಪಂಚದಿಂದ) ಇವನು ಅನುಭವಿಸಲ್ಪಡುವದಿಲ್ಲ. ಆತ್ಮನು ಪ್ರಪಂಚವನ್ನು ಬೆಳಗುತ್ತಾನೆ, ಅದರಿಂದ ಇವನು ಬೆಳಗಲ್ಪಡುವದಿಲ್ಲ.

## ಬ್ರಹ್ಮಾತ್ಮೈಕ್ಯ

**ಈದೃಶಂ ತಾದೃಶಂ ನೈತನ್ನ ಪರೋಕ್ಷಂ ಸದೇವ ಯತ್ ।**
**ತದ್ಬ್ರಹ್ಮ ತ್ವಂ ನ ದೇಹಾದಿದೃಶ್ಯರೂಪೋಽಸಿ ಸರ್ವದೃಕ್ ॥೧೬॥**

೧೬. ಇದು ಇಂಥದ್ದು, ಅಂಥದ್ದು – ಎಂಬುದಲ್ಲ, ಪರೋಕ್ಷವಲ್ಲ, ಸತ್ತೇ ಆಗಿರುವದು – ಇಂಥ ಬ್ರಹ್ಮವು ಯಾವದೋ ಅದೇ ನೀನು, ದೇಹಾದಿಗಳೆಂಬ ದೃಶ್ಯರೂಪನಲ್ಲ, ಎಲ್ಲವನ್ನೂ ನೋಡುತ್ತಿರುವವನು.

**ಇದಂತ್ವೇನೈವ ಯದ್ಭಾತಿ ಸರ್ವಂ ತಚ್ಚ ನಿಷಿಧ್ಯತೇ ।**
**ಅವಾಚ್ಯಂ[3] ತತ್ತ್ವಮನಿದಂ ನ ವೇದ್ಯಂ ಸ್ವಪ್ರಕಾಶತಃ ॥೧೭॥**

೧೭. ಇದು ಎಂದೇ ಯಾವದು ತೋರುತ್ತಿರುವದೋ ಅದೆಲ್ಲವನ್ನೂ ಅಲ್ಲಗಳೆಯಲಾಗುತ್ತದೆ. ಇದು ಎಂಬುದಲ್ಲದ ತತ್ತ್ವವು ವಾಚ್ಯವಲ್ಲ, ಜ್ಞೇಯವಲ್ಲ ; ಏಕೆಂದರೆ (ಅದು) ಸ್ವಪ್ರಕಾಶವಾಗಿರುತ್ತದೆ.

1. 'ಜನಾಃ' ವಾ॥
2. ಕಟ್ಟಿಗೆಯನ್ನು ಸುಡುವ ಬೆಂಕಿಯನ್ನು ಕಟ್ಟಿಗೆಯಿಂದ ಸುಡುವದು ಹೇಗೆ ಆಗದೋ ಹಾಗೆ ಪ್ರಮಾಣಗಳನ್ನೂ ಬೆಳಗುವ ಆತ್ಮನನ್ನು ಅವುಗಳಿಂದ ಅರಿಯುವದೂ ಆಗಲಾರದು – ಎಂದು ಅಭಿಪ್ರಾಯ.
3. 'ಅವಾಚ್ಯ' ಎಂಬ ಅಚ್ಚಿನಪಾಠವನ್ನು 'ಅವಾಚ್ಯಂ' ಎಂದು ತಿದ್ದಿಕೊಂಡಿದೆ.

**ಸತ್ಯಂ ಜ್ಞಾನಮನನ್ತಂ ಚ ಬ್ರಹ್ಮಲಕ್ಷಣಮುಚ್ಯತೇ ।**
**ಸತ್ಯತ್ವಾಜ್ಞಾನರೂಪತ್ವಾದನನ್ತತ್ವಾತ್ತ್ವಮೇವ ಹಿ ॥೧೮॥**

೧೮. ಸತ್ಯವು ಜ್ಞಾನವು ಮತ್ತು ಅನಂತವು[1] ಎಂದು ಬ್ರಹ್ಮಲಕ್ಷಣವನ್ನು (ಶ್ರುತಿಯಲ್ಲಿ) ಹೇಳಿರುತ್ತದೆ. ಸತ್ಯವಾಗಿರುವದರಿಂದಲೂ ಜ್ಞಾನಸ್ವರೂಪವಾಗಿರುವದರಿಂದಲೂ ಅನಂತವಾಗಿರುವದರಿಂದಲೂ ನೀನೇ (ಆ ಬ್ರಹ್ಮವು).

**ಸತಿ ದೇಹಾದ್ಯುಪಾಧೌ ಸ್ಯಾಜ್ಜೀವಸ್ತಸ್ಯ ನಿಯಾಮಕಃ ।**
**ಈಶ್ವರಃ ಶಕ್ತ್ಯುಪಾಧಿತ್ವಾದ್ದ್ವಯೋರ್ಬಾಧೇ ಸ್ವಯಂಪ್ರಭಃ ॥೧೯॥**

೧೯. ದೇಹವೇ ಮುಂತಾದ ಉಪಾಧಿಯಿದ್ದರೆ ಜೀವನಿದ್ದಾನು, ಅವನನ್ನು ನಿಯಮಿಸುವವನು ಶಕ್ತಿ ಎಂಬ ಉಪಾಧಿಯಿಂದ ಈಶ್ವರನಾಗುವನು, ಆ ಎರಡು ಉಪಾಧಿಗಳೂ ಬಾಧಿತವಾದರೆ ಸ್ವಯಂಪ್ರಕಾಶನಾದ (ಪರಮಾತ್ಮನೇ).

## ವಾಕ್ಯಾರ್ಥವಿಚಾರಕ್ಕೆ ಅವತರಣಿಕೆ

**ಅಪೇಕ್ಷ್ಯತೇಽಖಿಲೈರ್ಮಾನೈರ್ನ ಯನ್ಮಾನಮಪೇಕ್ಷತೇ ।**
**ವೇದವಾಕ್ಯಂ ಪ್ರಮಾಣಂ ತದ್ಬ್ರಹ್ಮಾತ್ಮಾವಗತೌ ಮತಮ್ ॥೨೦॥**

೨೦. ಮಿಕ್ಕ ಎಲ್ಲಾ ಪ್ರಮಾಣಗಳೂ ಯಾವದನ್ನು ಅಪೇಕ್ಷಿಸುವವೋ,[2] (ಆದರೆ) ಯಾವದು (ಮತ್ತೊಂದು) ಪ್ರಮಾಣವನ್ನು ಅಪೇಕ್ಷಿಸುವದಿಲ್ಲವೋ, ಆ ವೇದವಾಕ್ಯವು ಬ್ರಹ್ಮಾತ್ಮಜ್ಞಾನಕ್ಕೆ ಪ್ರಮಾಣವೆಂದು (ಬ್ರಹ್ಮಜ್ಞಾನಿಗಳ) ಮತವು.

**ಅತೋ ಹಿ ತತ್ತ್ವಮಸ್ಯಾದಿವೇದವಾಕ್ಯಂ ಪ್ರಮಾಣತಃ ।**
**ಬ್ರಹ್ಮಣೋಽಸ್ತಿ ಯಯಾ ಯುಕ್ತ್ಯಾ ಸಾಸ್ಮಾಭಿಃ ಸಂಪ್ರಕೀರ್ತ್ಯತೇ ॥೨೧॥**

೨೧. ಆದ್ದರಿಂದ 'ತತ್ತ್ವಮಸಿ' ಮುಂತಾದ ವೇದವಾಕ್ಯವು ಯಾವ ಯುಕ್ತಿಯಿಂದ ಬ್ರಹ್ಮಕ್ಕೆ ಪ್ರಮಾಣವಾಗಿರುತ್ತದೆಯೋ ಆ (ಯುಕ್ತಿಯನ್ನು) ನಾವು ಹೇಳುವೆವು.

**ಶೋಧಿತೇ ತ್ವಂಪದಾರ್ಥೇ ಹಿ ತತ್ತ್ವಮಸ್ಯಾದಿಚಿನ್ತಿತಮ್ ।**
**ಸಂಭವೇನ್ನಾನ್ಯಥಾ ತಸ್ಮಾಚ್ಛೋಧನಂ ಕೃತಮಾದಿತಃ ॥೨೨॥**

1. ತೈತ್ತಿರೀಯಶ್ರುತಿಯಲ್ಲಿ ಹೇಳಿರುವ ಬ್ರಹ್ಮಸ್ವರೂಪವು ಸಾಕ್ಷಿರೂಪನಾದ ಆತ್ಮನಿಗೇ ಹೊಂದುತ್ತದೆ ಎಂದಭಿಪ್ರಾಯ.
2. 'ಮಿಕ್ಕ ಪ್ರಮಾಣಗಳು ವೇದಪ್ರಮಾಣವನ್ನು ಬಯಸುತ್ತವೆ' ಎಂಬ ವಾಕ್ಯಕ್ಕೆ ಏನು ಅರ್ಥವೆಂಬುದು ಸರಿಯಾಗಿ ಗೊತ್ತಾಗುವದಿಲ್ಲ. ವೇದವಾಕ್ಯವು ಹೇಳುವ ಅನುಭವವು ಎಲ್ಲಾ ಪ್ರಮಾಣಗಳಿಗೂ ಆಧಾರವಾಗಿರುತ್ತದೆ ಎಂದು ಭಾವಿಸಬಹುದು.

೨೨. ತ್ವಂಪದಾರ್ಥವನ್ನು ಶೋಧನೆಮಾಡಿದಮೇಲೆಯೇ ತತ್ತ್ವಮಸ್ಯಾದಿ ವಾಕ್ಯದ ಚಿಂತನೆಯು ಸಂಭವಿಸುತ್ತದೆ, ಇಲ್ಲದಿದ್ದರೆ ಇಲ್ಲ. ಆದ್ದರಿಂದ (ಅದರ) ಶೋಧನೆಯನ್ನು ಮೊದಲು ಮಾಡಿದ್ದಾಯಿತು.

## ತತ್ತ್ವಂಪದಗಳ ಅರ್ಥ

**ದೇಹೇನ್ದ್ರಿಯಾದಿಧರ್ಮಾನ್ಯಃ ಸ್ವಾತ್ಮನ್ಯಾರೋಪಯನ್ಮೃಷಾ ।**
**ಕರ್ತೃತ್ವಾದ್ಯಭಿಮಾನೀ ಚ ವಾಚ್ಯಾರ್ಥಸ್ತ್ವಂಪದಸ್ಯ ಸಃ ॥೨೩॥**

೨೩. ದೇಹ, ಇಂದ್ರಿಯಗಳು – ಮುಂತಾದವುಗಳ ಧರ್ಮಗಳನ್ನು ಸುಳ್ಳು ಸುಳ್ಳಾಗಿಯೇ ಯಾವನು ತನ್ನಲ್ಲಿ ಆರೋಪಣೆಮಾಡಿಕೊಂಡಿರುವನೋ, ಮತ್ತು ಕರ್ತೃತ್ವವೇ ಮುಂತಾದ ಅಭಿಮಾನವುಳ್ಳವನಾಗಿರುವನೋ ಅವನು ತ್ವಂಪದಕ್ಕೆ ವಾಚ್ಯಾರ್ಥವು.

**ದೇಹೇನ್ದ್ರಿಯಾದಿಸಾಕ್ಷೀ ಯಸ್ತೇಭ್ಯೋ ಭಾತಿ ವಿಲಕ್ಷಣಃ ।**
**ಸ್ವಯಂಬೋಧಸ್ವರೂಪತ್ವಾಲ್ಲಕ್ಷ್ಯಾರ್ಥಸ್ತ್ವಂಪದಸ್ಯ ಸಃ ॥೨೪॥**

೨೪. ಯಾವನು ದೇಹೇಂದ್ರಿಯಾದಿಗಳಿಗೆ ಸಾಕ್ಷಿಯೋ, (ಯಾವನು) ಸ್ವಯಂಪ್ರಕಾಶಸ್ವರೂಪನಾಗಿರುವದರಿಂದ ಅವುಗಳಿಗಿಂತ ವಿಲಕ್ಷಣನಾಗಿ ತೋರುತ್ತಿರುವನೋ, ಅವನು ತ್ವಂಪದಕ್ಕೆ ಲಕ್ಷ್ಯಾರ್ಥವು.

**ವೇದಾನ್ತವಾಕ್ಯಸಂವೇದ್ಯವಿಶ್ವಾತೀತಾಕ್ಷರಾದ್ವಯಮ್ ।**
**ವಿಶುದ್ಧಂ ಯತ್ಸ್ವಸಂವೇದ್ಯಂ ಲಕ್ಷ್ಯಾರ್ಥಸ್ತತ್ಪದಸ್ಯ ಸಃ ॥೨೫॥[1]**

೨೫. ವೇದಾಂತವಾಕ್ಯಗಳಿಂದ ತಿಳಿಯಬರುವ, ಪ್ರಪಂಚಾತೀತವಾದ, ನಾಶರಹಿತವಾದ ಅದ್ವಯವಾದ ತನ್ನಿಂದ ತಾನೇ ಅರಿಯಲ್ಪಡುವ ವಿಶುದ್ಧತತ್ತ್ವವು ಯಾವದಿರುವದೋ ಅದು ತತ್ಪದಕ್ಕೆ ಲಕ್ಷ್ಯಾರ್ಥವು.

## ಸಾಮಾನಾಧಿಕರಣ್ಯಾದಿಗಳು

**ಸಾಮಾನಾಧಿಕರಣ್ಯಂ ಹಿ ಪದಯೋಸ್ತತ್ತ್ವಮೋರ್ದ್ವಯೋಃ ।**
**ಸಂಬನ್ಧಸ್ತೇನ ವೇದಾನ್ತೈರ್ಬ್ರಹ್ಮೈಕ್ಯಂ ಪ್ರತಿಪಾದ್ಯತೇ ॥೨೬॥**

೨೬. ತತ್, ತ್ವಮ್ – ಎಂಬ ಎರಡು ಪದಗಳಿಗೆ ಸಾಮಾನಾಧಿಕರಣ್ಯವೇ ಸಂಬಂಧವು. ಅದರಿಂದ ವೇದಾಂತಗಳು[2] ಬ್ರಹ್ಮೈಕ್ಯವನ್ನು ತಿಳಿಸಿಕೊಡುತ್ತವೆ.

---

1. ಈ ಶ್ಲೋಕಕ್ಕಿಂತ ಮುಂಚೆ ತತ್ಪದಾರ್ಥದ ವಾಚ್ಯಾರ್ಥವನ್ನು ಹೇಳುವ ಶ್ಲೋಕವೊಂದು ಬಿಟ್ಟುಹೋಗಿರುವಂತೆ ತೋರುತ್ತದೆ.
2. ಉಪನಿಷತ್ತುಗಳು.

**ಭಿನ್ನಪ್ರವೃತ್ತಿಹೇತುತ್ವೇ ಪದಯೋರೇಕವಸ್ತುನಿ ।**
**ವೃತ್ತಿತ್ವಂ ಯತ್ತಥೈವೈಕ[1] ವಿಭಕ್ತ್ಯನ್ತಕಯೋಸ್ತಯೋಃ ॥೨೭॥**
**ಸಾಮಾನಾಧಿಕರಣ್ಯಂ ತತ್ಸಂಪ್ರದಾಯಿಭಿರೀರಿತಮ್ ।**

೨೭. ಪ್ರವೃತ್ತಿನಿಮಿತ್ತಗಳು[2] ಬೇರೆಬೇರೆಯಾಗಿರುವ ಪದಗಳೆರಡು ಒಂದೇ ವಸ್ತುವಿನಲ್ಲಿ ವೃತ್ತಿಯುಳ್ಳವುಗಳಾದರೆ, ಸಮಾನವಿಭಕ್ತ್ಯಂತವಾದ ಆ ಎರಡು ಪದಗಳಿಗೆ 'ಸಾಮಾನಾಧಿಕರಣ್ಯ'ವಿದೆ ಎಂದು ಸಂಪ್ರದಾಯವನ್ನು ಬಲ್ಲವರು ಹೇಳುತ್ತಾರೆ.

**ತಥಾ ಪದಾರ್ಥಯೋರೇವ ವಿಶೇಷಣವಿಶೇಷ್ಯತಾ ।**
**ಅಯಂ ಸ ಸೋಽಯಮಿತಿವತ್ಸಂಬನ್ಧೋ ಭವತಿ ದ್ವಯೋಃ ॥೨೮॥**

೨೮. ಇದರಂತೆ ಎರಡೂ **ಪದಾರ್ಥಗಳಿಗೆ** 'ಇವನೇ ಅವನು, ಅವನೇ ಇವನು'– ಎಂಬಂತೆ ಸಂಬಂಧವಿರುವದೇ **ವಿಶೇಷಣವಿಶೇಷ್ಯತೆ** ಎಂಬ ಸಂಬಂಧ ವಾಗಿರುತ್ತದೆ.

**ಪ್ರತ್ಯಕ್ತ್ವಂ ಸದ್ವಿತೀಯತ್ವಂ ಪರೋಕ್ಷತ್ವಂ ಚ ಪೂರ್ಣತಾ ।**
**ಪರಸ್ಪರವಿರುದ್ಧಂ ಸ್ಯಾತ್ತತೋ ಭವತಿ ಲಕ್ಷಣಾ ॥**
**ಲಕ್ಷ್ಯಲಕ್ಷಣಸಂಬನ್ಧಃ ಪದಾರ್ಥಪ್ರತ್ಯಗಾತ್ಮನೋಃ ॥೩೦॥[3]**

೩೦. ಒಳಗಿದ್ದು (ಪ್ರತ್ಯಕ್ಷವಾಗಿರುವದು), ಎರಡನೆಯದುಳ್ಳದ್ದಾಗಿರುವದು ಮತ್ತು ಪರೋಕ್ಷತ್ವವೂ ಪೂರ್ಣತ್ವವೂ – ಒಂದಕ್ಕೊಂದು ವಿರುದ್ಧವಾಗುತ್ತದೆ.[4] ಆದ್ದರಿಂದ ಲಕ್ಷಣೆಯು ಬೇಕಾಗುತ್ತದೆ. **ಪದಾರ್ಥಗಳಿಗೂ ಪ್ರತ್ಯಗಾತ್ಮನಿಗೂ ಲಕ್ಷ್ಯಲಕ್ಷಣಸಂಬಂಧವು.**[5]

1. 'ವೈಕ್ಯಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಈ ಶ್ಲೋಕಾರ್ಧದ ವಾಕ್ಯದಲ್ಲಿ ಏನೋ ತಪ್ಪಿದೆ. 2. ಜಾತಿ, ದ್ರವ್ಯ, ಗುಣ, ಕ್ರಿಯೆ, ಸಂಬಂಧ – ಇವುಗಳು ಶಬ್ದ ಪ್ರವೃತ್ತಿಗೆ ನಿಮಿತ್ತಗಳು.

3. ಶ್ಲೋಕಗಳನ್ನು ಎರಡೆರಡು ಸಾಲಿಗೆ ಒಂದರಂತೆ ಅಚ್ಚಿನ ಪುಸ್ತಕದಲ್ಲಿ ಹಿಡಿದಿದೆ. ನಾವು ಅರ್ಥಾನುಸಾರವಾಗಿ ಶ್ಲೋಕಗಳನ್ನು ಬರೆದುಕೊಂಡು ಸಂಖ್ಯೆಹಾಕಿರುತ್ತೇವೆ.

4. ಜೀವನು ಅಪರೋಕ್ಷ, ಈಶ್ವರನು ಪರೋಕ್ಷ ; ಜೀವನು ಸದ್ವಿತೀಯನು, ಈಶ್ವರನು ಪೂರ್ಣನು (ಅದ್ವಿತೀಯನು) – ಹೀಗೆ ಇಬ್ಬರೂ ಒಂದೆಂದರೆ ವಿರೋಧವಾಗುವದು. ಆದ್ದರಿಂದ ಇಲ್ಲಿ ತತ್ ತ್ವಂ ಪದಗಳಿಗೆ ವಾಚ್ಯಾರ್ಥವನ್ನು ಕೈಬಿಡಬೇಕಾಗಿದೆ.

5. ಪದಗಳೆರಡಕ್ಕೂ ಸಾಮಾನಾಧಿಕರಣ್ಯ, ಪದಾರ್ಥಗಳೆರಡಕ್ಕೂ ವಿಶೇಷ್ಯವಿಶೇಷಣ ಭಾವ, ಪದಾರ್ಥಗಳಿಗೂ ಆತ್ಮಮಾತ್ರಕ್ಕೂ ಲಕ್ಷ್ಯಲಕ್ಷಣಭಾವ – ಹೀಗೆ ಮೂರು ಸಂಬಂಧಗಳೆಂದು ಭಾವ. ಇದನ್ನು ಸದಾನಂದವಿರಚಿತ ವೇದಾಂತಸಾರದಲ್ಲಿ ವಿವರಿಸಿರುವ ಕ್ರಮವನ್ನು ನೋಡಿರಿ.

## ಲಕ್ಷಣಾಭೇದಗಳಲ್ಲಿ ಯಾವದು ವಾಕ್ಯಕ್ಕೆ ಹೊಂದುತ್ತದೆ ?

ಮಾನಾನ್ತರೋಪರೋಧಾಚ್ಚ ಮುಖ್ಯಾರ್ಥಸ್ಯಾಪರಿಗ್ರಹೇ ।
ಮುಖ್ಯಾರ್ಥಸ್ಯಾವಿನಾಭೂತೇ ಪ್ರವೃತ್ತಿರ್ಲಕ್ಷಣೋಚ್ಯತೇ ॥೩೧॥

೩೧. ಮತ್ತೊಂದು ಪ್ರಮಾಣಕ್ಕೆ ವಿರುದ್ಧವಾಗಿ ಮುಖ್ಯಾರ್ಥವನ್ನು ಕೈಬಿಡುವದಾದರೆ, ಮುಖ್ಯಾರ್ಥಕ್ಕೆ ಅವಿನಾಭೂತವಾದದ್ದರಲ್ಲಿ (ಪದದ) ಪ್ರವೃತ್ತಿಯಾಗುವದೇ ಲಕ್ಷಣೆಯೆನಿಸುವದು.

ತ್ರಿವಿಧಾ ಲಕ್ಷಣಾ ಜ್ಞೇಯಾ ಜಹತ್ಯಜಹತೀ ತಥಾ ।
ಅನ್ಯೋಭಯಾತ್ಮಿಕಾ ಜ್ಞೇಯಾ ತತ್ರಾऽऽದ್ಯಾ ನೈವ ಸಂಭವೇತ್ ॥೩೨॥
ವಾಚ್ಯಾರ್ಥಮಖಿಲಂ ತ್ಯಕ್ತ್ವಾ ವೃತ್ತಿಃ ಸ್ಯಾದ್ಯಾ ತದನ್ವಿತೇ ।
ಗಙ್ಗಾಯಾಂ ಘೋಷ ಇತಿವಜ್ಜಹತೀ ಲಕ್ಷಣಾ ಹಿ ಸಾ ॥೩೩॥
ವಾಚ್ಯಾರ್ಥಸ್ಯೈಕದೇಶಸ್ಯ ಪ್ರಕೃತೇ ತ್ಯಾಗ ಇಷ್ಯತೇ ।
ಜಹತೀ ಸಂಭವೇನ್ನೈವ ಸಂಪ್ರದಾಯವಿರೋಧತಃ ॥೩೪॥

೩೨–೩೪. ಜಹಲ್ಲಕ್ಷಣೆ, ಅಜಹಲ್ಲಕ್ಷಣೆ, ಎರಡೂ ವಿಧವಾದ (ಜಹದಜಹಲ್ಲಕ್ಷಣೆ)– ಎಂದು ಲಕ್ಷಣೆ ಮೂರು ಬಗೆ. ಇವುಗಳೊಳಗೆ ಮೊದಲನೆಯದು ಸಂಭವಿಸುವದೇ ಇಲ್ಲ. ವಾಚ್ಯಾರ್ಥವೆಲ್ಲವನ್ನೂ ಬಿಟ್ಟು ಅದಕ್ಕೆ ಸಂಬಂಧಪಟ್ಟ ಮತ್ತೊಂದರಲ್ಲಿ 'ಗಂಗೆಯಲ್ಲಿ ಹಳ್ಳಿ' ಎಂಬಂತೆ – ವೃತ್ತಿಯಾದರೆ ಅದಲ್ಲವೆ, ಜಹಲ್ಲಕ್ಷಣೆ ?[1] (ಆದರೆ) ಪ್ರಕೃತದಲ್ಲಿ ವಾಚ್ಯಾರ್ಥದಲ್ಲಿ ಒಂದು ಭಾಗವನ್ನು ಮಾತ್ರ ತ್ಯಾಗಮಾಡಬೇಕಾಗಿದೆ[2] ; ಆದ್ದರಿಂದ ಸಂಪ್ರದಾಯಕ್ಕೆ ವಿರುದ್ಧವಾಗುವದರಿಂದ (ಇಲ್ಲಿ) ಜಹಲ್ಲಕ್ಷಣೆ ಸಂಭವಿಸುವದಿಲ್ಲ.

ವಾಚ್ಯಾರ್ಥಮಪರಿತ್ಯಜ್ಯ ವೃತ್ತಿರನ್ಯಾರ್ಥಕೇ ತು ಯಾ ।
ಕಥಿತೋऽಯಮಜಹತೀ ಶೋಣೋऽಯಂ ಧಾವತೀತಿವತ್ ॥೩೫॥
ನ ಸಂಭವತಿ ಸಾಪ್ಯತ್ರ ವಾಚ್ಯಾರ್ಥೇऽತಿವಿರೋಧತಃ ।
ವಿರೋಧಾಂಶಪರಿತ್ಯಾಗೋ ದೃಶ್ಯತೇ ಪ್ರಕೃತೇ ಯತಃ ॥೩೬॥

---

1. ಗಂಗೆಯೆಂದರೆ ನದಿ ಎಂಬರ್ಥವನ್ನು ಪೂರ ಬಿಟ್ಟು 'ಗಂಗಾತೀರದಲ್ಲಿ ಹಳ್ಳಿ' ಎಂಬರ್ಥವನ್ನು ಜಹಲ್ಲಕ್ಷಣೆಯಿಂದ ತೆಗೆದುಕೊಳ್ಳುವಂತೆ ಇಲ್ಲಿ ತತ್ತ್ವಂಪದಗಳ ಅರ್ಥವನ್ನೆಲ್ಲ ಬಿಡುವದಕ್ಕೆ ಆಗುವದಿಲ್ಲ; ಏಕೆಂದರೆ ಆಗ ವಾಕ್ಯಕ್ಕೆ ಅರ್ಥವೇ ಆಗುವದಿಲ್ಲ.

2. ತ್ವಂಶಬ್ದಕ್ಕೆ ವಾಚ್ಯವಾದ ಜೀವನನ್ನೂ ಪೂರ ಬಿಟ್ಟರೆ ಆಗ ಯಾರಿಗೆ ಈಶ್ವರಭಾವವನ್ನು ಹೇಳುವದು ? ಹೀಗೆಯೇ 'ತತ್' ಎಂಬ ಶಬ್ದಕ್ಕೆ ವಾಚ್ಯಾರ್ಥವನ್ನು ಬಿಟ್ಟರೂ ಅರ್ಥವು ಕೆಡುತ್ತದೆ.

೩೫–೩೬. ವಾಚ್ಯಾರ್ಥವನ್ನು ಬಿಡದೆ ಮತ್ತೊಂದರಲ್ಲಿ (ಪದದ) ವೃತ್ತಿಯಾಗುವದೇ **ಅಜಹಲ್ಲಕ್ಷಣೆ**ಯೆನಿಸುತ್ತದೆ. 'ಶೋಣವು ಧಾವಿಸುತ್ತಿದೆ' (ಕೆಂಪು ಓಡುತ್ತಿದೆ) ಎಂಬುದು ಇದಕ್ಕೆ ಉದಾಹರಣೆ.[1] ಅದೂ ಇಲ್ಲಿ ಸಂಭವಿಸುವದಿಲ್ಲ, ಏಕೆಂದರೆ ವಾಚ್ಯಾರ್ಥವನ್ನು (ಒಪ್ಪಿ)ದಲ್ಲಿ ಅತಿವಿರೋಧವಾಗುತ್ತದೆ ; ವಿರುದ್ಧಾಂಶವನ್ನು ಬಿಡುವದೇ ಇಲ್ಲಿ ಕಂಡುಬರುತ್ತದೆ.[2]

**ವಾಚ್ಯಾರ್ಥಸ್ಯೈಕದೇಶಂ ಚ ಪರಿತ್ಯಜ್ಯೈಕದೇಶಕಮ್ ।**
**ಯಾ ಬೋಧಯತಿ ಸಾ ಜ್ಞೇಯಾ ತೃತೀಯಾ ಭಾಗಲಕ್ಷಣಾ ॥೩೭॥**

**ಸೋಽಯಂ ವಿಪ್ರ ಇದಂ ವಾಕ್ಯಂ ಬೋಧಯತ್ಯಾದಿತಸ್ತಥಾ ।**
**ತತ್ಕಾಲತ್ವವಿಶಿಷ್ಟಂ ಚ ತಥೈತತ್ಕಾಲಸಂಯುತಮ್ ॥೩೮॥**

**ಅತಸ್ತಯೋರ್ವಿರುದ್ಧಂ ತತ್ತತ್ಕಾಲತ್ವಾದಿಧರ್ಮಕಮ್ ।**
**ತ್ಯಕ್ತ್ವಾ ವಾಕ್ಯಂ ಯಥಾ ವಿಪ್ರಪಿಣ್ಡಂ ಬೋಧಯತೀರಿತಮ್ ॥೩೯॥**

**ತಥೈವ ಪ್ರಕೃತೇ ತತ್ತ್ವಮಸೀತ್ಯತ್ರ ಶ್ರುತೌ ಶೃಣು ।**
**ಪ್ರತ್ಯಕ್ತ್ವಾದೀನ್ ಪರಿತ್ಯಜ್ಯ ಜೀವಧರ್ಮಾಂಸ್ತ್ವಮಃ ಪದಾತ್ ॥೪೦॥**
**ಸರ್ವಜ್ಞತ್ವಪರೋಕ್ಷಾದೀನ್ ಪರಿತ್ಯಜ್ಯ ತತಃ ಪದಾತ್ ।**
**ಶುದ್ಧಂ ಕೂಟಸ್ಥಮದ್ವೈತಂ ಬೋಧಯತ್ಯಾದರಾತ್ ಪರಮ್ ॥೪೧॥**

**ತತ್ತ್ವಮೋಃ ಪದಯೋರೈಕ್ಯಮೇವ ತತ್ತ್ವಮಸೀತ್ಯಯಮ್[3] ॥೪೧½॥**

೩೭–೪೧½. ವಾಚ್ಯಾರ್ಥದ ಒಂದಂಶವನ್ನು ಬಿಟ್ಟು ಒಂದಂಶವನ್ನು ಯಾವದು ತಿಳಿಸುತ್ತದೆಯೋ ಅದೇ ಮೂರನೆಯದಾದ **ಭಾಗತ್ಯಾಗಲಕ್ಷಣೆ** ಎಂದು ಅರಿಯಬೇಕು. 'ಅವನೇ ಈ ವಿಪ್ರನು' ಎಂಬೀ ವಾಕ್ಯವು ಮೊದಲು ಆ ಕಾಲದಿಂದ ಕೂಡಿರುವದನ್ನೂ[4] ಮತ್ತು ಈ ಕಾಲದಿಂದ ಕೂಡಿರುವದನ್ನೂ

1. ದೃಷ್ಟಾಂತದಲ್ಲಿ ಕೆಂಪೆಂಬ ಗುಣವು ಓಡಲಾರದಾದ್ದರಿಂದ ಕೆಂಪೆಂಬರ್ಥವನ್ನೂ ಇಟ್ಟುಕೊಂಡು 'ಕುದುರೆ' ಎಂಬ ಮತ್ತೊಂದು ಅರ್ಥವನ್ನು ಅಜಹಲ್ಲಕ್ಷಣೆಯಿಂದ ಅಂಗೀಕರಿಸಬಹುದು. ಇಲ್ಲಿ ತತ್ತ್ವಂಪದಗಳ ವಾಚ್ಯಾರ್ಥವನ್ನೆಲ್ಲ ಒಪ್ಪಿದರೆ ಸಂಸಾರಿಗೂ ಈಶ್ವರನಿಗೂ ಐಕ್ಯವನ್ನು ಹೇಳಿದ ಮತ್ತು ಪ್ರತ್ಯಕ್ಷಪರೋಕ್ಷಗಳಿಗೆ ಐಕ್ಯವನ್ನು ಹೇಳುವ ವಿರೋಧವು ಗಂಟುಬೀಳುತ್ತದೆ.
2. ವಿರುದ್ಧವಾದ ಸಂಸಾರಿತ್ವ, ಪರೋಕ್ಷತ್ವ – ಮುಂತಾದವುಗಳನ್ನು ಇಲ್ಲಿ ಬಿಡಲೇ ಬೇಕಾಗಿದೆ.
3. 'ಅಲಮ್' ಎಂಬ ಮುದ್ರಿತಪಾಠವನ್ನು ಹೀಗೆ ತಿದ್ದಿಕೊಂಡಿದೆ.
4. 'ಅವನು' ಎಂಬದರ ವಾಚ್ಯಾರ್ಥದಲ್ಲಿ ಆ ಕಾಲದಿಂದ ಕೂಡಿರುವ ಆ ಬ್ರಾಹ್ಮಣನು ಎಂಬರ್ಥವಿರುತ್ತದೆ ; 'ಈ ವಿಪ್ರನು' ಎಂಬುದರ ವಾಚ್ಯಾರ್ಥದಲ್ಲಿ ಈ ಕಾಲದಿಂದ ಕೂಡಿರುವ ಬ್ರಾಹ್ಮಣನು ಎಂಬರ್ಥವಿರುತ್ತದೆ.

ಹಾಗೆಯೇ[1] ತಿಳಿಸುತ್ತದೆ. ಆದ್ದರಿಂದ ಅವುಗಳಲ್ಲಿ ವಿರುದ್ಧವಾಗಿರುವ ಆ ತತ್ಕಾಲತ್ವವೇ[2] ಮುಂತಾದ ಧರ್ಮವನ್ನು ಬಿಟ್ಟರೆ (ಈ) ಹೇಳಿದ ವಾಕ್ಯವು (ಬರಿಯ) ವಿಪ್ರನ ಶರೀರವನ್ನು ಮಾತ್ರವೇ ಹೇಗೆ ಹೇಳುತ್ತದೆಯೋ ಹಾಗೆಯೇ ಪ್ರಕೃತದಲ್ಲಿಯೂ 'ತತ್ತ್ವಮಸಿ' ಎಂಬ ಶ್ರುತಿಯಲ್ಲಿ ಹೇಗೆಂದರೆ ಕೇಳು : ಪ್ರತ್ಯಕ್ಷವಾಗಿರುವದೇ[3] ಮುಂತಾದ ಜೀವಧರ್ಮಗಳನ್ನು 'ತ್ವಮ್'ಪದದಿಂದ ಬಿಟ್ಟು, 'ತತ್'ಪದದಿಂದ ಸರ್ವಜ್ಞತ್ವ, ಪರೋಕ್ಷತ್ವ – ಮುಂತಾದವುಗಳನ್ನೂ ಬಿಟ್ಟು ಈ ತತ್ತ್ವಮಸಿ ಎಂಬ ವಾಕ್ಯವು ಶುದ್ಧವಾಗಿರುವ ಕೂಟಸ್ಥವಾದ, ಎಲ್ಲಕ್ಕೂ ವಿಲಕ್ಷಣವಾದ ಅದ್ವೈತವನ್ನು, ತತ್, ತ್ವಮ್ ಎಂಬ ಪದಗಳೆರಡಕ್ಕೂ[4] ಪರಮೈಕ್ಯವನ್ನೇ ಆದರದಿಂದ ತಿಳಿಸುತ್ತದೆ.

## ವಾಕ್ಯಜ್ಞಾನದ ಫಲ

ಇತ್ಥಮೈಕ್ಯಾವಬೋಧೇನ ಸಮ್ಯಗ್ಜ್ಞಾನಂ ದೃಢಂ ನಯೈಃ ।
ಅಹಂ ಬ್ರಹ್ಮೇತಿ ವಿಜ್ಞಾನಂ ಯಸ್ಯ ಶೋಕಂ ತರತ್ಯಸೌ[5] ॥೪೨॥

೪೨. ಹೀಗೆ ಐಕ್ಯವನ್ನು ಅರಿತುಕೊಂಡದ್ದರಿಂದ ಯುಕ್ತಿಗಳಿಂದ ಸಮ್ಯಗ್ಜ್ಞಾನವು[6] ಗಟ್ಟಿಯಾಗಿ ಯಾವನಿಗೆ ನಾನು ಬ್ರಹ್ಮವು ಎಂಬ ಅರಿವು ಉಂಟಾಗುವದೋ ಅವನು ಶೋಕವನ್ನು ದಾಟುತ್ತಾನೆ.

## ಗುರುವಿನ ಆವಶ್ಯಕತೆ

ಆತ್ಮಾ ಪ್ರಕಾಶಮಾನೋಽಪಿ ಮಹಾವಾಕ್ಯೈಸ್ತಥೈಕತಾ ।
ತತ್ತ್ವಮೋರ್ಬೋಧ್ಯತೇಽಥಾಪಿ ಪೌರ್ವಾಪರ್ಯಾನುಸಾರತಃ ॥೪೩॥
ತಥಾಪಿ ಶಕ್ಯತೇ ನೈವ ಶ್ರೀಗುರೋಃ ಕರುಣಾಂ ವಿನಾ ।
ಅಪರೋಕ್ಷಯಿತುಂ ಲೋಕೇ ಮೂಢೈಃ ಪಣ್ಡಿತಮಾನಿಭಿಃ ॥೪೪॥

1. ಈ ಮಾತು ಏಕೆ ಬಂದಿದೆ ಎಂಬುದು ತಿಳಿಯಲಿಲ್ಲ.
2. ವಾಚ್ಯಾರ್ಥದಲ್ಲಿ ವಿರುದ್ಧವಾಗಿರುವದನ್ನೆಲ್ಲ 'ತತ್ಕಾಲತ್ವ' ಎಂಬ ಮಾತು ಉಪಲಕ್ಷಣೆಯಿಂದ ತಿಳಿಸುತ್ತದೆ – ಎಂದು ಭಾವ. 3. ಪ್ರತ್ಯಕ್ತ್ವವೆಂಬುದಕ್ಕೆ ಪ್ರತ್ಯಕ್ಷತ್ವವೆಂದು ಅರ್ಥ ಮಾಡಿದೆ. 4. ಇಲ್ಲಿ ಪದಗಳಿಗೆ ಎಂದರೆ ಪದಾರ್ಥಗಳಿಗೆ.
5. ಹಿಂದಿನ ಅರ್ಧಶ್ಲೋಕವನ್ನು ಹಾಗೆಯೇ ಬಿಟ್ಟರೆ ಮುಂದಕ್ಕೆ ಶ್ಲೋಕಗಳು ಅಲ್ಲಲ್ಲಿಗೇ ಪೂರ್ಣವಾಗುವವು. ಆದ್ದರಿಂದ ಅಚ್ಚಿನ ಪುಸ್ತಕದಲ್ಲಿರುವ ಸಂಖ್ಯೆಗಳನ್ನು ಬಿಟ್ಟು ಇಲ್ಲಿಂದ ಸ್ವತಂತ್ರವಾಗಿಯೇ ಶ್ಲೋಕಸಂಖ್ಯೆಗಳನ್ನು ಹಾಕಿದೆ.
6. ವಾಕ್ಯವು ತತ್ತ್ವವನ್ನು ತಿಳಿಸುತ್ತದೆ, ಯುಕ್ತಿಗಳು ಆ ಜ್ಞಾನವನ್ನು ಗಟ್ಟಿಗೊಳಿಸುತ್ತವೆ – ಎಂದು ಇಲ್ಲಿ ಅಭಿಪ್ರಾಯವೆಂದು ತೋರುತ್ತದೆ.

**ಅನ್ತಃಕರಣಸಂಶುದ್ಧೌ ಸ್ವಯಂ ಜ್ಞಾನಂ ಪ್ರಕಾಶತೇ ।**
**ವೇದವಾಕ್ಯೈರತಃ ಕಿಂ ಸ್ಯಾದ್ಗುರುಣೇತಿ ನ ಸಾಂಪ್ರತಮ್ ॥೪೫॥**
**ಆಚಾರ್ಯವಾನ್ ಪುರುಷೋ[1] ವೇದೇತ್ಯೇವಂ ಶ್ರುತಿರ್ಜಗೌ ।**
**ಅನಾದಾವಿಹ ಸಂಸಾರೇ ಬೋಧಕೋ ಗುರುರೇವ ಹಿ ॥೪೬॥**

೪೩–೪೬. ಆತ್ಮನು ಸ್ವಯಂಪ್ರಕಾಶನೇ ಆಗಿರುತ್ತಾನಾದರೂ, ಮತ್ತು ತತ್ ಮತ್ತು ತ್ವಂಪದಾರ್ಥಗಳ ಐಕ್ಯವೂ ಹಿಂದುಮುಂದಿನ ಸಂದರ್ಭವನ್ನು ನೋಡಿದರೆ ಮಹಾವಾಕ್ಯಗಳಿಂದ ಬೋಧಿತವೇ ಆಗುತ್ತದೆಯಾದರೂ ಲೋಕ ದಲ್ಲಿ ಶ್ರೀಗುರುವಿನ ಕರುಣೆಯಿದ್ದ ಹೊರತು ತಾವೇ ಪಂಡಿತರೆಂದು ತಿಳಿದು ಕೊಂಡ ಮೂಢರು ಅವನನ್ನು ಅಪರೋಕ್ಷವಾಗಿ ಮಾಡಿಕೊಳ್ಳಲಾರರು. ಅಂತಃ ಕರಣವು ಶುದ್ಧವಾದರೆ ಜ್ಞಾನವು ವೇದವಾಕ್ಯಗಳಿಂದ ತಾನೇ ಬೆಳಗುತ್ತದೆ. ಆದ್ದರಿಂದ ಗುರುವಿನಿಂದ ಏನಾದೀತು ?– ಎಂಬುದು ಯುಕ್ತವಲ್ಲ, (ಸರಿಯಾದ) ಆಚಾರ್ಯನ (ಉಪದೇಶ)ವುಳ್ಳವನೇ ಅರಿತುಕೊಳ್ಳುತ್ತಾನೆ (ಛಾಂ.೬–೧೪–೨)– ಎಂದು ಶ್ರುತಿಯು ಹೇಳಿರುತ್ತದೆ. ಅನಾದಿಯಾದ ಈ ಸಂಸಾರದಲ್ಲಿ (ತತ್ತ್ವ ವನ್ನು) ಬೋಧಿಸುವವನು ಗುರುವೇ.

## ಅದ್ವೈತಬ್ರಹ್ಮನಿಷ್ಠೆಯನ್ನು ಸಂಪಾದಿಸಬೇಕು

**ಅತೋ ಬ್ರಹ್ಮಾತ್ಮವಸ್ತ್ವೈಕ್ಯಂ ಜ್ಞಾತ್ವಾ ದೃಶ್ಯಮಸತ್ತಯಾ ।**
**ಅದ್ವೈತೇ ಬ್ರಹ್ಮಣಿ ಸ್ಥೇಯಂ ಪ್ರತ್ಯಗ್ಬ್ರಹ್ಮಾತ್ಮನಾ ಸದಾ ॥೪೭॥**

೪೭. ಆದ್ದರಿಂದ ಬ್ರಹ್ಮ ಆತ್ಮ – ಎಂಬ ವಸ್ತು ಒಂದೇ ಎಂಬುದನ್ನು ಅರಿತುಕೊಂಡು, ದೃಶ್ಯವನ್ನು ಮಿಥ್ಯೆಯೆಂದೂ (ಅರಿತುಕೊಂಡು) ಯಾವಾಗಲೂ ಪ್ರತ್ಯಗಾತ್ಮಾಭಿನ್ನವಾದ ಬ್ರಹ್ಮರೂಪದಿಂದ ಅದ್ವೈತಬ್ರಹ್ಮದಲ್ಲಿ ನಿಲ್ಲಬೇಕು.

## ಅದ್ವೈತಬ್ರಹ್ಮವೇ ವೇದಾಂತಪ್ರತಿಪಾದ್ಯ

**ತತ್ಪ್ರತ್ಯಕ್ಷಾತ್ ಪರಿಜ್ಞಾತಮದ್ವೈತಬ್ರಹ್ಮ ಚಿದ್ಘನಮ್ ।**
**ಪ್ರತಿಪಾದ್ಯಂ ತದೇವಾತ್ರ ವೇದಾನ್ತೈರ್ನ ದ್ವಯಂ ಜಡಮ್ ॥೪೮॥**

೪೮. ಪ್ರತ್ಯಕ್ಷದಿಂದ ತಿಳಿದುಬರುವ[2] ಅದು ಚಿದ್ಘನವಾದ ಅದ್ವೈತ ಬ್ರಹ್ಮವೇ. ಅದೇ ಇಲ್ಲಿ ವೇದಾಂತಗಳಿಂದ ಪ್ರತಿಪಾದಿಸಲ್ಪಡುತ್ತಿದೆಯೇ ಹೊರತು ಜಡವಾದ ದ್ವೈತವಲ್ಲ.

1. ಇಲ್ಲಿ 'ಹಿ' ಎಂದು ಅಚ್ಚಿನ ಪುಸ್ತಕದಲ್ಲಿ ಹೆಚ್ಚಾಗಿದೆ. 2. ಪ್ರತ್ಯಕ್ಷದಿಂದ ಜಗತ್ತು ತೋರಿಬರುತ್ತಿದ್ದರೂ ನಿಜವಾಗಿ ಅದು ಬ್ರಹ್ಮವೇ ಎಂದು ಅರ್ಥವಿರಬಹುದು.

## ಅದ್ವೈತವು ಸತ್ಯವು, ದ್ವೈತವು ಅನಿರ್ವಾಚ್ಯ

ಸುಖರೂಪಂ ಚಿದದ್ವೈತಂ ದುಃಖರೂಪಮಸಜ್ಜಡಮ್ ।
ವೇದಾನ್ತೈಸ್ತದ್ದ್ವಯಂ ಸಮ್ಯಙ್ನಿರ್ಣೀತಂ ವಸ್ತುತೋ ನಯಾತ್ ॥೪೯॥

ಅದ್ವೈತಮೇವ ಸತ್ಯಂ ತ್ವಂ ವಿದ್ಧಿ ದ್ವೈತಮಸತ್ಸದಾ ।
ಶುದ್ಧೇ ಕಥಮಶುದ್ಧಃ ಸ್ಯಾದ್ದೃಶ್ಯಂ ಮಾಯಾಮಯಂ ತತಃ ॥೫೦॥

ಶುಕ್ತೌ ರೂಪ್ಯಂ ಮೃಷಾ ಯದ್ವತ್ತಥಾ ವಿಶ್ವಂ ಪರಾತ್ಮನಿ ।
ವಿದ್ಯತೇ ನ ಸ್ವತಃ ಸತ್ತನ್ನಾಸತಃ ಸತ್ತ್ವಮಸ್ತಿ ವೈ[1] ॥೫೧॥

ಬಾಧ್ಯತ್ವಾನ್ನೈವ ಸದ್ದ್ವೈತಂ ನಾಸತ್ ಪ್ರತ್ಯಕ್ಷಭಾನತಃ ।
ಸದಸನ್ನ ವಿರುದ್ಧತ್ವಾದತೋಽನಿರ್ವಾಚ್ಯಮೇವ ತತ್ ॥೫೨॥

೪೯--೫೨. ಚಿದ್ರೂಪವಾದ ಅದ್ವೈತವು ಆನಂದರೂಪವಾಗಿರುತ್ತದೆ ; ಜಡವು ಅಸತ್ತಾಗಿ ದುಃಖರೂಪವಾಗಿರುತ್ತದೆ. ಉಪನಿಷತ್ತುಗಳಲ್ಲಿ ಈ ಎರಡನ್ನೂ ಇದ್ದದ್ದು ಇದ್ದಹಾಗೆ ಯುಕ್ತಿಯಿಂದ ಚೆನ್ನಾಗಿ ನಿರ್ಣಯಿಸಲಾಗಿದೆ. ಅದ್ವೈತವೇ ಸತ್ಯವೆಂದೂ ದ್ವೈತವು ಯಾವಾಗಲೂ ಹುಸಿಯೆಂದೂ ತಿಳಿ. ಶುದ್ಧವಾದದ್ದರಲ್ಲಿ ಅಶುದ್ಧವಾದದ್ದು ಹೇಗೆ ಇದ್ದೀತು ? ಆದ್ದರಿಂದ ದೃಶ್ಯವು ಮಾಯಾಮಯವೇ. ಕಪ್ಪೆಯಚಿಪ್ಪಿನಲ್ಲಿ ತೋರುವ ಬೆಳ್ಳಿಯು ಹೇಗೆ ಹುಸಿಯೋ ಪ್ರಪಂಚವು ಪರಾತ್ಮನಲ್ಲಿ (ಹುಸಿಯಾಗಿ) ಇರುತ್ತದೆ. ಅದು ತಾನೇ ಸತ್ತಲ್ಲ; ಅಸತ್ತಿಗೆ ಇರವು ಇಲ್ಲವಷ್ಟೆ? ದ್ವೈತವು ಬಾಧ್ಯವಾದ್ದರಿಂದ ಸತ್ತಲ್ಲ, ಪ್ರತ್ಯಕ್ಷವಾಗಿ ತೋರುವದರಿಂದ ಅಸತ್ತಲ್ಲ ; ಅದು ಸದಸತ್ತೂ ಅಲ್ಲ, ಏಕೆಂದರೆ (ಸದಸತ್ತುಗಳಿಗೆ) ವಿರೋಧವಿರುತ್ತದೆ ; ಆದ್ದರಿಂದ ಅದು ಅನಿರ್ವಾಚ್ಯವೇ.[2]

## ಬ್ರಹ್ಮಾತ್ಮಭಾವೋಪದೇಶ

ಯಃ ಪೂರ್ವಮೇಕ ಏವಾಸೀತ್ ಸೃಷ್ಟ್ವಾ ಪಶ್ಚಾದಿದಂ ಜಗತ್ ।
ಪ್ರವಿಷ್ಟೋ ಜೀವರೂಪೇಣ ಸ ಏವಾಽಽತ್ಮಾ ಭವಾನ್ ಪರಃ ॥೫೩॥

ಸಚ್ಚಿದಾನನ್ದ ಏವ ತ್ವಂ ವಿಸ್ಮೃತ್ಯಾಽಽತ್ಮತಯಾ ಪರಮ್ ।
ಜೀವಭಾವಮನುಪ್ರಾಪ್ತಃ ಸ ಏವಾಽಽತ್ಮಾಸಿ ಬೋಧತಃ ॥೫೪॥

1. 'ಸತ್ತ್ವಂ ನಾಸತ್ತ್ವಂ ಸತ್ತ್ವಮಸ್ತಿ ವಾ' ಎಂಬ ಅಚ್ಚಿನ ಪುಸ್ತಕದ ವಾಕ್ಯವನ್ನು ಹೀಗೆ ತಿದ್ದಿಕೊಂಡಿದೆ.

2. ಕಪ್ಪೆಯಚಿಪ್ಪಿನ ಬೆಳ್ಳಿಯು ಅನಿರ್ವಾಚ್ಯವಾಗಿರುವಂತೆ ಜಗತ್ತು ಅನಿರ್ವಾಚ್ಯವಾಗಿರುತ್ತದೆ. ಆದ್ದರಿಂದಲೇ ಅದನ್ನು ಮಾಯಾಮಯವೆಂದಿದೆ ಎಂದು ಅಭಿಪ್ರಾಯ.

ಅದ್ವಯಾನನ್ದಚಿನ್ಮಾತ್ರಃ ಶುದ್ಧಃ ಸಾಮ್ರಾಜ್ಯಮಾಗತಃ[1] ॥೫೫॥

೫೩–೫೫. ಯಾವನು ಮೊದಲು ಒಬ್ಬನೇ ಇದ್ದನೋ, ಆ ಬಳಿಕ ಈ ಜಗತ್ತನ್ನು ಸೃಷ್ಟಿಸಿ ಜೀವರೂಪದಿಂದ ಇದರೊಳಗೆ ಹೊಕ್ಕನೋ[2] ಆ ಪರಮಾತ್ಮನೇ ನೀನು, ಸಚ್ಚಿದಾನಂದನೇ ನೀನು. ಪರಮಾತ್ಮನು ನನ್ನ ಆತ್ಮನೆಂಬುದನ್ನು ಮರೆತು ಜೀವಭಾವವನ್ನು ಪಡೆದುಕೊಂಡಿದ್ದೀಯೆ. ಜ್ಞಾನದಿಂದ ಸಾಮ್ರಾಜ್ಯವನ್ನು ಹೊಂದಿ ಅದ್ವಯಾನಂದಚಿನ್ಮಾತ್ರನಾದ ಶುದ್ಧನಾದ ಅದೇ ಆತ್ಮನೇ ಆಗಿರುತ್ತೀಯೆ.

## ಬಂಧಕ್ಕೆ ದೃಷ್ಟಾನ್ತ

ಕರ್ತೃತ್ವಾದೀನಿ ಯಾನ್ಯಾಸಂಸ್ತ್ವಯಿ ಬ್ರಹ್ಮಾದ್ವಯೇ[3] ಪರೇ ।
ತಾನೀದಾನೀಂ ವಿಚಾರ್ಯಾಣಿ[4] ಕಿಂಸ್ವರೂಪಾಣಿ ವಸ್ತುತಃ ॥೫೬॥

ಅತ್ರೈವ ಶೃಣು ವೃತ್ತಾನ್ತಮಪೂರ್ವಂ ಶ್ರುತಿಭಾಷಿತಮ್ ।
ಕಶ್ಚಿದ್ಗಾನ್ಧಾರದೇಶೀಯೋ ಮಹಾರತ್ನವಿಭೂಷಿತಃ ॥೫೭॥

ಸ್ವಗೃಹೇ ಸ್ವಾಙ್ಗಣೇ ಸುಪ್ತಃ ಪ್ರಮತ್ತಃ ಸನ್ ಕದಾಚನ ।
ರಾತ್ರೌ ಚೋರೈಃ[5] ಸಮಾಗತ್ಯ ಭೂಷಣಾನಾಂ ಪ್ರಲೋಭತಃ[6] ॥೫೮॥

ಬದ್ಧ್ವಾ ದೇಶಾನ್ತರಂ ಚೋರೈರ್ನೀತಃ ಸನ್ ಗಹನೇ ವನೇ ।
ಭೂಷಣಾನ್ಯಪಹೃತ್ಯಾಪಿ ಬದ್ಧಾಕ್ಷಕರಪಾದಕಃ ॥೫೯॥

ನಿಕ್ಷಿಪ್ತೋ ವಿಪಿನೇಽತೀವ ಕುಶಕಣ್ವಕವೃಶ್ಚಿಕೈಃ ।
ವ್ಯಾಲವ್ಯಾಘ್ರಾದಿಭಿಶ್ಚೈವ ಸಂಕುಲೇ ತರುಸಂಕಟೇ ॥೬೦॥

ವ್ಯಾಲಾದಿದುಷ್ಟಸತ್ತ್ವೇಭ್ಯೋ ಮಹಾರಣ್ಯೇ ಭಯಾತುರಃ
ಶಿಲಾಕಣ್ಟಕದರ್ಭಾದ್ಯೈರ್ದೇಹಸ್ಯ ಪ್ರತಿಕೂಲಕೈಃ ॥೬೧॥

ಕ್ರಿಯಮಾಣೇ ವಿಲುಡನೇ ವಿಶೀರ್ಣಾಙ್ಗೋಽಸಮರ್ಥಕಃ ।
ಕ್ಷುತ್ತೃಡಾತಪವಾಯ್ವಗ್ನ್ಯಾದಿಭಿಸ್ತಪ್ತೋಽತಿತಾಪಕೈಃ ॥೬೨॥

---

1. ಹಿಂದಿನ (೪೧ ೧/೨) ಶ್ಲೋಕಾರ್ಧವನ್ನೂ ಈ ಶ್ಲೋಕಾರ್ಧವನ್ನೂ ಸೇರಿಸಿ ಒಂದೆಂದು ಲೆಕ್ಕಮಾಡಿಕೊಂಡಿದೆ. 2. ಛಾಂದೋಗ್ಯದ (೬–೨–೩)ರ ಅಭಿಪ್ರಾಯ.
3. 'ಅದ್ವಯಬ್ರಹ್ಮಣಿ' ಎಂಬರ್ಥದಲ್ಲಿ ಇದನ್ನು ಪ್ರಯೋಗಿಸಿದೆ.
4. 'ವಿಚಾರ್ಯ ತ್ವಂ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
5. 'ಚೋರಃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
6. 'ಪ್ರಲೋಭಿತಃ' ಎಂದು ಅಚ್ಚಿನ ಪಾಠ.

ಬನ್ಧಮುಕ್ತೌ ತಥಾ ದೇಶಪ್ರಾಪ್ತಾವೇವ ಸುದುಃಖಧೀಃ ।
ದದೃಶೇ ಕಂಚಿದಾಕ್ರೋಶನ್ನೈವಂ ತತ್ರೈವ ತಸ್ಥಿವಾನ್ ॥೬೩॥

೫೬–೬೩. ಅದ್ವಯಬ್ರಹ್ಮವೂ ಪರಮಾತ್ಮನೂ ಆದ ನಿನ್ನಲ್ಲಿ ಕರ್ತೃತ್ವಾದಿಗಳು ಇದ್ದವಲ್ಲ, ಅವುಗಳು ನಿಜವಾಗಿ ಯಾವ ರೂಪದವು ಎಂಬುದನ್ನು ಈಗ ವಿಚಾರಿಸಬೇಕು. ಈ ವಿಷಯದಲ್ಲಿಯೇ ಶ್ರುತಿಯಲ್ಲಿ ಹೇಳಿರುವ ಅಪೂರ್ವವಾದ ಒಂದು ಹಿಂದಿನ ಸುದ್ದಿಯನ್ನು ಕೇಳು[1] : ಗಂಧಾರದೇಶದವನೊಬ್ಬನು ಮಹಾರತ್ನಗಳನ್ನು ಮೈಮೇಲೆ ಹಾಕಿಕೊಂಡು ಒಮ್ಮೆ ತನ್ನ ಮನೆಯಲ್ಲಿ ಅಂಗಳದಲ್ಲಿಯೇ ಮೈಮೇಲೆ ಎಚ್ಚರವಿಲ್ಲದೆ ನಿದ್ರೆಮಾಡುತ್ತಿದ್ದನು. ರಾತ್ರೆಯಲ್ಲಿ ಕಳ್ಳರು ಒಡವೆಗಳ ಆಸೆಯಿಂದ ಬಂದು, ಅವನನ್ನು ಕಟ್ಟಿಹಾಕಿ, ದೇಶಾಂತರಕ್ಕೆ ಒಯ್ದು ಗಹನವಾದ ಕಾಡಿನಲ್ಲಿ – ಒಡವೆಗಳನ್ನು ಕಸಿದುಕೊಂಡಮೇಲೂ ಕಣ್ಣು, ಕೈ, ಕಾಲುಗಳನ್ನು ಕಟ್ಟಿ, ಬಹಳವಾಗಿ ದರ್ಭೆ, ಮುಳ್ಳು, ಚೇಳು, ಹಾವು, ಹುಲಿ – ಮುಂತಾದವುಗಳಿಂದ ತುಂಬಿರುವ ದಟ್ಟವಾಗಿ ಮರಗಳು ಬೆಳೆದಿದ್ದ ಕಾಡಿನಲ್ಲಿ – ಬಿಸುಟರು. (ಅವನು) ಹಾವು ಮುಂತಾದ ದುಷ್ಟಪ್ರಾಣಿಗಳಿಗೆ ಹೆದರಿ ಆ ದೊಡ್ಡ ಕಾಡಿನಲ್ಲಿ ಹೊರಳಾಡಿದಾಗ ಕಲ್ಲು, ಮುಳ್ಳು, ದರ್ಭೆ – ಮುಂತಾದವುಗಳಿಂದ ನೊಂದು ಮೈಯೆಲ್ಲ ಗಾಯವಾಗಿ ಏನೂ ಮಾಡಲಾರದೆ, ಹಸಿವುಬಾಯಾರಿಕೆಗಳಿಂದಲೂ ಬಹಳವಾಗಿ ಪೀಡಿಸುವ ಬಿಸಿಲುಗಾಳಿಬೆಂಕಿಗಳಿಂದಲೂ ಬಹುಸಂಕಟಪಡುತ್ತಾ ತನಗೆ ಆಗಿದ್ದ ಬಂಧವನ್ನು ಬಿಡಿಸಿಕೊಳ್ಳುವದರಲ್ಲಿ ಮತ್ತು ತನ್ನ ದೇಶವನ್ನು ಸೇರುವದರಲ್ಲಿ – ಇವುಗಳಲ್ಲಿಯೇ ದುಃಖದಿಂದ ನೆಟ್ಟಮನಸ್ಸುಳ್ಳವನಾಗಿ ಕೂಗುತ್ತಾ ಯಾರೊಬ್ಬರನ್ನೂ ಕಾಣದೆ ಇದ್ದನು, ಅಲ್ಲಿಯೇ ಇದ್ದುಕೊಂಡಿದ್ದನು.

## ದಾರ್ಷ್ಟಾಂತಿಕವಾದ ಸಂಸಾರಬಂಧ

ತಥಾ ರಾಗಾದಿಭಿರ್ವರ್ಗೈಃ ಶತ್ರುಭಿರ್ದುಃಖದಾಯಿಭಿಃ ।
ಚೋರೈರ್ದೇಹಾಭಿಮಾನಾದ್ಯೈಃ ಸ್ವಾನನ್ದಧನಹಾರಿಭಿಃ ॥೬೪॥

ಬ್ರಹ್ಮಾನನ್ದೇ ಪ್ರಮತ್ತಃ ಸ್ವಾಜ್ಞಾನನಿದ್ರಾವಶೀಕೃತಃ
ಬದ್ಧಸ್ತ್ವಂ ಬನ್ಧನೈರ್ಭೋಗತೃಷ್ಣಾವೇಗಾದಿ[2]ಭಿರ್ದೃಢಮ್ ॥೬೫॥

ಅದ್ವಯಾನನ್ದರೂಪಾತ್ ತ್ವಾಂ ಪ್ರಚ್ಯಾವ್ಯಾತೀವ ಧೂರ್ತಕೈಃ ।
ದೂರನೀತೋಽಸಿ ದೇಹೇಷು ಸಂಸಾರಾರಣ್ಯಭೂಮಿಷು ॥೬೬॥

---

1. ಇದು ಛಾಂದೋಗ್ಯ ೬–೧೪–೧, ೨ ರಲ್ಲಿರುವ ಕಥೆಯ ವಿವರ.
2. 'ತೃಷ್ಣಾಜ್ವರಾದಿ' ಎಂಬ ಅಚ್ಚಿನ ಪಾಠವು ಛಂದಸ್ಸಿಗೆ ಹೊಂದುವದಿಲ್ಲ.

ಸರ್ವದುಃಖನಿದಾನೇಷು ಶರೀರಾದಿತ್ರಯೇಷು[1] ಚ ।
ನಾನಾಯೋನಿಷು ಕರ್ಮಾನ್ಧವಾಸನಾನಿರ್ಮಿತಾಸು ಚ ॥೬೭॥

ಪ್ರವೇಶಿತೋಽಸಿ ಸೃಷ್ಟೋಽಸಿ ಬದ್ಧಃ ಸ್ವಾನನ್ದದೃಷ್ಟಿತಃ ।
ಅನಾದಿಕಾಲಮಾರಭ್ಯ ದುಃಖಂ ಚಾನುಭವನ್ ಸದಾ ॥೬೮॥

ಜನ್ಮಮೃತ್ಯುಜರಾದೋಷನರಕಾದಿಪರಮ್ಪರಾಮ್ ।
ನಿರನ್ತರಂ ವಿಷಣ್ಣೋಽನುಭವನ್ನತ್ಯನ್ತಶೋಕವಾನ್ ॥೬೯॥

ಅವಿದ್ಯಾಭೂತಬನ್ಧಸ್ಯ ನಿವೃತ್ತೌ ದುಃಖದಸ್ಯ ಚ ।
ಸ್ವರೂಪಾನನ್ದಸಂಪ್ರಾಪ್ತೌ ಸತ್ಯೋಪಾಯಂ ನ ಲಬ್ಧವಾನ್ ॥೭೦॥

೬೪–೭೦. ಇದರಂತೆ ರಾಗಾದಿಶತ್ರುವರ್ಗಗಳಿಂದೊಡಗೂಡಿದ ದುಃಖದೌತ್ಯಗಳಾದ ದೇಹಾಭಿಮಾನವೇ ಮುಂತಾದ ಕಳ್ಳರು ನಿನ್ನ ಆನಂದವನ್ನು ಕಳವು ಮಾಡುವ ಸ್ವಭಾವದವರಾದ್ದರಿಂದ, ಬ್ರಹ್ಮಾನಂದದಲ್ಲಿ ಎಚ್ಚರಿಕೆಯಿಂದಿರದೆ ಆತ್ಮಾಜ್ಞಾನವೆಂಬ ನಿದ್ರೆಗೆ ವಶನಾಗಿರುವ ನಿನ್ನನ್ನು ಭೋಗತೃಷ್ಣೆಯ ವೇಗವೇ ಮುಂತಾದವುಗಳಿಂದ ಕಟ್ಟಿಹಾಕಿ, ಅದ್ವಯಾನಂದಸ್ವರೂಪದಿಂದ ನಿನ್ನನ್ನು ಜಾರಿಸಿ ಆ ಮಹಾಧೂರ್ತರು ನಿನ್ನನ್ನು ಸಂಸಾರವೆಂಬ ಕಾಡಿಗೆ ಆಶ್ರಯವಾಗಿರುವ ದೇಹಗಳ ಬಳಿಗೆ ಕರೆತಂದಿರುತ್ತಾರೆ. ಸರ್ವದುಃಖಗಳಿಗೂ ಕಾರಣವಾಗಿರುವ ಶರೀರತ್ರಯವೇ ಮುಂತಾದವುಗಳುಳ್ಳ ಕರ್ಮದಿಂದ ಕಂಗಾಣದ ವಾಸನೆಗಳಿಂದ ನಿರ್ಮಿತವಾಗಿರುವ ಬಗೆಬಗೆಯ ಯೋನಿಗಳಲ್ಲಿ ಹೊಗಿಸಿರುತ್ತಾರೆ. ಸೃಷ್ಟನಾಗಿದ್ದೀಯೆ, ನಿನ್ನದೇ ಆಗಿರುವ ಆನಂದದೃಷ್ಟಿಯಿಂದ ತಪ್ಪಿ ಬದ್ಧನಾಗಿರುತ್ತೀಯೆ,[2] ಅನಾದಿಕಾಲದಿಂದ ಮೊದಲಾಗಿ ಯಾವಾಗಲೂ ದುಃಖವನ್ನು ಅನುಭವಿಸುತ್ತಾ ಹುಟ್ಟು, ಸಾವು, ಮುಪ್ಪು – ಎಂಬ ದೋಷಗಳಿಂದ ಕೂಡಿದ ನರಕವೇ ಮುಂತಾದವುಗಳ ಪರಂಪರೆಯನ್ನು ಎಡೆಬಿಡದೆ ವಿಷಾದದಿಂದ ಅನುಭವಿಸುತ್ತಾ ಕೊನೆಯಿಲ್ಲದ ಶೋಕವನ್ನು ಅನುಭವಿಸುತ್ತಾ ದುಃಖವನ್ನು ಕೊಡುತ್ತಿರುವ ಅವಿದ್ಯಾಕಲ್ಪಿತಭೂತಗಳ ಬಂಧವನ್ನು ತೊಲಗಿಸಿಕೊಳ್ಳುವದಕ್ಕೂ ಸ್ವರೂಪವಾದ ಆನಂದವನ್ನು ಪಡೆದುಕೊಳ್ಳುವದಕ್ಕೂ ಸತ್ಯವಾದ ಉಪಾಯವನ್ನು ಕಾಣದೆ ಇರುತ್ತೀಯೆ.

## ಮುಕ್ತಿಗೆ ದೃಷ್ಟಾಂತ

ಯಥಾ ಗಾನ್ಧಾರದೇಶೀಯಶ್ಚಿರಂ ದೈವಾದ್ದಯಾಲುಭಿಃ ।
ಕೈಶ್ಚಿತ್ ಪಾನ್ಥೈಃ ಪರಿಪ್ರಾಪ್ತೈರ್ಮುಕ್ತದೃಷ್ಟ್ಯಾದಿಬನ್ಧನಃ ॥೭೧॥

---

1. 'ಶರೀರತ್ರಯಾದೌ' ಎಂಬರ್ಥವಲ್ಲಿ ಪ್ರಯೋಗಿಸಿದೆ.

2. 'ಸೃಷ್ಟೋಽಸಿ ಬದ್ಧಃ ಸ್ವಾನನ್ದದೃಷ್ಟಿತಃ' ಎಂಬ ವಾಕ್ಯಕ್ಕೆ ಅರ್ಥವು ಸರಿಯಾಗಿ ತಿಳಿಯುವಂತಿಲ್ಲ; ಇದ್ದದ್ದನ್ನು ಇದ್ದಹಾಗೆ ಕನ್ನಡಿಸಿದೇವೆ.

ಸ ಚ ತ್ಯೈ[1]ರುಪದಿಷ್ಟಶ್ಚ ಪಣ್ಡಿತೋ ನಿಶ್ಚಿತಾತ್ಮಕಃ ।
ಗ್ರಾಮಾದ್ಗ್ರಾಮಾನ್ತರಂ ಗಚ್ಛೇನ್ಮೇಧಾವೀ ಮಾರ್ಗತತ್ಪರಃ ॥೭೨॥
ಗತ್ವಾ ಗಾನ್ಧಾರದೇಶಂ ಸ ಸ್ವಗೃಹಂ ಪ್ರಾಪ್ಯ ಪೂರ್ವವತ್ ।
ಬಾನ್ಧವೈಃ ಸಂಪರಿಷ್ವಕ್ತಃ ಸುಖೀ ಭೂತ್ವಾ ಸ್ಥಿತೋಽಭವತ್ ॥೭೩॥

೭೧–೭೩. ಹೇಗೆ ಆ ಗಾಂಧಾರದೇಶದವನು ಬಹುಕಾಲದಮೇಲೆ ಅದೃಷ್ಟವಶದಿಂದ ದಯಾಲುಗಳಾದ ಯಾರೋ ಹಾದಿಹೋಕರು ಅಲ್ಲಿಗೆ ಬಂದು ಕಣ್ಣು- ಮುಂತಾದದ್ದಕ್ಕೆ ಹಾಕಿದ್ದ ಕಟ್ಟನ್ನು ಬಿಚ್ಚಿದಮೇಲೆ ಅವರ ಉಪದೇಶವನ್ನು ಹೊಂದಿ ವಿವೇಕದಿಂದ ಅಂತಃಕರಣದಲ್ಲಿ ನಿಶ್ಚಯಿಸಿಕೊಂಡು ಒಂದೂರಿನಿಂದ ಇನ್ನೊಂದೂರಿಗೆ ನೆನಪಿನಿಂದ ದಾರಿಯನ್ನು ತಿಳಿಯುವದರಲ್ಲಿಯೇ ತತ್ಪರನಾಗಿದ್ದು ಕೊಂಡು ಗಾಂಧಾರದೇಶಕ್ಕೆ ಹೋಗಿ ತನ್ನ ಮನೆಯನ್ನು ಸೇರಿ ಮುನ್ನಿನಂತೆಯೇ ಬಾಂಧವರಿಂದ ಆಲಿಂಗಿತನಾಗಿ ಸುಖಿಯಾಗಿ ಇದ್ದವನಾದನೋ–

## ದಾರ್ಷ್ಟಾಂತಿಕವಾದ ಮುಕ್ತಿ

ತ್ವಮಪ್ಯೇವಮನೇಕೇಷು ದುಃಖದಾಯಿಷು ಜನ್ಮಸು ।
ಭ್ರಾನ್ತೋ ದೈವಾಚ್ಛುಭೇ ಮಾರ್ಗೇ ಜಾತಶ್ರದ್ಧಃ ಸುಕರ್ಮಕೃತ್ ॥೭೪॥
ವರ್ಣಾಶ್ರಮಾಚಾರಪರೋಽವಾಪ್ತಪುಣ್ಯಮಹೋದಯಃ ।
ಈಶ್ವರಾನುಗ್ರಹಾಲ್ಲಬ್ಧ[2]ಬ್ರಹ್ಮವಿದ್ಗುರುಸತ್ತಮಃ ॥೭೫॥
ವಿಧಿವತ್ಕೃತಸಂನ್ಯಾಸೋ ವಿವೇಕಾದಿಯುತಃ ಸುಧೀಃ ।
ಪ್ರಾಪ್ತೋ ಬ್ರಹ್ಮೋಪದೇಶೋಽದ್ಯ ವೈರಾಗ್ಯಾಭ್ಯಾಸತಃ ಪರಮ್ ॥೭೬॥
ಪಣ್ಡಿತಸ್ತತ್ರ ಮೇಧಾವೀ ಯುಕ್ತ್ಯಾ ವಸ್ತು ವಿಚಾರಯನ್ ।
ನಿದಿಧ್ಯಾಸನಸಂಪನ್ನಃ ಪ್ರಾಪ್ತೋ ಹಿ ತ್ವಂ ಪರಂ ಪದಮ್ ॥೭೭॥

೭೪–೭೭. ನೀನೂ ಹೀಗೆಯೇ ದುಃಖಪ್ರದಗಳಾದ ಅನೇಕಜನ್ಮಗಳಲ್ಲಿ ತೊಳಲಿ ಅದೃಷ್ಟವಶದಿಂದ ಒಳ್ಳೆಯ ಮಾರ್ಗದಲ್ಲಿ ಶ್ರದ್ಧೆಯುಂಟಾದವನಾಗಿ ಸತ್ಕರ್ಮವನ್ನು ಮಾಡಿ, ವರ್ಣಾಶ್ರಮಾಚಾರದಲ್ಲಿಯೇ ತತ್ಪರನಾಗಿ ಮಹಾ ಪುಣ್ಯದ ಉದಯವನ್ನು ಪಡೆದುಕೊಂಡೆ. ಈಶ್ವರಾನುಗ್ರಹದಿಂದ ಬ್ರಹ್ಮವಿದ ನಾದ ಸದ್ಗುರುವನ್ನು ಪಡೆದುಕೊಂಡೆ. ವಿಧಿವತ್ತಾಗಿ ಸಂನ್ಯಾಸವನ್ನು ಮಾಡಿ

1. 'ಸ್ವಸ್ಥೈಃ' ಎಂಬ ಅಚ್ಚಿನ ಮೂಲವನ್ನು ಹೀಗೆ ತಿದ್ದಿಕೊಂಡಿದೆ. ದಾರಿಹೋಕರು ಯಾವಾಗಲೂ ಸ್ವಸ್ಥರೇ ಆಗಿದ್ದದ್ದರಿಂದ ಮೂಲದಲ್ಲಿರುವ ವಿಶೇಷಣವು ಅವರಿಗೆ ಹೊಂದುವದಿಲ್ಲ.

2. 'ಲಬ್ಧೋ ಬ್ರಹ್ಮವಿದ್ಗುರುಸತ್ತಮಃ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

ವಿವೇಕವೇ ಮುಂತಾದ ಸಾಧನಗಳನ್ನು ಪಡೆದು ಜಾಣನಾದೆ. ಹೆಚ್ಚಿನ ವೈರಾಗ್ಯವನ್ನು ಮಾಡಿದಮೇಲೆ ಇಂದು ಬ್ರಹ್ಮೋಪದೇಶವು ದೊರಕಿತು. ಅದನ್ನು ಗ್ರಹಿಸುವ ಪಂಡಿತನಾಗಿ ಮೇಧಾವಿಯಾಗಿ ಯುಕ್ತಿಯಿಂದ ತತ್ತ್ವವನ್ನು ವಿಚಾರಮಾಡುವವನಾಗಿ ನಿದಿಧ್ಯಾಸನವನ್ನು ಮಾಡಿಕೊಂಡು[1] ನೀನು ಪರಮ ಪದವನ್ನೇ ಪಡೆದುಕೊಂಡಿದೀಯೆ.

## ಜ್ಞಾನವಾದಮೇಲೆ ಕೃತಕೃತ್ಯನು

ಅತೋ ಬ್ರಹ್ಮಾತ್ಮವಿಜ್ಞಾನಮುಪದಿಷ್ಟಂ ಯಥಾವಿಧಿ ।
ಮಯಾಽಽಚಾರ್ಯೇಣ ತೇ ಧೀರ ಸಮ್ಯಕ್ತತ್ರ ಪ್ರಯತ್ನವಾನ್ ॥೭೮॥
ಭೂತ್ವಾ ವಿಮುಕ್ತಬನ್ಧಸ್ತ್ವಂ ಛಿನ್ನದ್ವೈತಾತ್ಮಸಂಶಯಃ[2] ।
ನಿರ್ದ್ವಂದ್ವೋ ನಿಃಸ್ಪೃಹೋ ಭೂತ್ವಾ ವಿಚರಸ್ವ ಯಥಾಸುಖಮ್ ॥೭೯॥

೭೮–೭೯. ಆದ್ದರಿಂದ ಎಲೈ ವಿವೇಕಿಯೆ, ಆಚಾರ್ಯನಾದ ನಾನು ಬ್ರಹ್ಮಾತ್ಮವಿಜ್ಞಾನವನ್ನು ನಿನಗೆ ಯಥಾವಿಧಿಯಾಗಿ ಚೆನ್ನಾಗಿ ಉಪದೇಶ ಮಾಡಿರುತ್ತೇನೆ. ಅದರಲ್ಲಿ ಪ್ರಯತ್ನವುಳ್ಳವನಾಗಿ ಬಂಧದಿಂದ ಬಿಡುಗಡೆಯನ್ನು ಹೊಂದಿ ದ್ವೈತವನ್ನೂ ಆತ್ಮವಿಷಯದಲ್ಲಿರುವ ಸಂಶಯವನ್ನೂ ಕತ್ತರಿಸಿಕೊಂಡು ದ್ವಂದ್ವಾತೀತನಾಗಿ, ಯಾವ ಆಶೆಯೂ ಇಲ್ಲದ, ಸುಖವಾಗಿ ಸಂಚರಿಸುತ್ತಿರು.

## ಬಂಧಮೋಕ್ಷಗಳು ಪರಮಾರ್ಥವಲ್ಲ

ವಸ್ತುತೋ ನಿಷ್ಪ್ರಪಞ್ಚೋಽಸಿ ನಿತ್ಯಮುಕ್ತಃ ಸ್ವಭಾವತಃ ।
ನ ತೇ ಬನ್ಧವಿಮೋಕ್ಷೌ ಸ್ತಃ ಕಲ್ಪಿತೌ ತೌ ಯತಸ್ತ್ವಯಿ ॥೮೦॥
ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನ ವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥೮೧॥[3]

೮೦–೮೧. ನಿಜವಾಗಿ ನೀನು ನಿಷ್ಪ್ರಪಂಚನೇ ಆಗಿರುವೆ, ಸ್ವಭಾವದಿಂದ ನಿತ್ಯಮುಕ್ತನೇ ಆಗಿರುವೆ. ನಿನಗೆ ಬಂಧಮೋಕ್ಷಗಳು ಇರುವದಿಲ್ಲ ; ಏಕೆಂದರೆ

---

1. ಶ್ರವಣಮಾಡಿದ್ದನ್ನು ಮನನಮಾಡಿ, ಅನುಭವಕ್ಕೆ ತಂದುಕೊಂಡು – ಎಂದರ್ಥ.
2. 'ಸಂಭ್ರಮಮ್' ಎಂದು ವಾ॥ ಪಾಠ. ಇಲ್ಲಿರುವದು ಆ॥ ಪಾಠ.
3. ಈ ಶ್ಲೋಕವು ಗೌಡಪಾದರವರ ಮಾಂಡೂಕ್ಯಕಾರಿಕೆಯಿಂದ (೨–೩೨) ಆರಿಸಿಕೊಂಡದ್ದು.

ಅವು ನಿನ್ನಲ್ಲಿ ಕಲ್ಪಿತವಾಗಿರುತ್ತದೆ. ಪ್ರಲಯವಿಲ್ಲ, ಉತ್ಪತ್ತಿಯಿಲ್ಲ, ಬದ್ಧನಿಲ್ಲ, ಸಾಧಕನೂ ಇಲ್ಲ, ಮುಮುಕ್ಷುವಿಲ್ಲ, ಮುಕ್ತನೂ ಇಲ್ಲ – ಹೀಗೆಂಬುದೇ ಪರಮಾರ್ಥವು.

## ಅದ್ವೈತಸಾಕ್ಷಾತ್ಕಾರದಿಂದ ಜೀವನ್ಮುಕ್ತಿ

**ಶ್ರುತಿಸಿದ್ಧಾನ್ತಸಾರೋಽಯಂ ತಥೈವ ತ್ವಂ ಸ್ವಯಾ ಧಿಯಾ ।**
**ಸಂವಿಚಾರ್ಯ ನಿದಿಧ್ಯಾಸ್ಯ ನಿಜಾನನ್ದಾತ್ಮಕಂ ಪರಮ್ ॥೮೨॥**
**ಸಾಕ್ಷಾತ್ಕೃತ್ವಾಽಪರಿಚ್ಛಿನ್ನಾದ್ವೈತಬ್ರಹ್ಮಾಕ್ಷರಂ ಸ್ವಯಮ್ ।**
**ಜೀವನ್ನೇವ ವಿನಿರ್ಮುಕ್ತೋ ವಿಶ್ರಾನ್ತಃ ಶಾನ್ತಿಮಾಶ್ರಯ ॥೮೩॥**

೮೨–೮೩. ಇದು ಶ್ರುತಿಸಿದ್ಧಾಂತದ ಸಾರವು. ನೀನು ಇದರಂತೆಯೇ ನಿನ್ನ ಬುದ್ಧಿಯಿಂದ ಚೆನ್ನಾಗಿ ವಿಚಾರಮಾಡಿ, ನಿದಿಧ್ಯಾಸನಮಾಡಿ, ನಿನ್ನ ಹೆಚ್ಚಿನ ಆನಂದ ಸ್ವರೂಪವಾದ ಪರಿಚ್ಛೇದರಹಿತವಾದ ಅದ್ವೈತಬ್ರಹ್ಮವೆಂಬ ಅಕ್ಷರವನ್ನು ನೀನೇ ಸಾಕ್ಷಾತ್ಕಾರಮಾಡಿಕೊಂಡು ಬದುಕಿರುವಾಗಲೇ ಮುಕ್ತನಾಗಿ ವಿಶ್ರಾಂತನಾಗಿ ಶಾಂತಿಯನ್ನು ಹೊಂದು.

## ಉಪಸಂಹಾರ

**ವಿಚಾರಣೀಯಾ ವೇದಾನ್ತಾ ವನ್ದನೀಯೋ ಗುರುಃ ಸದಾ ।**
**ಗುರೂಣಾಂ ವಚನಂ ಪಥ್ಯಂ ದರ್ಶನಂ ಸೇವನಂ ನೃಣಾಮ್ ॥೮೪॥**

**ಗುರುರ್ಬ್ರಹ್ಮ ಸ್ವಯಂ ಸಾಕ್ಷಾತ್ಸೇವ್ಯೋ ವನ್ದ್ಯೋ ಮುಮುಕ್ಷುಭಿಃ ।**
**ನೋದ್ವೇಜನೀಯ ಏವಾಯಂ ಕೃತಜ್ಞೇನ ವಿವೇಕಿನಾ ॥೮೫॥**

**ಯಾವದಾಯುಸ್ತ್ವಯಾ ವನ್ದ್ಯೋ ವೇದಾನ್ತೋ ಗುರುರೀಶ್ವರಃ ।**
**ಮನಸಾ ಕರ್ಮಣಾ ವಾಚಾ ಶ್ರುತಿರೇವೈಷ ನಿಶ್ಚಯಃ ॥೮೬॥**

**ಭಾವಾದ್ವೈತಂ ಸದಾ ಕುರ್ಯಾತ್ ಕ್ರಿಯಾದ್ವೈತಂ ನ ಕರ್ಹಿಚಿತ್ ।**
**ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ ॥೮೭॥**

೮೪–೮೭. ಉಪನಿಷತ್ತುಗಳನ್ನು ವಿಚಾರಮಾಡಬೇಕು. ಗುರುವನ್ನು ಯಾವಾಗಲೂ ವಂದಿಸುತ್ತಿರಬೇಕು. ಗುರುಗಳ ವಚನವನ್ನು ಕೇಳುವದೂ, ಅವರನ್ನು ದರ್ಶನಮಾಡುವದೂ, ಸೇವನೆಮಾಡುವದೂ ಜನರಿಗೆ ಪಥ್ಯವಾಗಿರುತ್ತದೆ. ಗುರುವು ತಾನೇ ಸಾಕ್ಷಾದ್ಬ್ರಹ್ಮವಾಗಿರುತ್ತಾನೆ; (ಆದ್ದರಿಂದ) ಮುಮುಕ್ಷುಗಳು ಅವನನ್ನು ವಂದಿಸಬೇಕು. ಕೃತಜ್ಞನಾದ ವಿವೇಕಿಯು ಆ (ಗುರು)ವನ್ನು ಎಂದಿಗೂ ವ್ಯಥೆಗೊಳಿಸಬಾರದು. ನಿನ್ನ ಆಯುಸ್ಸು ಇರುವವರೆಗೂ ವೇದಾಂತ,

ಗುರು, ಈಶ್ವರ–ಇವರನ್ನು ಮನಸ್ಸಿನಿಂದಲೂ ಕರ್ಮದಿಂದಲೂ ವಾಕ್ಕಿನಿಂದಲೂ ವಂದಿಸುತ್ತಿರಬೇಕು. ಇದು ಶ್ರುತಿಯೇ ಎಂಬುದು ನಿಶ್ಚಯ.[1] ಭಾವಾದ್ವೈತವನ್ನು ಯಾವಾಗಲೂ ಮಾಡುತ್ತಿರಬೇಕು. ಕ್ರಿಯಾದ್ವೈತವನ್ನು ಎಂದಿಗೂ ಮಾಡ ಬಾರದು. ಅದ್ವೈತವನ್ನು ಮೂರು ಲೋಕಗಳಲ್ಲಿಯೂ ಮಾಡತಕ್ಕದ್ದು, ಆದರೆ ಗುರುವಿನೊಡನೆ ಅದ್ವೈತವನ್ನು ಮಾಡಬಾರದು.[2]

ಇತಿ ತತ್ತ್ವೋಪದೇಶಃ

———————

# ಪ್ರೌಢಾನುಭೂತಿ

ಪ್ರೌಢಪ್ರೌಢನಿಜಾನುಭೂತಿಗಲಿತದ್ವೈತೇನ್ದ್ರಜಾಲೋ ಗುರುರ್ಗೂಢಂ
ಗೂಢಮಘೌಘದುಷ್ಟಕುಧಿಯಾಂ ಸ್ಪಷ್ಟಂ ಸುಧೀಶಾಲಿನಾಮ್ ।।

ಸ್ವಾನ್ತೇ ಸಮ್ಯಗಿಹಾನುಭೂತಮಪಿ ಸಚ್ಛಿಷ್ಯಾವಬೋಧಾಯ ತತ್ ।
ಸತ್ಯಂ ಸಂಸ್ಮೃತವಾನ್ ಸಮಸ್ತಜಗತಾಂ ನೈಜಂ ನಿಜಾಲೋಕನಾತ್ ।।೧।।

೧. ಅತ್ಯಂತಪ್ರೌಢವಾದ ಆತ್ಮಾನುಭವದಿಂದ ದ್ವೈತವೆಂಬ ಇಂದ್ರಜಾಲ ವನ್ನೆಲ್ಲ ತೊಲಗಿಸಿಕೊಂಡಿದ್ದ ಗುರುವು ಪಾಪಸಮೂಹದಿಂದ ದೂಷಿತವಾದ ಕುತ್ಸಿತಬುದ್ಧಿಯ ಜನರಿಗೆ ಅತ್ಯಂತರಹಸ್ಯವಾಗಿಯೂ ಸದ್ಬುದ್ಧಿಯುಳ್ಳವರಿಗೆ ಸ್ಪಷ್ಟವೇ ಆಗಿರುವ, ಆ ಸತ್ಯವನ್ನು ಹೃದಯದಲ್ಲಿ ಚೆನ್ನಾಗಿ ಇಲ್ಲಿಯೇ ಅನುಭವ ದಲ್ಲಿದ್ದರೂ ಸಚ್ಛಿಷ್ಯರ ತಿಳಿವಳಿಕೆಗಾಗಿ ಸಮಸ್ತಜಗತ್ತುಗಳಿಗೂ ಆತ್ಮನಾಗಿರುವ ಸ್ವರೂಪವನ್ನು ಕಂಡುಕೊಂಡು (ಹೀಗೆಂದು) ಸಂಸ್ಮರಣೆಮಾಡಿದನು.

ದ್ವೈತಂ ಮಯ್ಯಖಿಲಂ ಸಮುತ್ಥಿತಮಿದಂ ಮಿಥ್ಯಾ ಮನಃಕಲ್ಪಿತಂ
ತೋಯಂ ತೋಯವಿವರ್ಜಿತೇ ಮರುತಲೇ ಭ್ರಾನ್ತ್ಯೈವ ಸಿದ್ಧಂ ನ ಹಿ ।

ಯದ್ಯೇವಂ ಖಲು ದೃಶ್ಯಮೇತದಖಿಲಂ ನಾಽಹಂ ನ ವಾ ತನ್ಮಮ
ಪ್ರೌಢಾನನ್ದಚಿದೇಕಸನ್ಮಯವಪುಃ ಶುದ್ಧೋಽಸ್ಮ್ಯಖಣ್ಡೋಽಸ್ಮ್ಯಹಮ್ ।।೨।।

---

1. ಇದು ಶ್ವೇತಾಶ್ವತರೋಪನಿಷತ್ತಿನ ೬–೨೩ನೆಯ ಮಂತ್ರದ ಸೂಚನೆಯಿರಬಹುದು.

2. ಈ ಶ್ಲೋಕದ ಅರ್ಥದ ವಿಷಯಕ್ಕೆ ಪೀಠಿಕೆಯನ್ನು ನೋಡಿರಿ.

೨. ಈ ದ್ವೈತವೆಲ್ಲವೂ ಸುಳ್ಳುಸುಳ್ಳಾಗಿಯೇ ಮನಸ್ಸಿನಿಂದ ಕಲ್ಪಿತವಾಗಿ ನನ್ನಲ್ಲಿ ಎದ್ದುಕೊಂಡಿದೆ. ನೀರಿಲ್ಲದ ಮರುಭೂಮಿಯಲ್ಲಿ ನೀರು ಭ್ರಾಂತಿಯಿಂದಲೇ ಕಲ್ಪಿತವಾಗಿರುತ್ತದೆ, (ನಿಜವಾಗಿ) ಇರುವದೇ ಇಲ್ಲ. ಹೀಗಾದಮೇಲೆ ಈ ದೃಶ್ಯವೆಲ್ಲವೂ ನಾನಲ್ಲ, ಅದು ನನ್ನದೂ ಅಲ್ಲವಷ್ಟೆ ? ನಾನು ಪ್ರೌಢಾನಂದ ಚಿದ್ರೂಪವೇ ಆಗಿರುವ ಸತ್ಸ್ವರೂಪನೂ ಶುದ್ಧನೂ ಆಗಿರುವೆನು, ಅಖಂಡನೂ ಆಗಿರುವೆನು.

**ದೇಹೋ ನಾಹಮಚೇತನೋಽಯಮನಿಶಂ ಕುಡ್ಯಾದಿವನ್ನಿಶ್ಚಿತೋ**
**ನಾಹಂ ಪ್ರಾಣಮಯೋಽಪಿ ವಾ ದೃತಿಧೃತೋ ವಾಯುರ್ಯಥಾ ನಿಶ್ಚಿತಃ ।**
**ಸೋಽಹಂ ನಾಪಿ ಮನೋಮಯಃ ಕಪಿಚಲಃ ಕಾರ್ಪಣ್ಯದುಷ್ಟೋ ನ ವಾ**
**ಬುದ್ಧಿರ್ಬುದ್ಧಕುವೃತ್ತಿಕೇವ ಕುಹನಾ ನಾಜ್ಞಾನಮನ್ಧಂತಮಃ ॥೩॥**

೩. ಗೋಡೆಯೇ ಮುಂತಾದವುಗಳಂತೆ ಅಚೇತನವೆಂದು ಯಾವಾಗಲೂ ನಿಶ್ಚಿತವಾಗಿರುವ ಈ ದೇಹವು ನಾನಲ್ಲ. ತಿದಿಯೊಳಗಿರುವ ಗಾಳಿಯಂತೆ ಎಂದು ನಿಶ್ಚಿತವಾಗಿರುವ ಪ್ರಾಣಮಯನೂ ನಾನಲ್ಲ. ಕಪಿಯಂತೆ ಚಂಚಲವಾಗಿ ಅಲ್ಪತ್ವದಿಂದ ದೂಷಿತವಾಗಿರುವ ಮನೋಮಯನೂ ಈ ನಾನಲ್ಲ. ಬೌದ್ಧ ಕಲ್ಪಿತವಾದ ಕ್ಷಣಿಕವಾದ ವೃತ್ತಿಯಾಗಿರುವ (?) ಬುದ್ಧಿಯೂ ಅಲ್ಲ. ಮಾಯಾ ರೂಪವಾದ ಅಂಧಂತಮಸ್ಸಾಗಿರುವ ಅಜ್ಞಾನವೂ ನಾನಲ್ಲ.

**ನಾಹಂ ಖಾದಿರಪಿ ಸ್ಫುಟಂ ಮರುತಲಭ್ರಾಜತ್ಪಯಃಸಾಮ್ಯತ–**
**ಸ್ತೇಭ್ಯೋ ನಿತ್ಯವಿಲಕ್ಷಣೋಽಖಿಲದೃಶಿಃ ಸೌರಪ್ರಕಾಶೋ ಯಥಾ ।**
**ದೃಶ್ಯೈಃ ಸಙ್ಗವಿವರ್ಜಿತೋ ಗಗನವತ್ಸಂಪೂರ್ಣರೂಪೋಽಸ್ಮ್ಯಹಂ**
**ವಸ್ತುಸ್ಥಿತ್ಯನುರೋಧತಸ್ತ್ವಹಮಿದಂ ವೀಚ್ಯಾದಿಸಿನ್ಧುರ್ಯಥಾ ॥೪॥**

೪. ನಾನು ಆಕಾಶಾದಿಗಳೂ ಅಲ್ಲವೆಂಬುದು ಸ್ಫುಟವಾಗಿದೆ. ಏಕೆಂದರೆ ಇವು ಮರುಭೂಮಿಯಲ್ಲಿ ತೋರುವ ನೀರಿಗೆ ಸಮಾನವಾಗಿರುತ್ತವೆ. ನಾನು ಅವಕ್ಕಿಂತ ನಿತ್ಯವಿಲಕ್ಷಣನೂ ಎಲ್ಲವನ್ನೂ ಸೂರ್ಯಪ್ರಕಾಶದಂತೆ ನೋಡಿ ಬೆಳಗುವವನೂ, ದೃಶ್ಯವಸ್ತುಗಳ ಸಂಗವಿಲ್ಲದವನೂ, ಆಕಾಶದಂತೆ ಸರ್ವಗತಸ್ವರೂಪನೂ ಆಗಿರುವೆನು. ವಸ್ತುಸ್ಥಿತಿಯನ್ನು ಅನುಸರಿಸಿ ನೋಡಿದರೋ, ಸಮುದ್ರವೇ ಅಲೆ ಮುಂತಾದವುಗಳಾಗಿರುವಂತೆ ನಾನೇ ಈ (ಎಲ್ಲವೂ ಆಗಿರುತ್ತೇನೆ.)

**ನಿರ್ದ್ವೈತೋಽಸ್ಮ್ಯಹಮಸ್ಮಿ ನಿರ್ಮಲಚಿದಾಕಾಶೋಽಸ್ಮಿ ಪೂರ್ಣೋಽಸ್ಮ್ಯಹಂ । ನಿರ್ದೇಹೋಽಸ್ಮಿ ನಿರಿನ್ದ್ರಿಯೋಽಸ್ಮಿ ನಿತರಾಂ ನಿಷ್ಪ್ರಾಣವರ್ಗೋಽಸ್ಮ್ಯಹಮ್ ॥ ನಿರ್ಮುಕ್ತಾಶುಭಮಾನಸೋಽಸ್ಮಿ ವಿಗಲದ್ವಿ– ಜ್ಞಾನಕೋಶೋಽಸ್ಮ್ಯಹಂ । ನಿರ್ಮಾಯೋಽಸ್ಮಿ ನಿರನ್ತರೋಽಸ್ಮಿ ವಿಪುಲಪ್ರೌಢಪ್ರಕಾಶೋಽಸ್ಮ್ಯಹಮ್ ॥೫॥**

೫. ದ್ವೈತವಿಲ್ಲದವನಾಗಿದೇನೆ, ನಾನು (ಎಂದೇ ಅರಿಯುವದಕ್ಕೆ ಬರುವವ)ನಾಗಿದ್ದೇನೆ. ನಿರ್ಮಲವಾದ[1] ಚೈತನ್ಯರೂಪವಾದ ಆಕಾಶವಾಗಿರುವೆನು,[2] ನಾನು ಪೂರ್ಣನಾಗಿರುವೆನು,[3] ಅಶರೀರನಾಗಿರುತ್ತೇನೆ, ಇಂದ್ರಿಯರಹಿತನಾಗಿರುತ್ತೇನೆ, ಸಂಪೂರ್ಣವಾಗಿಯೂ ಪ್ರಾಣವರ್ಗವಿಲ್ಲದವನಾಗಿರುತ್ತೇನೆ, ಪಾಪದ ಸಂಬಂಧವೇ ಇಲ್ಲದ ಮನಸ್ಸಿನವನಾಗಿರುತ್ತೇನೆ, ವಿಜ್ಞಾನಕೋಶವನ್ನು ಕಳಚಿಕೊಂಡವನಾಗಿರುತ್ತೇನೆ, ಮಾಯಾರಹಿತನಾಗಿರುತ್ತೇನೆ, ಕಡಿವಡೆಯದೆ ಎಲ್ಲೆಲ್ಲಿಯೂ ಇರುವವನಾಗಿದೇನೆ, ನಾನು ವಿಸ್ತಾರವಾದ ಹೆಚ್ಚಿನ ಚೈತನ್ಯ ಪ್ರಕಾಶರೂಪವಾಗಿರುತ್ತೇನೆ.

ಮತ್ತೋಽನ್ಯನ್ನ ಹಿ ಕಿಂಚಿದಸ್ತಿ ಯದಿ ಚಿದ್ಭಾಸ್ಯಂ ತತಸ್ತನ್ಮೃಷಾ ।
ಗುಞ್ಜಾವಹ್ನಿವದೇವ ಸರ್ವಕಲನಾಧಿಷ್ಠಾನಭೂತೋಽಸ್ಮ್ಯಹಮ್ ॥
ಸರ್ವಸ್ಯಾಪಿ ದೃಗಸ್ಮ್ಯಹಂ ಸಮರಸಃ ಶಾನ್ತೋಽಸ್ಮ್ಯಪಾಪೋಽಸ್ಮ್ಯಹಂ ।
ಪೂರ್ಣೋಽಸ್ಮಿ ದ್ವಯವರ್ಜಿತೋಽಸ್ಮಿ ವಿಪುಲಾಕಾಶೋಽಸ್ಮಿ
ನಿತ್ಯೋಽಸ್ಮ್ಯಹಮ್ ॥೬॥

೬. ನನಗಿಂತ ಬೇರೆಯಾದದ್ದು ಯಾವದೊಂದೂ ಇಲ್ಲವೇಇಲ್ಲ ; ಚಿತ್ತಿನಿಂದ ಬೆಳಗುವದು ಯಾವದಾದರೂ ಇದ್ದರೆ ಅದು ಗುಲುಗಂಜಿಯ ಬೆಂಕಿಯಂತೆ[4] ಮಿಥ್ಯೆಯೇ. ಎಲ್ಲಾ ಕಲ್ಪನೆಗಳಿಗೂ ಅಧಿಷ್ಠಾನವಾಗಿರುವವನು ನಾನಾಗಿರುವೆ. ನಾನು ಎಲ್ಲಕ್ಕೂ ದೃಕ್ಕಾಗಿರುವೆ. ಸಮರಸನೂ ಶಾಂತನೂ ಆಗಿರುವೆನು, ಪಾಪರಹಿತ[5]ನಾಗಿರುವೆನು, ಪೂರ್ಣನಾಗಿರುವೆನು, ದ್ವೈತರಹಿತನಾಗಿರುವೆನು, ವಿಸ್ತೃತವಾದ (ಚಿದಾ)ಕಾಶವಾಗಿರುವೆನು, ನಾನು ನಿತ್ಯನಾಗಿರುವೆನು.

ಮಯ್ಯಸ್ಮಿನ್ ಪರಮಾರ್ಥಕೇ ಶ್ರುತಿಶಿರೋವೇದ್ಯೇ ಸ್ವತೋ ಭಾಸನೇ
ಕಾ ವಾ ವಿಪ್ರತಿಪತ್ತಿರೇತದಖಿಲಂ ಭಾತ್ಯೇವ ಯತ್ಸಂನಿಧೇಃ ।
ಸೌರಾಲೋಕವಶಾತ್ಪ್ರತೀತಮಖಿಲಂ ಪಶ್ಯನ್ನ ತಸ್ಮಿಞ್ಜನಃ
ಸಂದಿಗ್ಧೋಽಸ್ತ್ಯತ ಏವ ಕೇವಲಶಿವಃ ಕೋಽಪಿ ಪ್ರಕಾಶೋಽಸ್ಮ್ಯಹಮ್ ॥೭॥

1. ಅನಾತ್ಮಸಂಬಂಧವಾದ ದೋಷಗಳಿಲ್ಲದ, ಅಸಂಗನಾದ.
2. ಆಕಾಶವು ಸರ್ವಗತವಾಗಿರುವಂತೆ ಆಕಾಶಾದಿಗಳೆಲ್ಲವನ್ನೂ ವ್ಯಾಪಿಸಿಕೊಂಡಿರುವ ಚೈತನ್ಯರೂಪನು.
3. ಅದ್ವೈತನು.
4. ಗುಲಗಂಜಿಯ ರಾಶಿಯನ್ನು ಬೆಂಕಿಯೆಂದು ಕಲ್ಪಿಸಿಕೊಂಡರೆ ಅಲ್ಲಿ ನಿಜವಾಗಿ ಬೆಂಕಿಯೇನೂ ಇರುವದಿಲ್ಲ.
5. ಧರ್ಮಾಧರ್ಮಗಳ ಸೋಂಕಿಲ್ಲದವನು.

೭. ಈ ಪರಮಾರ್ಥವಾದ, ವೇದಾಂತವೇದ್ಯವಾದ, ಸ್ವಯಂಭಾನವುಳ್ಳ ನನ್ನಲ್ಲಿ ವಿರುದ್ಧಜ್ಞಾನವಾದರೂ ಯಾವದು ಇದ್ದೀತು ? ಇದೆಲ್ಲವೂ ನನ್ನ ಸಂನಿಧಿಯಿಂದಲೇ ತೋರುತ್ತಿರುತ್ತದೆ. ಸೂರ್ಯನ ಬೆಳಕಿನ ಬಲದಿಂದ ಎಲ್ಲವೂ ಕಾಣುತ್ತಿರುವದೆಂದು ಕಂಡುಕೊಂಡ ಮನುಷ್ಯನು ಆ (ಬೆಳಕಿನ ವಿಷಯಕ್ಕೆ) ಸಂದೇಹವುಳ್ಳವನಾಗಿರುವದಿಲ್ಲ. ಆದ್ದರಿಂದಲೇ ನಾನು ಕೇವಲ ಶಿವವಾದ ಒಂದಾನೊಂದು ಬೆಳಕಾಗಿರುತ್ತೇನೆ.

**ನಿತ್ಯಸ್ಫೂರ್ತಿಮಯೋಽಸ್ಮಿ ನಿರ್ಮಲಸದಾಕಾಶೋಽಸ್ಮಿ ಶಾನ್ತೋಽ-**
**ಸ್ಮ್ಯಹಂ। ನಿತ್ಯಾನನ್ದಮಯೋಽಸ್ಮಿ ನಿರ್ಗತಮಹಾಮೋಹಾನ್ಧ**
**ಕಾರೋಽಸ್ಮ್ಯಹಮ್ ॥ ವಿಜ್ಞಾತಂ ಪರಮಾರ್ಥತತ್ತ್ವಮಖಿಲಂ**
**ನೈಜಂ ನಿರಸ್ತಾಶುಭಂ । ಮುಕ್ತಪ್ರಾಪ್ಯಮಪಾಸ್ತಭೇದಕಲನಾ-**
**ಕೈವಲ್ಯಸಂಜ್ಞೋಽಸ್ಮ್ಯಹಮ್ ॥೮॥**

೮. ನಿತ್ಯಪ್ರಕಾಶರೂಪನಾಗಿರುವೆನು, ನಿರ್ಮಲವಾದ ಸದ್ರೂಪವಾದ ಆಕಾಶವಾಗಿರುವೆನು, ನಾನು ಶಾಂತನಾಗಿರುವೆನು, ನಿತ್ಯಾನಂದಸ್ವರೂಪನಾಗಿರುವೆನು, ನಾನು ಮಹಾಮೋಹವೆಂಬ ಕತ್ತಲು ಇಲ್ಲದವನಾಗಿರುವೆನು. ನನ್ನದಾಗಿರುವ ಅಶುಭರಹಿತವಾದ ಪರಮಾರ್ಥತತ್ತ್ವವೆಲ್ಲವನ್ನೂ ಅರಿತುಕೊಂಡದ್ದಾಗಿದೆ. ಮುಕ್ತರಿಗೆ ದೊರಕುವದಾಗಿರುವ ಭೇದಕಲ್ಪನೆ ಯಾವದೂ ಇಲ್ಲದ ಕೈವಲ್ಯವೆಂಬ ಹೆಸರಿನವನೇ ನಾನಾಗಿರುವೆನು.

**ಸ್ವಾಪ್ನದ್ವೈತವದೇವ ಜಾಗ್ರತಮಪಿ (?) ದ್ವೈತಂ ಮನೋಮಾತ್ರಕಂ**
**ಮಿಥ್ಯೇತ್ಯೇವ ವಿಹಾಯ ಸಚ್ಚಿದಮಲಸ್ವಾನ್ತೈಕರೂಪೋಽಸ್ಮ್ಯಹಮ್ ।**
**ಯದ್ವಾ ವೇದ್ಯಮಶೇಷಮೇತದನಿಶಂ ಮದ್ರೂಪಮೇವೇತ್ಯಪಿ**
**ಜ್ಞಾತ್ವಾತ್ಯಕ್ತಮರುನ್ಮಹೋದಧಿರಿವ ಪ್ರೌಢೋ ಗಭೀರೋಽಸ್ಮ್ಯಹಮ್ ॥೯॥**

೯. 'ಕನಸಿನ ದ್ವೈತದಂತೆಯೇ ಎಚ್ಚರದ ದ್ವೈತವೂ ಮನೋಮಾತ್ರವಾಗಿರುತ್ತದೆ ; ಮಿಥ್ಯೆಯಾಗಿದೆ' – ಎಂದೇ ಕೈಬಿಟ್ಟು, ಸಚ್ಚಿತ್ತಿನ ನಿರ್ಮಲಹೃದಯವಾದ ಏಕರೂಪನಾಗಿರುವೆನು, ನಾನು. ಅಥವಾ ಈ ಜ್ಞೇಯವೆಲ್ಲವೂ ಯಾವಾಗಲೂ ನನ್ನ ಸ್ವರೂಪವೇ ಆಗಿರುತ್ತದೆ – ಎಂದೂ ತಿಳಿದುಕೊಂಡು, ಬಿರುಗಾಳಿಯಿಲ್ಲದ ಮಹಾಸಮುದ್ರದಂತೆ ಪ್ರೌಢನೂ ಗಂಭೀರನೂ ಆಗಿರುವೆನು, ನಾನು.

**ಗನ್ತವ್ಯಂ ಕಿಮಿಹಾಸ್ತಿ ಸರ್ವಪರಿಪೂರ್ಣಸ್ಯಾಪ್ಯಖಣ್ಡಾಕೃತೇಃ**
**ಕರ್ತವ್ಯಂ ಕಿಮಿಹಾಸ್ತಿ ನಿಷ್ಕ್ರಿಯತನೋರ್ವೀಕ್ಷೈಕರೂಪಸ್ಯ ಮೇ ।**
**ನಿರ್ದ್ವೈತಸ್ಯ ನ ಹೇಯಮನ್ಯದಪಿ ವಾ ನೋ ವಾಪ್ಯುಪೇಯಾನ್ತರಂ**
**ಶಾನ್ತೋಽದ್ಯಾಸ್ಮಿ ವಿಮುಕ್ತತೋಯವಿಮಲೋ ಮೇಘೋ ಯಥಾ**
**ನಿರ್ಮಲಃ ॥೧೦॥**

೧೦. ಎಲ್ಲೆಲ್ಲಿಯೂ ತುಂಬಿಕೊಂಡು ಅಖಂಡಾಕಾರನಾಗಿರುವ ನನಗೆ ಹೋಗಿ ಸೇರತಕ್ಕದ್ದೆಂಬುದು ಇಲ್ಲಿ ಯಾವದಿದೆ ? ಯಾವ ಕ್ರಿಯೆಯೂ ಇಲ್ಲದ ಸ್ವರೂಪದವನೂ ನಿತ್ಯಮುಕ್ತಸ್ವರೂಪನೂ ಆಗಿರುವ ನನಗೆ ಇಲ್ಲಿ ಕರ್ತವ್ಯವಾದದ್ದು ಯಾವದಿದೆ ? ಯಾವ ದ್ವೈತವೂ ಇಲ್ಲದ ನನಗೆ ಬಿಡತಕ್ಕದ್ದು ಮತ್ತೊಂದಿರುವದಿಲ್ಲ. ತೆಗೆದುಕೊಳ್ಳತಕ್ಕದ್ದೂ ಮತ್ತೊಂದು ಇರುವದಿಲ್ಲ. ನೀರನ್ನು ಮಳೆಗರೆದು ನಿರ್ಮಲವಾದ ಮೋಡದಂತೆ ಈಗ ಶಾಂತನಾಗಿರುತ್ತೇನೆ.

**ಕಿಂ ನ[1] ಪ್ರಾಪ್ತಮಿತಃ ಪುರಾ ಕಿಮಧುನಾ ಲಬ್ಧಂ ವಿಚಾರಾದಿನಾ ।**
**ಯಸ್ಮಾತ್ತತ್ಸುಖರೂಪಮೇವ ಸತತಂ ಜಾಜ್ವಲ್ಯಮಾನೋಽಸ್ಮ್ಯಹಮ್ ॥**
**ಕಿಂ ವಾಪೇಕ್ಷ್ಯಮಿಹಾಪಿ ಮಯ್ಯತಿತರಾಂ ಮಿಥ್ಯಾವಿಚಾರಾದಿಕಂ**
**ದ್ವೈತಾದ್ವೈತವಿವರ್ಜಿತೇ ಸಮರಸೇ ಮೌನಂ ಪರಂ ಸಂಮತಮ್ ॥೧೧॥**

೧೧. ಇದಕ್ಕಿಂತ ಮುಂಚೆ ಏನು ದೊರಕಿರಲಿಲ್ಲ ? ವಿಚಾರವೇ ಮುಂತಾದದ್ದರಿಂದ ಈಗ ಲಭಿಸಿದ್ದೇನು ? ಎಂದೆಂದಿಗೂ ಹೊಳೆಹೊಳೆಯುತ್ತಲೇ ಇರುವ ಆ ಆನಂದಸ್ವರೂಪವೇ ನಾನಾಗಿರುವೆನಲ್ಲವೆ ? ಅತ್ಯಂತವಾಗಿ ದ್ವೈತಾದ್ವೈತಗಳಿಲ್ಲದವನೂ ಸಮರಸನೂ ಆಗಿರುವ ನನ್ನ ಈ ಸ್ವರೂಪದಲ್ಲಿಯೂ ಮಿಥ್ಯಾವಿಚಾರವೇ ಮುಂತಾದ ಯಾವದರ ಅಪೇಕ್ಷೆ ಇದೆ ?[2] ಹೆಚ್ಚಿನ ಮೌನವೇ ಸಂಮತವು.

**ಶ್ರೋತವ್ಯಂ ಚ ಕಿಮಸ್ತಿ ಪೂರ್ಣಸದೃಶೋ ಮಿಥ್ಯಾಪರೋಕ್ಷಸ್ಯ ಮೇ**
**ಮನ್ತವ್ಯಂ ಚ ನ ಮೇಽಸ್ತಿ ಕಿಂಚಿದಪಿ ವಾ ನಿಃಸಂಶಯಜ್ಯೋತಿಷಃ ।**
**ಧ್ಯಾತೃಧ್ಯೇಯವಿಭೇದಹಾನಿವಪುಷೋ ನ ಧ್ಯೇಯಮಸ್ತ್ಯೇವ ಮೇ**
**ಸರ್ವಾತ್ಮೈಕಮಹಾರಸಸ್ಯ ಸತತಂ ನೋ ವಾ ಸಮಾಧಿರ್ಮಮ ॥೧೨॥**

೧೨. ಸರ್ವವ್ಯಾಪಕವಾದ ಚೈತನ್ಯದೃಙ್ಮಾತ್ರನಾಗಿದ್ದು ಸುಳ್ಳುಸುಳ್ಳಾಗಿಯೇ ಪರೋಕ್ಷನೆನಿಸಿರುವ[3] ನನಗೆ ಶ್ರವಣಮಾಡತಕ್ಕದ್ದು ಏನಿದೆ ? ಯಾವ ಸಂಶಯಕ್ಕೂ ಎಡೆಯಿಲ್ಲದ ಚೈತನ್ಯಪ್ರಕಾಶನಾಗಿರುವ ನನಗೆ ಸ್ವಲ್ಪವೂ ಮನನಮಾಡತಕ್ಕದ್ದು ಇರುವದಿಲ್ಲ. ಧ್ಯಾನಮಾಡುವವನು, ಧ್ಯಾನಮಾಡಲ್ಪಡತಕ್ಕದ್ದು– ಎಂಬ ಭೇದವೇ ಇಲ್ಲದ ಸ್ವರೂಪದ ನನಗೆ ಧ್ಯಾನಮಾಡತಕ್ಕದ್ದೇ ಇರುವದಿಲ್ಲ.

1. 'ನಃ ಪ್ರಾಪ್ತಮ್' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

2. ವಿಚಾರಮಾಡಿ ದ್ವೈತವು ನಿಜವೊ, ಅದ್ವೈತವು ನಿಜವೊ – ಎಂಬುದನ್ನು ನಿರ್ಣಯಿಸಬೇಕಾದದ್ದು ಯಾವದೂ ಇಲ್ಲ ; ಏಕೆಂದರೆ ದ್ವೈತ, ಅದ್ವೈತ – ಎಂಬಿವೂ ಕಲ್ಪನೆಯಿಂದ ಆತ್ಮಸ್ವರೂಪದಲ್ಲಿ ತೋರುತ್ತವೆ ಎಂದು ಭಾವ.

3. ನಿತ್ಯವೂ ಅಪರೋಕ್ಷನೇ ಆಗಿರುವ ಎಂದರ್ಥ ; ಪರೋಕ್ಷವಸ್ತುವನ್ನು ಮಾತ್ರ ಶ್ರವಣದಿಂದ ತಿಳಿದುಕೊಳ್ಳಬೇಕಾಗಿರುತ್ತದೆ. 'ನಿತ್ಯಾಪರೋಕ್ಷಸ್ಯ' ಎಂದೇ ಪಾಠವಿದ್ದಿದ್ದರೂ ಇರಬಹುದು.

ಯಾವಾಗಲೂ ಎಲ್ಲರಿಗೂ ಆತ್ಮನಾಗಿರುವ ಏಕರಸನಾಗಿರುವ ನನಗೆ ಸಮಾಧಿಯೂ[1] ಇರುವದಿಲ್ಲ.

**ಆತ್ಮಾನಾತ್ಮವಿವೇಚನಾಪಿ ಮಮ ನೋಽವಿದ್ವತ್ಕೃತಾ ರೋಚತೇ**
**ನಾತ್ಮಾ ನಾಸ್ತಿ ಯದಸ್ತಿ ಗೋಚರವಪುಃ ಕೋ ವಾ ವಿವೇಕ್ತುಂ ಕ್ಷಮಃ।**
**ಮಿಥ್ಯಾವಾದವಿಚಾರಚಿನ್ತನಮಹೋ ಕುರ್ವನ್ತ್ಯದೃಷ್ಟಾತ್ಮಕಾ**
**ಭ್ರಾನ್ತಾ ಏವ ನ ಪಾರಗಾ ದೃಢಧಿಯಸ್ತೂಷ್ಣೀಂ ಶಿಲಾವತ್ಸ್ಥಿತಾಃ ॥೧೩॥**

೧೩. ತಿಳಿಯದವರು ಮಾಡುತ್ತಿರುವ ಆತ್ಮಾನಾತ್ಮವಿವೇಚನೆಯೂ ನನಗೆ ರುಚಿಸುವದಿಲ್ಲ. ಆತ್ಮನು ಇಲ್ಲವೆಂಬುದೇ ಇಲ್ಲ; ವಿಷಯರೂಪವಾಗಿ ಯಾವದು ಇದ್ದುಕೊಂಡಿರುವದೋ ಅದನ್ನು ಯಾವನುತಾನೆ ವಿವೇಚನೆಮಾಡುವದಕ್ಕೆ ಸಮರ್ಥನು ?[2] ಎಂದೆಂದಿಗೂ ಆತ್ಮನನ್ನು ಕಾಣದೆ ಇರುವವರು ವ್ಯರ್ಥವಾಗಿ ವಾದವನ್ನೂ ವಿಚಾರವನ್ನೂ ಚಿಂತನವನ್ನೂ[3] ಮಾಡುತ್ತಿರುವರಲ್ಲ ! ಅವರು ಭ್ರಾಂತರೇ ಹೊರತು, ದಡವನ್ನು ಕಂಡವರಲ್ಲ. ದೃಢಜ್ಞಾನವುಳ್ಳವರು ಕಲ್ಲಿನಂತೆ[4] ಸುಮ್ಮನೆ ಇರುತ್ತಾರೆ.

**ವಸ್ತುಸ್ಥಿತ್ಯನುರೋಧತಸ್ತ್ವಹಮಹೋ ಕಶ್ಚಿತ್ಪದಾರ್ಥೋ ನ ಚಾ**
**ಪ್ಯೇವಂ ಕೋಽಪಿ ವಿಭಾಮಿ ಸಂತತದೃಶಿರ್ವಾಙ್ಮಾನಸಾಗೋಚರಃ ।**
**ನಿಷ್ಪಾಪೋಽಸ್ಮ್ಯಭಯೋಽಸ್ಮ್ಯಹಂ ವಿಗತದುಃಶಙ್ಕಾಕಲಙ್ಕೋಽಸ್ಮ್ಯಹಂ**
**ಸಂಶಾನ್ತಾನುಪಮಾನಶೀತಲಮಹಃಪ್ರೌಢಪ್ರಕಾಶೋಽಸ್ಮ್ಯಹಮ್ ॥೧೪॥**

೧೪. ವಸ್ತುಸ್ಥಿತಿಯನ್ನು ಅನುಸರಿಸಿ ನೋಡಿದರೆ, ಆಹಾ ! ನಾನು ಯಾವ ಪದಾರ್ಥವೂ ಅಲ್ಲ. ಹಾಗಿದ್ದರೂ ಸಂತತದೃಙ್ಮಾತ್ರನಾದ, ವಾಕ್ಕಿಗೂ ಮನಸ್ಸಿಗೂ ಗೋಚರನಲ್ಲದ ಯಾವನೋ ಒಬ್ಬನಾಗಿ ತೋರುತ್ತಿರುವೆನು. ಪಾಪರಹಿತ

---

1. ಸಾಧಕರಿಗೆ ಶ್ರವಣ, ಮನನ, ನಿದಿಧ್ಯಾಸನ – ಇವುಗಳಾದಮೇಲೆ ಸಮಾಧಿಯು ಅವಶ್ಯವೆಂಬ ಸೂಚನೆ ಇಲ್ಲಿದೆ.

2. ಆತ್ಮನು ನಿಃಸಂಶಯವಾಗಿ ಇರುತ್ತಾನೆ ; ಅನಾತ್ಮವೆಂಬುದು ಪರಮಾರ್ಥವಾಗಿ ಇಲ್ಲವೇ ಇಲ್ಲ. ಅದರ ಪ್ರತೀತಿಯು ಅನಿರ್ವಚನೀಯವಾಗಿರುವದರಿಂದ ಅದನ್ನು ಬೇರ್ಪಡಿಸಿಕೊಂಡು ವಿವೇಕಮಾಡುವದೂ ಸಾಧ್ಯವಿಲ್ಲ ಎಂಬುದು ಅಭಿಪ್ರಾಯವಿರಬಹುದು. 'ಅನಾತ್ಮಾ ನಾಸ್ತಿ' ಎಂಬ ಪಾಠಕ್ಕಿಂತ 'ನಾತ್ಮಾ ನಾಸ್ತಿ' ಎಂಬ ಪಾಠವೇ ಉತ್ತಮವೆಂದು ಹಿಡಿದಿದೆ.

3. ಮನನಧ್ಯಾನಗಳನ್ನು ಎಂದು ಅರ್ಥ ; ಅಥವಾ ಮಿಥ್ಯಾವಾದದ ವಿಚಾರವನ್ನು ಎಂದೂ ಅರ್ಥವನ್ನು ಮಾಡಿಕೊಳ್ಳಬಹುದು.

4. ಯಾವ ಸಂಶಯಕ್ಕೂ ಈಡಾಗದೆ ಎಂಬರ್ಥವಿರಬಹುದು.

ನಾಗಿರುವೆನು, ನಾನು ಭಯರಹಿತನಾಗಿರುವೆನು, ನಾನು ಕೆಟ್ಟಶಂಕೆಗಳ ಕಲಂಕವಿಲ್ಲದವನಾಗಿರುವೆನು. ನಾನು ಅತ್ಯಂತಶಾಂತವಾದ ಹೋಲಿಕೆಯಿಲ್ಲದ ಶೀತಲವಾದ ತೇಜಸ್ಸುಳ್ಳ ಹಗಲಿನ ಪ್ರೌಢಪ್ರಕಾಶವಾಗಿರುವೆನು.

**ಯೋಽಹಂ ಪೂರ್ವಮಿತಃ ಪ್ರಶಾನ್ತಕಲನಃ[1] ಶುದ್ಧೋಽಸ್ಮಿ**
**ಬುದ್ಧೋಽಸ್ಮ್ಯಹಂ । ಯಸ್ಮಾನ್ಮತ್ತ ಇದಂ ಸಮುತ್ಥಿತಮಭೂ–**
**ದೇತನ್ಮಯಾ ಧಾರ್ಯತೇ ॥ ಮಯ್ಯೇವ ಪ್ರಲಯಂ ಪ್ರಯಾತಿ**
**ನಿರಧಿಷ್ಠಾನಾಯ ತಸ್ಮೈ ಸದಾ । ಸತ್ಯಾನನ್ದಚಿದಾತ್ಮಕಾಯ**
**ವಿಪುಲಪ್ರಜ್ಞಾಯ ಮಹ್ಯಂ ನಮಃ ॥೧೫॥**

೧೫. ಈ ನಾನುಂಟಲ್ಲ, ಇದಕ್ಕಿಂತ ಮೊದಲೂ ಕಲ್ಪನೆಗಳು ಯಾವವೂ ಇಲ್ಲದವನಾದ[2] ನಾನು ಶುದ್ಧನಾಗಿ ಜ್ಞಾನಸ್ವರೂಪನಾಗಿ ಇರುವೆನು. ಏಕೆಂದರೆ ಈ ಜಗತ್ತು ನನ್ನಿಂದ ಎದ್ದುಕೊಂಡಿರುತ್ತದೆ. ಇದು ನನ್ನಿಂದಲೇ ಧೃತವಾಗಿರುತ್ತದೆ, ನನ್ನಲ್ಲಿಯೇ ಪ್ರಲಯವನ್ನು ಹೊಂದುತ್ತದೆ. ಯಾವ ಆಧಾರವೂ ಇಲ್ಲದ ಸತ್ಯ ಜ್ಞಾನಾನಂದಸ್ವರೂಪನಾದ ಮಹಾಚೈತನ್ಯಸ್ವರೂಪನಾದ ಆ ನನಗೆ ನಮಸ್ಕಾರ !

**ಸತ್ತಾಚಿತ್ಸುಖರೂಪಮಸ್ತಿ ಸತತಂ ನಾಹಂ ಚ ನ ತ್ವಂ ಮೃಷಾ**
**ನೇದಂ ವಾಪಿ ಜಗತ್ಪ್ರದೃಷ್ಟಮಖಿಲಂ ನಾಸ್ತೀತಿ ಜಾನೀಹಿ ಭೋಃ ।**
**ಯತ್ಪ್ರೋಕ್ತಂ ಕರುಣಾವಶಾತ್ತ್ವಯಿ ಮಯಾ ತತ್ಸತ್ಯಮೇತತ್ಸ್ಫುಟಂ**
**ಶ್ರದ್ಧತ್ಸ್ವಾನಘ ಶುದ್ಧಬುದ್ಧಿರಸಿ ಚೇನ್ಮಾತ್ರಾಸ್ತು ತೇ ಸಂಶಯಃ ॥೧೬॥**

೧೬. ಸಚ್ಚಿದಾನಂದಸ್ವರೂಪವಾದದ್ದು ಯಾವಾಗಲೂ ಇದ್ದುಕೊಂಡಿದೆ. ನಾನಿಲ್ಲ, ನೀನಿಲ್ಲ, ಸುಳ್ಳಾದ ಈ ಜಗತ್ತೂ ಇಲ್ಲ. ಕಾಣುವದು ಯಾವದೂ ಇಲ್ಲವೆಂದು ತಿಳಿಯಯ್ಯ ! ನಿನ್ನಲ್ಲಿ ಕರುಣಾವಶನಾಗಿ ನಾನು ಯಾವದನ್ನು ಹೇಳಿರುವೆನೋ ಇದು ಸತ್ಯವೆಂಬುದು ಸ್ಫುಟವು. ಎಲೈ ನಿಷ್ಪಾಪನೆ, ಶುದ್ಧಬುದ್ಧಿಯುಳ್ಳವನಾದರೆ ಶ್ರದ್ಧೆಯಿಡು, ಸ್ವೀಕರಿಸು ; ಇದರಲ್ಲಿ ನಿನಗೆ ಸಂಶಯವುಂಟಾಗದಿರಲಿ !

1. 'ಕಲನಾ' ಎಂಬ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
2. ಎಂದೆಂದಿಗೂ ವಿಕಲ್ಪಶೂನ್ಯನು – ಎಂದರ್ಥ.

ಸ್ವಾರಸ್ಯೈಕಸುಬೋಧಚಾರುಮನಸೇ ಪ್ರೌಢಾನುಭೂತಿಸ್ತ್ವಿಯಂ
ದಾತವ್ಯಾ ನ ತು ಮೋಹದಗ್ಧಕುಧಿಯೇ ದುಷ್ಟಾನ್ತರಜ್ಞಾಯ ಚ ।
ಯೇಯಂ ರಮ್ಯವಿದರ್ಪಿತೋತ್ತಮಶಿರಃಪ್ರಾಪ್ತಾ ಚಕಾಸ್ತಿ ಸ್ವಯಂ
ಸಾ ಚೇನ್ಮರ್ಕಟಹಸ್ತದೇಶಪತಿತಾ ಕಿಂ ರಾಜತೇ ಕೇತಕೀ ॥೧೭॥

೧೭. ಈ ಪ್ರೌಢಾನುಭೂತಿಯನ್ನಾದರೆ ಸ್ವರಸವಾದದ್ದೊಂದನ್ನೇ ಚೆನ್ನಾಗಿ ಅರಿಯುವ ಸುಂದರವಾದ ಮನಸ್ಸುಳ್ಳವನಿಗೆ ಕೊಡಬೇಕೇ ಹೊರತು ಮೋಹದಗ್ಧವಾದ ಕುತ್ಸಿತಬುದ್ಧಿಯುಳ್ಳವನಿಗೂ ದೋಷಯುಕ್ತವಾದ ಅಂತಃಕರಣವುಳ್ಳವನಿಗೂ ಕೊಡಬಾರದು. ಸೌಂದರ್ಯವನ್ನು ಬಲ್ಲಾತನಿಗೆ ಕೊಟ್ಟು ತಲೆಯ ಮೇಲೆ ಕುಳಿತು ತಾನೇ ಶೋಭಿಸುತ್ತಿರುವದಲ್ಲ, ಆ ಕೇದಗೆಯ ಹೂವನ್ನು ಕಪಿಯ ಕೈಗೆ ಕೊಟ್ಟರೆ ಒಪ್ಪಾಗುವದೇನು ?

ಇತಿ ಪ್ರೌಢಾನುಭೂತಿಃ

——————

# ಉಪದೇಶಪಂಚಕ[1]

ವೇದೋ ನಿತ್ಯಮಧೀಯತಾಂ ತದುದಿತಂ ಕರ್ಮ ಸ್ವನುಷ್ಠೀಯತಾಂ
ತೇನೇಶಸ್ಯ ವಿಧೀಯತಾಮಪಚಿತಿಃ ಕಾಮ್ಯೇ ಮತಿಸ್ತ್ಯಜ್ಯತಾಮ್ ।
ಪಾಪೌಘಃ ಪರಿಧೂಯತಾಂ ಭವಸುಖೇ ದೋಷೋಽನುಸಂಧೀಯತಾ-
ಮಾತ್ಮೇಚ್ಛಾ ವ್ಯವಸೀಯತಾಂ ನಿಜಗೃಹಾತ್ತೂರ್ಣಂ ವಿನಿರ್ಗಮ್ಯತಾಮ್ ॥೧॥

೧. ವೇದವನ್ನು ನಿತ್ಯವೂ ಅಧ್ಯಯನಮಾಡಬೇಕು. ಅದರಲ್ಲಿ ಹೇಳಿರುವ ಕರ್ಮವನ್ನು ಚೆನ್ನಾಗಿ ಮಾಡಬೇಕು. ಆ (ಕರ್ಮಾನುಷ್ಠಾನ)ದಿಂದ ಈಶ್ವರನನ್ನು ಅರ್ಚನೆಮಾಡಬೇಕು, ಕಾಮ್ಯ(ಕರ್ಮ)ದಲ್ಲಿ ಮನಸ್ಸಿಡುವದನ್ನು ಬಿಡಬೇಕು. ಪಾಪರಾಶಿಯನ್ನು ತೊಳೆದುಹಾಕಬೇಕು.[2] ಸಂಸಾರಸುಖದಲ್ಲಿರುವ ದೋಷ

1. ಇದನ್ನು "ಸಾಧನಸೋಪಾನಪಂಚಕ"ವೆಂದೂ ಕರೆಯುತ್ತಾರೆ. ಸಾಧನಗಳನ್ನು ಇಲ್ಲಿ ಮೆಟ್ಟಿಲುಮೆಟ್ಟಿಲಾಗಿ ಮೇಲುಮೇಲಕ್ಕೇರುವ ರೀತಿಯಲ್ಲಿ ಉಪದೇಶಿಸಿದೆ.

2. ಕಾಮ್ಯಕರ್ಮದಿಂದ ಶುಭಫಲವೂ ಪಾಪಕರ್ಮದಿಂದ ಕೆಟ್ಟಫಲವೂ ಆಗುತ್ತವೆ ; ಅವೆರಡನ್ನೂ ಬಿಟ್ಟು ನಿತ್ಯಕರ್ಮವನ್ನು ಪರಮೇಶ್ವರಾರ್ಪಣಬುದ್ಧಿಯಿಂದ ಫಲಾಸಕ್ತಿಯಿಲ್ಲದೆ ಮಾಡಬೇಕು.

ವನ್ನು[1] ಮನಸ್ಸಿನಲ್ಲಿ ಹೊರಳಾಡಿಸುತ್ತಿರಬೇಕು. ಪರಮಾತ್ಮಪ್ರಾಪ್ತಿಯನ್ನು ನಿಶ್ಚಯ ಪೂರ್ವಕವಾಗಿ ಬಯಸಬೇಕು. ತನ್ನ ಮನೆಯಿಂದ ಬೇಗನೆ ಹೊರಹೊರಡ ಬೇಕು.

**ಸಙ್ಗಃ ಸತ್ಸು ವಿಧೀಯತಾಂ ಭಗವತೋ ಭಕ್ತಿರ್ದೃಢಾಽಧೀಯತಾಂ**
**ಶಾನ್ತ್ಯಾದಿಃ ಪರಿಚೀಯತಾಂ ದೃಢತರಂ ಕರ್ಮಾಽಽಶು ಸಂತ್ಯಜ್ಯತಾಮ್ ।**
**ಸದ್ವಿದ್ವಾನುಪಸೃಪ್ಯತಾಂ ಪ್ರತಿದಿನಂ ತತ್ಪಾದುಕಾ ಸೇವ್ಯತಾಂ**
**ಬ್ರಹ್ಮೈಕಾಕ್ಷರಮರ್ಥ್ಯತಾಂ ಶ್ರುತಿಶಿರೋವಾಕ್ಯಂ ಸಮಾಕರ್ಣ್ಯತಾಮ್** ||೨||

೨. ಸತ್ಪುರುಷರಲ್ಲಿ ಸಂಗವನ್ನು ಮಾಡಬೇಕು. ಭಗವಂತನಲ್ಲಿ ಗಟ್ಟಿಯಾದ ಭಕ್ತಿಯನ್ನು ಇಡಬೇಕು. ಶಾಂತಿ ಮುಂತಾದ ಸಾಧನಗಳ[2] ಪರಿಚಯವನ್ನು ಗಟ್ಟಿಯಾಗಿಮಾಡಿಕೊಳ್ಳಬೇಕು. ಕರ್ಮವನ್ನು ಬೇಗನೆ ಬಿಟ್ಟುಬಿಡಬೇಕು.[3] ಸದ್ಬ್ರಹ್ಮವನ್ನರಿತುಕೊಂಡಿರುವಾತನನ್ನು[4] ಬಳಿಸಾರಬೇಕು. ಪ್ರತಿದಿನವೂ ಆತನ ಪಾದವನ್ನು ಸೇವಿಸಬೇಕು, ಓಂಕಾರವೆಂಬ ಬ್ರಹ್ಮಾಕ್ಷರವನ್ನೇ ತಿಳಿದುಕೊಳ್ಳುವದಕ್ಕೆ ಬಯಸಬೇಕು. ವೇದಾಂತವಾಕ್ಯವನ್ನು ಚೆನ್ನಾಗಿ ಶ್ರವಣಮಾಡಬೇಕು.

**ವಾಕ್ಯಾರ್ಥಶ್ಚ ವಿಚಾರ್ಯತಾಂ ಶ್ರುತಿಶಿರಃಪಕ್ಷಃ ಸಮಾಶ್ರೀಯತಾಂ**
**ದುಸ್ತರ್ಕಾತ್ಸುವಿರಮ್ಯತಾಂ ಶ್ರುತಿಮತಸ್ತರ್ಕೋಽನುಸಂಧೀಯತಾಮ್ ।**
**ಬ್ರಹ್ಮಾಸ್ಮೀತಿ ವಿಭಾವ್ಯತಾಮಹರಹರ್ಗರ್ವಃ ಪರಿತ್ಯಜ್ಯತಾಂ**
**ದೇಹೇಽಹಂಮತಿರುಜ್ಝ್ಯತಾಂ ಬುಧಜನೈರ್ವಾದಃ ಪರಿತ್ಯಜ್ಯತಾಮ್** ||೩||

೩. ವಾಕ್ಯಾರ್ಥವನ್ನು ವಿಚಾರಮಾಡಬೇಕು.[5] ವೇದಾಂತಪಕ್ಷವನ್ನು ಆಶ್ರಯಿಸಬೇಕು. ಕುತರ್ಕವನ್ನು ಬಿಟ್ಟುಬಿಡಬೇಕು ; ಶ್ರುತಿಮತವಾದ ತರ್ಕವನ್ನು[6] ಮನಸ್ಸಿನಲ್ಲಿ ಹೊರಳಾಡಿಸಬೇಕು. ಬ್ರಹ್ಮವೇ ಆಗಿರುವೆನು ಎಂದು

1. ಸಾಧನದಿಂದ ಆಯಾಸಪಟ್ಟು ಪಡೆದುಕೊಳ್ಳಬೇಕು. ಆದು ಅನಿತ್ಯ, ದುಃಖದಲ್ಲಿ ಪರ್ಯವಸಾನವಾಗುತ್ತದೆ ಎಂಬಿದು ಆದರಲ್ಲಿರುವ ದೋಷ.
2. ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ – ಎಂಬಿವುಗಳ.
3. ಸಂನ್ಯಾಸಮಾಡಬೇಕು.
4. ಬ್ರಹ್ಮನಿಷ್ಠನನ್ನು.
5. ವಾಕ್ಯಾರ್ಥವನ್ನು ವಿಚಾರಿಸುವದೆಂದರೆ ಅದರ ಪದಗಳಿಗೆ ಅರ್ಥವೇನೆಂಬುದನ್ನು ನಿರ್ಣಯಿಸುವದಕ್ಕೆ ಪ್ರಯತ್ನಿಸುವದು. ಉದಾಹರಣೆಗೆ 'ತತ್ತ್ವಮಸಿ' ಎಂಬ ವಾಕ್ಯದಲ್ಲಿ ತತ್ಪದಕ್ಕೆ ಭಾವವಿಕಾರಗಳಿಲ್ಲದ ದ್ರವ್ಯಧರ್ಮಗಳಿಲ್ಲದ ಚೈತನ್ಯರೂಪವೆಂಬುದು ಅರ್ಥ ; ತ್ವಂಪದಕ್ಕೆ ದೇಹಾದಿಸಾಕ್ಷಿಯಾದ ಚೈತನ್ಯವೆಂದು ಅರ್ಥ – ಎಂದು ವಿವೇಚಿಸಿಕೊಳ್ಳುವದು.
6. ಅನುಭವಾನುಸಾರಿಯಾದ ತರ್ಕ.

ದಿನದಿನವೂ ಚಿಂತಿಸುತ್ತಿರಬೇಕು. ಗರ್ವವನ್ನು ಬಿಡಬೇಕು, ದೇಹದಲ್ಲಿ ನಾನೆಂಬ ಬುದ್ಧಿಯನ್ನು ಬಿಡಬೇಕು. ವಿದ್ವಾಂಸರೊಡನೆ ವಾದವನ್ನು ಮಾಡದೆ ಇರಬೇಕು.

**ಕ್ಷುದ್ವ್ಯಾಧಿಶ್ಚ ಚಿಕಿತ್ಸ್ಯತಾಂ ಪ್ರತಿದಿನಂ ಭಿಕ್ಷೌಷಧಂ ಭುಜ್ಯತಾಂ**
**ಸ್ವಾದ್ವನ್ನಂ ನ ತು ಯಾಚ್ಯತಾಂ ವಿಧಿವಶಾತ್ಪ್ರಾಪ್ತೇನ ಸಂತುಷ್ಯತಾಮ್ ।**
**ಶೀತೋಷ್ಣಾದಿ ವಿಷಹ್ಯತಾಂ ನ ತು ವೃಥಾವಾಕ್ಯಂ ಸಮುಚ್ಚಾರ್ಯತಾ-**
**ಮೌದಾಸೀನ್ಯಮಭೀಪ್ಸ್ಯತಾಂ ಜನಕೃಪಾನೈಷ್ಠುರ್ಯಮುತ್ಸೃಜ್ಯತಾಮ್ ॥೪॥**

೪. ಹಸಿವೆಂಬ ರೋಗಕ್ಕೆ ಚಿಕಿತ್ಸೆಮಾಡಬೇಕು ; ಪ್ರತಿದಿನವೂ ಭಿಕ್ಷೆ ಎಂಬ ಔಷಧವನ್ನು ಭೋಜನಮಾಡಬೇಕು. ರುಚಿಯಾದ ಅನ್ನವನ್ನು ಬಯಸಬಾರದು, ದೈವವಶದಿಂದ ಪ್ರಾಪ್ತವಾದದ್ದರಿಂದ ತೃಪ್ತಿಯನ್ನು ಹೊಂದಬೇಕು. ಚಳಿ, ಸೆಕೆ-ಮುಂತಾದದ್ದನ್ನು ಸಹಿಸಿಕೊಳ್ಳಬೇಕು. ವ್ಯರ್ಥವಾದ ಮಾತನ್ನು ಆಡಬಾರದು. ಔದಾಸೀನ್ಯವನ್ನೇ ಬಯಸಬೇಕು. ಜನರಲ್ಲಿ ಕೃಪೆ, ನಿಷ್ಠುರತೆ – ಇವನ್ನು ಬಿಡಬೇಕು.

**ಏಕಾನ್ತೇ ಸುಖಮಾಸ್ಯತಾಂ ಪರತರೇ ಚೇತಃ ಸಮಾಧೀಯತಾಂ**
**ಪೂರ್ಣಾತ್ಮಾ ಸುಸಮೀಕ್ಷ್ಯತಾಂ ಜಗದಿದಂ ತದ್ಬಾಧಿತಂ ದೃಶ್ಯತಾಮ್ ।**
**ಪ್ರಾಕ್ಕರ್ಮಪ್ರವಿಲಾಪ್ಯತಾಂ ಚಿತಿಬಲಾನ್ನಾಪ್ಯುತ್ತರೈಃ ಶ್ಲಿಷ್ಯತಾಂ**
**ಪ್ರಾರಬ್ಧಂ ತ್ವಿಹ ಭುಜ್ಯತಾಮಥ ಪರಬ್ರಹ್ಮಾತ್ಮನಾ ಸ್ಥೀಯತಾಮ್ ॥೫॥**

೫. ಏಕಾಂತದಲ್ಲಿ ಸುಖದಿಂದ ಕುಳಿತುಕೊಳ್ಳಬೇಕು. ಎಲ್ಲಕ್ಕೂ ಹೆಚ್ಚಿನ ಪರಮಾತ್ಮನಲ್ಲಿ ಚಿತ್ತವನ್ನು ನೆಲೆನಿಲ್ಲಿಸಿಕೊಳ್ಳಬೇಕು. ಪೂರ್ಣಾತ್ಮನನ್ನು[1] ಕಂಡುಕೊಳ್ಳಬೇಕು ; ಈ ಜಗತ್ತನ್ನು ಅದರಿಂದ ಬಾಧಿತವಾದದ್ದನ್ನು ಕಾಣಬೇಕು. ಹಿಂದಿನ ಸಂಚಿತಕರ್ಮಗಳನ್ನು ನಾಶಗೊಳಿಸಿಕೊಳ್ಳಬೇಕು, ಜ್ಞಾನಬಲದಿಂದ ಆಗಾಮಿ ಕರ್ಮಗಳ ಅಂಟನ್ನು ನಿವಾರಿಸಿಕೊಳ್ಳಬೇಕು ; ಪ್ರಾರಬ್ಧಕರ್ಮದ ಫಲವನ್ನಾದರೆ ಈ ಜನ್ಮದಲ್ಲಿಯೇ ಭೋಗಿಸಿ ಮುಗಿಸಬೇಕು. ಆಮೇಲೆ ಪರಬ್ರಹ್ಮನಾಗಿಯೇ ನಿಲ್ಲಬೇಕು.

**ಯಃ ಶ್ಲೋಕಪಞ್ಚಕಮಿದಂ ಪಠತೇ (?) ಮನುಷ್ಯಃ**
**ಸಂಚಿನ್ತಯತ್ಯನುದಿನಂ ಸ್ಥಿರತಾಮುಪೇತ್ಯ ।**
**ತಸ್ಯಾಶು ಸಂಸೃತಿದವಾನಲತೀವ್ರಘೋರ-**
**ತಾಪಃ ಪ್ರಶಾನ್ತಿಮುಪಯಾತಿ ಚಿತಿಪ್ರಸಾದಾತ್ ॥೬॥**

1. ಅದ್ವೈತಾತ್ಮನನ್ನು ಎಂದರ್ಥ. ಆತ್ಮನು ಯಾವಾಗಲೂ ಪೂರ್ಣನೇ ಅದ್ವಿತೀಯನೇ ಆಗಿದ್ದರೂ ಅಜ್ಞಾನಕಲ್ಪಿತವಾದ ದ್ವೈತದಿಂದ ಪರಿಚ್ಛಿನ್ನನಾಗಿರುವಂತೆ ತೋರುತ್ತಿರುತ್ತಾನೆ.

೬. ಯಾವ ಮನುಷ್ಯನು ಈ ಐದು ಶ್ಲೋಕಗಳನ್ನು ಪಠಿಸುತ್ತಿರುವನೋ, ಮತ್ತು ಸ್ಥೈರ್ಯವನ್ನು ಹೊಂದಿ ಇದರ ಅಭಿಪ್ರಾಯವನ್ನು ದಿನದಿನವೂ ಮನನ ಮಾಡುತ್ತಿರುವನೋ ಅವನಿಗೆ ಸಂಸಾರವೆಂಬ ದಾವಾಗ್ನಿಯ ಬಲವಾದ ಘೋರ ತಾಪವು ಚೈತನ್ಯರೂಪನಾದ ಪರಮೇಶ್ವರನ ಪ್ರಸಾದದಿಂದ ಶಾಂತವಾಗುವದು.

ಇತಿ ಉಪದೇಶಪಞ್ಚಕಮ್

# ಸ್ವರೂಪಾನುಸಂಧಾನ

ತಪೋಯಜ್ಞದಾನಾದಿಭಿಃ ಶುದ್ಧಬುದ್ಧಿ–
ರ್ವಿರಕ್ತೋ ನೃಪಾದೇಃ ಪದೇ ತುಚ್ಛಬುದ್ಧ್ಯಾ ।
ಪರಿತ್ಯಜ್ಯ ಸರ್ವಂ ಯದಾಪ್ನೋತಿ ತತ್ತ್ವಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೧॥

೧. ತಪಸ್ಸು, ಯಜ್ಞ, ದಾನ– ಮುಂತಾದವುಗಳಿಂದ[1] ಚಿತ್ತಶುದ್ಧಿಯನ್ನು ಹೊಂದಿ ರಾಜಪದವಿಯೇ ಮುಂತಾದದ್ದರಲ್ಲಿಯೂ ಅದು ತುಚ್ಛವೆಂಬ ಬುದ್ಧಿಯಿಂದ ವಿರಕ್ತನಾಗಿ ಎಲ್ಲವನ್ನೂ ಬಿಟ್ಟು ಯಾವ ತತ್ತ್ವವನ್ನು ಪಡೆದುಕೊಳ್ಳುತ್ತಾರೋ ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ದಯಾಲುಂ ಗುರುಂ ಬ್ರಹ್ಮನಿಷ್ಠಂ ಪ್ರಶಾನ್ತಂ
ಸಮಾರಾಧ್ಯ ಮತ್ಯಾ ವಿಚಾರ್ಯ ಸ್ವರೂಪಮ್ ।
ಯದಾಪ್ನೋತಿ ತತ್ತ್ವಂ ನಿದಿಧ್ಯಾಸ್ಯ ವಿದ್ವಾನ್
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೨॥

೨. ಕರುಣಾಶಾಲಿಯಾದ ಬ್ರಹ್ಮನಿಷ್ಠನೂ ಅತ್ಯಂತಶಾಂತನೂ ಆಗಿರುವ ಗುರುವನ್ನು ಚೆನ್ನಾಗಿ ಸೇವನೆಮಾಡಿ (ಅವನ ವಾಕ್ಯವನ್ನು ಶ್ರವಣಮಾಡಿ)[2] ಮನನದಿಂದ (ಆತ್ಮ)ರೂಪವನ್ನು ವಿಚಾರಮಾಡಿ, ನಿದಿಧ್ಯಾಸನಮಾಡಿ[3] ಅರಿತು

1. ಮುಂತಾದವು ಎಂದರೆ ವೇದಾಧ್ಯಯನ. ಈ ಸಾಧನಗಳಿಂದ ಆತ್ಮಜ್ಞಾನದಲ್ಲಿ ಇಚ್ಛೆಯುಂಟಾಗುವದೆಂದು ಬೃಹದಾರಣ್ಯಕ (೪–೪–೨೨)ರಲ್ಲಿದೆ.

2. ಶ್ರವಣವನ್ನು ಹೇಳುವ ವಾಕ್ಯವು ಮೂಲದಲ್ಲಿಲ್ಲದಿದ್ದರೂ ಸೇರಿಸಿಕೊಳ್ಳಬೇಕು.

3. ಆತ್ಮನಲ್ಲಿಯೇ ಮನಸ್ಸನ್ನು ಏಕಾಗ್ರ್ಯಗೊಳಿಸಿ ನೋಡಿ.

ಕೊಂಡವನು ಯಾವ ತತ್ತ್ವವನ್ನು ಪಡೆದುಕೊಳ್ಳುತ್ತಾನೋ ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ಯದಾನನ್ದರೂಪಂ ಪ್ರಕಾಶಸ್ವರೂಪಂ
ನಿರಸ್ತಪ್ರಪಞ್ಚಂ ಪರಿಚ್ಛೇದಹೀನಮ್ ।
ಅಹಂಬ್ರಹ್ಮವೃತ್ತ್ಯೈಕಗಮ್ಯಂ ತುರೀಯಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೩॥

೩. ಯಾವದು ಆನಂದಸ್ವರೂಪವೇ ಆಗಿದೆಯೋ, ಚೈತನ್ಯಪ್ರಕಾಶರೂಪವಾಗಿದೆಯೋ, ಯಾವ ಪ್ರಪಂಚವೂ[1] ಇಲ್ಲದ್ದಾಗಿರುವದೋ, ಯಾವ ಪರಿಚ್ಛೇದವೂ ಇಲ್ಲದ್ದಾಗಿರುವದೋ[2] ನಾನು ಬ್ರಹ್ಮವು – ಎಂಬ ವೃತ್ತಿಯೊಂದರಿಂದಲೇ ತಿಳಿಯತಕ್ಕದ್ದೋ[3] ನಾಲ್ಕನೆಯದೋ[4], ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ಯದಜ್ಞಾನತೋ ಭಾತಿ ವಿಶ್ವಂ ಸಮಸ್ತಂ
ವಿನಷ್ಟಂ ಚ ಸದ್ಯೋ ಯದಾತ್ಮಪ್ರಬೋಧೇ ।
ಮನೋವಾಗತೀತಂ ವಿಶುದ್ಧಂ ವಿಮುಕ್ತಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೪॥

೪. ಯಾವದನ್ನು ಅರಿತುಕೊಳ್ಳದ್ದರಿಂದ ಸಮಸ್ತಜಗತ್ತೂ ಕಾಣುತ್ತಿರುವದೋ[5] ಯಾವದೇ ತನ್ನ ಆತ್ಮನೆಂದು ಅರಿತುಕೊಂಡರೆ ಕೂಡಲೆ ಕಾಣದೆ ಹೋಗುವದೋ[6] ಮನೋವಾಕ್ಕುಗಳನ್ನು ಮೀರಿರುವ[7] ವಿಶುದ್ಧವಾಗಿರುವ[8], ವಿಮುಕ್ತವಾಗಿರುವ[9], ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

1. ನಾನಾತ್ವವು, ಜೀವಜಡಗಳೆಂಬ ವಿಭಾಗವು.
2. ದೇಶ, ಕಾಲ, ವಸ್ತು – ಇವುಗಳಿಂದಾಗಿರುವ ಎಲ್ಲೆಕಟ್ಟಿಲ್ಲದ್ದೋ.
3. ನಾನು ಬ್ರಹ್ಮವು ಎಂಬ ಅನುಭವದಿಂದಾಗಿರುವ ವೃತ್ತಿಯಿಂದಲೇ ತಿಳಿಯತಕ್ಕದ್ದೋ, ಯಾವದೊಂದು ವೃತ್ತಿಗೂ ವಿಷಯವಾಗುವದಿಲ್ಲವೋ ಎಂದರ್ಥ.
4. ಜಾಗ್ರತ್ಸ್ವಪ್ನಸುಷುಪ್ತಿಗಳ ಸಂಬಂಧವಿಲ್ಲದ ಆತ್ಮನೋ.
5. ಬ್ರಹ್ಮಜ್ಞಾನವಿಲ್ಲದ್ದರಿಂದಲೇ ಅದನ್ನು ಜಗತ್ತೆಂದು ತಪ್ಪಾಗಿ ತಿಳಿದಿರುತ್ತಾರೆ.
6. ಅದು ಬ್ರಹ್ಮದಲ್ಲಿಯೇ ಅಡಕವಾದದ್ದೆಂಬ ಅರಿವಾಗುವದೋ.
7. ಮನೋವಾಕ್ಕುಗಳನ್ನು ನೋಡುವ ಸಾಕ್ಷಿಯಾದ್ದರಿಂದ ಅವಕ್ಕೆ ವಿಷಯವಲ್ಲದ.
8. ದ್ವೈತದ ಅಂಟಿಲ್ಲದ. 9. ಯಾವ ಕರ್ಮದ ಬಂಧವೂ ಇಲ್ಲದ.

ನಿಷೇಧೇ ಕೃತೇ ನೇತಿನೇತೀತಿ ವಾಕ್ಯೈಃ
ಸಮಾಧಿಸ್ಥಿತಾನಾಂ ಯದಾಭಾತಿ ಪೂರ್ಣಮ್ ।
ಅವಸ್ಥಾತ್ರಯಾತೀತಮದ್ವೈತಮೇಕಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೫॥

೫. ನೇತಿ, ನೇತಿ (ಹೀಗಲ್ಲ, ಹಾಗಲ್ಲ) ಎಂಬ ವಾಕ್ಯಗಳಿಂದ ಅಲ್ಲಗಳೆಯಲಾಗಿ,[1] ಸಮಾಧಿಯಲ್ಲಿರುವವರಿಗೆ[2] ಯಾವ ಪೂರ್ಣವು ತೋರುವದೋ ಯಾವದು ಮೂರವಸ್ಥೆಗಳನ್ನೂ ಮೀರಿದ ತನಗೆರಡನೆಯದಿಲ್ಲದ ಒಂದೇ ಆಗಿರುವದೋ[3] ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ಯದಾನನ್ದಲೇಶೈಃ ಸಮಾನನ್ದಿ ವಿಶ್ವಂ
ಯದಾಭಾನಸತ್ತ್ವೇ[4] ತದಾಭಾತಿ ಸರ್ವಮ್ ।
ಯದಾಲೋಕನೇ ರೂಪಮನ್ಯತ್ಸಮಸ್ತಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೬॥

೬. ಯಾವದರ ಆನಂದದ ಲೇಶಗಳಿಂದ ಎಲ್ಲವೂ ಆನಂದವುಳ್ಳದ್ದಾಗಿರುವದೋ[5], ಯಾವದರ ಬೆಳಕು[6] ಇರುವದರಿಂದಲೇ ಎಲ್ಲವೂ ತೋರುತ್ತಿರುವದೋ, ಯಾವದರ ನೋಟಕ್ಕೆ ಮಿಕ್ಕದ್ದೆಲ್ಲವೂ ರೂಪವಾಗಿರುವದೋ[7] ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ಅನನ್ತಂ ಮಹನ್ನಿ[8]ರ್ವಿಕಲ್ಪಂ ನಿರೀಹಂ
ಶಿವಂ ಸಙ್ಗಹೀನಂ ಯದೋಙ್ಕಾರಗಮ್ಯಮ್ ।
ನಿರಾಕಾರಮತ್ಯುಜ್ಜ್ವಲಂ ಮೃತ್ಯುಹೀನಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೭॥

1. ಬ್ರಹ್ಮವಸ್ತುವಿನಲ್ಲಿ ಯಾವ ವಿಶೇಷಗಳೂ ಇಲ್ಲದ್ದರಿಂದ ಹೀಗಲ್ಲ, ಹಾಗಲ್ಲ – ಎಂದೇ ಶ್ರುತಿ ಅದನ್ನು ತಿಳಿಸುತ್ತಿದೆ.
2. ಅದರಲ್ಲಿಯೇ ನೆಲೆನಿಂತ ಮನಸ್ಸುಳ್ಳವರಿಗೆ.
3. ಬ್ರಹ್ಮವು ಒಂದು, ಎರಡು – ಎಂಬ ಸಂಖ್ಯೆಗೆ ತಕ್ಕದ್ದಲ್ಲ, ಏಕೆಂದರೆ ಅದು ದೇಶಕಾಲಗಳಲ್ಲಿಲ್ಲ.
4. 'ಯದಾಭಾತಿ ಸತ್ತ್ವೇ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
5. ಹೀಗೆಂದು ಬೃಹದಾರಣ್ಯಕ (೪–೩–೬)ರಲ್ಲಿದೆ.
6. ಚೈತನ್ಯವು. 7. ವಿಷಯವಾಗಿರುವದೋ.
8. 'ವಿಭುಂ' ಎಂಬ ಅಚ್ಚಿನ ಪಾಠವು ಸರಿಯಲ್ಲ; ಅದನ್ನು ಹೀಗೆ ತಿದ್ದಿಕೊಂಡಿದೆ.

೭. ಕೊನೆಗಾಣದ, ಮಹತ್ತಾಗಿ (ಎಲ್ಲವನ್ನೂ ವ್ಯಾಪಿಸಿಕೊಂಡಿ)ರುವ, ಅಂಥದ್ದಿಂಥದ್ದೆಂಬ ವಿಕಲ್ಪವಿಲ್ಲದ, ನಿಷ್ಕ್ರಿಯವಾದ, ಮಂಗಲಕರವಾದ, ಮತ್ತೊಂದರ ಅಂಟಿಲ್ಲದ, ಓಂಕಾರದಿಂದಲೇ ತಿಳಿಯಬರುವ, ಯಾವ ಆಕಾರವೂ ಇಲ್ಲದ, ಅತಿಪ್ರಕಾಶವಾದ, ನಾಶವಿಲ್ಲದ, ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುವೆನು.

ಯದಾನನ್ದಸಿನ್ಧೌ ನಿಮಗ್ನಃ ಪುಮಾನ್ ಸ್ಯಾ-
ದವಿದ್ಯಾವಿಲಾಸಃ ಸಮಸ್ತಃ ಪ್ರಪಞ್ಚಃ ।
ತದಾ ನಸ್ಫುರತ್ಯದ್ಭುತಂ ಯನ್ನಿನಿಮಿತ್ತಂ
ಪರಂ ಬ್ರಹ್ಮ ನಿತ್ಯಂ ತದೇವಾಹಮಸ್ಮಿ ॥೮॥

೮. ಯಾವ ಆನಂದಸಾಗರದಲ್ಲಿ ಮುಳುಗಿದವನೇ ಪುರುಷನಾಗುವನೋ, ಅವಿದ್ಯಾಕಾರ್ಯವಾದ ಅದ್ಭುತವಾದ ಸಮಸ್ತಪ್ರಪಂಚವೂ ಆಗ ಯಾವ ನಿಮಿತ್ತದಿಂದ ತೋರದೆ ಹೋಗುವದೋ, ಆ ನಿತ್ಯವಾದ ಪರಬ್ರಹ್ಮವೇ ನಾನಾಗಿರುತ್ತೇನೆ.

ಸ್ವರೂಪಾನುಸಂಧಾನರೂಪಾಂ ಸ್ತುತಿಂ ಯಃ
ಪಠೇದಾದರಾದ್ಭಕ್ತಿಭಾವೋ ಮನುಷ್ಯಃ ।
ಶೃಣೋತೀಹ ವಾ ನಿತ್ಯಮುದ್ಯುಕ್ತಚಿತ್ತೋ
ಭವೇದ್ವಿಷ್ಣುರತ್ರೈವ ವೇದಪ್ರಮಾಣಾತ್ ॥೯॥

೯. ಸ್ವರೂಪದ ಅನುಸಂಧಾನದ ರೂಪವಾಗಿರುವ ಈ ಸ್ತೋತ್ರವನ್ನು ಈ ಲೋಕದಲ್ಲಿ ಭಕ್ತಿಭಾವದಿಂದೊಡಗೂಡಿ ಯಾವ ಮನುಷ್ಯನು ಆದರದಿಂದ ಹೇಳುವನೋ ಅಥವಾ ನಿತ್ಯವೂ ತಾತ್ಪರ್ಯವುಳ್ಳ ಚಿತ್ತದಿಂದ ಕೇಳುವನೋ, ಅವನು ಇಲ್ಲಿಯೇ ವಿಷ್ಣುವಾಗುವನು. ಏಕೆಂದರೆ ಹಾಗೆಂದು ವೇದಪ್ರಮಾಣವಿದೆ.

**ಇತಿ ಸ್ವರೂಪಾನುಸಂಧಾನಮ್**

# ಶ್ಲೋಕಾನುಕ್ರಮಣಿಕೆ

## ಯತಿಪಂಚಕ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ದೇಹಾದಿಭಾವಂ | ೩ | ವೇದಾನ್ತವಾಕ್ಯೇಷು | ೧ |
| ಪಞ್ಚಾಕ್ಷರಂ | ೫ | ಸ್ವಾನನ್ದಭಾವೇ | ೪ |
| ಮೂಲಂ ತರೋಃ ಕೇವಲಮ್ | ೨ | | |


## ಮಾಯಾಪಂಚಕ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅಪಗತಗುಣವರ್ಣಜಾತಿ | ೪ | ಶ್ರುತಿಶತನಿಗಮಾನ್ತಶೋಧಕಾನಪಿ | ೨ |
| ನಿರುಪಮನಿತ್ಯನಿರಂಶಕೇ | ೧ | ಸುಖಚಿದಖಣ್ಡಬೋಧಮದ್ವಿತೀಯಮ್ | ೩ |
| ವಿಧಿಹರಿಹರವಿಭೇದಮ್ | ೫ | | |


## ನಿರ್ವಾಣಮಂಜರಿ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅಹಂ ನಾಮರೋ ನೈವ | ೧ | ಯತಃ ಕಾಲಮೃತ್ಯುರ್ಬಿಭೇತಿ | ೧೧ |
| ಅಹಂ ನೈವ ಬಾಲೋ | ೨ | ಯತೋऽಹಂ ನ ಬುದ್ಧಿಃ | ೭ |
| ಅಹಂ ನೈವ ಮನ್ತಾ | ೪ | ಯದನ್ತರ್ಬಹಿರ್ವ್ಯಾಪಕಮ್ | ೯ |
| ಅಹಂ ನೈವ ಮೇಯಃ | ೩ | ಯದರ್ಕೇನ್ದುವಿದ್ಯುತ್ಪ್ರಭಾಜಾಲ– | ೦ |
| ನ ಮೇ ಲೋಕಯಾತ್ರಾ | ೫ | ಯದಾಕಾಶವತ್ಸರ್ವಗಮ್ | ೧೨ |
| ನಿದಾನಂ ಯದಜ್ಞಾನಕಾರ್ಯಸ್ಯ | ೬ | ಯದಾಸೀದ್ವಿಲಾಸಾದ್ವಿಕಾರೋ | ೮ |


## ಬ್ರಹ್ಮಜ್ಞಾನಾವಳೀಮಾಲೆ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅನ್ತರ್ಜ್ಯೋತಿರ್ಬಹಿರ್ಜ್ಯೋತಿಃ | ೧೭ | ನಿತ್ಯಶುದ್ಧವಿಮುಕ್ತೋऽಹಮ್ | ೩ |
| ಅನ್ತರ್ಯಾಮಿಸ್ವರೂಪೋऽಹಮ್ | ೧೧ | ನಿತ್ಯೋऽಹಂ ನಿರವದ್ಯೋऽಹಮ್ | ೪ |
| ಅಸಙ್ಗೋऽಹಮಸಙ್ಗೋऽಹಮ್ | ೨ | ನಿರಾಧಾರಸ್ವರೂಪೋऽಹಮ್ | ೧೫ |
| ಗುಣತ್ರಯವ್ಯತೀತೋऽಹಮ್ | ೧೦ | ನಿಷ್ಕಲೋऽಹಮ್ ನಿಷ್ಕ್ರಿಯೋऽಹಮ್ | ೧೨ |
| ತತ್ತ್ವಾತೀತಃ ಪರಾತ್ಮಾಹಮ್ | ೭ | ಪ್ರತ್ಯಕ್ಚೈತನ್ಯರೂಪೋऽಹಮ್ | ೬ |
| ತಾಪತ್ರಯವಿನಿರ್ಮುಕ್ತಃ | ೧೬ | ಪ್ರಜ್ಞಾನಘನ ಏವಾಹಮ್ | ೧೪ |
| ದ್ವನ್ದ್ವಾದಿಸಾಕ್ಷಿರೂಪೋऽಹಮ್ | ೧೩ | ಮಾಯಾ ತತ್ಕಾರ್ಯದೇಹಾದಿ | ೯ |
| ನಾನಾರೂಪವ್ಯತೀತೋऽಹಮ್ | ೮ | ಶುದ್ಧಚೈತನ್ಯರೂಪೋऽಹಮ್ | ೫ |
| | | ಸಕೃಚ್ಛ್ರವಣಮಾತ್ರೇಣ | ೧ |

## ಅನಾತ್ಮಶ್ರೀವಿಗರ್ಹಣ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅನ್ನೈರ್ವಿಪ್ರಾಸ್ತರ್ಪಿತಾಃ | ೬ | ಧಾತುರ್ಲೋಕಃ ಸಾಧಿತೋ ವಾ | ೧೬ |
| ಅಬ್ಧಿಃ ಪದ್ಭ್ಯಾಂ ಲಙ್ಘಿತೋ ವಾ | ೯ | ಬದ್ಧಾಃ ಸಮ್ಯಕ್ಪಾವಕಾದ್ಯಾಃ | ೧೧ |
| ಅನ್ಯೇ ತು ಮಾಯಿಕಜಗತ್ | ೧೮ | ಭೂಪೇನ್ದ್ರತ್ವಂ ಪ್ರಾಪ್ತಮುರ್ವ್ಯಾಮ್ | ೧೨ |
| ಕಾಮಾತಙ್ಕಃ ಖಣ್ಡಿತೋ ವಾ | ೧೪ | ಮನ್ತ್ರೈಃ ಸರ್ವಃ ಸ್ತಮ್ಭಿತೋ ವಾ | ೧೩ |
| ಕಾಯಃ ಕ್ಲಿಷ್ಟಶ್ಶೋಪವಾಸೈಃ | ೭ | ಮೋಹಧ್ವಾನ್ತಃ ಪೇಷಿತೋ ವಾ | ೧೫ |
| ಕೇಯೂರಾದ್ಯೈರ್ಭೂಷಿತೋ ವಾ | ೨ | ಯಸ್ಯೇದಂ ಹೃದಯೇ ಸಮ್ಯಕ್ | ೧೭ |
| ಕ್ಷ್ವೇಲಃ ಪೀತೋ ದುಗ್ಧವದ್ವಾ | ೧೦ | ಯುದ್ಧೇ ಶತ್ರುರ್ನಿರ್ಜಿತೋ ವಾ | ೭ |
| ಗೋತ್ರಂ ಸಮ್ಯಕ್ ಭೂಷಿತಂ ವಾ | ೫ | ಲಬ್ಧಾ ವಿದ್ಯಾ ರಾಜಮಾನ್ಯಾ | ೧ |
| ದೃಷ್ಟ್ವಾಽನಾನಾ ಚಾರುದೇಶಾಃ | ೩ | ಸ್ನಾತಂ ತೀರ್ಥೇ ಜಹ್ನುಜಾದೌ | ೪ |


## ತತ್ತ್ವೋಪದೇಶ


| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅತಸ್ತಯೋರ್ವಿರುದ್ಧಂ ತತ್ | ೩೯ | ಗತ್ವಾ ಗಾನ್ಧಾರದೇಶಂ ಸಃ | ೭೩ |
| ಅತೋ ಬ್ರಹ್ಮಾತ್ಮವಸ್ತ್ವೈಕ್ಯಮ್ | ೪೭ | ಗುರುರ್ಬ್ರಹ್ಮ ಸ್ವಯಂ ಸಾಕ್ಷಾತ್ | ೮೫ |
| ಅತೋ ಬ್ರಹ್ಮಾತ್ಮವಿಜ್ಞಾನಮ್ | ೭೮ | ಜನ್ಮಮೃತ್ಯುಜರಾದೋಷ | ೬೯ |
| ಅತೋ ಹಿ ತತ್ತ್ವಮಸ್ಯಾದಿ | ೨೧ | ತತ್ತ್ವಮೋಃ ಪದಯೋರೈಕ್ಯಮ್ | ೪೧ ೧/೨ |
| ಅತ್ರೈವ ಶೃಣು ವೃತ್ತಾನ್ತಮ್ | ೫೭ | ತತ್ತ್ವಂಪದಾರ್ಥಶುದ್ಧ್ಯರ್ಥಮ್ | ೧ |
| ಅದೃಶ್ಯೋ ರೂಪಹೀನಸ್ತ್ವಂ | ೩ | ತತ್ಪ್ರತ್ಯಕ್ಷಾತ್ಪರಿಜ್ಞಾತಮ್ | ೪೮ |
| ಅದ್ವಯಾನನ್ದಚಿನ್ಮಾತ್ರಃ | ೫೫ | ತಥಾ ಪದಾರ್ಥಯೋರೇವ | ೨೮ |
| ಅದ್ವಯಾನನ್ದರೂಪಾತ್ ತ್ವಾಮ್ | ೬೬ | ತಥಾಪಿ ಶಕ್ಯತೇ ನೈವ | ೪೪ |
| ಅದ್ವೈತಮೇವ ಸತ್ಯಂ ತ್ವಮ್ | ೫೦ | ತಥಾ ರಾಗಾದಿಭಿರ್ವರ್ಗೈಃ | ೬೪ |
| ಅನ್ತಃಕರಣಸಂಶುದ್ಧಾ | ೪೫ | ತಥೈವ ಪ್ರಕೃತೇ ತತ್ತ್ವ(ಮಸೀ) | ೪೦ |
| ಅಪೇಕ್ಷ್ಯತೇಽಖಿಲೈರ್ಮಾನೈಃ | ೨೦ | ತ್ರಿವಿಧಾ ಲಕ್ಷಣಾ ಜ್ಞೇಯಾ | ೩೨ |
| ಅವಿದ್ಯಾಭೂತಬನ್ಧಸ್ಯ | ೭೦ | ತ್ವಮಪ್ಯೇವಮನೇಕೇಷು | ೭೪ |
| ಆಚಾರ್ಯವಾನ್ ಪುರುಷೋ ವೇದ | ೪೬ | ದೇಹೇನ್ದ್ರಿಯಾದಿಧರ್ಮಾನ್ಯಃ | ೨೩ |
| ಆತ್ಮಾ ಪ್ರಕಾಶಮಾನೋಽಪಿ | ೪೩ | ದೇಹೇನ್ದ್ರಿಯಾದಿಸಾಕ್ಷೀ ಯಃ | ೨೪ |
| ಇತ್ಥಮೈಕ್ಯಾವಬೋಧೇನ | ೪೨ | ನ ತೇಷಾಂ ಸಮುದಾಯೋಽಸಿ | ೬ |
| ಇದಂತ್ವೇನೈವ ಯದ್ಭಾತಿ | ೧೭ | ನ ತ್ವಂ ದೇಹೋಽಸಿ | ೨ |
| ಈದೃಶಂ ತಾದೃಶಂ ನೈತತ್ | ೧೬ | ನ ಭವಾನಿನ್ದ್ರಿಯಾಣ್ಯೇಷಾಂ | ೪ |
| ಕರ್ತೃತ್ವಾದೀನಿ ಯಾನ್ಯಾಸನ್ | ೫೬ | ನ ನಿರೋಧೋ ನ ಚೋತ್ಪತ್ತಿಃ | ೮೧ |
| ಕ್ರಿಯಮಾಣೇ ವಿಲುಡನೇ | ೬೨ | ನ ಮನಸ್ತ್ವಂ ನ ವಾ ಪ್ರಾಣೋ | ೯ |
| ಕ್ಷುತ್ತೃಡ್ಭ್ಯಾಂ ಪೀಡಿತಃ ಪ್ರಾಣೋ | ೧೦ | | |

| ಪ್ರತೀಕ | ಶ್ಲೋಕ |
|---|---|
| ನ ಸಂಭವತಿ ಸಾಪ್ಯತ್ರ | ೩೬ |
| ನಾನಾರೂಪವತೀ ಶೋಧೇ | ೧೨ |
| ನಾನಾತ್ಮಾಭಿಮತಂ ನೈವ | ೮ |
| ನಾನ್ಯೈತಾನ್ಯೇಕರೂಪಸ್ತ್ವಮ್ | ೫ |
| ನಿಕ್ಷಿಪ್ತೋ ವಿಪಿನೇಽತೀವ | ೬೦ |
| ಪಣ್ಡಿತಸ್ತತ್ರ ಮೇಧಾವೀ | ೭೭ |
| ಪ್ರತ್ಯಕ್ತ್ವಂ ಸದ್ವಿತೀಯತ್ವಮ್ | ೩೦ |
| ಪ್ರತ್ಯೇಕಮಪಿ ತಾನ್ಯಾತ್ಮಾ | ೭ |
| ಪ್ರಮಾಣಂ ಬೋಧಯನ್ತಂ ತಮ್ | ೧೪ |
| ಪ್ರವೇಶಿತೋಽಸಿ ಸೃಷ್ಟೋಽಸಿ | ೬೮ |
| ಬದ್ಧ್ವಾ ದೇಶಾನ್ತರಂ ಚೋರೈಃ | ೫೯ |
| ಬನ್ಧಮುಕ್ತೌ ತಥಾ ದೇಶ– | ೬೩ |
| ಬಾಧ್ಯತ್ವಾನ್ನೈವ ಸದ್ದ್ವೈತಮ್ | ೫೨ |
| ಬ್ರಹ್ಮಾನನ್ದೇ ಪ್ರಮತ್ತಃ | ೬೫ |
| ಭಾವಾದ್ವೈತಂ ಸದಾ ಕುರ್ಯಾತ್ | ೮೭ |
| ಭಿನ್ನಪ್ರವೃತ್ತಿಹೇತುತ್ವೇ | ೨೭ |
| ಭೂತ್ವಾ ವಿಮುಕ್ತಬನ್ಧಸ್ತ್ವಮ್ | ೭೯ |
| ಮಾನಾನ್ತರೋಪರೋಧಾಚ್ಚ | ೩೧ |
| ಯಃ ಪೂರ್ವಮೇಕ ಏವಾಸೀತ್ | ೫೩ |
| ಯಥಾ ಗಾನ್ಧಾರದೇಶೀಯಃ | ೭೧ |
| ಯಾವದಾಯುಸ್ತ್ವಯಾ ವನ್ದ್ಯೋ | ೮೬ |
| ವರ್ಣಾಶ್ರಮಾಚಾರಪರೋ | ೭೫ |
| ವಸ್ತುತೋ ನಿಷ್ಪ್ರಪಞ್ಚೋಽಸಿ | ೮೦ |
| ವಾಚ್ಯಾರ್ಥಮಖಿಲಂ ತ್ಯಕ್ತ್ವಾ | ೩೩ |

| ಪ್ರತೀಕ | ಶ್ಲೋಕ |
|---|---|
| ವಾಚ್ಯಾರ್ಥಮಪರಿತ್ಯಜ್ಯ | ೩೫ |
| ವಾಚ್ಯಾರ್ಥಸ್ಯೈಕದೇಶಂ ಚ | ೩೭ |
| ವಾಚ್ಯಾರ್ಥಸ್ಯೈಕದೇಶಸ್ಯ | ೩೪ |
| ವಿಚಾರಣೀಯಾ ವೇದಾನ್ತಾಃ | ೮೪ |
| ವಿಧಿವತ್ಕೃತಸಂನ್ಯಾಸೋ | ೭೬ |
| ವಿಶ್ವಮಾತ್ಮಾನುಭವತಿ | ೧೫ |
| ವೇದಾನ್ತವಾಕ್ಯಸಂವೇದ್ಯ– | ೨೫ |
| ವ್ಯಾಲಾದಿದುಷ್ಟಸತ್ತ್ವೇಭ್ಯೋ | ೬೧ |
| ಶೋಧಿತೇ ತ್ವಂ ಪದಾರ್ಥೇ ಹಿ | ೨೨ |
| ಶುಕ್ತೌ ರೂಪ್ಯಂ ಮೃಷಾ ಯದ್ವತ್ | ೫೧ |
| ಶ್ರುತಿಸಿದ್ಧಾನ್ತಸಾರೋಽಯಂ | ೮೨ |
| ಸ ಚ ತೈರುಪದಿಷ್ಟಶ್ಚ | ೭೨ |
| ಸಚ್ಚಿದಾನನ್ದ ಏವ ತ್ವಮ್ | ೫೪ |
| ಸತಿ ದೇಹಾದ್ಯುಪಾಧೌ ಸ್ಯಾತ್ | ೧೯ |
| ಸತ್ಯಂ ಜ್ಞಾನಮನನ್ತಂ ಚ | ೧೮ |
| ಸರ್ವಜ್ಞತ್ವಪರೋಕ್ಷಾದೀನ್ | ೪೧ |
| ಸರ್ವದುಃಖನಿದಾನೇಷು | ೬೭ |
| ಸಾಕ್ಷಾತ್ಕೃತ್ವಾಽಪರಿಚ್ಛಿನ್ನಾ– | ೮೩ |
| ಸಾಮಾನಾಧಿಕರಣ್ಯಂ ಹಿ | ೨೬ |
| ಸುಖರೂಪಂ ಚಿದದ್ವೈತಮ್ | ೪೯ |
| ಸುಪ್ತೌ ದೇಹಾದ್ಯಭಾವೇಽಪಿ | ೧೩ |
| ಸುಪ್ತೌ ಲೀನಾಸ್ತಿಯಾ ಬೋಧೇ | ೧೧ |
| ಸೋಽಯಂ ವಿಪ್ರ ಇದಂ ವಾಕ್ಯಮ್ | ೩೮ |
| ಸ್ವಗೃಹೇ ಸ್ವಾಙ್ಗಣೇ ಸುಪ್ತಃ | ೫೮ |


## ಪ್ರೌಢಾನುಭೂತಿ


| ಪ್ರತೀಕ | ಶ್ಲೋಕ |
|---|---|
| ಆತ್ಮಾನಾತ್ಮವಿವೇಚನಾಪಿ | ೧೩ |
| ಕಿಂ ನ ಪ್ರಾಪ್ತಮಿತಃ ಪುರಾ | ೧೧ |
| ಗನ್ತವ್ಯಂ ಕಿಮಿಹಾಸ್ತಿ ಸರ್ವ | ೧೦ |
| ದೇಹೋ ನಾಹಮಚೇತನೋಽಯಮ್ | ೩ |
| ದ್ವೈತಂ ಮಯ್ಯಖಿಲಂ ಸಮುತ್ಥಿತಮ್ | ೨ |
| ನಾಹಂ ಖಾದಿರಪಿ ಸ್ಫುಟಮ್ | ೪ |
| ನಿತ್ಯಸ್ಫೂರ್ತಿಮಯೋಽಸ್ಮಿ ನಿರ್ಮಲ... | ೮ |
| ನಿರ್ದ್ವೈತೋಽಸ್ಮ್ಯಹಮಸ್ಮಿ | ೫ |
| ಪ್ರೌಢಪ್ರೌಢನಿಜಾನುಭೂತಿ | ೧ |

| ಪ್ರತೀಕ | ಶ್ಲೋಕ |
|---|---|
| ಮತ್ತೋಽನ್ಯನ್ನ ಹಿ ಕಿಞ್ಚಿದಸ್ತಿ | ೬ |
| ಮಯ್ಯಸ್ಮಿನ್ ಪರಮಾರ್ಥಕೇ | ೭ |
| ಯೋಽಹಂ ಪೂರ್ವಮಿತಃ ಪ್ರಶಾನ್ತ | ೧೫ |
| ವಸ್ತುಸ್ಥಿತ್ಯನುರೋಧತಃ | ೧೪ |
| ಶ್ರೋತವ್ಯಂ ಚ ಕಿಮಸ್ತಿ ಪೂರ್ಣ | ೧೨ |
| ಸತ್ತಾಚಿತ್ಸುಖರೂಪಮಸ್ತಿ | ೧೬ |
| ಸ್ವಾರಸ್ಯೈಕಸುಬೋಧಚಾರುಮನಸೇ | ೧೭ |
| ಸ್ವಾಪ್ನದ್ವೈತವದೇವ ಜಾಗ್ರತಮಪಿ | ೯ |

## ಉಪದೇಶಪಂಚಕ

| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಏಕಾನ್ತೇ ಸುಖಮಾಸ್ಯತಾಮ್ | ೫ | ವಾಕ್ಯಾರ್ಥಶ್ಚ ವಿಚಾರ್ಯತಾಮ್ | ३ |
| ಕ್ಷುದ್ವ್ಯಾಧಿಶ್ಚ ಚಿಕಿತ್ಸ್ಯತಾಮ್ | ೪ | ವೇದೋ ನಿತ್ಯಮಧೀಯತಾಮ್ | ೧ |
| ಯಃ ಶ್ಲೋಕಪಞ್ಚಕಮಿದಮ್ | ೬ | ಸಂಗಃ ಸತ್ಸು ವಿಧೀಯತಾಮ್ | ೨ |

## ಸ್ವರೂಪಾನುಸಂಧಾನ

| ಪ್ರತೀಕ | ಶ್ಲೋಕ | ಪ್ರತೀಕ | ಶ್ಲೋಕ |
|---|---|---|---|
| ಅನನ್ತಂ ಮಹನ್ನಿರ್ವಿಕಲ್ಪಂ | ೭ | ಯದಾನನ್ದರೂಪಂ ಪ್ರಕಾಶ... | ३ |
| ತಪೋಯಜ್ಞದಾನಾದಿಭಿಃ | ೧ | ಯದಾನನ್ದಲೇಶೈಃ ಸಮಾನನ್ದಿ | ೬ |
| ದಯಾಲುಂ ಗುರುಂ ಬ್ರಹ್ಮನಿಷ್ಠಮ್ | ೨ | ಯದಾನನ್ದಸಿನ್ಧೌ ನಿಮಗ್ನಃ | ೮ |
| ನಿಷೇಧೇ ಕೃತೇ ನೇತಿ ನೇತೀತಿ | ೫ | ಸ್ವರೂಪಾನುಸನ್ಧಾನರೂಪಮ್ | ೯ |
| ಯದಜ್ಞಾನತೋ ಭಾತಿ | ೪ | | |

# ಶಬ್ದಾನುಕ್ರಮಣಿಕೆ

ಹೀಗೆ ಗುರುತುಮಾಡಿರುವ ಶಬ್ದಗಳು ಹೊರತು ಉಳಿದ ಶಬ್ದಗಳಾವುವೂ ಭಾಷ್ಯಗ್ರಂಥಗಳಲ್ಲಿ ಪ್ರಯೋಗಿಸಲ್ಪಟ್ಟಿರುವದಿಲ್ಲ. ಇಲ್ಲಿ ಕೊಟ್ಟಿರುವ ಸಂಖ್ಯೆಗಳು ಆಯಾ ಶ್ಲೋಕಗಳ ಸಂಖ್ಯೆಗಳನ್ನು ಸೂಚಿಸುವವು.

## ಮಾಯಾಪಞ್ಚಕ

**ಅಖಣ್ಡಃ–**
ಪರಿಚ್ಛೇದವಿಲ್ಲದ, ೧.

**ಅಖಣ್ಡಬೋಧಃ–**
ಪರಿಚ್ಛಿನ್ನವಿಲ್ಲದ ಜ್ಞಾನ, ೩.

**ಶ್ರುತಿಶತನಿಗಮಾನ್ತ–**
ನೂರುಗಟ್ಟಲೆಯ ವೇದಾಂತರತ್ನಗಳು, ೨.

**ಸುಖಚಿತ್–**
ಆನಂದಜ್ಞಾನರೂಪನಾದ ಆತ್ಮ, ೩.

**ಹರಿಹರಭೇದಭಾವಾಃ–**
ವಿಷ್ಣುಶಿವರಿಗೆ ಭೇದವನ್ನು ಕಲ್ಪಿಸುವವರು, ೫.

## ನಿರ್ವಾಣಮಞ್ಜರಿ

**ಆದ್ಯನ್ತಮಧ್ಯಾನ್ತರಾಲಾನ್ತರಾಲ–ಪ್ರಕಾಶಾತ್ಮಕಮ್–**
ಮೊದಲು, ಕೊನೆ, ನಡುವೆ, ನಡುವೆಯ ನಡುವೆ –ಇವುಗಳನ್ನು ಬೆಳಗುವ, ೬.

**ಗತಾಙ್ಗತ್ರಯಾರ್ತಿಃ–**
ಮೂರು ಶರೀರಗಳ ಸಂಕಟವಿಲ್ಲದ, ೭.

**ಲಿಙ್ಗಭಙ್ಗಃ–**
ಸೂಕ್ಷ್ಮಶರೀರದ ನಾಶ, ೭.

**ಲೋಕಯಾತ್ರಾಪ್ರವಾಹಪ್ರವೃತ್ತಿಃ–**
ಲೋಕವ್ಯವಹಾರಸಂತತಿಯಲ್ಲಿ ತೊಡಗುವದು, ೫.

**ಸಂನ್ಯಸ್ತಧರ್ಮಾ–**
ಕರ್ಮವನ್ನು ಸಂನ್ಯಾಸಮಾಡಿದವನು, ೨.

**ಸಮಾಶ್ಲಿಷ್ಟಕಾರ್ಯತ್ರಯಃ–**
ಸ್ಥೂಲಸೂಕ್ಷ್ಮಕಾರಣವೆಂಬ ಮೂರು ಶರೀರಗಳುಳ್ಳವವ, ೩.

**ಸರ್ವವೃತ್ತಿಪ್ರದೀಪಃ–**
ವೃತ್ತಿಗಳನ್ನೆಲ್ಲವನ್ನೂ ಬೆಳಗುವ, ೪.

**ಸಚ್ಚಿದಾನನ್ದಕನ್ದಮ್–**
ಸಚ್ಚಿದಾನಂದಗಳ ಮೂಲ ಅಥವಾ ಸಚ್ಚಿದಾನಂದರೂಪವಾದ ಮೂಲ, ೯.

**ಸ್ವಭೇದಾದಿಶೂನ್ಯಮ್–**
ಸ್ವಗತಭೇದವೇ ಮುಂತಾದದ್ದಿಲ್ಲದ್ದು,೧೦.

**ಹರಿಬ್ರಹ್ಮರುದ್ರೇನ್ದ್ರಚನ್ದ್ರಾದಿ–ನಾಮಪ್ರಕಾಶಃ–**
ವಿಷ್ಣು ಬ್ರಹ್ಮ ರುದ್ರ, ಇಂದ್ರ, ಚಂದ್ರ– ಮುಂತಾದ ಹೆಸರುಗಳ ರೂಪದಿಂದ ತೋರಿಕೊಳ್ಳುವ, ೧೧.

## ಬ್ರಹ್ಮಜ್ಞಾನಾವಳೀಮಾಲೆ

**ಅಖಣ್ಡಾನನ್ದರೂಪಃ—**
ಪರಿಚ್ಛೇದವಿಲ್ಲದ ಆನಂದಸ್ವರೂಪನು, ೫.

**ಅವಸ್ಥಾತ್ರಯಸಾಕ್ಷೀ—**
ಎಚ್ಚರವೇ ಮುಂತಾದ ಮೂರು ಅವಸ್ಥೆ ಗಳಿಗೂ ಸಾಕ್ಷಿ, ೧೬.

***ಕೂಟಸ್ಥಃ—**
ವಿಕಾರರಹಿತವಾದ, ೧೧.

**ಗುಣತ್ರಯವ್ಯತೀತಃ—**
ಸತ್ತ್ವರಜಸ್ತಮೋಗುಣಗಳನ್ನು ಮೀರಿದ,೧೦.

**ತಾಪತ್ರಯವಿನಿರ್ಮುಕ್ತಃ—**
ಆಧ್ಯಾತ್ಮಿಕವೇ ಮುಂತಾದ ಮೂರು ತಾಪ ಗಳಿಲ್ಲದ, ೧೬.

**ದೇಹತ್ರಯವಿಲಕ್ಷಣಃ—**
ಸ್ಥೂಲಸೂಕ್ಷ್ಮಕಾರಣಗಳೆಂಬ ಮೂರು ದೇಹಗಳಿಗಿಂತ ವಿಲಕ್ಷಣನಾದ, ೧೬.

**ದ್ವನ್ದ್ವಾದಿಸಾಕ್ಷಿರೂಪಃ—**
ದ್ವಂದ್ವಗಳೇ ಮುಂತಾದವುಗಳಿಗೆ ಸಾಕ್ಷಿ,೧೩.

**ನಿತ್ಯಶುದ್ಧವಿಮುಕ್ತಃ—**
ಯಾವಾಗಲೂ ಶುದ್ಧನೂ ವಿಮುಕ್ತನೂ ಆದ, ೩.

## ಅನಾತ್ಮಶ್ರೀವಿಗರ್ಹಣ

**ಆತ್ಮಸಾಕ್ಷಾತ್ಕಾರಃ—**
ಆತ್ಮನನ್ನು ನೇರಾಗಿ ನೋಡುವದು, ೧೭.

**ಭಸ್ಮಾಚ್ಛಾದಿತಂ—**
ವಿಭೂತಿಯನ್ನು ಬಳಿದ (ದೇಹ), ೫

**ಮುಣ್ಡೀನ್ದ್ರತ್ವಮ್—**
ಸಂನ್ಯಾಸಿಶ್ರೇಷ್ಠನಾಗಿರುವಿಕೆ, ೧೨.

**ಸಾಕ್ಷಾತ್ಕೃತ—**
ಸಾಕ್ಷಾತ್ಕಾರಮಾಡಿಕೊಂಡ, ೧೮.

## ತತ್ತ್ವೋಪದೇಶ

**ಅನಿರ್ವಾಚ್ಯ—**
ಸತ್ತಲ್ಲದ, ಅಸತ್ತಲ್ಲದ, ಸದಸತ್ತಲ್ಲದ (ದ್ವೈತ), ೫೨.

**ಚಿಚ್ಛಾಯಾ—**
ಚೈತನ್ಯದ ಪ್ರತಿಬಿಂಬ, ೧೦.

**ಜಡ—**
ಅಚೇತನವಾದ, ೯.

**ತ್ರಿವಿಧಾ ಲಕ್ಷಣಾ—**
ಜಹಲ್ಲಕ್ಷಣೆಯೇ ಮುಂತಾದ ಮೂರು ಬಗೆಯ ಲಕ್ಷಣೆ, ೩೨.

**ಪ್ರತ್ಯಕ್ತ್ವಮ್—**
ಪ್ರತ್ಯಕ್ಷ ೪೦.

**ಭಾಗಲಕ್ಷಣಾ—**
ವಾಚ್ಯದಲ್ಲಿ ಒಂದಂಶವನ್ನು ಬಿಟ್ಟು ಉಳಿದ ಅಂಶವನ್ನು ಬೋಧಿಸುವದು, ೩೭.

**ಮಹಾವಾಕ್ಯಾನಿ—**
ತತ್ತ್ವಮಸಿ ಮುಂತಾದ ಜೀವೇಶ್ವರೈಕ್ಯ ವನ್ನು ತಿಳಿಸುವ ವಾಕ್ಯಗಳು, ೪೩

**ಶಕ್ತ್ಯುಪಾಧಿತ್ವಮ್—**
ಶಕ್ತಿಯೆಂಬ ಉಪಾಧಿಯಿಂದೊಡಗೂಡಿರು ವಿಕೆ, ೧೯.

**ಶರೀರಾದಿತ್ರಯ—**
ಮೂರು ಶರೀರಗಳು, ೬೭.

***ಸಾಮಾನಾಧಿಕರಣ್ಯ—**
ಒಂದೇ ವಸ್ತುವಿನಲ್ಲಿ ವರ್ತಿಸುವಿಕೆ, ೨೬.

**ಸ್ವಯಂಬೋಧರೂಪ—**
ತಾನೇ ಅರಿವಿನ ಸ್ವರೂಪವಾಗಿರುವ,೨೪.

## ಉಪದೇಶಪಂಚಕ

**ಪೂರ್ಣಾತ್ಮಾ**–
ಅದ್ವೈತಾತ್ಮ ೫.

***ಪ್ರಾಕ್ಕರ್ಮ**–
ಸಂಚಿತಕರ್ಮ, ೫.

## ಸ್ವರೂಪಾನುಸಂಧಾನ

**ಅವಸ್ಥಾತ್ರಯಾತೀತ**–
ಜಾಗ್ರದಾದ್ಯವಸ್ಥೆಗಳನ್ನು ಮೀರಿದ, ೫.

**ಅವಿದ್ಯಾವಿಲಾಸಃ**–
ಅವಿದ್ಯೆಯ ಕಾರ್ಯ, ೮.

**ಅಹಂಬ್ರಹ್ಮವೃತ್ತ್ಯೈಕಗಮ್ಯ**–
ನಾನು ಬ್ರಹ್ಮವು ಎಂಬ ವೃತ್ತಿಯೊಂದರಿಂದಲೇ ತಿಳಿಯಬರುವ, ೩.

**ನಿರ್ವಿಕಲ್ಪ**–
ನಾಮಜಾತ್ಯಾದಿವಿಕಲ್ಪಗಳಿಲ್ಲದ, ೭.

**ಸಮಾಧಿಸ್ಥಿತಾಃ**–
ಸಮಾಧಿಯಲ್ಲಿ(ದ್ದು) ಪೂರ್ಣಾತ್ಮನನ್ನು ನೋಡಿದವರು, ೫.

## ಪ್ರೌಢಾನುಭೂತಿ

**ಅಖಣ್ಡಃ**–
ಅಪರಿಚ್ಛಿನ್ನವಾದ, ೨.

**ದ್ವೈತಾದ್ವೈತವಿವರ್ಜಿತ**–
ದ್ವೈತಾದ್ವೈತಗಳಿಲ್ಲದ, ೧೧.

**ನಿರಧಿಷ್ಠಾನ**–
ತನಗೆ ಯಾವ ಆಧಾರವೂ ಇಲ್ಲದ, ೧೫.

**ಮರ್ಕಟಹಸ್ತದೇಶಪತಿತ**–
ಮಂಗನ ಕೈಗೆ ಬಿದ್ದ (ಕೇದಗೆಯ ಹೂ), ೧೭.

**ಮಿಥ್ಯಾಪರೋಕ್ಷ**–
ಸುಳ್ಳಾಗಿಯೇ ಪರೋಕ್ಷನೆನಿಸಿರುವ, ೧೨.

**ಶಿಲಾವತ್**–
ಕಲ್ಲಿನಂತೆ (ನಿಶ್ಚಲವಾಗಿ), ೧೩.

# ಮಹಾವಾಕ್ಯದರ್ಪಣ

ದರ್ಶನಂ ಶ್ರವಣಂ ಜ್ಞಾನಂ ಯತ್ರ ನಾನ್ಯಸ್ಯ ವಿದ್ಯತೇ ।
ಅಖಣ್ಡೈಕರಸಂ ಶಾನ್ತಂ ಬ್ರಹ್ಮ ತತ್ಸಮುಪಾಸ್ಮಹೇ ॥೧॥

೧. ಎಲ್ಲಿ ಮತ್ತೊಂದನ್ನು ಕಾಣುವದಾಗಲಿ, ಕೇಳುವದಾಗಲಿ, ಅರಿಯುವದಾಗಲಿ ಇರುವದಿಲ್ಲವೋ[1], ಆ ಅಖಂಡೈಕರಸವಾದ[2] ಶಾಂತವಾದ ಬ್ರಹ್ಮವನ್ನು ಉಪಾಸನೆಮಾಡುತ್ತೇವೆ.

## ಆತ್ಮಜ್ಞಾನವಿಲ್ಲದವರ ಮೌಢ್ಯ

[3]ಮಿಥ್ಯೇತಿ ಮನ್ಯತೇ ಸ್ವಪ್ನಂ ಜಾಗರಂ ಸತ್ಯಮೀಕ್ಷತೇ ।
ಬುದ್ಧೇರ್ವಿಲಾಸವೈಚಿತ್ರ್ಯಮಹೋ ಅಜ್ಞಜನಾಜ್ಞತಾ ॥೨॥

೨. ಬುದ್ಧಿಯ ವಿಲಾಸದ ವಿಚಿತ್ರತೆಯಾದ ಸ್ವಪ್ನವನ್ನು ಹುಸಿಯೆಂದು ತಿಳಿಯುತ್ತಾನೆ ; (ಆದರೆ ಅದೇ ಬಗೆಯ) ಎಚ್ಚರವನ್ನು ಸತ್ಯವೆಂದು ಕಾಣುತ್ತಾನೆ. ಆಹಾ ! ಮೂಢಜನರ ಮೂರ್ಖತನಕ್ಕೇನೆನ್ನೋಣ ![4]

ಶುದ್ಧಿಮಿಚ್ಛನ್ತ್ಯಶುದ್ಧಸ್ಯ ನಿತ್ಯದುಃಖಾತ್ಮನಃ ಸುಖಮ್ ।
ಅನಿತ್ಯಸ್ಯೈವ ನಿತ್ಯತ್ವಮಹೋ ಅಜ್ಞಜನಾಜ್ಞತಾ ॥೩॥

೩. ಶುಚಿಯಾಗಿಲ್ಲದ್ದನ್ನು ಶುಚಿಯಾಗಿರುವದೆಂದು ಬಗೆಯುತ್ತಾರೆ, ಯಾವಾಗಲೂ ದುಃಖಸ್ವರೂಪವಾಗಿರುವದನ್ನು ಸುಖವೆಂದು (ಬಗೆಯುತ್ತಾರೆ), ಅನಿತ್ಯವಾಗಿರುವದನ್ನೇ ನಿತ್ಯವೆಂದು (ಬಗೆಯುತ್ತಾರೆ).[5] ಆಹ! ಮೂಢಜನರ ಮೂರ್ಖತನಕ್ಕೇನೆನ್ನೋಣ !

ಆತ್ಮನ್ಯನಾತ್ಮತಾಂ ಕೃತ್ವಾಽಪ್ಯನಾತ್ಮನ್ಯಾತ್ಮತಾಂ ಪುನಃ ।
ಮೃಗ್ಯತೇ ಪುಸ್ತಕೇಷ್ವಾತ್ಮಾ ಅಹೋ ಅಜ್ಞಜನಾಜ್ಞತಾ ॥೪॥

---

1. ಛಾಂ. ೭–೨೪–೧ ; ವಿ. ೩೭೯.
2. ವಿ. ೨೪೫ ; ತೇ. ಬಿಂ. ೨ನೆಯ ಅಧ್ಯಾಯದಲ್ಲಿ ಈ ಶಬ್ದವು ಮತ್ತೆಮತ್ತೆ ಬಂದಿದೆ.
3. ಈ ಶ್ಲೋಕದ ಆದಿಯಲ್ಲಿ 'ಶ್ರೀಗುರುಃ' ಎಂಬ ಮಾತು ವಾ॥ ಪ್ರತಿಯಲ್ಲಿ ಹೆಚ್ಚಾಗಿದೆ.
4. ಕನಸನ್ನು ಹುಸಿಯೆಂದು ಬಗೆಯುತ್ತಾನೆ, ಎಚ್ಚರವನ್ನು ಸತ್ಯವೆಂದು ಕಾಣುತ್ತಾನೆ ; ಬುದ್ಧಿಯ ವಿಲಾಸದ ವೈಚಿತ್ರ್ಯವಿದು ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !... ಎಂದು ಕನ್ನಡಿಸುವದು ಉತ್ತಮವೆಂತ ತೋರುತ್ತದೆ. ೧೧ನೆಯ ಶ್ಲೋಕವನ್ನು ನೋಡಿರಿ.
5. ಯೋ.ಸೂ.೨–೫

೪. ಆತ್ಮನಲ್ಲಿ ಅನಾತ್ಮತ್ವವನ್ನೂ ಅನಾತ್ಮನಲ್ಲಿ ಆತ್ಮತ್ವವನ್ನೂ ಮಾಡಿಕೊಂಡು[1] ಮತ್ತೆಮತ್ತೆ ಪುಸ್ತಕಗಳಲ್ಲಿ ಆತ್ಮನನ್ನು ಹುಡುಕುವರಲ್ಲ[2] ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ಹಿತ್ವಾತ್ಮಾನಂ ಸದಾನನ್ದಮಾತ್ಮನಃ ಸುಖಕಾಮ್ಯಯಾ ।**
**ಯಜನ್ತಿ ದೇವಾನ್ ಯಜ್ಞಾದ್ಯೈರಹೋ ಅಜ್ಞಜನಾಜ್ಞತಾ ॥೫॥**

೫. ನಿತ್ಯಾನಂದರೂಪನಾದ ಆತ್ಮನನ್ನು ಬಿಟ್ಟು ತಮಗೆ ಸುಖವಾಗಬೇಕೆಂಬ ಆಸೆಯಿಂದ ದೇವತೆಗಳನ್ನು ಯಜ್ಞಾದಿಗಳಿಂದ ಪೂಜಿಸುತ್ತಿರುವರಲ್ಲ ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ಸ್ವಮೇವಾಕೃತ್ರಿಮಂ ದೇವಮಜ್ಞಾತ್ವಾ ಪ್ರತಿಮಾಂ ಜಡಾಃ ।**
**ಭಜನ್ತಿ ದೇವತಾಬುದ್ಧ್ಯಾ ಅಹೋ ಅಜ್ಞಜನಾಜ್ಞತಾ ॥೬॥**

೬. ತಮ್ಮ ಆತ್ಮನೇ ಅಕೃತ್ರಿಮವಾದ ದೇವನೆಂಬುದನ್ನರಿಯದೆ ಬುದ್ಧಿಹೀನ ರಾದ (ಇವರು) ದೇವತಾಬುದ್ಧಿಯಿಂದ ಪ್ರತಿಮೆಯನ್ನು[3] ಸೇವಿಸುತ್ತಿರುವರಲ್ಲ ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ಅಜ್ಞಾತ್ವಾ ಮುಕ್ತಮಾತ್ಮಾನಮಾತ್ಮನೋ ಮುಕ್ತಿಸಿದ್ಧಯೇ ।**
**ಪುಣ್ಯಕ್ಷೇತ್ರೇಷು ನಿವಸನ್ತ್ಯಹೋ ಅಜ್ಞಜನಾಜ್ಞತಾ ॥೭॥**

೭. ತಾವು ಮುಕ್ತನಾಗಿರುವ ಆತ್ಮನೆಂಬುದನ್ನರಿಯದೆ ಮುಕ್ತಿಯು ಸಿದ್ಧಿಸ ಲೆಂದು ಪುಣ್ಯಕ್ಷೇತ್ರಗಳಲ್ಲಿ ವಾಸಮಾಡುತ್ತಿರುವರಲ್ಲ ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ಸರ್ವಜ್ಞಾತಾರಮಾತ್ಮಾನಂ ವಿಸ್ಮೃತ್ಯ ಜ್ಞಾತುಮಿಚ್ಛಯಾ ।**
**ಅಭ್ಯಸ್ಯನ್ತಿ ಮಹಾಶಾಸ್ತ್ರಾಣ್ಯಹೋ ಅಜ್ಞಜನಾಜ್ಞತಾ ॥೮॥**

೮. ಆತ್ಮನು ಸರ್ವವನ್ನೂ ಅರಿಯುವವನೆಂಬುದನ್ನು[4] ಮರೆತು, (ತತ್ತ್ವವನ್ನು) ತಿಳಿದುಕೊಳ್ಳಬೇಕೆಂಬ ಇಚ್ಛೆಯಿಂದ ಮಹಾಶಾಸ್ತ್ರಗಳನ್ನು ಅಭ್ಯಾಸ ಮಾಡುತ್ತಿರುವರಲ್ಲ! ಆಹ ! ಮೂಢಜನರ ಮೂರ್ಖತನಕ್ಕೇನೆನ್ನೋಣ !

1. ಇದೇ ಆತ್ಮಾನಾತ್ಮಗಳ ಅನ್ಯೋನ್ಯಾಧ್ಯಾಸರೂಪವಾದ ಅವಿದ್ಯೆ.
2. "ತ್ವಾಮಾತ್ಮಾನಂ ಪರಂ ಮತ್ವಾ ಪರಮಾತ್ಮಾನಮೇವ ಚ । ಆತ್ಮಾ ಪುನರ್ಬಹಿರ್ಮೃಗ್ಯ ಅಹೋಽಜ್ಞಜನತಾಜ್ಞತಾ" (ಭಾಗ. ೧೦-೧೪-೨೭) ಈ ಶ್ಲೋಕವು ಶಂ.ಗೀ. ೭-೨೪ರಲ್ಲಿ ಉದ್ಧೃತವಾಗಿದೆ.
3. ಭಾಗ. 'ಕುರತೇಽರ್ಚಾವಿಡಮ್ಬನಮ್' 'ಅರ್ಚಾಂ ಭಜತೇ ಮೌಢ್ಯಾತ್' (೩-೨೯-೨೧, ೨೨) ಇವುಗಳ ಪರಾಮರ್ಶವಿರಬಹುದು.
4. ಬೃ.೨-೪-೧೪

**ಆತ್ಮನಃ ಸ್ಥೂಲಭಿನ್ನತ್ವಂ ಸ್ವಪ್ನೇ ದೃಷ್ಟ್ವಾಽಪಿ ಮೋಹಿತಾಃ ।**
**ಸ್ಥೂಲೇಪ್ಯಹನ್ತಾಂ[1] ನೋ ಮುಞ್ಚನ್ತ್ಯಹೋ ಅಜ್ಞಜನಾಜ್ಞತಾ ॥೯॥**

೯. ಕನಸಿನಲ್ಲಿ ತಾನು ಸ್ಥೂಲದೇಹಕ್ಕಿಂತ ಭಿನ್ನನಾಗಿರುವದನ್ನು ಕಂಡೂ ಕಂಡೂ ಸ್ಥೂಲದೇಹದಲ್ಲಿಯೂ ತಾವೆಂಬ ಬುದ್ಧಿಯನ್ನು ಬಿಡದಿರುವರಲ್ಲ! ಆಹ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ಮಲಮಾಂಸಮಯಂ ದೇಹಂ ಸ್ವಂ ಮತ್ವಾಽಶುಚಿಮಸ್ಯ ತು ।**
**ಶುದ್ಧಿಂ ಕುರ್ವನ್ತಿ ತೋಯಾದ್ಯೈರಹೋ ಅಜ್ಞಜನಾಜ್ಞತಾ ॥೧೦॥**

೧೦. ತಮ್ಮ ಮಲಮಾಂಸಮಯವಾದ ದೇಹವು ಅಶುಚಿಯೆಂದು ತಿಳಿದಿದ್ದರೂ ಅದನ್ನು ನೀರು ಮುಂತಾದವುಗಳಿಂದ ಶುಚಿಗೊಳಿಸಲಿಚ್ಛಿಸುತ್ತಾರಲ್ಲ! ಆಹ! ಮೂಢಜನರ ಮೂರ್ಖತನಕ್ಕೇನೆನ್ನೋಣ !

**ದ್ವಯೋರನ್ನಸ್ಯ ಕಾರ್ಯತ್ವೇಽಹನ್ತಾಂ ವಪುಷಿ ಕುರ್ವತೇ ।**
**ನ ಮಲೇ ಬುದ್ಧಿವೈಚಿತ್ರ್ಯಮಹೋ ಅಜ್ಞಜನಾಜ್ಞತಾ ॥೧೧॥**

೧೧. ಎರಡೂ ಅನ್ನದ ಕಾರ್ಯವಾಗಿದ್ದರೂ ದೇಹದಲ್ಲಿ ನಾನೆಂಬ ಬುದ್ಧಿಯನ್ನು ಮಾಡುತ್ತಾರೆ, ಮಲದಲ್ಲಿ ಮಾಡುವದಿಲ್ಲ ; ಬುದ್ಧಿಯ ವೈಚಿತ್ರ್ಯವಿದು ! ಆಹ! ಮೂಢಜನರ ಮೂರ್ಖತನಕ್ಕೇನೆನ್ನೋಣ !

## ಜಗತ್ತನ್ನು ಮಿಥ್ಯೆಯೆಂದು ತಿಳಿಯಬೇಕು

**ಅಸತ್ಕಲ್ಪಂ ಮೃಷಾಪ್ರಾಯಂ ಸ್ವಪ್ನತುಲ್ಯಂ ಭ್ರಮೋದಿತಮ್ ।**
**ಜಗತ್ಸರ್ವಮಿತಿ ಜ್ಞೇಯಂ ಪಣ್ಡಿತೈಸ್ತತ್ತ್ವದರ್ಶಿಭಿಃ ॥೧೨॥**

೧೨. ಜಗತ್ತೆಲ್ಲವೂ ಅಸತ್ತಿನಂತಿರುವದು,[2] ಹುಸಿಯೇ ಆದಂತಿರುವ ಸ್ವಪ್ನಸಮಾನವಾಗಿರುವದು, ಭ್ರಾಂತಿಯಿಂದ ಉಂಟಾದದ್ದು – ಎಂದು ತತ್ತ್ವದರ್ಶಿಗಳಾದ ಪಂಡಿತರು ತಿಳಿಯಬೇಕು.

---

1. 'ಸ್ಥೂಲೇಷು' ಎಂಬ ಪಾಠಕ್ಕೆ ಸ್ಥೂಲವಸ್ತುಗಳಲ್ಲಿ ಎಂದು ಅರ್ಥವನ್ನು ಮಾಡಬೇಕಾಗುತ್ತದೆ ; ಆದ್ದರಿಂದ ಸ್ಥೂಲೇಽಪಿ' (ಸ್ಥೂಲದೇಹದಲ್ಲಿಯೂ) ಎಂಬ ಪಾಠವನ್ನು ಕಲ್ಪಿಸಿಕೊಂಡಿದೆ.
2. ಈ ಶ್ಲೋಕವು ತಟ್ಟನೆ ಇಲ್ಲಿ ಏತಕ್ಕೆ ಬಂದಿತೋ ತಿಳಿಯುವಂತಿಲ್ಲ. ಇದು ಪೂರ್ವಾಪರ ಸಂಬದ್ಧವಾಗಿರುವಂತಿಲ್ಲ.

## ಅನೇಕಜನ್ಮಗಳ ಪುಣ್ಯದಿಂದ ತತ್ತ್ವವನ್ನು ತಿಳಿಯುವ ಇಚ್ಛೆಯುಂಟಾಗುತ್ತದೆ

**ಜನ್ಮಭಿಃ ಕೋಟಿಪರ್ಯನ್ತೈಃ ನಿರ್ವೃತ್ತೈಃ ಪುಣ್ಯಕರ್ಮಭಿಃ ।**
**ಶುದ್ಧಾತ್ಮನಾಂ ಸತಾಮೇವ ಜಿಜ್ಞಾಸಾಽಽತ್ಮನಿ ಜಾಯತೇ ॥೧೩॥**

೧೩. ಕೋಟಿಗಟ್ಟಲೆ ಜನ್ಮಗಳಿಂದ ಮಾಡಿಕೊಂಡುಬಂದಿರುವ ಪುಣ್ಯಕರ್ಮಗಳಿಂದ ಚಿತ್ತಶುದ್ಧಿಯನ್ನು ಪಡೆದುಕೊಂಡಿರುವವರಿಗೇ ಆತ್ಮನನ್ನರಿಯಬೇಕೆಂಬ ಇಚ್ಛೆಯುಂಟಾಗುತ್ತದೆ.

## ಶ್ರುತಿಯಲ್ಲಿರುವ ಮಹಾವಾಕ್ಯ

**ಛಾನ್ದೋಗ್ಯೋಪನಿಷದ್ಯೇತನ್ಮಹಾವಾಕ್ಯಮಿತೀರ್ಯತೇ**
**ಷಷ್ಠೇ ಪ್ರಪಾಠಕೇ ತತ್ತ್ವಮಸೀತಿ ಪ್ರಾಯಶೋಽಸ್ತಿ ಯತ್ ॥೧೪॥**

**ತತ್ರತ್ಯಾನಾಂ ಪದಾನಾಂ ಯದ್ದ್ವಿತೀಯಂ ತ್ವಂಪದಂ ಸ್ಥಿತಮ್ ।**
**ತಸ್ಯಾಽರ್ಥಃ ಪ್ರತ್ಯಗಾತ್ಮೈಷ ಯೋಽಹಮಿತ್ಯನುಭೂಯತೇ ॥೧೫॥**

**ಸಹಜಂ ತು ಪರಂ ಬ್ರಹ್ಮ ಕೇವಲಾನನ್ದಲಕ್ಷಣಮ್ ।**
**ತತ್ಪದಸ್ಯ ಭವೇದರ್ಥೋ ಯಃ ಪರಾತ್ಮೇತಿ ಗೀಯತೇ ॥೧೬॥**

**ಅಸೀತ್ಯೇಕತ್ವಮನಯೋರಖಣ್ಡತ್ವಂ ಮುಹುರ್ಮುಹುಃ ।**
**ತಾತ್ಪರ್ಯೇಣ ಶ್ರುತಿರ್ವಕ್ತಿ ಸರ್ವಜ್ಞಾ ಸತ್ಯವಾದಿನೀ ॥೧೭॥**

೧೪–೧೭. ಛಾಂದೋಗ್ಯೋಪನಿಷತ್ತಿನಲ್ಲಿ ಆರನೆಯ ಪ್ರಪಾಠಕದಲ್ಲಿ 'ತತ್ತ್ವಮಸಿ' ಎಂದು ಅನೇಕಸಲ ಬಂದಿದೆಯಲ್ಲ, ಇದನ್ನು ಮಹಾವಾಕ್ಯವೆನ್ನುತ್ತಾರೆ[1] ಅದರಲ್ಲಿರುವ ಪದಗಳೊಳಗೆ ಎರಡನೆಯ ಪದವಾದ 'ತ್ವಮ್' (ನೀನು) ಎಂಬ ಪದವಿದೆಯಲ್ಲ, ಅದಕ್ಕೆ ನಾನು ಎಂದು ಅನುಭವಕ್ಕೆ ಬರುತ್ತಿರುವ ಈ ಪ್ರತ್ಯಗಾತ್ಮನೇ ಅರ್ಥವಾಗಿರುತ್ತಾನೆ. ತತ್ (ಅದು ಎಂಬ) ಪದಕ್ಕಾದರೊ, ಸಹಜವಾಗಿರುವ ಕೇವಲಾನಂದಸ್ವರೂಪವಾದ ಪರಬ್ರಹ್ಮವು ಅರ್ಥವು; ಅದನ್ನು ಪರಮಾತ್ಮ ಎಂದು ಕರೆಯುತ್ತಾರೆ. (ಇನ್ನು) ಅಸಿ (ಇದ್ದೀಯೆ) ಎಂಬ ಪದವಿದೆಯಲ್ಲ, ಅದು ಈ ಎರಡಕ್ಕೂ ಏಕತ್ವವನ್ನು (ಹೇಳುತ್ತಿದೆ). ಸರ್ವಜ್ಞವಾಗಿ

1. ವಿ ೨೩೯–೨೪೭ರವರೆಗಿನ ಗ್ರಂಥಭಾಗದಲ್ಲಿರುವ 'ತತ್ತ್ವಮಸಿಮಹಾವಾಕ್ಯಾರ್ಥ' ವಿಚಾರವನ್ನು ಇದಕ್ಕೆ ಹೋಲಿಸಿ ನೋಡಿರಿ. ಮಹಾವಾಕ್ಯವೆಂಬ ಶಬ್ದವು ಪ್ರಸ್ಥಾನತ್ರಯ ಭಾಷ್ಯದಲ್ಲಿ ಎಲ್ಲಿಯೂ ಕಂಡುಬರುವದಿಲ್ಲ; ವಿ. ೨೪೭ರಲ್ಲಿದೆ.

ಸತ್ಯವನ್ನೇ ಹೇಳುತ್ತಿರುವ ಶ್ರುತಿಯು ಅಖಂಡತ್ವವನ್ನು ಮತ್ತೆಮತ್ತೆ ತಾತ್ಪರ್ಯದಿಂದ ಹೇಳುತ್ತಿದೆ.[1]

## ಶ್ರುತ್ಯರ್ಥವು ಅಜ್ಞರಿಗೆ ಗೋಚರವಾಗುವದಿಲ್ಲ

**ಶ್ರುತ್ಯಾ ಸಮೀರಿತಸ್ತ್ವರ್ಥೋ ಮೋಹಾನ್ನಾದ್ರಿಯತೇ ಜನೈಃ ।**
**ಸಂಸಾರಾಬ್ಧೌ ಪತನ್ತ್ಯನ್ಧಾ ಇವ ತೇನೈವ ದೋಷತಃ ॥೧೮॥**

೧೮. ಆದರೆ ಶ್ರುತಿಯು ಹೇಳಿದ ಅರ್ಥವನ್ನು ಜನರು ಅವಿದ್ಯೆಯ ಕಾರಣದಿಂದ ಆದರಿಸದೆ ಇರುತ್ತಾರೆ. ಕುರುಡರಂತೆ ಅದೇ (ಅವಿದ್ಯಾ)ದೋಷದಿಂದ ಸಂಸಾರಸಾಗರದಲ್ಲಿ ಬೀಳುತ್ತಿರುವರು.

**ಅದ್ಯಾಷ್ಟಮೀತಿ ನವಮೀತಿ ಚತುರ್ದಶೀತಿ**
**ಜ್ಯೋತಿಷ್ಕವಾಚೋಪವಸನ್ತಿ ಭಕ್ತ್ಯಾ ।**
**ಶ್ರುತೇಸ್ತ್ವಹೋ ತತ್ತ್ವಮಸೀತಿ ವಾಕ್ಯಂ**
**ನ ವಿಶ್ವಸನ್ತ್ಯದ್ಭುತಮೇತದೇವ ॥೧೯॥**

೧೯. ಇಂದು ಅಷ್ಟಮಿ, ನವಮಿ, ಚತುರ್ದಶಿ – ಎನ್ನುವ ಜೋಯಿಸನ ಮಾತಿನಮೇಲೆ ಭಕ್ತಿಯಿಂದ ಉಪವಾಸಮಾಡುತ್ತಾರೆ ; ಶ್ರುತಿಯು (ಹೇಳುವ) ತತ್ತ್ವಮಸಿ (ಅದೇ ನೀನು) ಎಂಬ ವಾಕ್ಯದಲ್ಲಿ ವಿಶ್ವಾಸವಿಡುವದಿಲ್ಲವಲ್ಲ[2] ! ಇದೇ ಆಶ್ಚರ್ಯ.

**ದುಷ್ಟಸ್ಯ ವೇದಪ್ರತಿಬೋಧಿತಾರ್ಥೋ**
**ವಿಜ್ಞಾಯತೇ ನೈವ ಯಥಾವದತ್ರ ।**
**ಕಿಂ ತ್ವನ್ಯಥೈವ ಪ್ರತಿಭಾತಿ ತದ್ವ–**
**ತ್ಫಲಂ ಚ ತದ್ರೂಪಕಮೇವ ತಸ್ಯ ॥೨೦॥**

೨೦. (ಚಿತ್ತ)ದೋಷವುಳ್ಳವನಿಗೆ ವೇದದಲ್ಲಿ ತಿಳಿಸಿರುವ ವಿಷಯವು ಇದ್ದದ್ದು ಇದ್ದಂತೆ ತಿಳಿಯುವದೇ ಇಲ್ಲ, ಅದಕ್ಕೆ ಬದಲು ಬೇರೆಯಾಗಿಯೇ ತೋರುತ್ತದೆ. ಇದರಂತೆ ಅವನಿಗೆ (ಆಗುವ) ಫಲವೂ ಅದಕ್ಕನುಗುಣವಾಗಿಯೇ ಇರುತ್ತದೆ.

---

1. ವೇದದಲ್ಲಿರುವದನ್ನೇ ಸ್ಮೃತ್ಯಾದಿಗಳು ತಿಳಿಸುತ್ತವೆ ಎಂಬುದನ್ನು ತಿಳಿಸುವದಕ್ಕೆ 'ಸರ್ವಜ್ಞಾ' ಎಂಬ ವಿಶೇಷಣವನ್ನೂ ಅದು ಅಪೌರುಷೇಯವಾದದ್ದರಿಂದ ಅಬಾಧಿತವನ್ನೇ ಹೇಳುತ್ತದೆ ಎಂಬುದನ್ನು ತಿಳಿಸುವದಕ್ಕೆ 'ಸತ್ಯವಾದಿನೀ' ಎಂಬ ವಿಶೇಷಣವನ್ನೂ ಉಪಯೋಗಿಸಿದೆ.

2. ಶಂ. ಗೀ. ೧೮–೫೦ರಲ್ಲಿ ಇಂದು ಏಕಾದಶಿ, ಶಿವರಾತ್ರಿ– ಎಂದು ಶಾಸ್ತ್ರದಲ್ಲಿ ಹೇಳಿರುವದನ್ನು ಒಪ್ಪಿ ಉಪವಾಸಮಾಡುವಂತೆ 'ಅಂತಃಪ್ರಜ್ಞನಲ್ಲ' ಎಂದು ಮುಂತಾಗಿ ಹೇಳುವ ಶಾಸ್ತ್ರದಲ್ಲಿರುವದನ್ನೂ ಒಪ್ಪಬೇಕು – ಎಂದಿದೆ. ವಿವರಕ್ಕೆ ಶಂ.ಗೀ.ಪುಟ ೪೭೦ನ್ನು ನೋಡಿ.

## ಈಶ್ವರಜೀವತ್ವವಿಭಾಗಕ್ಕೆ ಉಪಾಧಿಗಳು

**ಪ್ರಸ್ತುತಂ ತೇ ಪ್ರವಕ್ಷ್ಯಾಮಿ ತೀವ್ರಮೋಕ್ಷೇಚ್ಛಯಾ ಶೃಣು ।**
**ಮೋಕ್ಷೇಚ್ಛಯಾ ಕೃತಂ ಸಮ್ಯಕ್ಫಲತಿ ಶ್ರವಣಾದಿಕಮ್ ॥೨೦॥**

೨೦. ಪ್ರಾರಂಭಮಾಡಿದ್ದನ್ನು ನಿನಗೆ ಹೇಳುವೆನು,[1] ತೀವ್ರವಾದ[2] ಮೋಕ್ಷೇಚ್ಛೆಯಿಂದ ಕೇಳು, ಮೋಕ್ಷೇಚ್ಛೆಯಿಂದ ಮಾಡುವ ಶ್ರವಣಾದಿಗಳು ಉತ್ತಮಫಲವನ್ನು ಕೊಡುವವು.

**ಏಕಸ್ಯ ಬ್ರಹ್ಮಣಃ ಶುದ್ಧಸತ್ತ್ವೋಪಾಧಿಸಮನ್ವಯಾತ್**
**ಈಶತಾ ಜೀವತಾಪ್ಯಸ್ಯ ಮಲಿನೋಪಾಧಿಯೋಗತಃ ॥೨೧॥**

೨೧. ಒಂದೇ ಆಗಿರುವ ಬ್ರಹ್ಮಕ್ಕೆ ಶುದ್ಧಸತ್ತ್ವದ ಉಪಾಧಿಯ ಸಂಬಂಧದಿಂದ **ಈಶ್ವರತ್ವ**(ವಾಗಿರುವದು) ; ಇದಕ್ಕೆ ಜೀವತ್ವವೂ ಮಲಿನವಾದ (ಸತ್ತ್ವದ)[3] ಉಪಾಧಿಯ ಸಂಬಂಧದಿಂದ ಆಗಿರುವದು.[4]

**ಉಪಾಧೇರೇವ ಮಾಹಾತ್ಮ್ಯಾಜ್ಜೀವಾಚ್ಛ್ರೇಷ್ಠತ್ವಮೀಶಿತುಃ ।**
**ಯಥಾಸಾಮ್ರಾಜ್ಯಮಾಹಾತ್ಮ್ಯಾತ್ಸೇವಕಾಚ್ಚಕ್ರವರ್ತಿನಃ ॥೨೨॥**

೨೨. ಹೇಗೆ ಸಾಮ್ರಾಜ್ಯದ ಮಹಿಮೆಯಿಂದಲೇ ಚಕ್ರವರ್ತಿಗೆ ಸೇವಕನಿಗಿಂತ ಹೆಚ್ಚುಗಾರಿಕೆಯಿರುವದೋ ಹಾಗೆಯೇ ಉಪಾಧಿಯ ಮಹಿಮೆಯಿಂದಲೇ ಈಶ್ವರನಿಗೆ ಜೀವನಿಗಿಂತ ಹೆಚ್ಚುಗಾರಿಕೆಯಿರುತ್ತದೆ.[5]

## ಸಂಸಾರಬಂಧವು ಜ್ಞಾನದಿಂದಲೇ ಹೋದೀತು, ಕರ್ಮದಿಂದಲ್ಲ

**ಸಂಸಾರಬನ್ಧೋಽಯಮಬೋಧಮೂಲಃ**
**ಕರ್ಮಪ್ರವೃದ್ಧೋ ಬಹುದುಃಖಹೇತುಃ ।**
**ನ ಕರ್ಮಕೋಟ್ಯಾಽಸ್ಯ ನಿವೃತ್ತಿರಿಷ್ಯತೇ**
**ತತ್ತ್ವಾವಬೋಧೇನ ವಿನಾ ಮುಮುಕ್ಷೋಃ ॥೨೪॥**

1. ಪ್ರಕೃತವಾಗಿರುವ ಜೀವೇಶ್ವರೈಕ್ಯವನ್ನು.
2. ತೀವ್ರವಾದ ಮೋಕ್ಷೇಚ್ಛೆಯೇ ಫಲಕಾರಿ ಎಂಬುದಕ್ಕೆ ವಿ.೨೯ನ್ನು ನೋಡಿರಿ.
3. ಮೂಲದಲ್ಲಿ ಮಲಿನೋಪಾಧಿಯೆಂದಿಷ್ಟೇ ಇದೆ.
4. ವಿ. ೨೪೧ರಲ್ಲಿ ಈಶ್ವರನಿಗೆ ಮಾಯಾಮಹದಾದಿಕಾರಣೋಪಾಧಿ, ಜೀವನಿಗೆ ಪಂಚಕೋಶವೆಂಬ ಕಾರ್ಯೋಪಾಧಿ ಎಂದಿದೆ.
5. ವಿ. ೨೪೨ರಲ್ಲಿ ಹೇಳಿರುವ ರಾಜ್ಯಖೇಟಕಗಳ ದೃಷ್ಟಾಂತವನ್ನು ಇದಕ್ಕೆ ಹೋಲಿಸಿರಿ.

೨೪. ಈ ಸಂಸಾರಬಂಧವು ಅಜ್ಞಾನಹೇತುಕವಾಗಿರುತ್ತದೆ. ಇದು ಕರ್ಮದಿಂದ ಬೆಳೆಯುತ್ತದೆ, ಬಹಳ ದುಃಖಕ್ಕೆ ಕಾರಣವಾಗಿರುತ್ತದೆ. ಇದಕ್ಕೆ ಕೋಟಿ ಕರ್ಮಗಳಿಂದಲೂ ನಿವೃತ್ತಿಯಾದೀತೆಂದು ಒಪ್ಪಲಾಗುವದಿಲ್ಲ ; ಮುಮುಕ್ಷುವಾದವನಿಗೆ ತತ್ತ್ವಜ್ಞಾನವೊಂದರ ಹೊರತು (ಮತ್ತೆ ಯಾವ ಕರ್ಮದಿಂದಲೂ ಅದು) ಆಗಲಾರದು.

ತತ್ತ್ವಾವಬೋಧಸ್ತು ವಿಚಾರ್ಯಮಾಣೇ
ಸಮ್ಯಕ್ ಪದಾರ್ಥೇ ಸಮುದೇತಿ ಪುಂಸಃ ।
ಶ್ರುತಿಸ್ಮೃತಿನ್ಯಾಯಬಲೇನ ಬುದ್ಧ್ಯಾ
ನ ಸ್ನಾನಮನ್ತ್ರಾರ್ಚನಕೀರ್ತನಾದ್ಯೈಃ ॥೨೫॥

೨೫. ತತ್ತ್ವಜ್ಞಾನವಾದರೋ, ಶ್ರುತಿಸ್ಮೃತಿಯುಕ್ತಿಗಳ ಬಲದಿಂದೊಡಗೂಡಿದ ಬುದ್ಧಿಯಿಂದ ಪದಾರ್ಥವನ್ನು ಚೆನ್ನಾಗಿ ವಿಚಾರಮಾಡಿದರೆ ಪುರುಷನಿಗೆ ಹುಟ್ಟುತ್ತದೆಯೇ ಹೊರತು ಸ್ನಾನ[1], ಮಂತ್ರ, ಪೂಜೆ, ಕೀರ್ತನೆ – ಇವೇ ಮುಂತಾದವುಗಳಿಂದ ಹುಟ್ಟಲಾರದು.

ನ ಹಿ ಸ್ನಾನಶತೇನಾಪಿ ರಜ್ಜುಸರ್ಪಭ್ರಮೋ ನೃಣಾಮ್ ।
ಭಯಕಮ್ಪಪ್ರದೋ ಯಾತಿ ವಿನಾ ವಸ್ತ್ವವಮರ್ಶನಮ್ ॥೨೬॥

೨೬. ನೂರು ಸ್ನಾನಗಳನ್ನು ಮಾಡಿದರೂ ಜನರಿಗೆ ಅಂಜಿಕೆ, ನಡುಕ – ಇವುಗಳನ್ನುಂಟುಮಾಡುವ ಹಗ್ಗವು ಹಾವೆಂಬ ಭ್ರಾಂತಿಯು– ವಸ್ತುವನ್ನು ವಿಚಾರ ಮಾಡದೆ – ಹೋಗಲಾರದಷ್ಟೆ ?

ಸಂಸಾರವರ್ಧಕಂ ಕರ್ಮ ತನ್ನಿವೃತ್ತ್ಯೈ ನ ಕಲ್ಪತೇ ।
ನ ಹಿ ಪಙ್ಕಸ್ಯ ಪಙ್ಕೇನ ನಿವೃತ್ತಿರವಲೋಕ್ಯತೇ ॥೨೭॥

೨೭. ಸಂಸಾರವನ್ನು ಬೆಳೆಯಿಸುವ ಕರ್ಮವು, ಅದನ್ನು ತೊಲಗಿಸುವದಕ್ಕೆ ಶಕ್ತವಾಗಲಾರದು. ಕೆಸರು ಕೆಸರಿನಿಂದ ಹೋದದ್ದು ಕಂಡುಬರುವದಿಲ್ಲವಷ್ಟೆ ?

ಅಪಿ ಕೋಟ್ಯಾ[2]ಜಕಲ್ಪಾನಾಂ ಕರ್ಮಣಾ ಮುಕ್ತಿರಿಷ್ಯತೇ ।
ನಾನ್ತರಾ ಬ್ರಹ್ಮವಿಜ್ಞಾನಂ ಪ್ರಸಾದಾದನ್ತರಾತ್ಮನಃ ॥೨೮॥

೨೮. ಒಂದು ಕೋಟಿ ಬ್ರಹ್ಮಕಲ್ಪಗಳವರೆಗೆ ಮಾಡಿದರೂ ಕರ್ಮದಿಂದ– ಅಂತರಾತ್ಮನ ಅನುಗ್ರಹದಿಂದಾಗುವ ಬ್ರಹ್ಮವಿಜ್ಞಾನವಿಲ್ಲದೆ– ಮುಕ್ತಿಯಾಗುವದೆಂದು ಒಪ್ಪಲಾಗುವದಿಲ್ಲ.[3]

1. ವಿ. ೧೩

2. 'ಕೊಟ್ಯಜ' ಎಂಬ ಅಚ್ಚಿನ ಪಾಠವನ್ನು ಕೋಟ್ಯಾಽಜ' ಎಂದು ತಿದ್ದಿಕೊಂಡಿದೆ.

3. ಇಲ್ಲಿಯವರೆಗೆ ಕರ್ಮದ ನಿಂದೆಯನ್ನು ಮಾಡಿ ಜ್ಞಾನವೇ ಮೋಕ್ಷಕ್ಕೆ ಕಾರಣವೆಂದು ಹೇಳಿದೆ. ವಿ.೧೧–೧೩ ಈ ಶ್ಲೋಕಗಳನ್ನು ಈ ಭಾಗಕ್ಕೆ ಹೋಲಿಸಿ ನೋಡಿರಿ.

## ವಿಚಾರದ ಆವಶ್ಯಕತೆ

**ಅಬ್ರಹ್ಮತ್ವಭ್ರಮೋಚ್ಛೇದೀ ತ್ವಹಂ ಬ್ರಹ್ಮೇತಿ ನಿಶ್ಚಯಃ ।**
**ಜಾಯತೇಽರ್ಥವಿಚಾರೇಣ ಪುರುಷಸ್ಯ ವಿಪಶ್ಚಿತಃ ॥೨೯॥**

೨೯. (ನಾನು) ಬ್ರಹ್ಮವಲ್ಲ ಎಂಬ ಭ್ರಾಂತಿಯನ್ನು ಕಳೆಯುವ 'ನಾನು ಬ್ರಹ್ಮವು' ಎಂಬ ನಿಶ್ಚಯವು ವಿವೇಕಿಯಾದ ಪುರುಷನಿಗೆ ವಸ್ತುವಿಚಾರದಿಂದಲೇ ಉಂಟಾಗುತ್ತದೆ.

**ಮಿಥ್ಯಾಜ್ಞಾನಸ್ಯ ವಿಚ್ಛಿತ್ತಿಃ ಸಮ್ಯಗ್ಜ್ಞಾನೇನ ಸಿಧ್ಯತಿ ।**
**ಸಮ್ಯಗ್ಜ್ಞಾನಂ ಪದಾರ್ಥಸ್ಯ ವಿಚಾರೇಣೈವ ನಾನ್ಯಥಾ ॥೩೦॥**

೩೦. ತಪ್ಪುತಿಳಿವಳಿಕೆಯ ನಾಶವು ಸರಿಯಾದ ತಿಳಿವಳಿಕೆಯಿಂದ ಆಗುತ್ತದೆ. ಸರಿಯಾದ ತಿಳಿವಳಿಕೆಯು ಪದಾರ್ಥದ ವಿಚಾರದಿಂದಲೇ ಹೊರತು ಬೇರೆಯ ರೀತಿಯಿಂದ ಆಗುವದಿಲ್ಲ.

**ಅತೋ ವಿಚಾರಃ ಕರ್ತವ್ಯಃ ಕರ್ಮ ಸಂನ್ಯಸ್ಯ ಧೀಮತಾ ।**
**ಬ್ರಹ್ಮಾತ್ಮೈಕತ್ವಬೋಧಾರ್ಥಂ ಸಂಸಾರೋ ಯೇನ ಶಾಮ್ಯತಿ ॥೩೧॥**

೩೧. ಆದ್ದರಿಂದ ಬುದ್ಧಿವಂತನಾದವನು ಕರ್ಮವನ್ನು ಸಂನ್ಯಾಸಮಾಡಿ, ಬ್ರಹ್ಮಾತ್ಮೈಕತ್ವಜ್ಞಾನಕ್ಕಾಗಿ ವಿಚಾರವನ್ನು ಮಾಡಬೇಕು.[1] ಅದರಿಂದ ಸಂಸಾರವು ನಾಶವಾಗುವದು.

## ತತ್ತ್ವಂಪದಾರ್ಥಗಳ ವಿಚಾರದಿಂದ ಮೋಕ್ಷ

**ತತ್ತ್ವಂಪದಾರ್ಥೌ ಸುವಿಚಾರಣೀಯೌ ।**
**ಸಮ್ಯಙ್ಮಹಾವಾಕ್ಯಗತೌ ಮುಮುಕ್ಷುಣಾ ।**
**ತಯೋರ್ವಿವೇಕೋದಬೋಧವಹ್ನಿಃ**
**ಸಂಸಾರಬನ್ಧಂ ಪ್ರದಹತ್ಯಶೇಷಮ್ ॥೩೨॥**

೩೨. ಮಹಾವಾಕ್ಯದಲ್ಲಿರುವ ತತ್, ತ್ವಮ್ – ಎಂಬೀ ಪದಗಳ ಅರ್ಥಗಳನ್ನು ಮುಮುಕ್ಷುವಾದುವನು ಚೆನ್ನಾಗಿ ವಿಚಾರಮಾಡಬೇಕು.[2] ಅವುಗಳ ವಿವೇಕದಿಂದ ಉಂಟಾದ ಜ್ಞಾನವೆಂಬ ಬೆಂಕಿಯು ಸಂಸಾರಬಂಧವನ್ನು ಸ್ವಲ್ಪವೂ ಉಳಿಯದಂತೆ ಸುಟ್ಟುಹಾಕುವದು.

---

1. ವಿ. ೧೫.    2. ವಿ.೧೧

ತತ್ತ್ವಂಪದಾರ್ಥೌ ಸುವಿಚಾರ್ಯ ಯೇನ
ಬ್ರಹ್ಮಾಽಹಮಿತ್ಯೇವ ಧಿಯಾಽಽತ್ಮನಾಽಽತ್ಮನಿ ।
ವಿಧ್ವಂಸಿತಾಽಹಂಮತಿರತ್ರ ಸಮ್ಯ-
ಕ್ಸ ಏವ ಕೈವಲ್ಯಸುಖಂ ಸಮಶ್ನುತೇ ॥೩೩॥

೩೩. ತತ್, ತ್ವಂ – ಎಂಬ ಪದಗಳ ಅರ್ಥಗಳನ್ನು ಚೆನ್ನಾಗಿ ವಿಚಾರ ಮಾಡಿ ಯಾವನು ನಾನು ಬ್ರಹ್ಮವೇ ಎಂಬ ಬುದ್ಧಿಯಿಂದ ತಾನೇ ತನ್ನಲ್ಲಿರುವ ಅಹಂಬುದ್ಧಿಯನ್ನು[1] ಚೆನ್ನಾಗಿ ನಾಶಗೊಳಿಸಿಕೊಂಡಿರುವನೋ ಅವನೇ ಕೈವಲ್ಯ ಸುಖವನ್ನು ಪಡೆದುಕೊಳ್ಳುತ್ತಾನೆ.

## ಪ್ರತ್ಯಗಾತ್ಮನ ತತ್ತ್ವ

ಪ್ರತ್ಯಕ್ತತ್ತ್ವಂ ಮಯಾ ಸಮ್ಯಗ್ಬೋಧ್ಯತೇ ಶ್ರೂಯತಾಂ ತ್ವಯಾ ।
ಯದ್ವಿಜ್ಞಾನೇನ ಸಂಸಾರಃ ಸಹಮೂಲಂ ವಿನಶ್ಯತಿ ॥೩೪॥

೩೪. ಪ್ರತ್ಯಗಾತ್ಮನ ತತ್ತ್ವವನ್ನು ನಾನು ಚೆನ್ನಾಗಿ ತಿಳಿಸಿಕೊಡುವೆನು, ನೀನು (ಇದನ್ನು) ಕೇಳು. ಇದನ್ನು ಅರಿತುಕೊಂಡರೆ ಸಂಸಾರವು ಕಾರಣಸಹಿತವಾಗಿ ನಾಶವಾಗುತ್ತದೆ.

ಯೋಽಸ್ಮಿನ್ ದೇಹೇ ತ್ವಹಮಹಮಿತಿಪ್ರತ್ಯಯಾಲಮ್ಬನಃ ಸ-
ನ್ನಾಸ್ತೇ ನಿತ್ಯಂ ಸಕಲಕರಣಗ್ರಾಮಚೇಷ್ಟಾನಿದಾನಮ್ ।
ಸಾಕ್ಷಾಜ್ಜಾನನ್ವಿವಿಧವಿಕೃತೀಃ ಪ್ರಾಣಬುದ್ಧೀನ್ದ್ರಿಯಾಣಾಂ
ಸೋಽಯಂ ಪ್ರತ್ಯಙ್ಙಹಮಧಿಗತಃ ಸ್ವಾತ್ಮನಾ ಶುದ್ಧಬೋಧಃ ॥೩೫॥

೩೫. ಯಾವನಾದರೆ ಈ ದೇಹದಲ್ಲಿ ನಾನು–ನಾನು ಎಂಬ ಪ್ರತ್ಯಯಕ್ಕೆ ವಿಷಯನಾಗಿ[2], ಎಲ್ಲಾ ಕರಣಸಮೂಹದ ವ್ಯಾಪಾರಕ್ಕೂ ಕಾರಣನಾಗಿರುತ್ತಾನೋ, ಪ್ರಾಣ, ಬುದ್ಧಿ, ಇಂದ್ರಿಯ – ಇವುಗಳ ಬಗೆಬಗೆಯ ವಿಕಾರಗಳನ್ನು ನೇರಾಗಿ ಅರಿಯುತ್ತಾ ಇರುವನೋ[3] ಆ ಇವನೇ ತನ್ನ ರೂಪದಿಂದ ಶುದ್ಧಚೈತನ್ಯ ರೂಪನಾಗಿರುವ ಪ್ರತ್ಯಗ್ರೂಪನಾದ ನಾನೆಂಬ ಆತ್ಮನು.[4]

---

1. ನಾನು ಸಂಸಾರಿ ಎಂಬ ಅಹಂಪ್ರತ್ಯಯವಿಷಯಾತ್ಮಬುದ್ಧಿಯನ್ನು
2. ವಿ. ೧೨೪ ; ೧೩೪ 3. ವಿ.೧೩೨ ; ಕೇ. ೫ ರಿಂದ ೯
4. ವಿ. ೧೨೪ ರಿಂದ ೧೩೨ರವರೆಗಿನ ಶ್ಲೋಕಗಳಲ್ಲಿರುವ ಆತ್ಮವರ್ಣನೆಯನ್ನು ಇದಕ್ಕೆ ಹೋಲಿಸಿರಿ.

ಸ್ವಯಂ ತ್ವನಿತ್ಯಾ ಅಪಿ ನಿತ್ಯತಾಂ ಗತಾ
ವ್ಯೋಮಾದಯೋಽಮೀ ಯದನುಗ್ರಹೇಣ ।
ಯದ್ಭಾನಮಾಶ್ರಿತ್ಯ ವಿಭಾನ್ತಿ ನಿತ್ಯಂ
ಭಾನ್ವಾದಯಃ ಪ್ರತ್ಯಗಯಂ ಚಿದಾತ್ಮಾ ॥೩೬॥

೩೬. ತಾವುತಾವು ಅನಿತ್ಯವೇ ಆಗಿದ್ದರೂ ಈ ಆಕಾಶವೇ ಮುಂತಾದವು ಯಾವನ ಅನುಗ್ರಹದಿಂದ ನಿತ್ಯತ್ವವನ್ನು ಪಡೆದುಕೊಂಡಿರುವವೋ,[1] ಯಾವನ ತೋರುವಿಕೆಯನ್ನಾಶ್ರಯಿಸಿಕೊಂಡು ಸೂರ್ಯನೇ ಮೊದಲಾದವರು ಯಾವಾಗಲೂ ಹೊಳೆಯುತ್ತಿರುವರೋ[2] ಇವನೇ ಚಿದಾತ್ಮನಾದ ಪ್ರತ್ಯಗಾತ್ಮನು.

ಪ್ರಾಮಾಣ್ಯಂ ವೇದಶಾಸ್ತ್ರಾಣಾಂ ತ್ವಗ್ಘ್ರಾಣಶ್ರುತಿಚಕ್ಷುಷಾಮ್ ।
ಘಟತೇ ಯತ್ಪ್ರಸಾದೇನ ಸೋಽಯಂ ಪ್ರತ್ಯಗಶೇಷದೃಕ್ ॥೩೭॥

೩೭. ವೇದಶಾಸ್ತ್ರಗಳಿಗೂ ತ್ವಕ್ಕು, ಘ್ರಾಣ, ಶ್ರೋತ್ರ, ಚಕ್ಷುಸ್ಸು – ಎಂಬ ಇಂದ್ರಿಯಗಳಿಗೂ ಪ್ರಾಮಾಣ್ಯವನ್ನು ಯಾವನ ಪ್ರಸಾದದಿಂದ ಹೊಂದುವರೋ ಆ ಇವನೇ ಸರ್ವದ್ರಷ್ಟೃವಾದ ಪ್ರತ್ಯಗಾತ್ಮನು.[3]

ಯ ಇನ್ದ್ರಿಯಾರ್ಥೇನ್ದ್ರಿಯಸಂನಿಧಾನ–
ಸಂಜಾಯಮಾನಾಖಿಲಬುದ್ಧಿವೃತ್ತೀಃ ।
ಸಾಕ್ಷ್ಯಾತ್ಮನಾ ಪಶ್ಯತಿ ನಿರ್ವಿಕಾರಃ
ಸ ಪ್ರತ್ಯಗರ್ಥಃ ಸದಸದ್ವಿಭಿನ್ನಃ ॥೩೮॥

೩೮. ಯಾವನು ಇಂದ್ರಿಯಗಳ ವಿಷಯಗಳು, ಇಂದ್ರಿಯಗಳು – ಇವುಗಳ ಸಂನಿಧಿಯಿಂದ ಉಂಟಾಗುವ ಎಲ್ಲಾ ಬುದ್ಧಿವೃತ್ತಿಗಳನ್ನೂ ತನ್ನಲ್ಲಿ ಯಾವ ವಿಕಾರವೂ ಇಲ್ಲದೆ ಸಾಕ್ಷಿಯಾಗಿ ನೋಡುತ್ತಿರುವನೋ ಅವನೇ ಸದಸದ್ವಿಲಕ್ಷಣ ನಾದ[4] ಪ್ರತ್ಯಗರ್ಥವಾದ ಆತ್ಮನು.

ಅಚೇತನಾಶ್ಚೇತನತಾಂ ಪ್ರಯಾನ್ತಿ
ಬುದ್ಧ್ಯಾದಯೋ ಯಸ್ಯ ಮಹಾಪ್ರಸಾದಾತ್
ಸರ್ವಾನ್ತರಃ ಸರ್ವವಿಲಕ್ಷಣೋ ಯ–
ಸ್ತಂ ಪ್ರತ್ಯಗಾತ್ಮಾನಮವೇಹಿ ವಿದ್ವನ್ ॥೩೯॥

1. ಕ. ೨–೨–೧೩ ; ಮುಂ. ೨–೨–೧೦ ; ಶ್ವೇ. ೬–೧೪
2. ವಿ. ೧೨೭. ಕ.೨–೨–೧೫ ; ಮುಂ.೨–೨–೧೦ ; ಶ್ವೇ. ೬–೧೪
3. ವಿ. ೨೯೧ 4. ವಿ. ೨೯೧, ೩೪೮

೩೯. ಅಚೇತನವಾದ ಬುದ್ಧ್ಯಾದಿಗಳೂ ಯಾವನ ಮಹಾನುಗ್ರಹದಿಂದ ಚೇತನತ್ವವನ್ನು ಪಡೆದುಕೊಳ್ಳುವವೋ, ಯಾವನು ಎಲ್ಲಕ್ಕಿಂತಲೂ ಒಳಗಿದ್ದು ಎಲ್ಲಕ್ಕಿಂತಲೂ ವಿಲಕ್ಷಣನಾಗಿರುವನೋ ಅವನನ್ನೇ, ಎಲೈ ವಿವೇಕಿಯೆ, ಪ್ರತ್ಯಗಾತ್ಮನೆಂದು ತಿಳಿದುಕೊ.

**ಆವಿರ್ಭಾವತಿರೋಭಾವಸ್ಥಿತಯೋ ಯೇನ ಸರ್ವದಾ ।**
**ಬುದ್ಧ್ಯಾದೇರಿಹ ಬುಧ್ಯನ್ತೇ ಸೋಽಯಮಾತ್ಮೇತಿ ಬುಧ್ಯತಾಮ್ ॥೪೦॥**

೪೦. ಬುದ್ಧಿಯೇ ಮುಂತಾದವುಗಳು ತೋರುವದು, ಮರೆಯಾಗುವದು, ಇದ್ದುಕೊಂಡಿರುವದು – ಇವು ಯಾವನಿಗೆ ಯಾವಾಗಲೂ ತಿಳಿಯಬರುತ್ತಿರುವವೋ, ಅವನೇ ಈ ಆತ್ಮನೆಂದು ತಿಳಿಯಬೇಕು.

**ಚೇತನತ್ವಂ ಚ ಬೋದ್ಧೃತ್ವಂ ಸರ್ವಜ್ಞತ್ವಂ ಚ ನಿತ್ಯತಾಮ್ ।**
**ಅಸದ್ರೂಪೋಽಪ್ಯಹಂಕಾರೋ ಯಸ್ಯ ಧರ್ಮಾನ್ ಸ್ವಯಂ ಭಜನ್ ॥**
**ಕರೋತಿ ಪ್ರಾವೃತಂ ಯಂ ತಂ[1] ಪ್ರತ್ಯಞ್ಚಂ ವಿದ್ಧಿ ಕೇವಲಮ್ ॥೪೧½॥**

೪೧–೪೧½. ಅಹಂಕಾರವು ತಾನು ಮಿಥ್ಯಾರೂಪವುಳ್ಳದ್ದಾದರೂ ಯಾವನ ಧರ್ಮಗಳಾದ ಚೈತನ್ಯ, ಜ್ಞಾತೃತ್ವ, ಸರ್ವಜ್ಞತ್ವ, ನಿತ್ಯತ್ವ – ಇವುಗಳನ್ನು ತಾನೇ ಪಡೆದುಕೊಂಡು ಯಾವನನ್ನು ಮರೆಮಾಡುವದೋ ಅವನನ್ನೇ ಕೇವಲನಾದ ಪ್ರತ್ಯಗಾತ್ಮನೆಂದು ತಿಳಿ.

**ಯೋಽಹಂಕಾರೇಣ ಪಿಹಿತೋ ಮೇಘೇನೇವ ದಿವಾಕರಃ ।**
**ನ ಜ್ಞಾಯತೇ ಬುದ್ಧಿಶೂನ್ಯೈಃ ಸೋಽಯಮಾತ್ಮೇತಿ ಬುಧ್ಯತಾಮ್ ॥೪೨॥**

೪೨. ಮೋಡದಿಂದ ಸೂರ್ಯನು ಮರೆಯಾಗಿರುವಂತೆ ಯಾವನು ಅಹಂಕಾರದಿಂದ[2] ಮರೆಯಾಗಿರುವನಾಗಿ ಬುದ್ಧಿಹೀನರಿಗೆ ತಿಳಿಯಬಾರದೆ ಇರುವನೋ ಆ ಇವನೇ ಆತ್ಮನೆಂದು ತಿಳಿ.

**ಸ್ವಪ್ನಪ್ರಪಞ್ಚೋ ರವಿಣಾ ನ ಭಾಸ್ಯತೇ**
**ನೈವಾನಲಾದ್ಯೈರ್ನ ಚ ಚಕ್ಷುರಾದಿಭಿಃ ।**
**ಪ್ರತ್ಯಕ್ಪ್ರಕಾಶೇನ ವಿಭಾತಿ ಸರ್ವಂ**
**ತಸ್ಮಾತ್ಸ್ವಯಂಜ್ಯೋತಿರಯಂ ಚಿದಾತ್ಮಾ ॥೪೩॥**

1. 'ತತ್ತ್ವಮ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

2. ವಿ. ೧೪೧

೪೩. ಕನಸಿನ ಪ್ರಪಂಚವನ್ನು ಸೂರ್ಯನು ಬೆಳಗುವದಿಲ್ಲ. ಅಗ್ನಿಯೇ ಮುಂತಾದವೂ ಬೆಳಗುವದಿಲ್ಲ ; ಚಕ್ಷುರಾದೀಂದ್ರಿಯಗಳೂ ಬೆಳಗುವದಿಲ್ಲ. ಅದೆಲ್ಲವೂ ಪ್ರತ್ಯಗಾತ್ಮನ ಬೆಳಕಿನಿಂದಲೇ ತೋರುತ್ತಿರುವದು. ಆದ್ದರಿಂದ ಈ ಚಿದಾತ್ಮನು ಸ್ವಯಂಜ್ಯೋತಿಯು.[1]

**ಬುದ್ಧಿಮಾತ್ರೇಣ ತಿಷ್ಠನ್ ಸನ್ ಪ್ರತ್ಯಗೇಷ ಉಪಾಧಿನಾ ।**
**ಸ್ವಪ್ನೇ ವಿಭಾತಿ ವಿಜ್ಞಾತುಂ ಶಕ್ಯಃ ಸದ್ಭಿರ್ಮುಮುಕ್ಷುಭಿಃ ॥೪೪॥**

೪೪. ಅಂತಃಕರಣವೆಂಬ ಉಪಾಧಿಯೊಡನೆ ಮಾತ್ರವೇ ಇದ್ದುಕೊಂಡು ಈ ಪ್ರತ್ಯಗಾತ್ಮನು ಸ್ವಪ್ನದಲ್ಲಿ ಬೆಳಗುತ್ತಿರುವನಾಗಿದ್ದಾನೆ. (ಆದ್ದರಿಂದ) ಸತ್ಪುರುಷರಾದ ಮುಮುಕ್ಷುಗಳು (ಇವನನ್ನು) ಅರಿತುಕೊಳ್ಳುವದಕ್ಕೆ ಆಗುತ್ತದೆ.

**ಬುದ್ಧ್ಯಂಶಂ ಭಾಸ್ಯಮುತ್ಸೃಜ್ಯ ಭಾನ[2]ಮಾತ್ರಪರಿಗ್ರಹಾತ್ ।**
**ಆತ್ಮಾಽವಶಿಷ್ಯತೇ ಶುದ್ಧೋ ಬೋಧಮಾತ್ರಸ್ತು ಕೇವಲಃ ॥೪೫॥**

೪೫. ಬೆಳಗಲ್ಪಡುವ ಬುದ್ಧಿಯ ಅಂಶವನ್ನು ಬಿಟ್ಟು ಬರಿಯ (ಇವನು) ಬೆಳಕನ್ನು ಮಾತ್ರ ಗ್ರಹಿಸುವದರಿಂದ ಶುದ್ಧನೂ ಕೇವಲಚಿನ್ಮಾತ್ರನೂ ಆದ ಆತ್ಮನು ಉಳಿದುಕೊಳ್ಳುವನು.[3]

**ಭಕ್ಷ್ಯಸ್ಥಂ ಯತ್ತು ಮಾಧುರ್ಯಂ ಕೇವಲಂ ಸ್ಯೈವ ಶರ್ಕರಾ ।**
**ಅವಶಿಷ್ಟಂ ತು ಯದ್ದ್ರವ್ಯಂ ತತ್ಪಿಷ್ಟಂ ನ ತು ಶರ್ಕರಾ ॥೪೬॥**

**ತದ್ವದತ್ರ ತು ಯದ್ಭಾನಂ ಶುದ್ಧಂ ಸ ಪ್ರತ್ಯಗಿಷ್ಯತೇ ।**
**ಯತ್ತು ಭಾಸ್ಯಂ ಸ ಬುದ್ಧ್ಯಂಶೋ ನ ತ್ವಾತ್ಮಾಯಂ ಸ್ವಯಂಪ್ರಭಃ ॥೪೭॥**

೪೬–೪೭. ಭಕ್ಷ್ಯದಲ್ಲಿರುವ ಸಿಹಿಯಿದೆಯಲ್ಲ, ಅದು ಮಾತ್ರವೇ ಸಕ್ಕರೆ ; ಇನ್ನುಳಿದ ವಸ್ತುವಿದೆಯಲ್ಲ, ಅದು ಹಿಟ್ಟೇ ಹೊರತು ಸಕ್ಕರೆಯಲ್ಲ. ಅದರಂತೆ ಇಲ್ಲಿ ಬರಿಯ ಚೈತನ್ಯದ ಬೆಳಕಿರುವದಲ್ಲ, ಅದೇ ಪ್ರತ್ಯಗಾತ್ಮನೆನ್ನುವರು. ಇನ್ನು ಯಾವದು ಅದಕ್ಕೆ ತೋರುವದೋ ಅದು ಬುದ್ಧಿಯ ಅಂಶವು, ಅದು ಈ ಸ್ವಯಂ ಪ್ರಕಾಶನಾದ ಆತ್ಮನಲ್ಲ.

1. ಬೃ.೪–೩–೯ರ ಸೂಚನೆ. ಅಲ್ಲಿ ಆತ್ಮನು ಬುದ್ಧಿಯಂಶವನ್ನು ಮಾತ್ರ ತೆಗೆದುಕೊಂಡು ಕನಸಿಗೆ ಹೋಗುವನೆಂದೂ, ತನ್ನ ಬೆಳಕಿನಿಂದಲೇ ಬೆಳಗುತ್ತಿರುವನೆಂದೂ ಹೇಳಿದೆ.
2. ಇಲ್ಲಿ ಅಚ್ಚಿನ ಪುಸ್ತಕದಲ್ಲಿ 'ಭಾಸ' ಎಂದೇ ಇದೆ ; ಆದರೆ ಮುಂದೆ 'ಭಾನ'ವೆಂದಿದೆ. ಇವೆರಡರಲ್ಲಿ ೪೭ನೆಯ ಶ್ಲೋಕದಲ್ಲಿ ಬಂದಿರುವದು ಯುಕ್ತವಾಗಿರುವದರಿಂದ ಈ ಶ್ಲೋಕದಂತೆ ಇಲ್ಲಿಯೂ ಭಾನಶಬ್ದವನ್ನೇ ಹಿಡಿಯಲಾಗಿದೆ.
3. ಕನಸಿನಲ್ಲಿ ಸ್ಥೂಲವಿಷಯಗಳಿಲ್ಲದ್ದರಿಂದ ಅಂತಃಕರಣವೇ ಅಲ್ಲಿ ವಿಷಯ ; ಅದನ್ನು ನೋಡುವವನೇ ಸ್ವಯಂಜ್ಯೋತಿಯಾದ ಆತ್ಮ – ಎಂದು ಸುಲಭವಾಗಿ ತಿಳಿದುಕೊಳ್ಳಬಹುದು.

**ಉಪಾಧಿವಿರಮೇ ಸುಪ್ತೌ ಬೋಧಮಾತ್ರಾವಶೇಷತಃ ।**
**ಸ್ವಯಮಾನನ್ದರೂಪೇಣ ಪ್ರತ್ಯಗೇಷ ಪ್ರಕಾಶತೇ ॥೪೮॥**

೪೮. ತನಿನಿದ್ರೆಯಲ್ಲಿ ಉಪಾಧಿಯು ಹೋಗಲಾಗಿ ಚಿನ್ಮಾತ್ರಸ್ವರೂಪವೇ ಉಳಿದುಕೊಂಡಿರುವದರಿಂದ ಈ ಪ್ರತ್ಯಗಾತ್ಮನು ತಾನೇ ಆನಂದರೂಪದಿಂದ[1] ತೋರಿಕೊಳ್ಳುತ್ತಿರುತ್ತಾನೆ.

**ಸುಷುಪ್ತಿಸಾಕ್ಷಿಣಂ ಶುದ್ಧಂ ಚಿದೇಕರಸಮವ್ಯಯಮ್ ।**
**ತಂ ನಿರ್ವಿಶೇಷಮಾತ್ಮಾನಂ ಸೋಽಹಮಿತ್ಯೇವ ನಿಶ್ಚಿನು ॥೪೯॥**

೪೯. ಸುಷುಪ್ತಿಗೆ ಸಾಕ್ಷಿಯಾಗಿ ಶುದ್ಧನಾಗಿ ಚಿದೇಕರಸನಾಗಿರುವ ಅವ್ಯಯನಾಗಿರುವನಲ್ಲ, ಆ ನಿರ್ವಿಶೇಷನಾದ ಆತ್ಮನೇ ನಾನು ಎಂದೇ ನಿಶ್ಚಯಿಸಿಕೊ.[2]

## ಶರೀರವು ತಾನಲ್ಲವೆಂದು ತಿಳಿಯಬೇಕು

**ಶರೀರಮೇವ ಸ್ವಾತ್ಮಾನಂ ಪಶ್ಯತೀತಿ ಪಶುರ್ಮತಃ ।**
**ತದ್ದರ್ಶೀ ಚೇತ್ಪಣ್ಡಿತೋಽಪಿ ತಸ್ಯಾಪ್ಯಸ್ಯ ಕಿಮನ್ತರಮ್ ॥೫೦॥**

೫೦. ಶರೀರವನ್ನೇ ತಾನೆಂದು ತಿಳಿಯುತ್ತದೆಯಾದ್ದರಿಂದ (ಪಶುವನ್ನು) ಪಶುವೆನ್ನುವರು. ಪಂಡಿತನೂ ಅದನ್ನೇ ತಾನೆಂದು ತಿಳಿಯುವನಾದರೆ ಅದಕ್ಕೂ ಇವನಿಗೂ ಹೆಚ್ಚು ಕಡಿಮೆಯೇನು ?

**ಸ್ತೋತ್ರಸ್ಯಾಪಿ ಚ ನಿನ್ದಾಯಾಃ ಪಾತ್ರಂ ಮಲಮಯಂ ವಪುಃ ।**
**ತಯೋರ್ನ ವಿಷಯಃ ಸ್ವಾತ್ಮಾ ನಿರ್ವಿಕಾರೋ ನಿರಾಕೃತಿಃ ॥೫೧॥**

೫೧. ಹೊಗಳಿಕೆಗೂ ನಿಂದೆಗೂ ವಿಷಯವಾಗಿರುವದು ಮಲಮಯವಾದ ಶರೀರವು. ನಿರ್ವಿಕಾರನೂ ನಿರಾಕಾರನೂ ಆಗಿರುವ ತನ್ನ ಆತ್ಮನು ಅವುಗಳೆರಡಕ್ಕೂ ವಿಷಯನಲ್ಲ.[3]

**ಮಾಂಸಾಸ್ಥಿಮಜ್ಜಾಮಲಮೂತ್ರಪಾತ್ರೇ**
**ಗಾತ್ರೇ ಸಮಾತ್ಮತ್ವಮತಿಂ ಜಹೀಹಿ ।**
**ವಿಲಕ್ಷಣಂ ಸ್ವಂ ವಿಮಲಂ ಪ್ರಶಾನ್ತಂ**
**ಚಿನ್ಮಾತ್ರಮಾನನ್ದಘನಂ ವಿದಿತ್ವಾ ॥೫೨॥**

---

1. ಸುಷುಪ್ತಿಯಲ್ಲಿ ಆನಂದಮಯಕೋಶವು ಇದೆ ಎಂದು ವಿ. ೨೦೬ರಲ್ಲಿ ಹೇಳಿರುವದನ್ನು ನೋಡಿ.

2. ವಿ. ೨೦೨–೨೦೩. 3. ವಿ. ೯೧

೫೨. ಮಾಂಸ, ಎಲುಬು, ಮಜ್ಜೆ, ಮಲ, ಮೂತ್ರ – ಇವುಗಳ ಪಾತ್ರೆಯಾಗಿರುವ[1] ಶರೀರದಲ್ಲಿ ಸಮನಾದ[2] ಆತ್ಮನೆಂಬ ಬುದ್ಧಿಯನ್ನು ಬಿಟ್ಟುಬಿಡು. (ಅದಕ್ಕಿಂತ) ವಿಲಕ್ಷಣನಾಗಿ ನಿರ್ಮಲನೂ, ಪ್ರಶಾಂತನೂ, ಚಿನ್ಮಾತ್ರನೂ, ಆನಂದಘನನೂ ಆಗಿರುವ ನಿನ್ನ ಆತ್ಮನನ್ನು ತಿಳಿದುಕೊಂಡು (ದೇಹಾತ್ಮಬುದ್ಧಿಯನ್ನು ಬಿಟ್ಟುಬಿಡು).

## ಅಜ್ಞಾನದಿಂದ ಸಂಸಾರಿತ್ವಬುದ್ಧಿ

**ಯದೇಕಸ್ಮಿನ್ನನೇಕತ್ವಕಲ್ಪನಾಕಾರಣಂ ಪರಮ್ ।**
**ತದಜ್ಞಾನಂ ವಿಜಾನೀಹಿ ಕಾರಣಂ ವಪುರಾತ್ಮನಃ ॥೫೩॥**

೫೩. ಒಬ್ಬನಾದ (ಆತ್ಮ)ನಲ್ಲಿ ಅನೇಕರೆಂಬ ಕಲ್ಪನೆಗೆ ಯಾವದು ಕೇವಲ ಕಾರಣವಾಗಿರುವದೋ ಅದೇ ಅಜ್ಞಾನವೆಂದು ತಿಳಿ. (ಇದು) ಆತ್ಮನಿಗೆ ಕಾರಣ ಶರೀರವು.[3]

**ಅನೇನ ವಪುಷಾ ಚ್ಛನ್ನಃ ಪ್ರತ್ಯಗಾತ್ಮಾ ಸ್ವಯಂಪ್ರಭಃ ।**
**ಅಸಂಸಾರ್ಯಪಿ ಸಂಸಾರಿವದೇವಾಽಽಭಾತ್ಯವಿಕ್ರಿಯಃ ॥೫೪॥**

೫೪. ಸ್ವಯಂಪ್ರಕಾಶನಾದ ಪ್ರತ್ಯಗಾತ್ಮನು ಈ ಶರೀರದಿಂದ[4] ಮರೆ ಮಾಡಲ್ಪಟ್ಟವನಾಗಿ, ತಾನು ಅಸಂಸಾರಿಯಾಗಿದ್ದರೂ ಯಾವ ಮಾರ್ಪಾಡೂ ಇಲ್ಲದವನಾದರೂ ಸಂಸಾರಿಯಂತೆಯೇ ತೋರುತ್ತಿರುವನು.

**ಕಾರ್ಯಕಾರಣಸಂಘಾತಕಾರ್ಯಂ[5] ಕರ್ಮ ನ ಚಾತ್ಮನಃ ।**
**ತದಜ್ಞಾತ್ವಾ ವಿಮೂಢಾತ್ಮಾ ಕರ್ತಾಽಹಮಿತಿ ಮನ್ಯತೇ ॥೫೫॥**

೫೫. ಕರ್ಮವು ಕಾರ್ಯಕರಣಸಂಘಾತದ[6] ಕಾರ್ಯವೇ ಹೊರತು, ಆತ್ಮನದಲ್ಲ. ಇದನ್ನರಿಯದೆ ಮೂಢವಾದ ಅಂತಃಕರಣವುಳ್ಳವನು ನಾನೇ ಕರ್ತೃವು ಎಂದು ಎಣಿಸಿಕೊಳ್ಳುತ್ತಾನೆ.

---

1. ವಿ. ೮೭. 2. 'ಸಮಾತ್ಮತ್ವಮತಿಂ' ಎಂಬ ಅಚ್ಚಿನ ಪಾಠದ ಕನ್ನಡವಿದು ; 'ತ್ವಮಾತ್ಮತ್ವಮತಿಂ' ಎಂದಿದ್ದರೆ 'ನೀನು ಆತ್ಮನೆಂಬ ಬುದ್ಧಿಯನ್ನು' ಎಂದು ಕನ್ನಡಿಸಿಕೊಳ್ಳಬೇಕಾಗುವದು. 3. ವಿ. ೧೧೯ರಲ್ಲಿ ಅವ್ಯಕ್ತವನ್ನು ಕಾರಣಶರೀರವೆಂದಿದೆ; ಅಜ್ಞಾನ, ಅವ್ಯಕ್ತ– ಎರಡೂ ಒಂದೇ ಎಂದು ಗ್ರಂಥಕರ್ತರ ಅಭಿಪ್ರಾಯವಿದ್ದರೂ ಇರಬಹುದು.
4. ಕಾರಣಶರೀರದಿಂದ, ಅಜ್ಞಾನದಿಂದ – ಎಂಬರ್ಥವಿರ ಬಹುದು.
5. 'ಕಾರ್ಯಕರ್ಮ' ಎಂಬ ಅಚ್ಚಿನ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ ; ವಾ॥ ಪಾಠದಲ್ಲಿ ಹೀಗೆಯೇ ಇದೆ.
6. ದೇಹೇಂದ್ರಿಯಗಳ ಗುಂಪಿನಿಂದ ಎಂದರ್ಥ. 'ಕಾರ್ಯಕಾರಣ' ಎಂಬ ಮೂಲವು ಛಂದಸ್ಸಿಗಾಗಿ ಬರೆದದ್ದು; ಕಾರ್ಯಕರಣ ಎಂಬುದೇ ರೂಢಿಯಲ್ಲಿರುವ ಶಬ್ದ.

**ಅನ್ಯನಿಷ್ಪಾದಿತೇ ಕರ್ಮಣ್ಯಯಂ ಮೂಢಮತಿರ್ಜನಃ ।**
**ಕರ್ತೃತ್ವಾಭಿನಿವೇಶೇನ ಸಂಸಾರಾಬ್ಧೌ ನಿಮಜ್ಜತಿ ॥೫೬॥**

೫೬. ಮತ್ತೊಂದರಿಂದ[1] ಉಂಟಾದ ಕರ್ಮದಲ್ಲಿ ಮೂಢಬುದ್ಧಿಯುಳ್ಳ ಈ ಮನುಷ್ಯನು (ತಾನೇ) ಕರ್ತೃವೆಂಬ ಅಭಿನಿವೇಶದಿಂದ[2] ಸಂಸಾರಸಾಗರದಲ್ಲಿ ಮುಳುಗುತ್ತಾನೆ.

**ಯೋ ವಾಽನಾತ್ಮಕೃತಂ ಕರ್ಮ ಪಶ್ಯತ್ಯಾತ್ಮನ್ಯವಿಕ್ರಿಯೇ ।**
**ಸ ಏವಾಽಜ್ಞತಮೋ ಲೋಕೇ ನ ಗೋಪೋ ನಾಽಪಿ ಬಾಲಕಃ ॥೫೭॥**

೫೭. ಅನಾತ್ಮದಿಂದ ಆಗುತ್ತಿರುವ ಕರ್ಮವು ಅವಿಕಾರನಾದ ಆತ್ಮನಲ್ಲಿರುವದೆಂದು ಯಾವನು ಕಾಣುವನೋ ಅವನೇ ಲೋಕದಲ್ಲಿ ಅತ್ಯಂತಮೂಢನು, ದನಕಾಯುವವನೂ (ಮೂಢ)ನಲ್ಲ, ಹುಡುಗನೂ (ಮೂಢ)ನಲ್ಲ.

**ದೇಹೇನ್ದ್ರಿಯಪ್ರಾಣಮನೋಽಹಮಾದಿಭಿ–**
**ಸ್ತ್ವನಾತ್ಮಕೈರಾತ್ಮನಿ ಕಲ್ಪಿತೈಃ ಕೃತಮ್ ।**
**ಅವಿಕ್ರಿಯೇ ಸ್ವಾತ್ಮನಿ ಶುದ್ಧಬೋಧೇ**
**ತ್ವಾರೋಪ್ಯ ಯಃ ಶೋಚತಿ ಮೂಢ ಏಷಃ ॥೫೮॥**

೫೮. ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು, ಅಹಂಕಾರ – ಮುಂತಾದ ಆತ್ಮನಲ್ಲಿ ಕಲ್ಪಿತವಾಗಿರುವ ಅನಾತ್ಮಗಳಿಂದ ಆಗುತ್ತಿರುವ ಕರ್ಮವನ್ನು ಶುದ್ಧಚೈತನ್ಯಸ್ವರೂಪನಾದ ನಿರ್ವಿಕಾರನಾದ ತನ್ನ ಆತ್ಮನಲ್ಲಿ ಆರೋಪಿಸಿಕೊಂಡು ಯಾವನು ಶೋಕಿಸುತ್ತಿರುವನೋ ಅವನೇ ಮೂಢನು.[3]

## ಮನಸ್ಸೇ ಸಂಸಾರವನ್ನು ಕಲ್ಪಿಸುತ್ತದೆ

**ಸ್ವಪ್ನೇ ಯಥಾ ನಿರ್ವಿಷಯೇಽಪಿ ಸಂಸೃತಿಂ**
**ಸೂತೇ ಮನಃ ಸ್ವಸ್ಥಿತವಾಸನಾಬಲಾತ್ ।**
**ತಥೈವ ಜಾಗ್ರತ್ಯಪಿ ಪೂರುಷಸ್ಯ**
**ಸರ್ವಂ ಮನಃ ಕಲ್ಪಯತೇ ಸ್ವಶಕ್ತ್ಯಾ ॥೫೯॥**

೫೯. ಯಾವ ವಿಷಯವೂ ಇಲ್ಲದಿದ್ದರೂ ಸ್ವಪ್ನದಲ್ಲಿ ಹೇಗೆ ಮನಸ್ಸು ತನ್ನಲ್ಲಿರುವ ವಾಸನೆಯ ಬಲದಿಂದ[4] ಸಂಸಾರವನ್ನು ಉಂಟುಮಾಡುವದೋ,

1. ಅನಾತ್ಮವಾದ ದೇಹೇಂದ್ರಿಯಗಳ ಗುಂಪಿನಿಂದ.
2. ತಪ್ಪುತಿಳಿವಳಿಕೆಯಿಂದಾದ ಅಭಿಮಾನದಿಂದ. 3. ವಿ. ೧೨೧.
4. ಬೃ.೪–೩–೯ ನೋಡಿ.

ಹಾಗೆಯೇ ಎಚ್ಚರದಲ್ಲಿಯೂ ಮನುಷ್ಯನಿಗೆ ಮನಸ್ಸೇ ತನ್ನ ಶಕ್ತಿಯಿಂದ ಎಲ್ಲವನ್ನೂ ಕಲ್ಪಿಸುತ್ತದೆ.[1]

**ಮನ ಏವಾಖಿಲಂ ವಿಶ್ವಂ ಸೃಜತ್ಯತ್ರ ತು ನೋ ವಿಧಿಃ ।**
**ಸ್ವಪ್ನವನ್ನ ಹಿ ಸ್ವಪ್ನಾರ್ಥೋ ಬ್ರಹ್ಮಣಾ ಸೃಷ್ಟ ಈಕ್ಷ್ಯತೇ ॥೬೦॥**

೬೦. ಮನಸ್ಸೇ ಪ್ರಪಂಚವನ್ನೆಲ್ಲ ಸೃಷ್ಟಿಸುತ್ತದೆಯೇ ಹೊರತು ಬ್ರಹ್ಮನಲ್ಲ ; ಸ್ವಪ್ನದಂತೆಯೇ (ಇದನ್ನು ತಿಳಿಯಬೇಕು). ಸ್ವಪ್ನದಲ್ಲಿ (ಕಾಣುವ) ವಸ್ತುವನ್ನು ಬ್ರಹ್ಮನು ಸೃಷ್ಟಿಸುವದು ಕಂಡುಬಂದಿಲ್ಲವಷ್ಟೆ ?[2]

**ರೂಪಂ ನಾಮ ಚ ಜಾತಿಂ ಚ ಕಲ್ಪಯಿತ್ವಾ ಸ್ವಶಕ್ತಿತಃ ।**
**ಬ್ರಹ್ಮಜ್ಞಮಪಿ ವಾ ಚಿತ್ತಂ ಸಂಸಾರಯತಿ ಪೂರುಷಮ್ ॥೬೧॥**

೬೧. ರೂಪ, ನಾಮ, ಜಾತಿ – ಇವುಗಳನ್ನು ತನ್ನ ಶಕ್ತಿಯಿಂದಲೇ ಕಲ್ಪಿಸಿ ಬ್ರಹ್ಮಜ್ಞಾನಿಯಾದ ಪುರುಷನನ್ನು ಕೂಡ[3] ಚಿತ್ತವು ಸಂಸಾರದಲ್ಲಿ ತೊಳಲಿಸುವದು.

**ಸಂಸಾರೋ ಮನಸಾ ಪುಂಸಃ ಕಲ್ಪಿತೋಽಸ್ತಿ ನ ವಸ್ತುತಃ ।**
**ಮನಃಶೂನ್ಯೋ ಸುಷುಪ್ತ್ಯಾದೌ ಸಂಸಾರೋ ನೈವ ದೃಶ್ಯತೇ ॥೬೨॥**

೬೨. ಮನುಷ್ಯನಿಗೆ ಸಂಸಾರವು ಮನಸ್ಸಿನಿಂದಲೇ ಕಲ್ಪಿತವಾಗಿರುತ್ತದೆಯೇ ಹೊರತು ನಿಜವಾಗಿರುವದಿಲ್ಲ. ಮನಸ್ಸಿಲ್ಲದ ಸುಷುಪ್ತ್ಯಾದಿಗಳಲ್ಲಿ[4] ಸಂಸಾರವು ಕಾಣಿಸುವದೇ ಇಲ್ಲ.

**ಯತ್ರ ಯತ್ರ ಮನಃಸ್ಫೂರ್ತಿಸ್ತತ್ರ ತತ್ರ ಜಗತ್ತ್ರಯಮ್ ।**
**ಯತ್ರ ಯತ್ರ ಮನೋ ನಾಸ್ತಿ ತತ್ರ ತತ್ರ ನ ಕಿಞ್ಚನ ॥೬೩॥**

೬೩. ಎಲ್ಲೆಲ್ಲಿ ಮನಸ್ಸು ತೋರುತ್ತಿರುವದೋ ಅಲ್ಲಲ್ಲಿ ಮೂರು ಲೋಕವೂ ಇರುವದು ; ಎಲ್ಲೆಲ್ಲಿ ಮನಸ್ಸಿಲ್ಲವೋ ಅಲ್ಲಲ್ಲಿ ಏನೊಂದೂ ಇರುವದೇ ಇಲ್ಲ.[5]

1. ವಿ. ೧೬೯.
2. ಎಲ್ಲವನ್ನೂ ಈಶ್ವರನೇ ಸೃಷ್ಟಿಸುತ್ತಾನೆಂದು ಶಾಸ್ತ್ರದಲ್ಲಿ ಹೇಳಿರುವದು ನಿಜವಾದರೂ ಮನಸ್ಸಿರುವ ಜೀವರಿಗೆ ಮಾತ್ರ ಆ ಸಂಸಾರವು ತೋರುತ್ತದೆ ಎಂಬುದು ಅಭಿಪ್ರಾಯ. ಸೂ. ಭಾ. ೩–೨–೫.
3. ಪರೋಕ್ಷಜ್ಞಾನಿಯನ್ನು ಎಂದು ಅಭಿಪ್ರಾಯ ; ಏಕೆಂದರೆ ಅಪರೋಕ್ಷಬ್ರಹ್ಮಜ್ಞಾನಿಗೆ ಮತ್ತೆ ಸಂಸಾರವುಂಟಾಗುವ ಸಂಭವವೇ ಇಲ್ಲ.
4. ಸುಷುಪ್ತಿ ಮದ, ಮೂರ್ಛೆ, ಸಮಾಧಿ – ಮುಂತಾದ ಅವಸ್ಥೆಗಳಲ್ಲಿ – ಎಂದರ್ಥ. ಬಂಧಮೋಕ್ಷಗಳಿಗೆ ಮನಸ್ಸೇ ಕಾರಣವೆಂಬುದಕ್ಕೆ ವಿ. ೧೭೧–೧೭೩ಯನ್ನು ನೋಡಿ.
5. ವಿ. ೧೬೮.

**ಅಹೋ ಬ್ರಹ್ಮಮಯೀ ದೃಷ್ಟಿಃ ಪೀಯೂಷಾಮ್ಬುದವತ್ ಸದಾ ।**
**ಆನನ್ದಮೇವ ಸರ್ವತ್ರ ಪ್ರವರ್ಷತಿ ನಿರನ್ತರಮ್ ॥೬೪॥**

೬೪. ಆಹ ! ಬ್ರಹ್ಮಮಯವಾದ ದೃಷ್ಟಿಯು ಅಮೃತದ ಮೋಡದಂತೆ ಯಾವಾಗಲೂ ಆನಂದವನ್ನೇ ಎಡೆಬಿಡದೆ ಮಳೆಗರೆಯುತ್ತಿರುವದು !

**ಸರ್ವಾನರ್ಥನಿದಾನಂ ಮನ ಏವ ಭವತ್ಯಮುಷ್ಯ ಪುರುಷಸ್ಯ ।**
**ತನ್ಮನಸೋ ನಿಗ್ರಹಣಂ ಕರ್ತವ್ಯಂ ಬನ್ಧಮುಕ್ತಯೇ ಪುಂಸಾ ॥೬೫॥**

೬೫. ಈ ಪುರುಷನಿಗೆ ಎಲ್ಲಾ ಅನರ್ಥಗಳಿಗೂ ಮನಸ್ಸೇ ಕಾರಣವಾಗಿರುವದು. ಆದ್ದರಿಂದ ಮನುಷ್ಯನು ಬಂಧದಿಂದ ಬಿಡುಗಡೆಯಾಗುವದಕ್ಕಾಗಿ ಮನಸ್ಸನ್ನು ನಿಗ್ರಹಮಾಡಿಕೊಳ್ಳಬೇಕು.[1]

**ಸಂಕಲ್ಪೋಽಪಿ ವಿಕಲ್ಪಃ ಕಾಮಃ ಕ್ರೋಧೋ ಭಯಂ ವಿಷಾದಶ್ಚ ।**
**ಮನಸೋ ಹ್ಯೇತೇ ಧರ್ಮಾ ನೈವ ದ್ರಷ್ಟುಶ್ಚಿದಾತ್ಮನಃ ಕೋಽಪಿ ॥೬೬॥**

೬. ಸಂಕಲ್ಪವೂ ವಿಕಲ್ಪವೂ ಕಾಮವೂ ಕ್ರೋಧವು ಭಯವೂ ವಿಷಾದವೂ– ಇವು(ಗಳೆಲ್ಲವೂ) ಮನಸ್ಸಿನ ಧರ್ಮಗಳೇ ಹೊರತು ಚಿದಾತ್ಮನಿಗೆ (ಈ) ಯಾವದೊಂದೂ (ಧರ್ಮ)ವಲ್ಲ.[2]

## ಅಹಂಕಾರ ಅಥವಾ ವಿಜ್ಞಾನ

**ಜ್ಞಾನಕ್ರಿಯಾಶಕ್ತಿಮದನ್ತರಙ್ಗಂ**
**ವಿಜ್ಞಾನಸಂಜ್ಞಂ ಪ್ರಥಮೋ ವಿಕಾರಃ[3] ।**
**ಅನಾದಿಸಾಂಸಾರಿಕವಾಸನಾಢ್ಯಂ**
**ಗುಣಪ್ರಸಾದಾಸ್ಪದಮಾತ್ಮಲಿಙ್ಗಮ್ ॥೬೭॥**

೬೭. ಜ್ಞಾನಕ್ರಿಯಾಶಕ್ತಿಗಳುಳ್ಳದ್ದಾಗಿರುವ ಅಂತಃಕರಣಕ್ಕೆ ವಿಜ್ಞಾನವೆಂದು ಹೆಸರು. ಇದೇ ಮೊದಲನೆಯ ವಿಕಾರವು.[4] ಅನಾದಿಯಾದ ಸಂಸಾರದ ವಾಸನೆಗಳುಳ್ಳದ್ದು. ಗುಣದ ಪ್ರಸನ್ನತೆಗೆ ಆಶ್ರಯವಾದದ್ದು.[5] ಆತ್ಮನಿಗೆ ಲಿಂಗವಾಗಿ (ಗುರುತಾಗಿ)ರುತ್ತದೆ.[6]

1. ೬೨ನೆಯ ಶ್ಲೋಕದ ೪ನೆಯ ಟಿಪ್ಪಣಿಯನ್ನು ನೋಡಿ.
2. ಬೃ.೧–೫–೩ರ ಸೂಚನೆ.
3. 'ಪ್ರಥಮಂ ವಿಕಾರಮ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.
4. ವಿ. ೧೮೪, ೨೯೫.
5. 'ಗುಣಪ್ರಸಾದಾಸ್ಪದಮ್' ಎಂಬ ಮಾತಿನ ಅನುವಾದವಿದು. ಇದರ ಅರ್ಥವೇನೆಂಬುದು ಸರಿಯಾಗಿ ತಿಳಿಯಲಿಲ್ಲ ; ಮೂರು ಗುಣಗಳ ಅಭಿಮಾನಕ್ಕೆ ಕಾರಣವಾದದ್ದು ಎಂದಿರಬಹುದು. ೭೧, ೭೨ನೆಯ ಶ್ಲೋಕಗಳನ್ನು ನೋಡಿ.
6. ವಿ. ೯೯.

ಇದಂ ಚಿದಾತ್ಮಸ್ಫುರಣಾನುವೃತ್ತ್ಯಾ
ವಿಸ್ಫೂರ್ತಿಮತ್ಯನ್ತಮುಪೈತಿ ಸಂನಿಧೌ ।
ಚಿದಾತ್ಮನಸ್ತುಲ್ಯತಯಾ ವಿಭಾತಿ
ಸೂರ್ಯಸ್ಯ ದೀಪ್ತ್ಯಾ ಸ್ಫಟಿಕೋ ಯಥಾ ತಥಾ ॥೬೮॥

೬೮. ಇದು ಚಿದಾತ್ಮನ ಹೊಳಪನ್ನು ಅನುಸರಿಸುವದರಿಂದ (ಅವನ) ಸಂನಿಧಿಯಲ್ಲಿ ಅತ್ಯಂತವಾದ ಹೊಳಪನ್ನು ಪಡೆಯುತ್ತದೆ.[1] ಸೂರ್ಯನ ಪ್ರಕಾಶದಿಂದ ಸ್ಫಟಿಕವು ಹೇಗೋ ಹಾಗೆ ಚಿದಾತ್ಮನಿಗೆ ಸಮವಾಗಿಯೇ ಕಾಣುತ್ತದೆ.

ಅಯಂ ಮಹಾನಹಙ್ಕಾರೋ ವೃತ್ತಿಮಾನ್ ಕರ್ತೃಲಕ್ಷಣಃ ।
ಸರ್ವಸಂಸಾರನಿರ್ವೋಢಾ ವಿಜ್ಞಾನಮಯಶಬ್ದಭಾಕ್ ॥೬೯॥

೬೯. ಇದೇ ದೊಡ್ಡ (?)[2] ಅಹಂಕಾರವು, ವೃತ್ತಿಗಳೊಡಗೂಡಿ ಕರ್ತೃಸ್ವರೂಪವಾಗಿರತಕ್ಕದ್ದು, ಸರ್ವಸಂಸಾರವನ್ನೂ ನಿರ್ವಹಿಸತಕ್ಕದ್ದು 'ವಿಜ್ಞಾನಮಯ'ನೆಂಬ ಹೆಸರುಳ್ಳದ್ದು.[3]

ಅಹಂ ಮಮೇತ್ಯೇಷ ಸದಾಭಿಮಾನಂ
ಕರೋತಿ ದೇಹೇ ಚ ತದೀಯಧರ್ಮೇ ।
ಜೀವಾಭಿಧಾನಃ ಪುರುಷೋಽಯಮೇವ
ಕರ್ತಾ ಚ ಭೋಕ್ತಾ ಚ ಸುಖೀ ಚ ದುಃಖೀ ॥೭೦॥

೭೦. (ಈ ವಿಜ್ಞಾನಮಯವು) ನಾನು ನನ್ನದು ಎಂದು ಯಾವಾಗಲೂ ದೇಹದ ಮತ್ತು ಅದರ ಧರ್ಮದಲ್ಲಿ ಅಭಿಮಾನವನ್ನು ಮಾಡಿಕೊಳ್ಳುತ್ತಿರುವದು. ಇದೇ ಜೀವನೆಂಬ ಪುರುಷನು ; ಕರ್ತೃವೂ ಭೋಕ್ತೃವೂ ಸುಖಿಯೂ ದುಃಖಿಯೂ (ಆಗಿಬಿಡುತ್ತದೆ).[4]

ಪುಣ್ಯಂ ಚ ಪಾಪಂ ಚ ಕರೋತಿ ತತ್ಫಲಂ
ಭುಙ್ಕ್ತೇ ಸ್ವಯಂ ನನ್ದತಿ ಖಿದ್ಯತೇ ಚ ।
ಸತ್ತ್ವಾದಿಧರ್ಮಸ್ಫುರಣೇನ ಜಾಗ್ರ–
ತ್ಸ್ವಪ್ನಾದ್ಯವಸ್ಥಾ ಅಯಮೇವ ಯಾತಿ ॥೭೧॥

1. ಇದೇ ಚಿದಾಭಾಸವೆಂಬುದು ವಿ. ೧೮೭.

2. ಮಹಾನಹಂಕಾರವೆಂದರೇನೋ ತಿಳಿಯಲಿಲ್ಲ.

3. ವಿ. ೧೮೭–೧೮೭೧/೨. ವಿವೇಕಚೂಡಾಮಣಿಯ ವಿಜ್ಞಾನಮಯಕೋಶದ ವಿವರದ ಶ್ಲೋಕಗಳ ಅಭಿಪ್ರಾಯವನ್ನೂ ಇಲ್ಲಿರುವ ವರ್ಣನೆಗಳನ್ನೂ ಹೋಲಿಸಿ ನೋಡಿರಿ.

4. ವಿ. ೧೮೪.

೭೧. ಪುಣ್ಯವನ್ನೂ ಪಾಪವನ್ನೂ ಮಾಡುತ್ತದೆ, ಅದರ ಫಲವನ್ನು ಅನುಭವಿಸುತ್ತದೆ, ತಾನೇ ಹರ್ಷಪಡುತ್ತದೆ, ಖೇದಗೊಳ್ಳುತ್ತದೆ. ಸತ್ತ್ವಾದಿ ಗುಣಗಳ ಧರ್ಮಗಳು ಎದ್ದು ಬೆಳಗುವದರಿಂದ ಜಾಗ್ರತ್ಸ್ವಪ್ನಗಳೇ ಮುಂತಾದ ಅವಸ್ಥೆಗಳನ್ನು ಇದೇ ಹೊಂದುತ್ತದೆ.[1]

**ವಿಜ್ಞಾನಕೋಶೋಽಯಮತೀವ ಶುದ್ಧ-**
**ಸತ್ತ್ವಪ್ರಧಾನಶ್ಚಿತಿಸಂನಿಧಾನಾತ್ ।**
**ಚೈತನ್ಯಮೇತ್ಯಾಽಽತ್ಮವದೇವ ಭಾತಿ**
**ಹ್ಯಯೋ ಯಥಾ ವಹ್ನಿರಿವಾಗ್ನಿತಪ್ತಮ್ ॥೭೨॥**

೭೨. ಈ ವಿಜ್ಞಾನಕೋಶವು ಶುದ್ಧಸತ್ತ್ವಪ್ರಧಾನವಾಗಿ ಚೈತನ್ಯದ ಸಂನಿಧಿಯಿಂದ ಚೈತನ್ಯವನ್ನು ಹೊಂದಿ ಬಹಳವಾಗಿ ಆತ್ಮನಂತೆಯೇ ಬೆಳಗುತ್ತದೆ. ಬೆಂಕಿಯಿಂದ ಕಾದ ಕಬ್ಬಿಣವು ಹೇಗೋ ಹಾಗೆಯೇ (ಇದು.)[2]

**ಚಿದ್ದೀಪ್ತೋಽಯಮಹಙ್ಕಾರೋಽಪ್ಯಾಪಾದತಲಮಸ್ತಕಮ್ ।**
**ದೇಹಂ ವ್ಯಾಪ್ನೋತಿ ತೇನೈಷ ದೇಹೋ ಭವತಿ ಚೇತನಃ ॥೭೩॥**

೭೩. ಚೈತನ್ಯದಿಂದ ದೀಪ್ತವಾಗಿರುವ ಈ ಅಹಂಕಾರವು ಕೂಡ ಅಂಗಾಲಿನಿಂದ ನಡುನೆತ್ತಿಯವರೆಗೂ ದೇಹವನ್ನು ವ್ಯಾಪಿಸಿಕೊಂಡಿರುತ್ತದೆ. ಅದರಿಂದ ಈ ದೇಹವೂ ಚೇತನವಾಗುತ್ತದೆ.

**ಅತ ಏವಾಽಽತ್ಮಸಾದೃಶ್ಯಾತ್ತ್ವೇಷಾ ಹ್ಯತ್ರಾಽಽತ್ಮತಾ ಮತಿಃ ।[3]**
**ಅನಾತ್ಮನ್ಯಯಸಃ ಪಿಣ್ಡೇ ವಹ್ನಿ ಬುದ್ಧಿರ್ಯಥಾ ತಥಾ ॥೭೪॥**

೭೪. ಆದ್ದರಿಂದಲೇ (ಹೀಗೆ) ಆತ್ಮನಂತಿರುವದರಿಂದ ಅನಾತ್ಮವಾದ ಇದರಲ್ಲಿ ಈ ತಾನೆಂಬ ಬುದ್ಧಿಯುಂಟಾಗುವದು.[4] ಕಬ್ಬಿಣದ ಗಟ್ಟಿಯಲ್ಲಿ ಬೆಂಕಿಯೆಂಬ ಬುದ್ಧಿ ಹೇಗೋ ಅದರಂತೆಯೇ (ಈ ಬುದ್ಧಿಯು).[5]

## ಅಹಂಕಾರವನ್ನು ಅರಿಯುತ್ತಿರುವವನು ಆತ್ಮನು

**ಅಹಙ್ಕಾರಮಹಂ ಜಾನೇ ವಿಮುಕ್ತಿಪ್ರತಿಬನ್ಧಕಮ್ ।**
ಇತಿ ಜಾನಾತ್ಯಹಙ್ಕಾರಮಾತ್ಮಾಽಹಂಪದಲಕ್ಷಣಃ ॥೭೫॥

---

1. ವಿ. ೧೮೬. 2. ವಿ. ೧೯೦

3. 'ತೇಷಾಮತ್ರಾ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.

4. ಅಹಂಕಾರವು ಚಿದಾಭಾಸದಿಂದೊಡಗೂಡಿರುವದರಿಂದ ಇದೇ ಆತ್ಮನೆಂಬ ಭ್ರಾಂತಿಯಾಗುತ್ತದೆ ಎಂದರ್ಥ. 5. ವಿ. ೧೯೦.

೭೫. ಅಹಂಪದಕ್ಕೆ ಲಕ್ಷಣಾರ್ಥವಾಗಿರುವ ಆತ್ಮನು, ಮುಕ್ತಿಗೆ ಅಡ್ಡಿಯಾಗಿರುವ ಈ ಅಹಂಕಾರವನ್ನು 'ನಾನು ಅರಿಯುತ್ತಿರುವೆನು' ಎಂದು ಅರಿಯುತ್ತಿರುತ್ತಾನೆ.

**ತತೋ ಜ್ಞಾತಾ ಭವತ್ಯಾತ್ಮಾಹಂಪದಾರ್ಥೋ ವಿಲಕ್ಷಣಃ**
**ಜ್ಞೇಯೋ ಭವತ್ಯಹಙ್ಕಾರೋಽನ್ಯಸ್ಯ ವಿಜ್ಞಾತುರಾತ್ಮನಃ ||೭೬||**

೭೬. ಆದ್ದರಿಂದ ಜ್ಞಾತೃವಾದ ಆತ್ಮನು ಅದಕ್ಕಿಂತ ವಿಲಕ್ಷಣವಾದ ಅಹಂಪದಾರ್ಥವಾಗಿರುತ್ತಾನೆ. ಅಹಂಕಾರವು ಅರಿಯುವವನಾದ ತನಗಿಂತ ಬೇರೆಯಾಗಿರುವ ಆತ್ಮನಿಗೆ ಜ್ಞೇಯವಾಗಿರುತ್ತದೆ.[1]

**ಜ್ಞೇಯೋ ಜ್ಞಾತಾ ನ ಭವತಿ ಯುಕ್ತೀನಾಂ ಶತಕೋಟಿಭಿಃ ।**
**ಯತಸ್ತತೋಽಹಂಶಬ್ದಾರ್ಥ ಆತ್ಮೈವೇತ್ಯವಸೀಯತಾಮ್ ||೭೭||**

೭೭. ಜ್ಞೇಯವಾದದ್ದು ನೂರು ಕೋಟಿ ಯುಕ್ತಿಗಳಿಂದಲೂ ಜ್ಞಾತೃವಾಗಲಾರದು. ಅಲ್ಲವೆ ? ಆದ್ದರಿಂದ (ನಾನು ಎಂಬ) ಅಹಂಪದಕ್ಕೆ ಆತ್ಮನೇ ಅರ್ಥವು ಎಂದು ನಿಶ್ಚಯಿಸಬೇಕು.[2]

**ಅಹಂಪದಾರ್ಥೋಽಯಮಖಣ್ಡಬೋಧೋ**
**ಜ್ಞಾತಾಽಹಮಾದೇರಖಿಲಸ್ಯ ವಸ್ತುನಃ ।**
**ಸುಷುಪ್ತ್ಯಾದವಸ್ಥಾತ್ರಿತಯಸ್ಯ ಸಾಕ್ಷೀ**
**ಚಾಕಾಶವತ್ಸರ್ವಗತಶ್ಚ ನಿತ್ಯಃ ||೭೮||**

೭೮. ಅಹಂಪದಕ್ಕೆ (ಹೀಗೆ) ಅರ್ಥವಾಗಿರುವ ಅಖಂಡಬೋಧಸ್ವರೂಪ[3]ವಾಗಿರುವ ಈ (ಆತ್ಮನು), ಅಹಂಕಾರವೇ ಮುಂತಾದ ಎಲ್ಲಾ ಪದಾರ್ಥಗಳನ್ನೂ ಅರಿಯುತ್ತಿರುವನು. ತನಿನಿದ್ರೆಯೇ ಮುಂತಾದ ಮೂರು ಅವಸ್ಥೆಗಳಿಗೂ ಸಾಕ್ಷಿಯು ;[4] ಆಕಾಶದಂತೆ ಸರ್ವಗತನೂ ನಿತ್ಯನೂ ಆಗಿರುತ್ತಾನೆ.[5]

**ಅಯಂ ಸದಾಽನ್ತರ್ಬಹಿರೇಕರೂಪ–**
**ಶ್ಚೈತನ್ಯಮಾತ್ರೋ ನಿಬಿಡೋ ನಿರಂಶಃ ।**
**ಅನ್ತರ್ಬಹಿಃ ಸೈನ್ಧವಖಿಲ್ಯ ಏಕ–**
**ರಸೋ ಯಥಾ ತದ್ವದಯಂ ಚಿದಾತ್ಮಾ ||೭೯||**

---

1. ಅಹಂಕಾರವು ಅಹಂಪದಕ್ಕೆ ವಾಚ್ಯವಾಗಿದ್ದರೂ ಅದು ಆತ್ಮನಿಗೆ ವಿಷಯವಾಗಿರುತ್ತದೆ ಎಂದರ್ಥ. 2. ವಿ. ೨೯೧. 3. ವಿ.೨೧೮, ೨೪೮, ೨೯೩, ೩೪೯.
4. ಅಹಂಪದಾರ್ಥವು ಅಹಮಾದಿಗಳಿಗೆ ಸಾಕ್ಷಿ ಎಂಬುದಕ್ಕೆ ವಿ. ೨೯೧ ನೋಡಿ.
5. ಈ ಶ್ರುತಿಯು ಯಾವದೆಂಬುದು ಗೊತ್ತಾಗಿಲ್ಲ.

೭೯. ಇವನು ಯಾವಾಗಲೂ ಒಳಗೂ ಹೊರಗೂ ಒಂದೇರೂಪವಾಗಿರುತ್ತಾನೆ, ಬರಿಯ ಚೈತನ್ಯಸ್ವರೂಪನಾಗಿರುತ್ತಾನೆ ; ಸಾಂದ್ರವಾಗಿ, ಯಾವ ಅಂಶವೂ ಇಲ್ಲದೆ ಇರುತ್ತಾನೆ. ಉಪ್ಪಿನಹರಳು[1] ಹೇಗೆ ಒಳಗೂ ಹೊರಗೂ ಒಂದೇ ಸವಿಯುಳ್ಳದ್ದಾಗಿರುತ್ತದೆಯೋ ಈ ಚಿದಾತ್ಮನೂ ಹಾಗೆಯೇ ಏಕರಸನಾಗಿರುತ್ತಾನೆ.[2]

**ಶುದ್ಧಾತ್ಮನಿ ಚಿನ್ಮಾತ್ರೇ ಕೂಟಸ್ಥೇ ಪ್ರತ್ಯಗಾತ್ಮನಿ ಭ್ರಾನ್ತ್ಯಾ ।**
**ಕಲ್ಪಿತಮಿಹ ಜೀವತ್ವಂ ಸಂನಿಧಿದೋಷಾದಹಙ್ಕಾರಸ್ಯ[3] ॥೮೦॥**

೮೦. ಚಿನ್ಮಾತ್ರನಾಗಿರುವ ಶುದ್ಧಾತ್ಮನಾದ ಕೂಟಸ್ಥನಾಗಿರುವ ಪ್ರತ್ಯಗಾತ್ಮನಲ್ಲಿ ಭ್ರಾಂತಿಯಿಂದ ಅಹಂಕಾರದ ಜೀವತ್ವವು ಸನ್ನಿಧಿದೋಷದಿಂದ ಕಲ್ಪಿತವಾಗಿರುತ್ತದೆ.[4]

**ಜಪಾಕುಸುಮಸಾಂನಿಧ್ಯಾದ್ರಕ್ತತ್ವಂ ಸ್ಫಟಿಕೇ ಯಥಾ ।**
**ತಥಾಹಙ್ಕಾರಸಾಂನಿಧ್ಯಾಜ್ಜೀವತ್ವಂ ಪ್ರತ್ಯಗಾತ್ಮನಿ ॥೮೧॥**

೮೧. ದಾಸಿವಾಳದ ಹೂವು ಹತ್ತಿರವಿರುವದರಿಂದ ಸ್ಫಟಿಕದಲ್ಲಿ ಕೆಂಪು ಹೇಗೆ ಕಲ್ಪಿತವಾಗುತ್ತದೆಯೋ ಹಾಗೆ ಅಹಂಕಾರವು ಹತ್ತಿರವಿರುವದರಿಂದ ಪ್ರತ್ಯಗಾತ್ಮನಲ್ಲಿ ಜೀವತ್ವವು ಕಲ್ಪಿತವಾಗಿರುತ್ತದೆ.

## ಅಜ್ಞಾನವೇ ಜೀವತ್ವಕಲ್ಪನೆಗೆ ಕಾರಣ

**ಯದನ್ಯಥಾಭಾವಹೇತುರತಥಾಭೂತವಸ್ತುನಃ ।**
**ತದಜ್ಞಾನಂ ತಮೋರೂಪಂ ಸಂಸಾರಾದಿಮಕಾರಣಮ್ ॥೮೨॥**

೮೨. ಹಾಗಿಲ್ಲದ ವಸ್ತುವಿನಲ್ಲಿ ಬೇರೆಯ ರೀತಿಯಿಂದ ತೋರುವದಕ್ಕೆ ಕಾರಣವಾಗಿರುತ್ತದೆಯಲ್ಲ[5], ಅದೇ ತಮೋರೂಪವಾದ ಅಜ್ಞಾನವು, ಸಂಸಾರಕ್ಕೆ ಮೊದಲನೆಯ ಕಾರಣವು.

1. 'ಸೈನ್ಧವಖಿಲ್ಯ' ಎಂಬ ದೃಷ್ಟಾಂತವು ಬೃ.೨-೪-೧೨ರಲ್ಲಿದೆ. ಉಪ್ಪಿನಹರಳಿನಲ್ಲಿ ಎಲ್ಲೆಲ್ಲಿಯೂ ಉಪ್ಪಿನ ರುಚಿಯೇ ಇರುವಂತೆ – ಎಂಬುದು ವಿವಕ್ಷಿತ ; ಉಪ್ಪಿನಹರಳಿನಂತೆ ಪರಿಚ್ಛಿನ್ನನಾಗಿರುತ್ತಾನೆ ಎಂಬುದೇನೂ ಇಲ್ಲಿ ವಿವಕ್ಷಿತವಲ್ಲ.
2. ಚಿದಾತ್ಮನಲ್ಲಿ ಅನಾತ್ಮದ ಬೆರಕೆಯು ಒಂದಿಷ್ಟೂ ಇರುವದಿಲ್ಲ.
3. 'ಅಹಙ್ಕಾರಃ' ಎಂದಿದ್ದರೆ ಓದಿಕೊಳ್ಳುವದಕ್ಕೆ ಸರಳವಾಗಿರುತ್ತದೆ ; ಆಗ ಅಹಂಕಾರರೂಪವಾದ ಜೀವತ್ವವನ್ನು ಎಂದು ಕನ್ನಡಿಸಿಕೊಳ್ಳಬೇಕಾಗುವದು.
4. ಆತ್ಮನು ಶುದ್ಧನು, ಚೈತನ್ಯಸ್ವರೂಪನು, ನಿರ್ವಿಕಾರಿಯು, ಎಲ್ಲಕ್ಕೂ ಒಳಗಿರುವನು ; ಅವನಲ್ಲಿ ಅಶುದ್ಧವಾದ, ಜಡವಾದ, ಪರಿಣಾಮಿಯಾದ, ಆತ್ಮನಿಗಿಂತ ಹೊರಗಿರುವ ಅಹಂಕಾರವು ಕಲ್ಪಿತವಾಗಿರುವದಕ್ಕೆ ಅಹಂಕಾರವು ಮಿಕ್ಕೆಲ್ಲದ್ದಕ್ಕಿಂತಲೂ ಒಳಗಿರುವದೇ ಕಾರಣ.
5. 'ಅತಸ್ಮಿಂಸ್ತದ್ಬುದ್ಧಿಃ' ಎಂದು ವಿ॥ ೧೩೭ರಲ್ಲಿ ಹೇಳಿರುವದನ್ನು ನೋಡಿ.

ಅಜ್ಞಾನದೋಷೇಣ ತು ಯತ್ರ ಯತ್ರ
ಪ್ರಕಲ್ಪಿತಂ ತತ್ತು ಮೃಷೈವ ದೃಷ್ಟಮ್ ।
ರಜ್ಜ್ವಾದಿಕೇ ವಸ್ತುನಿ ಸರ್ಪತಾದಿ
ಯಥಾ ತಥೈವಾಽಽತ್ಮನಿ ಜೀವತಾ ಮೃಷಾ ॥೮೩॥

೮೩. ಅಜ್ಞಾನವೆಂಬ ದೋಷದಿಂದ (ಎಲ್ಲೆಲ್ಲಿ ಯಾವಯಾವದು) ಕಲ್ಪಿತವಾಗಿರುತ್ತದೆಯೋ ಅದಾದರೋ ಹುಸಿಯಾಗಿಯೇ ಇರುವದು ಕಂಡಿರುತ್ತದೆ. ಹಗ್ಗವೇ ಮುಂತಾದ ವಸ್ತುವಿನಲ್ಲಿ (ಕಲ್ಪಿತವಾಗಿರುವ) ಹಾವೇ ಮುಂತಾದದ್ದು ಹೇಗೆ (ಹುಸಿಯಾಗಿರುವದೋ) ಹಾಗೆ ಆತ್ಮನಲ್ಲಿ (ಕಲ್ಪಿತವಾಗಿರುವ) ಜೀವತ್ವವು ಹುಸಿಯಾಗಿರುವದು.

ನಿರಞ್ಜನೇ ನಿರ್ವಿಕಾರೇ ನಿಷ್ಕ್ರಿಯೇಽಸಙ್ಗವಸ್ತುನಿ ।
ಸಾಕ್ಷಿಣ್ಯಾರೋಪಿತಂ ಸರ್ವಂ ಸ್ವಪ್ನವತ್ಸರ್ವದಾ ಮೃಷಾ ॥೮೪॥

೮೪. ನಿರಂಜನನೂ[1] ನಿರ್ವಿಕಾರನೂ ನಿಷ್ಕ್ರಿಯನೂ ಆಗಿರುವ ಅಸಂಗವಸ್ತುವಾದ ಸಾಕ್ಷಿಯಲ್ಲಿ ಕಲ್ಪಿತವಾಗಿರುವದೆಲ್ಲವೂ ಸ್ವಪ್ನದಂತೆ ಯಾವಾಗಲೂ ಹುಸಿ(ಯಾಗಿರುತ್ತದೆ).[2]

ನ ಹಿ ಸ್ವಾಪ್ನಿಕಸಂಸಾರಃ ಕರ್ತೃಭೋಕ್ತೃತ್ವಲಕ್ಷಣಃ ।
ಸತ್ಯಃ ಸಮೀಕ್ಷ್ಯತೇ ತದ್ವಜ್ಜಾಗ್ರತ್ಕಾಲೇಽಪಿ ಸಾಕ್ಷಿಣಃ ॥೮೫॥

೮೫. ಕನಸಿನಲ್ಲಿರುವ ಕರ್ತೃಭೋಕ್ತೃತ್ವರೂಪವಾದ ಸಂಸಾರವು ಸತ್ಯವಾಗಿರುವದು ಕಂಡಿಲ್ಲವಷ್ಟೆ ? ಅದರಂತೆ ಎಚ್ಚರದ ಕಾಲದಲ್ಲಿಯೂ ಸಾಕ್ಷಿಗೆ (ಸಂಸಾರವು ಸತ್ಯವಲ್ಲ).[3]

ತಸ್ಮಾದವಿದ್ಯಾತತ್ಕಾರ್ಯಸಂಬನ್ಧರಹಿತಃ ಸದಾ ।
ಶುದ್ಧ ಏವ ಭವತ್ಯಾತ್ಮಾ ನಿಷ್ಕಲೋ ನಿಷ್ಕ್ರಿಯಃ ಸ್ವಯಮ್ ॥೮೬॥

೮೬. ಆದ್ದರಿಂದ ಅವಿದ್ಯೆ, ಅದರ ಕಾರ್ಯ – ಇವುಗಳ ಸಂಬಂಧವಿಲ್ಲದೆ ಆತ್ಮನು ಶುದ್ಧನೇ ಆಗಿರುತ್ತಾನೆ, ಅವನು ಸ್ವರೂಪದಿಂದ ಅವಯವಗಳಿಲ್ಲದವನು, ಯಾವ ಕ್ರಿಯೆಯೂ ಇಲ್ಲದವನು.[4]

ಅತ ಏವ ಶ್ರುತಿರ್ವಕ್ತಿ ಬ್ರಹ್ಮಾಭಿನ್ನತ್ವಮಾತ್ಮನಃ ।
ಸಾಕ್ಷಾತ್ತತ್ತ್ವಮಸೀತ್ಯೇವ ಭೂಯೋ ಭೂಯಃ ಪುನಃಪುನಃ ॥೮೭॥

1. ಯಾವದರ ಲೇಪವೂ ಇಲ್ಲದವನೂ.
2. ಯಾವ ಅನಾತ್ಮಧರ್ಮವೂ ಸೋಂಕದವನೂ.
3. ತೋರಿದಮಾತ್ರಕ್ಕೇ ಸತ್ಯವಾಗಿರಬೇಕಾದದ್ದಿಲ್ಲವೆಂದು ಭಾವ.
4. ಆತ್ಮನು ಅಮೂರ್ತನಾಗಿರುವದರಿಂದ ಮತ್ತೊಂದರ ಸೋಂಕಿಲ್ಲದವನು.

೮೭. ಆದ್ದರಿಂದಲೇ ಆತ್ಮನು ಬ್ರಹ್ಮಕ್ಕಿಂತ ಭಿನ್ನನಲ್ಲ[1]ವೆಂದು 'ಅದೇ ನೀನು' ಎಂಬ ಶ್ರುತಿಯು ನೇರಾಗಿ ಮೇಲಿನಮೇಲೆ ಮತ್ತೆ ಮತ್ತೆ ಹೇಳುತ್ತಿದೆ.[2]

## ಜಗತ್ತೂ ಬ್ರಹ್ಮವೇ, ಏಕೆಂದರೆ ಅದರ ವಿವರ್ತವಾಗಿದೆ

**ಯತ್ಕಾರ್ಯಂ ಯತ್ತು ತನ್ಮಾತ್ರಮೇವ ವಿದ್ಧಿ ವಿಲೋಕಿತಮ್ ।**
**ಮೃದ್ಘಟಾದೌ ತತಃ ಸರ್ವಂ ಬ್ರಹ್ಮಮಾತ್ರಮಿದಂ ಜಗತ್ ॥೮೮॥**

೮೮. ಯಾವದು ಏತರ ಕಾರ್ಯವೋ ಅದು ಅದರ ಸ್ವರೂಪವೇ ಆಗಿರುತ್ತದೆ, ಎಂದು ಮಣ್ಣಿನ ಗಡಿಗೆಯೇ ಮುಂತಾದವುಗಳಲ್ಲಿ ಕಂಡುಬಂದಿರುತ್ತದೆ. ಆದ್ದರಿಂದ ಜಗತ್ತೆಲ್ಲವೂ ಬ್ರಹ್ಮಮಾತ್ರವೇ ಆಗಿರುತ್ತದೆ ಎಂದು ತಿಳಿ.[3]

**ಜಗತೋ ಬ್ರಹ್ಮಮಾತ್ರತ್ವೇ ಪರಸ್ಯ ಬ್ರಹ್ಮಣಃ ಸದಾ ।**
**ಅದ್ವಯತ್ವಂ ಸ್ವತಃಸಿದ್ಧಂ ದ್ವೈತಹೇತೋರಸಂಭವಾತ್ ॥೮೯॥**

೮೯. (ಆಕ್ಷೇಪ) : ಜಗತ್ತು ಬ್ರಹ್ಮಮಾತ್ರವೇ ಆಗಿದ್ದರೆ ಪರಬ್ರಹ್ಮವು ಯಾವಾಗಲೂ ಅದ್ವಯವೆಂಬುದು ಸ್ವತಃಸಿದ್ಧವಾಗಿರುತ್ತದೆ ; ಏಕೆಂದರೆ ದ್ವೈತಕ್ಕೆ ಕಾರಣವೇ ಇರುವದಿಲ್ಲ.[4]

**ನೇದಂ ಚೋದ್ಯಂ ಮಯಾ ತತ್ತ್ವಂ ಕಥ್ಯತೇ ಶೃಣು ಸಾದರಮ್ ।**
**ಬೀಜಾದಙ್ಕುರವತ್ತಾತಾದ್ ಪುತ್ರವದ್ ಬ್ರಹ್ಮಣೋ ಜಗತ್ ॥೯೦॥**

**ನೇದಂ ಜಾತಮಿತಿ ಬ್ರೂಮೋ ವಯಮದ್ವೈತವಾದಿನಃ ।**
**ಕಿಂ ತು ಬ್ರೂಮೋ ಜಗತ್ಸರ್ವಂ ವಿವರ್ತಂ ಬ್ರಹ್ಮಣಸ್ತ್ವಿತಿ ॥೯೧॥**

೯೦–೯೧. (ಸಮಾಧಾನ) : ಇದನ್ನು ಆಕ್ಷೇಪಿಸತಕ್ಕದ್ದಲ್ಲ. ನಾನು ನಿಜವನ್ನು ಹೇಳುತ್ತೇನೆ, ಆದರದಿಂದ ಕೇಳು. ಬೀಜದಿಂದ ಮೊಳಕೆಯು ಹುಟ್ಟುವಂತೆಯೂ ತಂದೆಯಿಂದ ಮಗನು ಹುಟ್ಟುವಂತೆಯೂ ಬ್ರಹ್ಮದಿಂದ ಜಗತ್ತು

---

1. ಬ್ರಹ್ಮಾಭಿನ್ನತ್ವಮ್ – ಎಂಬ ಪ್ರಯೋಗಕ್ಕೆ ವಿ. ೨೨೧ ನೋಡಿ.

2. ಈ ಶ್ರುತಿವಾಕ್ಯವು ಛಾಂದೋಗ್ಯದಲ್ಲಿ ಒಂಬತ್ತು ಸಲ ಬಂದಿದೆ. ಅವಿದ್ಯೆಯಿಂದ ಬ್ರಹ್ಮಕ್ಕಿಂತ ಬೇರೆಯೆಂದು ಕಂಡರೂ ನಿಜವಾಗಿ ಜೀವನು ಬ್ರಹ್ಮವೇ ಎಂಬುದು ಶ್ರುತಿಯ ಅಭಿಪ್ರಾಯ.

3. ವಿ. ೨೪೯. 'ಬ್ರಹ್ಮೈವೇದಂ ವಿಶ್ವಮ್' ಎಂಬ ಮುಂ. ೨–೨–೧೧ರ ಸೂಚನೆಯಿದು.

4. ಜಗತ್ತು ಹೇಗೆ ಉಂಟಾಯಿತು ? ಜಗತ್ತು ತೋರುತ್ತಿರುವದರಿಂದ ಅದು ಉಂಟಾಗಿಯೇ ಇಲ್ಲವೆನ್ನುವದಕ್ಕಿಲ್ಲವಷ್ಟೆ ? – ಎಂದು ಆಕ್ಷೇಪದ ಭಾವ.

ಹುಟ್ಟಿದೆಯೆಂದು ಅದ್ವೈತವಾದಿಗಳಾದ ನಾವು ಹೇಳುವದಿಲ್ಲ.[1] ಮತ್ತೇನೆಂದರೆ ಜಗತ್ತೆಲ್ಲವೂ ಬ್ರಹ್ಮದ ವಿವರ್ತವೇ ಎಂದು ಹೇಳುತ್ತೇವೆ.[2]

**ಮರುರೇವಾಮ್ಬುರೂಪೇಣ ಯಥೈವಾಽಽಭಾತ್ಯವಿಕ್ರಿಯಃ ।**
**ರಜ್ಜುರೇವಾಹಿರೂಪೇಣ ಯಥಾಽಽಭಾತ್ಯವಿಕಾರಿಣೀ ।**
**ತಥೈವ ಜಗದಾಕೃತ್ಯಾ ಬ್ರಹ್ಮೈವಾಽಽಭಾತ್ಯವಿಕ್ರಿಯಮ್ ॥೯೨॥**

೯೨. ಮರುಭೂಮಿಯೇ ತನ್ನಲ್ಲಿ ಯಾವ ಮಾರ್ಪಾಡೂ ಆಗದೆಯೇ ಹೇಗೆ ನೀರಿನಂತೆ ತೋರುತ್ತದೆಯೋ, ಹಗ್ಗವೇ ಹೇಗೆ ತನ್ನಲ್ಲಿ ಯಾವ ವಿಕಾರವೂ ಇಲ್ಲದೆ ಹಾವಿನ ರೂಪದಿಂದ ತೋರುತ್ತದೆಯೋ, ಹಾಗೆಯೇ ಬ್ರಹ್ಮವೇ ತನ್ನಲ್ಲಿ ಯಾವ ವಿಕಾರವೂ ಇಲ್ಲದೆ ಜಗತ್ತಿನ ಆಕಾರದಿಂದ ತೋರುತ್ತದೆ.

## ಅಧಿಷ್ಠಾನವಾದ ಬ್ರಹ್ಮವನ್ನು ಅರಿತರೆ ಜಗತ್ತು ಸತ್ಯವಾಗಿ ತೋರದು

**ಅಪಶ್ಯತಾಮಧಿಷ್ಠಾನಂ ವಿಶ್ವಂ ಭಾತಿ ಯಥಾರ್ಥವತ್ ।**
**ಅದೃಷ್ಟಮರುದೇಶಾನಾಂ ಮರೀಚಿಸಲಿಲಂ ಯಥಾ ॥೯೩॥**

೯೩. ಮರುಸ್ಥಲವನ್ನು ಕಂಡುಕೊಳ್ಳದೆ ಇರುವವರಿಗೆ ಹೇಗೆ ಬಿಸಿಲು ಕುದುರೆಯ ನೀರು (ನಿಜವಾಗಿರುವಂತೆ ಕಾಣಿಸುತ್ತಿರುವದೋ) ಹಾಗೆಯೇ ಅಧಿಷ್ಠಾನ(ವಾದ ಬ್ರಹ್ಮ)ವನ್ನು ಕಂಡುಕೊಳ್ಳದವರಿಗೆ ಜಗತ್ತು ನಿಜವಾಗಿರುವಂತೆ ತೋರುತ್ತಿರುತ್ತದೆ.

**ವಿಜ್ಞಾತೇ ಸತ್ಯಧಿಷ್ಠಾನೇ ಪರೇ ಬ್ರಹ್ಮಣಿ ಕೇವಲೇ ।**
**ಪ್ರತೀತಮಖಿಲಂ ವಿಶ್ವಂ ಬ್ರಹ್ಮಮಾತ್ರಂ ಭವೇತ್ಸ್ವಯಮ್ ॥೯೪॥**

೯೪. ಅಧಿಷ್ಠಾನವಾದ ಕೇವಲ ಪರಬ್ರಹ್ಮವನ್ನು ಅರಿತುಕೊಂಡರೆ ತೋರುತ್ತಿರುವ ಜಗತ್ತೆಲ್ಲವೂ ತಾನೇ ಬ್ರಹ್ಮಮಾತ್ರವಾದೀತು.[3]

---

1. ದೃಷ್ಟಾಂತಗಳನ್ನು ವ್ಯಾವಹಾರಿಕದೃಷ್ಟಿಯಿಂದ ಸರಿಯೆಂದು ಇಟ್ಟುಕೊಂಡು ಹೀಗೆಂದಿದೆ ; ನಿಜವಾಗಿ ಎಲ್ಲಿಯೂ ಕಾರ್ಯಕಾರಣವಾದವನ್ನು ಸಿದ್ಧಾಂತದಲ್ಲಿ ಒಪ್ಪುವದೇ ಇಲ್ಲ. ಮಾಂ.ಕಾ.ಭಾ.೪–೨೨, ೪–೪೦.

2. ವಿವರ್ತವೆಂಬ ಮಾತು ಭಾಷ್ಯದಲ್ಲಿ ಎಲ್ಲಿಯೂ ಇರುವದಿಲ್ಲ. ಶಂ.ಗೀ. ೨–೧೬ರಲ್ಲಿ 'ವಿವರ್ತೋಪಾದಾನಂ ಬ್ರಹ್ಮೇತಿ ಬ್ರೂಮಃ' ಎಂದು ಬರೆದು ವಿವರ್ತಶಬ್ದವನ್ನು ವಿವರಿಸಿದೆ.

3. ವಿ. ೨೨೯, ೨೩೩, ೪೦೩– ಈ ಶ್ಲೋಕಗಳನ್ನು ಇಲ್ಲಿನ ಅಧಿಷ್ಠಾನವಿಚಾರಕ್ಕೆ ಹೋಲಿಸಿ.

ಮರೌ ದೃಷ್ಟಸ್ಯ ತೋಯಸ್ಯ ಮರುಜ್ಞಾನೇ ಸಮುತ್ಥಿತೇ ।
ಯಥಾ ಸ್ಯಾನ್ಮರುಮಾತ್ರತ್ವಂ ತಥೈವ ಜಗತೋಽಸ್ಯ ಚ ।
ಬ್ರಹ್ಮಮಾತ್ರತ್ವಮೇವ ಸ್ಯಾತ್ ಜ್ಞಾತೇ ಬ್ರಹ್ಮಣಿ ಸ್ವಾಶ್ರಯೇ[1] ॥೯೫॥

೯೫. ಮರಳುನೆಲವೆಂಬ ಜ್ಞಾನವು ಎದ್ದುಕೊಳ್ಳಲು ಮರಳುನೆಲದಲ್ಲಿ ತೋರಿದ ನೀರು ಹೇಗೆ ಮರಳುನೆಲವೇ ಆಗಿಬಿಡುವದೋ ಹಾಗೆಯೇ ಈ ಜಗತ್ತು ತನ್ನ ಆಶ್ರಯವಾದ ಬ್ರಹ್ಮವು ತಿಳಿದುಬಂದ ಮೇಲೆ ಬ್ರಹ್ಮಮಾತ್ರವೇ ಆಗಿಬಿಡುವದು.

ಆರೋಪಿತಸ್ಯಾಧಿಷ್ಠಾನಾಕಾರೇಣಾಽವಸ್ಥಿತಿಂ ವಿನಾ ।
ವಿಲಯೋ ನಿರ್ಗಮೋ ವಾಽಪಿ ಸತಿ ಬಾಧೇ ನ ದೃಶ್ಯತೇ ॥೯೭॥

೯೭. ಕಲ್ಪಿತವಾದದ್ದು ಬಾಧಿತವಾದಮೇಲೆ (ತನ್ನ) ಅಧಿಷ್ಠಾನದ ಆಕಾರ ವನ್ನು ಪಡೆದು ನಿಲ್ಲುವದೇ ಹೊರತು (ಅದು ಮತ್ತೆಲ್ಲಿಯಾದರೂ) ಅಡಗುವ ದೆಂದಾಗಲಿ, (ಅಲ್ಲಿಂದ ಮತ್ತೆಲ್ಲಿಗಾದರೂ) ಹೋಗುವದೆಂದಾಗಲಿ ಕಂಡು ಬಂದಿರುವದಿಲ್ಲ.

ಅಧಿಷ್ಠಾನಾನ್ಯಥಾಭಾವಮಾತ್ರಮೇವ ಯತೋ ಜಗತ್ ।
ತತೋಽಧಿಷ್ಠಾನಮಾತ್ರತ್ವಂ ಜಗತೋ ನ ವಿರುಧ್ಯತೇ ॥೯೮॥

೯೮. ಜಗತ್ತು (ತನ್ನ) ಅಧಿಷ್ಠಾನವಾದ (ಬ್ರಹ್ಮದ) ಮತ್ತೊಂದು ರೂಪವು ಮಾತ್ರವೇ ಆಗಿರುವದರಿಂದ, ಜಗತ್ತು (ನಿಜವಾಗಿ) ಅಧಿಷ್ಠಾನಮಾತ್ರವೇ ಎಂಬುದು ವಿರುದ್ಧವಲ್ಲ.

## ಜಗತ್ತು ಬ್ರಹ್ಮದಲ್ಲಿ ಆರೋಪಿತವಾದಮಾತ್ರದಿಂದ ಬ್ರಹ್ಮಕ್ಕೆ ಯಾವ ದೋಷವೂ ಇಲ್ಲ

ನೈತಾವನ್ಮಾತ್ರತೋ ಬ್ರಹ್ಮ ಜಡಂ ಭವಿತುಮರ್ಹತಿ ।
ನ ದೃಶ್ಯಂ ನಾಪ್ಯನಿತ್ಯಂ ಚ ನ ಚ ಸಾವಯವಂ ತಥಾ ॥೯೯॥

1. ೯೫ನೆಯ ಶ್ಲೋಕದಲ್ಲಿ ಹೆಚ್ಚಿಗೆಯಾಗಿರುವ ಅರ್ಧವನ್ನೂ ಇಲ್ಲಿ ಹೆಚ್ಚಾಗಿರುವ ಅರ್ಧವನ್ನೂ ಸೇರಿಸಿದರೆ ೯೬ ಶ್ಲೋಕವಾದಂತೆ ಆಯಿತು. ಆದ್ದರಿಂದ ಮುಂದಿನ ಶ್ಲೋಕವನ್ನು ೯೭ ಎಂದು ಲೆಕ್ಕಹಿಡಿದಿದೆ.

೯೯. ಇಷ್ಟುಮಾತ್ರದಿಂದ ಬ್ರಹ್ಮವು ಜಡವಾಗಲಾರದು, ದೃಶ್ಯವಾಗಲಾರದು, ಅನಿತ್ಯವಾಗಲಾರದು, ಸಾವಯವವೂ ಆಗಲಾರದು.[1]

**ಸ್ವಸ್ಮಿನ್ ಕಲ್ಪಿತತೋಯಸ್ಯ ಸ್ವಮಾತ್ರತ್ವೇ ತು ಕಿಂ ಮರೋಃ ।**
**ಶೀತತಾ ದ್ರಾವತಾ ವಾಽಪಿ ಜಲಧರ್ಮೋ ವಿಲೋಕ್ಯತೇ ॥೧೦೦॥**

೧೦೦. ತನ್ನಲ್ಲಿ ಕಲ್ಪಿತವಾದ ನೀರು ತನ್ನ ರೂಪವಾದಮಾತ್ರಕ್ಕೆ ಅದರಿಂದ ಮರುಭೂಮಿಗೆ ಶೈತ್ಯ, ಅಥವಾ ನೀರಾಗಿರುವಿಕೆ – ಎಂಬ ನೀರಿನ ಧರ್ಮವಿರುವದು ಕಂಡುಬರುತ್ತದೆಯೇನು ?

**ಜಾತ್ಯಾದಿಧರ್ಮಕಂ ವಿಶ್ವಂ ಸ್ವರೂಪೇಣಾಽಸ್ತಿ ಚೇತ್ ತದಾ ।**
**ತದ್ವೈಶಿಷ್ಟ್ಯೇ ತು ದೋಷಾಃ ಸ್ಯುರ್ಬ್ರಹ್ಮಣೋ ಜಡತಾದಯಃ ॥೧೦೧॥**

೧೦೧. ಆದರೆ ಹುಟ್ಟುವದೇ ಮುಂತಾದ ಧರ್ಮವುಳ್ಳ ಪ್ರಪಂಚವು ತನ್ನ ರೂಪದಿಂದ (ನಿಜವಾಗಿ) ಇರುತ್ತದೆಯಾದರೆ ಆಗ, ಅದರಿಂದೊಡಗೂಡಿರುವದಾಗಿರುವಲ್ಲಿ ಬ್ರಹ್ಮದಲ್ಲಿ ಜಡತ್ವವೇ ಮುಂತಾದ ದೋಷಗಳು ಉಂಟಾಗಬಹುದು.

## ಬರಿಯ ತೋರಿಕೆಗೆ ಸ್ವರೂಪವಿರುವದಿಲ್ಲ

**ಆಭಾತಸ್ಯ ಕ್ವ ಸ್ವರೂಪಂ ಘಟತೇ ಮರುತೋಯವತ್ ।**
**ನ ಹ್ಯತ್ರ ವೀಕ್ಷ್ಯತೇ ಲೋಕೇ ಸ್ವರೂಪಂ ಮರುವಾರಿಣಃ ॥೧೦೨॥**

೧೦೨. ಬಿಸಿಲುಕುದುರೆಯ ನೀರಿನಂತೆ (ಕಲ್ಪಿತವಾಗಿ ಸುಮ್ಮನೆ) ತೋರುತ್ತಿರುವ (ಪದಾರ್ಥಕ್ಕೆ) ಎಲ್ಲಿತಾನೆ ಸ್ವರೂಪ(ವಿರುವದೆಂಬುದು) ಹೊಂದುತ್ತದೆ ? ಮರುಭೂಮಿಯಲ್ಲಿ ತೋರಿದ ನೀರಿಗೆ ತನ್ನ ರೂಪವು (ನಿಜವಾಗಿರುವದು) ಲೋಕದಲ್ಲಿ ಕಂಡುಬಂದಿಲ್ಲವಷ್ಟೆ ?

**ಗ್ರಹೀತುರ್ಗ್ರಹದೋಷೇಣ ಬ್ರಹ್ಮೈವ ಜಗದಾತ್ಮನಾ ।**
**ಆಭಾತಂ ಸರ್ಪವದ್ರಜ್ಜುರ್ಯಥಾ ತದ್ವದವಿಕ್ರಿಯಮ್ ॥೧೦೩॥**

೧೦೩. ಅರಿಯುವಾತನ (ತಪ್ಪಾಗಿ) ಅರಿಯುವ ದೋಷದಿಂದ ಬ್ರಹ್ಮವೊಂದೇ– ಹಗ್ಗವು ಹಾವಾಗಿ (ತೋರು)ವಂತೆ– ಜಗದ್ರೂಪದಿಂದ ತೋರುತ್ತಿರುವದು ; ಆ (ಹಗ್ಗ)ದಂತೆಯೇ (ತಪ್ಪುತಿಳಿವಳಿಕೆಯ ಕಾಲಕ್ಕೆ) ಯಾವ ವಿಕಾರವೂ ಇಲ್ಲದ್ದಾಗಿರುವದು.

---

1. 'ಯತ್ರ ಯದಧ್ಯಾಸಃ, ತತ್ಕೃತೇನ ದೋಷೇಣ ಗುಣೇನ ವಾ ಅಣುಮಾತ್ರೇಣಾಪಿ ಸ ನ ಸಂಬಧ್ಯತೇ', (ಯಾವದರಲ್ಲಿ ಏತರ ಅಧ್ಯಾಸವಾಗಿರುವದೋ ಅದರಿಂದಾದ ದೋಷವಾಗಲಿ ಗುಣವಾಗಲಿ ಒಂದಿಷ್ಟೂ ಅದಕ್ಕೆ ಸಂಬಂಧಿಸಿರುವದಿಲ್ಲ) ಎಂಬ ಅಧ್ಯಾಸಭಾಷ್ಯವಾಕ್ಯವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

**ಆಭಾತಸ್ಯ ತ್ವಧಿಷ್ಠಾನಾದನ್ಯತ್ವಂ ನೈವ ಸಿಧ್ಯತಿ ।**
**ಅಧಿಷ್ಠಾನಾತ್ ಪೃಥಕ್ಸತ್ತಾ ರಜ್ಜುಸರ್ಪೇ ನ ವೀಕ್ಷ್ಯತೇ ॥೧೦೪॥**

೧೦೪. ಆದರೆ (ಸುಮ್ಮನೆ ತೋರುತ್ತಿರುವ ಪದಾರ್ಥಕ್ಕೆ ಅದರ) ಅಧಿಷ್ಠಾನಕ್ಕಿಂತ ಬೇರೆಯಾದ ಇರವು ಸಿದ್ಧಿಸುವದೇ ಇಲ್ಲ. ಹಗ್ಗದ ಹಾವಿಗೆ ತನ್ನ ಅಧಿಷ್ಠಾನವಾದ (ಹಗ್ಗ)ಕ್ಕಿಂತ ಬೇರೆಯಾದ ಇರವು ಕಂಡುಬರುವದೇ ಇಲ್ಲ.[1]

**ಪರಸ್ಮಾದ್ಬ್ರಹ್ಮಣೋ ವಿಶ್ವಂ ಕದಾಚಿನ್ನೈವ ಭಿದ್ಯತೇ ।**
**ರಜ್ಜುಸರ್ಪೋ ಯಥಾ ರಜ್ಜೋಃ ಸ್ವರೂಪೇಣ ನ ಭಿದ್ಯತೇ ॥೧೦೫॥**

೧೦೫. ಹಗ್ಗದ ಹಾವು ಹಗ್ಗಕ್ಕಿಂತ ಹೇಗೆ ಸ್ವರೂಪದಿಂದ ಬೇರೆಯಾಗಿರುವದಿಲ್ಲವೋ ಹಾಗೆಯೇ ಜಗತ್ತು ಪರಬ್ರಹ್ಮಕ್ಕಿಂತ ಎಂದಿಗೂ ಬೇರೆಯಾಗಿರುವದಿಲ್ಲ.

**ನ ಭಿದ್ಯತೇ ಯಥಾ ದನ್ತೀ ಸ್ವಸ್ವರೂಪೇಣ ದಾರುಣಃ ।**
**ಸ್ವರೂಪೇಣ ತಥಾ ವಿಶ್ವಂ ಬ್ರಹ್ಮಣೋ ನೈವ ಭಿದ್ಯತೇ ॥೧೦೬॥**

೧೦೬. ಹೇಗೆ (ಮರದ) ಆನೆಯು ಮರದ (ಮುಟ್ಟಿಗಿಂತ) ಬೇರೆಯ ಸ್ವರೂಪವುಳ್ಳದ್ದಾಗಿರುವದಿಲ್ಲವೋ ಹಾಗೆಯೇ ಜಗತ್ತು ಬ್ರಹ್ಮಕ್ಕಿಂತ ಬೇರೆಯಾದ ಸ್ವರೂಪವುಳ್ಳದ್ದಾಗಿರುವದೇ ಇಲ್ಲ.[2]

## ಜಗತ್ತೆಲ್ಲವೂ ಬ್ರಹ್ಮವೇ ಎಂಬುದಕ್ಕೆ ಶ್ರುತ್ಯಾದಿಗಳ ಆಧಾರ

**ಯತ ಏವಂ ತತೋ ವಿಶ್ವಂ ಸರ್ವಂ ಬ್ರಹ್ಮೈವ ಕೇವಲಮ್ ।**
**ವಿಚಾರ್ಯಮಾಣೇ ಸದ್ಯುಕ್ತಿಶ್ರುತಿಸ್ಮೃತ್ಯುಪಪತ್ತಿಭಿಃ ॥೧೦೭॥**

೧೦೭. ಹೀಗಿರುವದರಿಂದ ವಿಶ್ವವೆಲ್ಲವೂ ಕೇವಲ ಬ್ರಹ್ಮವೇ ಎಂದು ಸದ್ಯುಕ್ತಿ, ಶ್ರುತಿ, ಸ್ಮೃತಿ, ಉಪಪತ್ತಿ[3] – ಇವುಗಳಿಂದ ವಿಚಾರಿಸಿದಲ್ಲಿ (ಸಿದ್ಧವಾಗುತ್ತದೆ).

---

1. ಅಧಿಷ್ಠಾನವೇ ಭ್ರಾಂತಿಯಿಂದ ಆರೋಪಿತವಾಗಿ ಕಾಣುತ್ತದೆ, ಅಧಿಷ್ಠಾನಕ್ಕಿಂತ ಬೇರೆಯಾಗಿ ಆರೋಪಿತವು ಇರುವದೇ ಇಲ್ಲ – ಎಂಬುದಕ್ಕೆ ವಿ. ೨೨೯, ೨೩೩, ೪೦೩ – ಇವನ್ನು ನೋಡಿ.
2. ಇದು ಸದಾಶಿವಬ್ರಹ್ಮೇಂದ್ರರ "ಅದ್ವೈತತಾರಾವಳಿ"ಯ ೧೫ನೆಯ ಶ್ಲೋಕದ ಅಭಿಪ್ರಾಯ.
3. ಸದ್ಯುಕ್ತಿ ಉಪಪತ್ತಿ – ಇವೆರಡಕ್ಕೂ ಏನು ಹೆಚ್ಚುಕಡಿಮೆಯೆಂಬುದು ತಿಳಿಯಲಿಲ್ಲ ; ಮೊದಲನೆಯದು ಶ್ರುತಿಯಲ್ಲಿ ಹೇಳಿರುವ ಯುಕ್ತಿ, ಎರಡನೆಯದು ಅದಕ್ಕೆ ಅನುಸಾರವಾದ ಲೌಕಿಕಯುಕ್ತಿ ಎಂದು ತಾರತಮ್ಯವನ್ನು ಕಲ್ಪಿಸಬಹುದೆಂದು ತೋರುತ್ತದೆ.

ವಿಶ್ವಂ ಬ್ರಹ್ಮಾಭಿನ್ನಮೇವ ಸ್ವಯಂ ಭವಿತುಮರ್ಹತಿ ।
ಅಧಿಷ್ಠಾನಾನತಿರಿಕ್ತಸ್ವರೂಪತ್ವಾದ್ ಗುಣಾಹಿವತ್ ॥೧೦೮॥

೧೦೮. ಪ್ರಪಂಚವು ತಾನೇ ಬ್ರಹ್ಮಕ್ಕಿಂತ ಅಭಿನ್ನವಾಗಿರಬೇಕು ;ಏಕೆಂದರೆ ಅದು ಹಗ್ಗದ ಹಾವಿನಂತೆ (ತನ್ನ) ಅಧಿಷ್ಠಾನಕ್ಕಿಂತ ಬೇರೆಯಾಗಿರುವದಿಲ್ಲ.

ಇದಂ ಬ್ರಹ್ಮವಿವರ್ತತ್ವಾದ್ ಬ್ರಹ್ಮಾಭಿನ್ನಂ ಜಗತ್ಸದಾ ।
ಮೃದ್ವಿವರ್ತಃ ಸ್ವಯಂ ಕುಮ್ಭೋ ಮೃದಭಿನ್ನೋ ಯಥಾ ತಥಾ ॥೧೦೯॥

೧೦೯. ಮಣ್ಣಿನ ವಿವರ್ತವಾದ ಗಡಿಗೆಯು ತಾನು ಮಣ್ಣಿಗಿಂತ ಹೇಗೆ ಭಿನ್ನವಲ್ಲವೋ ಹಾಗೆ ಈ ಜಗತ್ತು ಬ್ರಹ್ಮದ ವಿವರ್ತವಾಗಿರುವದರಿಂದ ಬ್ರಹ್ಮಕ್ಕಿಂತ ಭಿನ್ನವಾಗಿರುವದಿಲ್ಲ.

ಬ್ರಹ್ಮಾಭಿನ್ನಂ ಸ್ವತಸ್ಸತ್ತಾರಹಿತತ್ವಾದಿದಂ ಜಗತ್ ।
ಶುಕ್ತಿರೂಪ್ಯವದಿತ್ಯಾದ್ಯಾ ಜಯನ್ತಿ ಬಹುಯುಕ್ತಯಃ ॥೧೧೦॥

೧೧೦. ಈ ಪ್ರಪಂಚವು ಸ್ವತಃಸತ್ತೆಯಿಲ್ಲದ್ದಾದ್ದರಿಂದ ಬ್ರಹ್ಮಕ್ಕಿಂತ ಬೇರೆಯಲ್ಲ ; ಇದಕ್ಕೆ ಕಪ್ಪೆಯಚಿಪ್ಪಿನ ಬೆಳ್ಳಿಯ ದೃಷ್ಟಾಂತವು– ಇವೇ ಮುಂತಾದ ಅನೇಕ ಯುಕ್ತಿಗಳು ಇರುತ್ತವೆ.[1]

ವಿಶ್ವಸ್ಯ ಬ್ರಹ್ಮಾಭಿನ್ನತ್ವೇ ಶ್ರುತಯೋಽಪಿ ಚ ಜಾಗ್ರತಿ ।
ಐತದಾತ್ಮ್ಯಮಿದಂ ಸರ್ವಂ ಸ ಇದಂ ಸರ್ವಮಿತ್ಯಪಿ ॥೧೧೧॥
ಚಿದ್ಧೀದಂ ಸರ್ವಮಿತ್ಯೇವ ಸರ್ವಂ ಖಲ್ವಿದಮಿತ್ಯಸೌ ।
ಬ್ರಹ್ಮೈವೇದಂ ವಿಶ್ವಮಿದಮಿತ್ಯಾದ್ಯಾಸ್ತತ್ಪ್ರಯೋಜನಾಃ ॥೧೧೨॥

೧೧೧–೧೧೨. ಪ್ರಪಂಚವು ಬ್ರಹ್ಮವೆಂಬುದಕ್ಕೆ 'ಇದೆಲ್ಲವೂ ಈ (ಸದ–ದ್ವಿತೀಯಬ್ರಹ್ಮವನ್ನೇ) ಆತ್ಮವಾಗಿಯುಳ್ಳದ್ದು' (ಛಾಂ.೬–೮–೭), 'ಅವನು ಇದೆಲ್ಲವನ್ನೂ (ಸೃಷ್ಟಿಸಿದನು)' (ತೈ. ೨–೬),[2] 'ಇದೆಲ್ಲವೂ ಚಿತ್ತೇ' (ನೃ.ಉ.೭), 'ಇದೆಲ್ಲವೂ ಬ್ರಹ್ಮವಷ್ಟೆ ?' (ಛಾಂ. ೩–೧೪–೧), 'ಈ ವಿಶ್ವವು ಬ್ರಹ್ಮವೇ' (ಮುಂ.೨–೨–೧೧)– ಇವೇ ಮುಂತಾದ ಆ ಅರ್ಥವುಳ್ಳ ಶ್ರುತಿಗಳೂ ಇರುತ್ತವೆ.

ವಾಸುದೇವಃ ಸರ್ವಮಿದಂ ಸರ್ವಂ ವಿಷ್ಣುಮಯಂ ಜಗತ್ ।
ಬ್ರಹ್ಮಮಾತ್ರಮಿದಂ ಸರ್ವಂ ಬ್ರಹ್ಮೈವ ಸಕಲಂ ಜಗತ್ ॥೧೧೩॥

1. ಇದುವರೆಗೆ ಲೌಕಿಕಯುಕ್ತಿಗಳಿಂದ ಜಗತ್ತು ಬ್ರಹ್ಮಾಭಿನ್ನವೆಂದು ತೋರಿಸಿಕೊಟ್ಟದ್ದಾಯಿತು. ಶ್ರುತಿಸ್ಮೃತಿಗಳನ್ನು ಮುಂದೆ ಕೊಟ್ಟಿದೆ. ಜಗತ್ತಿಗೂ ಬ್ರಹ್ಮಕ್ಕೂ ಇರುವ ಸಂಬಂಧದ ವಿಷಯಕ್ಕೆ ಶಂ.ಗೀ. ೨–೧೬ನ್ನು ನೋಡಿರಿ.

2. ಇದೆಲ್ಲವೂ ಆತನೇ ಎಂದರ್ಥ.

**ಭೂತಾನಿ ವಿಷ್ಣುರಿತ್ಯಾದ್ಯಾಃ ಶತಶೋಽಥ ಸಹಸ್ರಶಃ ।**
**ವಿಶ್ವಸ್ಯ ಬ್ರಹ್ಮಾಭಿನ್ನತ್ವೇ ಜಯನ್ತಿ ಸ್ಮೃತಯೋಽಪಿ ಚ ॥೧೧೪॥**

೧೧೩–೧೧೪. 'ವಾಸುದೇವನೇ (ಈ) ಎಲ್ಲವೂ' (ಗೀ. ೭–೧೯), 'ಎಲ್ಲ ಜಗತ್ತೂ ವಿಷ್ಣುಮಯವು' ( ? )[1], 'ಇದೆಲ್ಲವೂ ಬ್ರಹ್ಮಮಾತ್ರವೇ', 'ಸಕಲ ಜಗತ್ತೂ ಬ್ರಹ್ಮವೇ', 'ಭೂತಗಳು ವಿಷ್ಣುವೇ'[2] (ವಿ.ಪು. ೨–೧೨–೩೮) – ಇವೇ ಮುಂತಾದ ನೂರಾರು, ಸಾವಿರಾರು, ಸ್ಮೃತಿಗಳೂ ಪ್ರಪಂಚವು ಬ್ರಹ್ಮಾಭಿನ್ನವೆಂಬ ವಿಷಯಕ್ಕೆ ಒಪ್ಪುತ್ತಿವೆ.

## ಜ್ಞಾನಿಗೆ ಎಲ್ಲವೂ ಬ್ರಹ್ಮ, ಅಜ್ಞಾನಿಗೆ ಎಲ್ಲವೂ ಜಗತ್ತೇ

**ಬ್ರಹ್ಮಾತ್ಮನಾ ಜಗದ್ಭಾತಿ ಶುದ್ಧಬುದ್ಧೇರ್ಮಹಾತ್ಮನಃ ।**
**ಬ್ರಹ್ಮೈವ ಜಗದಾಕೃತ್ಯಾಽಽಭಾತ್ಯಶುದ್ಧಧಿಯೋಽಸತಃ ॥೧೧೫॥**

೧೧೫. ಶುದ್ಧಬುದ್ಧಿಯುಳ್ಳ ಮಹಾತ್ಮನಿಗೆ ಜಗತ್ತು ಬ್ರಹ್ಮರೂಪದಿಂದ ಕಾಣುತ್ತದೆ ; ಅಶುದ್ಧಬುದ್ಧಿಯುಳ್ಳ ಅಸತ್ಪುರುಷನಿಗೆ ಬ್ರಹ್ಮವೇ ಜಗತ್ತಿನ ಆಕಾರದಲ್ಲಿ ಕಾಣುತ್ತದೆ.

**ಅನ್ತರ್ದೃಷ್ಟೇಃ ಸ್ವಯಂ ಭಾತಿ ಹೇಮಾಕೃತ್ಯೈವ ಕುಣ್ಡಲಮ್ ।**
**ಹೇಮೈವ ಕುಣ್ಡಲಾಕೃತ್ಯಾ ಬಹಿರ್ದೃಷ್ಟೇಃ ಪ್ರತೀಯತೇ ॥೧೧೬॥**

೧೧೬. ಒಳಗಣ್ಣುಳ್ಳವನಿಗೆ[3] ಓಂಟಿಯು ಚಿನ್ನದ ಆಕಾರದಿಂದ ತಾನೇ ಕಾಣುತ್ತದೆ. ಹೊರಗಣ್ಣುಳ್ಳವನಿಗೊ, ಚಿನ್ನವೇ ಓಂಟಿಯ ಆಕಾರದಿಂದ ಕಾಣಿಸಿ ಕೊಳ್ಳುತ್ತದೆ.

**ಅಹ್ನ್ಯನ್ಧದೃಷ್ಟೇಃ ಸರ್ವತ್ರ ತಮ ಏವ ಪ್ರತೀಯತೇ ।**
**ಚಕ್ಷುಷ್ಮತಸ್ತೇಜ ಏವ ಯಥಾ ತದ್ವದಸನ್ಮತೇಃ ॥೧೧೭॥**
**ಬಹಿರನ್ತಶ್ಚ ಸರ್ವತ್ರ ವಿಶ್ವಮೇವ ಪ್ರತೀಯತೇ ।**
**ಶುದ್ಧಾತ್ಮನೋ ಬ್ರಹ್ಮವಿದೋ ಬ್ರಹ್ಮೈವ ಸಮದರ್ಶಿನಃ ॥೧೧೮॥**

೧೧೭–೧೧೮. ಹಗಲಲ್ಲಿ ಕುರುಡನ ಕಣ್ಣಿಗೆ ಎಲ್ಲೆಲ್ಲಿಯೂ ಕತ್ತಲೆಯೇ ತೋರುತ್ತಿರುವದು ; ಕಣ್ಣಿರುವವನಿಗೆ ಬೆಳಕೇ (ತೋರುತ್ತಿರುವದು. ಇದು)

1. ಇದರಿಂದ ಮುಂದಿನ ಎರಡು ವಾಕ್ಯಗಳ ಮೂಲವು ಯಾವದೆಂದು ತಿಳಿಯಲಿಲ್ಲ.
2. 'ಜ್ಯೋತೀಂಷಿ ವಿಷ್ಣುಃ' ಎಂದು ಮುದ್ರಿತಪುಸ್ತಕದ ಪಾಠ.
3. ಮೇಲೆಮೇಲೆ ನೋಡುವ ಆಕಾರದಲ್ಲಿಯೇ ನೆಟ್ಟಕಣ್ಣಿಲ್ಲದವನಿಗೆ ಎಂದರ್ಥ.

ಹೇಗೋ ಹಾಗೆಯೇ ತಪ್ಪುತಿಳಿವಳಿಕೆಯವನಿಗೆ ಒಳಗೂ ಹೊರಗೂ[1] ಪ್ರಪಂಚವೇ ತೋರುತ್ತಿರುವದು ; ಶುದ್ಧದೃಷ್ಟಿಯುಳ್ಳ ಸಮದೃಷ್ಟಿಯ ಬ್ರಹ್ಮಜ್ಞಾನಿಗೆ ಬ್ರಹ್ಮವೇ (ತೋರುತ್ತಿರುವದು).

**ಸದೇವ ವಿಶ್ವಂ ವಿಪರೀತದೃಷ್ಟೇಃ**
**ಪರೀತದೃಷ್ಟೇರ್ಜಗದೇವ ಸತ್ಸ್ಯಾತ್ ।**
**ಅತಜ್ಜ್ಞದೃಷ್ಟ್ಯಾತ್ರ ಮಣಿಃ ಶಿಲಾ ಸ್ಯಾತ್**
**ತಜ್ಜ್ಞಸ್ಯ ದೃಷ್ಟ್ಯಾ ತು ಶಿಲಾ ಮಣಿಃ ಸ್ಯಾತ್** ॥೧೧೯॥

೧೧೯. ತಪ್ಪುತಿಳಿವಳಿಕೆಯ ದೃಷ್ಟಿಯುಳ್ಳವನಿಗೆ ಸತ್ತೇ ಪ್ರಪಂಚವಾಗಿ ಕಾಣುತ್ತದೆ ; ಸರಿಯಾದ ದೃಷ್ಟಿಯುಳ್ಳವನಿಗೆ ಜಗತ್ತೇ ಸದ್ಬ್ರಹ್ಮವಾಗಿರುವದು. ನಿಜವನ್ನರಿಯದ ಕಣ್ಣಿನಿಂದ ನೋಡಿದಾಗ ಈ (ಲೋಕ)ದಲ್ಲಿ ರತ್ನವೂ ಕಲ್ಲಾಗಿರುವದು, ನಿಜವನ್ನು ಬಲ್ಲವನಿಗೊ, (ಆ) ಕಲ್ಲೇ ರತ್ನವಾಗಿರುವದು.

## ಅಧಿಷ್ಠಾನಜ್ಞಾನವಾದಾಗ ಎಲ್ಲವೂ ಬ್ರಹ್ಮವೇ

**ಅಧಿಷ್ಠಾನೇ ಪರಿಜ್ಞಾತೇ ಸಚ್ಚಿದಾನನ್ದಲಕ್ಷಣೇ ।**
**ಬ್ರಹ್ಮೈವ ಸಕಲಂ ವಿಶ್ವಂ ಭೋಕ್ತೃಭೋಗ್ಯಾದಿಲಕ್ಷಣಮ್** ॥೧೨೦॥

೧೨೦. ಸಚ್ಚಿದಾನಂದರೂಪವಾದ ಅಧಿಷ್ಠಾನವನ್ನು ಅರಿತುಕೊಂಡಾಗ ಭೋಕ್ತೃ, ಭೋಗ್ಯ – ಮುಂತಾದ ರೂಪದ ಪ್ರಪಂಚವೆಲ್ಲವೂ ಬ್ರಹ್ಮವೇ.

**ಬ್ರಹ್ಮೈವ ಪಞ್ಚಭೂತಾನಿ ಬ್ರಹ್ಮೈವ ಭುವನತ್ರಯಮ್ ।**
**ಬ್ರಹ್ಮೈವಾಹಂ ಬ್ರಹ್ಮ ಚ ತ್ವಂ ಬ್ರಹ್ಮಣೋಽನ್ಯನ್ನ ಕಿಞ್ಚನ** ॥೧೨೧॥

೧೨೧. ಪಂಚಭೂತಗಳೂ ಬ್ರಹ್ಮವೇ, ಮೂರು ಲೋಕಗಳೂ ಬ್ರಹ್ಮವೇ, ನಾನು ಬ್ರಹ್ಮವೇ, ಮತ್ತು ನೀನೂ ಬ್ರಹ್ಮವೇ. ಬ್ರಹ್ಮಕ್ಕಿಂತ ಬೇರೆಯಾದದ್ದು ಯಾವದೊಂದೂ ಇಲ್ಲ.

**ಚಿದ್ವ್ಯೋಮಕೇವಲಮನನ್ತಮನಾದಿಮಧ್ಯಂ**
**ಬ್ರಹ್ಮೈವ ಭಾತಿ ನಿಜಚಿತ್ತವಶಾತ್ ಸ್ವಯಂಭೂಃ ।**
**ಆಕಾರವಾನಿವ ಪುಮಾನಿವ ವಸ್ತುತಸ್ತು**
**ವನ್ಧ್ಯಾತನೂಜ ಇವ ತಸ್ಯ ತು ನಾಸ್ತಿ ದೇಹಃ** ॥೧೨೨॥

೧೨೨. ಆದಿಮಧ್ಯಾಂತಗಳಿಲ್ಲದ ಕೇವಲ ಚಿದಾಕಾಶವಾಗಿರುವ ಸ್ವಯಂಭುವಾದ ಬ್ರಹ್ಮವೇ ತನ್ನ ಚಿತ್ತವಶದಿಂದ ಆಕಾರವುಳ್ಳದ್ದರಂತೆ,

1. ವಿ. ೩೩೫.

ಪುರುಷನಂತೆ ತೋರುತ್ತಿದೆ. ಆದರೆ ನಿಜವಾಗಿ ನೋಡಿದರೆ ಆ (ಆಕಾರವು) ಬಂಜೆಯ ಮಗನಂತೆಯೇ ಅದಕ್ಕೆ ದೇಹವೇ ಇಲ್ಲ.

## ಅದ್ವೈತಸಿದ್ಧಿ

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥೧೨೩॥

ನ ಚ ಮತ್ಸ್ಥಾನಿ ಭೂತಾನಿ ಪಶ್ಯ ಮೇ ಯೋಗಮೈಶ್ವರಮ್ ।
ಇತಿ ವಿಶ್ವವ್ಯಾಪಕತ್ವಾಧಾರತ್ವೇ ಚಾಽಽತ್ಮನೋ ಹರಿಃ ॥೧೨೪॥

ಸೂಚಯಿತ್ವಾಽಪನುದತಿ ಭೂತೇಷು ಸ್ವಸ್ಯ ಸಂಸ್ಥಿತಿಮ್ ।
ಭೂತಾನಾಮಪಿ ಸ್ವಸ್ವಸ್ಥಂ ಸ್ವಸ್ಯಾದ್ವೈತತ್ವಸಿದ್ಧಯೇ ॥೧೨೫॥

೧೨೩–೧೨೫. "ಈ ಜಗತ್ತೆಲ್ಲವೂ ಅವ್ಯಕ್ತಮೂರ್ತಿಯಾದ ನನ್ನಿಂದ ವ್ಯಾಪ್ತವಾಗಿರುತ್ತದೆ ; ಎಲ್ಲಾ ಭೂತಗಳೂ ನನ್ನಲ್ಲಿವೆ, ಆದರೆ ನಾನು ಅವುಗಳಲ್ಲಿಲ್ಲ. ಇನ್ನು (ಆ) ಭೂತಗಳು ನನ್ನಲ್ಲಿಲ್ಲವೂ ಇಲ್ಲ ; ಈಶ್ವರನಾದ ನನ್ನ ಯೋಗವನ್ನು ನೋಡು !' (ಗೀ. ೯–೫) ಎಂದು ಹರಿಯು ತಾನು ವಿಶ್ವವ್ಯಾಪಕನೆಂದೂ ವಿಶ್ವಾಧಾರನೆಂದೂ ಸೂಚಿಸಿ, ತಾನು ಅದ್ವಿತೀಯನೆಂಬುದನ್ನು ಸಿದ್ಧಪಡಿಸಿಕೊಡುವದಕ್ಕಾಗಿ ಭೂತಗಳಲ್ಲಿ ತಾನು ಇದೇನೆಂಬುದನ್ನೂ ಭೂತಗಳು ತನ್ನಲ್ಲಿರುವವೆಂಬುದನ್ನೂ ಅಲ್ಲಗಳೆದಿರುತ್ತಾನೆ.[1]

ಅದ್ವಯತ್ವಮತಃ ಸಿದ್ಧಂ ಪ್ರಮಾಣೈರಖಿಲೈರಪಿ ।
ನೈವಾತ್ರ ಸಂಶಯಃ ಕಾರ್ಯೋ ಬ್ರಾಹ್ಮಣೈರ್ಬ್ರಹ್ಮವಾದಿಭಿಃ ॥೧೨೬॥

೧೨೬. ಆದ್ದರಿಂದ ಎಲ್ಲಾ ಪ್ರಮಾಣಗಳಿಂದಲೂ ಅದ್ವಯತ್ವವು ಸಿದ್ಧವಾಗಿರುತ್ತದೆ. ಈ ವಿಷಯದಲ್ಲಿ ಬ್ರಹ್ಮವಾದಿಗಳಾದ ಬ್ರಾಹ್ಮಣರು ಸಂಶಯವನ್ನು ಮಾಡಲೇಬಾರದು.

## ಜಗತ್ತೆಲ್ಲವೂ ಬ್ರಹ್ಮವೇ

ವಿಚಾರ್ಯಮಾಣೇ ಸದ್ಬುದ್ಧ್ಯಾ ಶ್ರುತಿಸ್ಮೃತ್ಯುಪಪತ್ತಿಭಿಃ ।
ಸದೇವೇದಂ ಜಗತ್ಸರ್ವಂ ಸದ್ವಿವರ್ತಂ ಯತಃ ಸ್ವಯಮ್ ॥೧೨೭॥

೧೨೭. ಸರಿಯಾದ ಬುದ್ಧಿಯಿಂದ ಶ್ರುತಿ, ಸ್ಮೃತಿ, ಯುಕ್ತಿ – ಇವುಗಳ ಮೂಲಕ ವಿಚಾರಮಾಡಿದರೆ, ಈ ಜಗತ್ತೆಲ್ಲವೂ ಸತ್ತೇ ಆಗಿರುತ್ತದೆ, ಏಕೆಂದರೆ ಅದು ತಾನು ಸತ್ತಿನ ವಿವರ್ತವೇ ಆಗಿರುತ್ತದೆ.[2]

---

1. ವಿ. ೨೩೧, ಶಂ. ಗೀ. ೯–೪,೫. 2. ವಿ. ೨೮.೨

**ಹೇಮ್ನೋ ವಿವರ್ತಂ ಕಟಕಂ ಹೇಮ್ನೈವ ಭವತಿ ಸ್ವಯಮ್ ।**
**ಶಿಲಾವಿವರ್ತಃ ಶ್ರೀವಿಷ್ಣುಃ ಶಿಲೈವ ಭವತಿ ಸ್ವಯಮ್ ॥೧೨೮॥**

೧೨೮. ಚಿನ್ನದ ವಿವರ್ತವಾದ ಕಡಗವು ತಾನೂ ಚಿನ್ನವೇ ಆಗಿರುತ್ತದೆ. ಕಲ್ಲಿನ ವಿವರ್ತವಾದ ಶ್ರೀವಿಷ್ಣು(ವಿಗ್ರಹ)ವು ತಾನೂ ಕಲ್ಲೇ ಆಗಿರುತ್ತದೆ.

**ಯಥಾ ತಥೈವ ಸಕಲಂ ಸ್ವರೂಪೇಣ ಸ್ವಯಂ ಜಗತ್ ।**
**ಬ್ರಹ್ಮೈವ ತಸ್ಯ ನಿತ್ಯತ್ವಾತ್ತದಭಾವೋ ನ ಸಿಧ್ಯತಿ ॥೧೨೯॥**

೧೨೯. (ಈ ದೃಷ್ಟಾಂತಗಳು) ಹೇಗೋ ಹಾಗೆಯೇ ಸಕಲ ಜಗತ್ತೂ ಸ್ವರೂಪದಿಂದ ಬ್ರಹ್ಮವೇ ಆಗಿರುತ್ತದೆ. ಅದು ನಿತ್ಯವಾಗಿರುವದರಿಂದ ಅದರ ಅಭಾವವು ಸಿದ್ಧಿಸುವದಿಲ್ಲ.[1]

**ವಾಙ್ಮಾತ್ರಲಾಭಸ್ತ್ವತ್ಪಕ್ಷಸ್ತ್ಯಜ್ಯತಾಮತಿದೂರತಃ ॥೧೨೯೧/೨॥**

೧೨೯ ೧/೨. ಈ ನಿನ್ನ ಪಕ್ಷವು ಬರಿಯ ಮಾತನ್ನು ಮಾತ್ರ ಪಡೆದುಕೊಂಡಂತಾಯಿತು. ಆದ್ದರಿಂದ (ಈ) ಪಕ್ಷವನ್ನು, ಬಹಳ ದೂರದಿಂದಲೇ ಬಿಟ್ಟುಬಿಡಬೇಕು.

**ಲೋಕೇ ವಸ್ತ್ವಸ್ತ್ಯಭಾವಾಖ್ಯಮಿತಿ ಯೇ ತು ವದನ್ತಿ ತೇ ।**
**ನ ಶ್ರೋತ್ರಿಯಾ ನ ಶಾಸ್ತ್ರಜ್ಞಾ ನ ತತ್ತ್ವಜ್ಞಾ ನ ಸಾಧವಃ ॥೧೩೦॥**

೧೩೧. ಲೋಕದಲ್ಲಿ ಅಭಾವವೆಂಬ ವಸ್ತುವಿದೆ ಎಂದು ಯಾರು ಹೇಳುತ್ತಿರುವರೋ ಅವರು ಶ್ರೋತ್ರಿಯರಲ್ಲ, ಶಾಸ್ತ್ರಜ್ಞರಲ್ಲ, ತತ್ತ್ವಜ್ಞರಲ್ಲ, ಸಾಧುಜನರೂ ಅಲ್ಲ.

**ಅಭಾವೋಽಪಿ ಚ ಭಾವೋಽಪಿ ಸರ್ವಂ ಬ್ರಹ್ಮೈವ ತಚ್ಛೃಣು[2] ॥೧೩೧॥**

೧೩೧. ಅಭಾವವೂ ಭಾವವೂ ಎಲ್ಲವೂ ಬ್ರಹ್ಮವೇ. ಅದು (ಹೇಗೆಂಬುದನ್ನು ಹೇಳುತ್ತೇನೆ) ಕೇಳು :

**ಸಚ್ಚ ತ್ಯಚ್ಚೇತ್ಯುಪಕ್ರಮ್ಯ ಜಗದ್ಭೂತಿಂ ಸ್ವಯಂ ಶ್ರುತಿಃ ।**
**ಸತ್ಯಂ ಚಾನೃತಂ ಚ ಸತ್ಯಮಿತ್ಯನ್ತಗ್ರನ್ಥತಃ ಸ್ಫುಟಮ್ ॥೧೩೨॥**
**ಸದ್ಬ್ರಹ್ಮೈವಾಽಭವತ್ಸರ್ವಮಿತಿ ವಕ್ತಿ ಸ್ವಯಂ ಯತಃ ।**
**ತತೋ ಭಾವಾಭಾವರೂಪಂ ಸಕಲಂ ಸತ್ಯಮೇವ ಹಿ ॥೧೩೩॥**

---

1. ಬ್ರಹ್ಮವೇ ಜಗತ್ತಾಗಿ ತೋರುತ್ತಿದೆ ; ಜಗತ್ತಾಗಿ ತೋರುವಾಗಲೂ ಬ್ರಹ್ಮವೊಂದೇ ಇದೆ.
2. ಹಿಂದಿನ ಅರ್ಧಶ್ಲೋಕವು ಸೇರಿದರೆ ಇದು ಒಂದು ಶ್ಲೋಕವಾಗುವದು.

೧೩೨–೧೩೩. 'ಸತ್ತೂತ್ಯತ್ತೂ (ಆಯಿತು)' ಎಂದು ಜಗತ್ತಿನ ಸೃಷ್ಟಿಯನ್ನು ಹೇಳುವದಕ್ಕೆ ಆರಂಭಿಸಿದ ಶ್ರುತಿಯು 'ಸತ್ಯವೂ ಅನೃತವೂ ಸತ್ಯವೇ ಆಯಿತು'[1] (ತೈ.೨–೬) ಎಂಬವರೆಗಿನ ಗ್ರಂಥದಿಂದ ಸದ್ಬ್ರಹ್ಮವೂ ತಾನೇ ಎಲ್ಲವೂ ಆಯಿತು ಎಂದು ಹೇಳುತ್ತದೆಯಷ್ಟೆ ? ಆದ್ದರಿಂದ ಭಾವಾಭಾವವೆಲ್ಲವೂ[2] ಸತ್ಯವೇ (ಆಯಿ)ತಲ್ಲವೆ ?

## ಗ್ರಹಿಸುವವನ ಬುದ್ಧಿದೋಷದಿಂದ ನಾನಾತ್ವವು ಕಾಣುತ್ತದೆ

**ಬ್ರಹ್ಮೈವ ಸತ್ಯಶಬ್ದಾರ್ಥಃ ಸತ್ಯಂ ಜ್ಞಾನಮಿತಿ ಶ್ರುತೇಃ ।**
**ಗ್ರಹೀತುರ್ಗ್ರಹದೋಷೇಣ ನಾನಾತ್ವಂ ನ ಚ ವಸ್ತುತಃ ॥೧೩೪॥**

೧೩೪. (ಇಲ್ಲಿ) ಸತ್ಯವೆಂಬ ಶಬ್ದಕ್ಕೆ ಬ್ರಹ್ಮವೇ ಅರ್ಥ. ಏಕೆಂದರೆ ಸತ್ಯವೂ ಜ್ಞಾನವೂ (ಅನಂತವೂ ಆದದ್ದು ಬ್ರಹ್ಮವು) ಎಂದು (ತೈ. ೨–೧) ಶ್ರುತಿಯಿದೆ. ಗ್ರಹಿಸುವಾತನ ಅರಿಯುವದರಲ್ಲಿರುವ ದೋಷದಿಂದ ನಾನಾತ್ವವು (ತೋರುತ್ತದೆಯೇ) ಹೊರತು ನಿಜವಾಗಿರುವದಿಲ್ಲ.

**ತದ್ದೃಷ್ಟಂ ಸ್ಥಾಣುರಜ್ಜ್ವಾದೌ ಪಣ್ಡಿತೈರ್ವಸ್ತುದರ್ಶಿಭಿಃ ।**
**ಏಕ ಏವ ಸ್ವಯಂ ಸ್ಥಾಣುರ್ನಿಜಲಕ್ಷಣಲಕ್ಷಿತಃ ॥೧೩೫॥**
**ಗ್ರಹೀತುರೇವ ಧೀದೋಷಾತ್ಪ್ರತ್ಯಯಸ್ತಸ್ಕರಾತ್ಮನಾ ।**
**ಉದೇತಿ ಸ್ತಮ್ಭರೂಪೇಣ ಸ್ಥಾಣುಸ್ತಿಷ್ಠತಿ ನಾನ್ಯಥಾ ॥೧೩೬॥**

೧೩೫–೧೩೬. ಮೋಟುಮರ, ಹಗ್ಗ– ಮುಂತಾದವುಗಳ ವಿಷಯದಲ್ಲಿ ಇದು ವಸ್ತುದರ್ಶಿಗಳಾದ ಪಂಡಿತರಿಗೆ ಕಂಡಿರುತ್ತದೆ. ಮೋಟುಮರವು ತನ್ನ ಲಕ್ಷಣದಿಂದ ಕೂಡಿ ತಾನು ಒಂದೇ (ರೂಪ)ದಲ್ಲಿರುತ್ತದೆ. ಗ್ರಹಿಸುವವನ ಬುದ್ಧಿದೋಷದಿಂದಲೇ ಕಳ್ಳನೆಂಬ ರೂಪದಿಂದ ಪ್ರತ್ಯಯವು ಉಂಟಾಗುತ್ತದೆ. ಮೋಟುಮರವು ಕಂಬದ ರೂಪದಿಂದಲೇ[3] ಇರುತ್ತದೆಯೇ ಹೊರತು ಮತ್ತೆ ಬೇರೆಯಿಲ್ಲ.

**ತದ್ವದೇವ ಗ್ರಾಹಕಾಣಾಂ ಪ್ರತ್ಯಯೋ ಜಗದಾತ್ಮಕಃ ।**
**ಜಾಯತೇ ಬುದ್ಧಿದೋಷೇಣ ಸ್ವಯಂ ಬ್ರಹ್ಮ ತ್ವವಿಕ್ರಿಯಮ್ ॥೧೩೭॥**

1. ವ್ಯವಹಾರದಲ್ಲಿ ಸತ್ಯವಾಗಿ ತೋರುವ ಕಪ್ಪೆಯಚಿಪ್ಪು, ಹುಸಿಯಾಗಿ ತೋರುವ ಶುಕ್ತಿರಜತ – ಈ ಎರಡೂ ನಿಜವಾಗಿ ಬ್ರಹ್ಮವೇ ಎಂದರ್ಥ.
2. 'ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ' (ವಿ.ಪು. ೩–೧೨–೩೮) ಎಂಬ ಪುರಾಣವಾಕ್ಯವನ್ನು ನೋಡಿರಿ.
3. ಕಳ್ಳನೆಂದು ತೋರುವಾಗಲೂ ಮರವು ನೆಟ್ಟಗೆ ನಿಂತಿರುವ ಮರವೇ ಆಗಿರುತ್ತದೆ.

೧೩೭. ಅದರಂತೆಯೇ ಗ್ರಹಿಸುವವರ ಬುದ್ಧಿದೋಷದಿಂದ ಜಗದ್ರೂಪವಾದ ಪ್ರತ್ಯಯವು ಉಂಟಾಗುತ್ತದೆ. ಬ್ರಹ್ಮವಾದರೋ ತಾನುತಾನು ಅವಿಕಾರವೇ ಆಗಿರುತ್ತದೆ.

**ಅನಾದಿಕಾಲೀನದುರನ್ತ[1] ವಾಸನಾ–**
**ದೋಷೇಣ ದುಷ್ಟಾ ಪುರುಷಸ್ಯ ಬುದ್ಧಿಃ ।**
**ನಾನಾವಿಧಂ ವಿಶ್ವಮಿಹ ಪ್ರಸೂತೇ**
**ಸ್ವಪ್ನಾದಿವದ್ಬ್ರಹ್ಮಣಿ ಕೇವಲೇಽದ್ವಯೇ ॥೧೩೮॥**

೧೩೮. ಅನಂತಕಾಲದಿಂದ ಮುಗಿಯದೆ ಇರುವ ವಾಸನೆಯ ದೋಷದಿಂದ ಕೆಟ್ಟುಹೋಗಿರುವ ಮನುಷ್ಯನ ಬುದ್ಧಿಯು ಇಲ್ಲಿ–ಸ್ವಪ್ನಾದಿಗಳಲ್ಲಿ ಹೇಗೋ ಹಾಗೆ – ಕೇವಲವಾಗಿ ತನಗೆರಡನೆಯದಿಲ್ಲದ ಬ್ರಹ್ಮದಲ್ಲಿ ಬಗೆಬಗೆಯಾಗಿರುವ ಪ್ರಪಂಚವನ್ನುಉಂಟುಮಾಡಿಸುತ್ತದೆ.

## ಜಗತ್ತು ಮನಃಕಲ್ಪಿತವೇ

**ನ ಬ್ರಹ್ಮಣಾ ನಾಽಪಿ ಶಿವೇನ ವಿಷ್ಣುನಾ**
**ಸ್ವಪ್ನಪ್ರಪಞ್ಚೋ ಹಿ[2] ಕದಾಪಿ ಸೃಷ್ಟಃ ।**
**ಸ್ವಯಂ ಧಿಯಾ ಕಲ್ಪಿತ ಏವ ಭಾತಿ**
**ತಥೈವ ಜಾಗ್ರತ್ಯಪಿ ಬುದ್ಧಿಕಲ್ಪಿತಃ ॥೧೩೯॥**

೧೩೯. ಬ್ರಹ್ಮನಿಂದಲಾಗಲಿ ಶಿವನಿಂದಲಾಗಲಿ ವಿಷ್ಣುವಿನಿಂದಲಾಗಲಿ ಸ್ವಪ್ನಪ್ರಪಂಚವು ಸೃಷ್ಟವಾದದ್ದು ಯಾವಾಗಲೂ ಕಂಡದ್ದಿಲ್ಲ. ಬುದ್ಧಿಯಿಂದ ಕಲ್ಪಿತವಾಗಿ ತಾನೇ ತೋರುತ್ತಿರುತ್ತದೆ. ಅದರಂತೆಯೇ ಎಚ್ಚರದಲ್ಲಿಯೂ (ಪ್ರಪಂಚವು) ಬುದ್ಧಿಕಲ್ಪಿತವಾಗಿಯೇ ಇರುತ್ತದೆ.

**ಧೀಕಲ್ಪಿತತ್ವೇನ ಹಿ ಜಾಗ್ರದೀಕ್ಷಿತಂ**
**ನ ಸ್ವಪ್ನಕಾಲೇ ಜಗದಸ್ತಿ ತದ್ವತ್ ।**
**ಸ್ವಪ್ನೇಕ್ಷಿತಂ ನಾಸ್ತಿ ಚ ಜಾಗ್ರತೀಹ**
**ದ್ವಯೋಶ್ಚ ಸುಪ್ತಾವತಿಶೂನ್ಯತಾ ತತಃ ॥೧೪೦॥**

೧೪೦. ಬುದ್ಧಿಕಲ್ಪಿತವಾಗಿರುವದರಿಂದಲೇ ಅಲ್ಲವೆ, ಎಚ್ಚರದಲ್ಲಿ ಕಂಡ ಪ್ರಪಂಚವು ಸ್ವಪ್ನಕಾಲದಲ್ಲಿರುವದಿಲ್ಲ ? ಅದರಂತ ಸ್ವಪ್ನದಲ್ಲಿ ಕಂಡ ಪ್ರಪಂಚ

1. 'ನಿರನ್ತ' ಎಂಬ ಅಚ್ಚಿನ ಪಾಠವನ್ನು ಹೀಗೆಂದು ತಿದ್ದಿಕೊಂಡಿದೆ. ಪು. ೨೭೧ ನೋಡಿ.
2. ಅಚ್ಚಿನ ಪುಸ್ತಕದಲ್ಲಿ 'ನ' ಎಂದು ತಪ್ಪಾಗಿರುವದನ್ನು ಹೀಗೆ ತಿದ್ದಿಕೊಂಡಿದೆ.

ಎಚ್ಚರದಲ್ಲಿರುವದೂ ಇಲ್ಲ. ಆದ್ದರಿಂದಲೇ ಇವೆರಡಕ್ಕೂ ಸುಷುಪ್ತಿಯಲ್ಲಿ ಅತ್ಯಂತವಾಗಿ ಶೂನ್ಯತ್ವವಿರುತ್ತದೆ.[1]

**ಯತ್ರ ಚಿತ್ತಂ ತತ್ರ ವಿಶ್ವಂ ಸ್ವಯಮೇವ ಪ್ರತೀಯತೇ ।**
**ಯತ್ರ ಚಿತ್ತಂ ನಾಸ್ತಿ ತತ್ರ ನಾಸ್ತಿ ಕಿಂಚಿಜ್ಜಗತ್ಕಥಾ ॥೧೪೧॥**

೧೪೧. ಎಲ್ಲಿ ಚಿತ್ತವಿರುತ್ತದೆಯೋ ಅಲ್ಲಿ ಜಗತ್ತು ತಾನೇ ತೋರುತ್ತಿರುತ್ತದೆ. ಎಲ್ಲಿ ಚಿತ್ತವಿರುವದಿಲ್ಲವೋ ಅಲ್ಲಿ ಒಂದಿಷ್ಟೂ ಜಗತ್ತಿನ ಮಾತು ಇರುವದಿಲ್ಲ.

**ಸ್ವಪ್ನೇಽಪಿ ಜಾಗ್ರತ್ಯಪಿ ಚಿತ್ತಸತ್ತ್ವಾತ್ ।**
**ಪ್ರತೀಯತೇ ವಿಶ್ವಮಶೇಷಮೇತತ್ ।**
**ಚಿತ್ತಸ್ಯ ನಾಶೇ ಸತಿ ಸುಪ್ತಿಕಾಲೇ**
**ನಾಸ್ತ್ಯೇವ ವಿಶ್ವಂ ಸಕಲಪ್ರಸಿದ್ಧೇಃ ॥೧೪೨**

೧೪೨. ಕನಸಿನಲ್ಲಿಯೂ ಎಚ್ಚರದಲ್ಲಿಯೂ ಚಿತ್ತವು ಇರುವದರಿಂದ ಈ ಜಗತ್ತೆಲ್ಲವೂ ತೋರುತ್ತಿರುವದು. ತನಿನಿದ್ರೆಯ ಕಾಲದಲ್ಲಿ ಚಿತ್ತವು ನಾಶವಾಗಲು ಪ್ರಪಂಚವು ಇಲ್ಲವೇ ಇಲ್ಲವೆಂಬುದು ಸರ್ವರಿಗೂ ಪ್ರಸಿದ್ಧವಾಗಿರುತ್ತದೆ.[2]

## ಜಗತ್ತು ಬ್ರಹ್ಮಜ್ಞಾನಬಾಧ್ಯ

**ಭ್ರಾನ್ತಿಮಾತ್ರಮಿದಂ ವಿದ್ವನ್ ವಿಶ್ವಂ ಬ್ರಹ್ಮಣಿ ಕಲ್ಪಿತಮ್ ।**
**ವಿದ್ಧಿ ಯಸ್ಮಾತ್ಸ್ವಯಂ ವಿಶ್ವಂ ಬ್ರಹ್ಮಜ್ಞಾನೇನ ಬಾಧ್ಯತೇ ॥೧೪೩॥**

೧೪೩. ಅಯ್ಯ ಜಾಣನೆ, ಈ ಪ್ರಪಂಚವು ಬ್ರಹ್ಮದಲ್ಲಿ ಕಲ್ಪಿತವಾಗಿರುವ ಭ್ರಾಂತಿಮಾತ್ರವೆಂದು ತಿಳಿ. ಏಕೆಂದರೆ ಈ ವಿಶ್ವವು ಬ್ರಹ್ಮಜ್ಞಾನದಿಂದ ತಾನೇ ಬಾಧಿತವಾಗುತ್ತದೆ.

**ಶುಕ್ತಿಜ್ಞಾನಾದ್ಯಥಾ ರೂಪ್ಯಂ ರಜ್ಜುಜ್ಞಾನಾದ್ಯಥೋರಗಃ ।**
**ತಥಾಧಿಷ್ಠಾನತದ್ಬ್ರಹ್ಮಜ್ಞಾನಾದ್ವಿಶ್ವಂ ನ ದೃಶ್ಯತೇ ॥೧೪೪॥**

೧೪೪. ಕಪ್ಪೆಯಚಿಪ್ಪಿನ ಜ್ಞಾನದಿಂದ ಹೇಗೆ ಬೆಳ್ಳಿಯು ಕಾಣಿಸದಾಗು ವದೋ), ಹಗ್ಗದ ಜ್ಞಾನದಿಂದ ಹೇಗೆ ಹಾವು (ಕಾಣಿಸದಾಗುವದೋ) ಅದರಂತೆ ಅಧಿಷ್ಠಾನವಾಗಿರುವ ಆ ಬ್ರಹ್ಮದ ಜ್ಞಾನದಿಂದ ಜಗತ್ತು ಕಾಣಿಸದಾಗುವದು.

**ಅಧಿಷ್ಠಾನಾದರ್ಶನತ ಏವ ವಿಶ್ವಭ್ರಮಃ ಸತಾಮ್ ।**
**ತಸ್ಮಿನ್ ದೃಷ್ಟೇ ಜಗದ್ಭ್ರಾನ್ತಿರ್ದೂರಾದೇವ ಪಲಾಯತೇ ॥೧೪೫॥**

---

1. ಅವುಗಳ ತೋರಿಕೆಯು ಒಂದಿಷ್ಟೂ ಇರುವದಿಲ್ಲ ಎಂದರ್ಥ.

2. ಆದ್ದರಿಂದ ಜಗತ್ತು ಚಿತ್ತಮಾತ್ರವೇ, ಪರಮಾರ್ಥವಾಗಿಲ್ಲ ವಿ. ೧೬೮, ೧೬೯, ೧೭೦.

೧೪೫. ಅಧಿಷ್ಠಾನವನ್ನು ಕಾಣದ್ದರಿಂದಲೇ ಸಜ್ಜನರಿಗೆ ಪ್ರಪಂಚಭ್ರಮೆಯಾಗಿರುತ್ತದೆ. ಅದನ್ನು ಕಂಡರೆ ಜಗತ್ತಿನ ಭ್ರಾಂತಿಯೂ ದೂರದಿಂದಲೇ ಓಡಿಹೋಗುತ್ತದೆ.

**ಯದಸತ್ಯಂ ಬಾಧ್ಯತೇ ತಚ್ಛುಕ್ತಿಕಾರಜತಂ ಯಥಾ ।**
**ಯತ್ಸತ್ಯಂ ಬಾಧ್ಯತೇ ತನ್ನೋ ಶುಕ್ತಿಕಾಶಕಲಂ ಯಥಾ ॥೧೪೬॥**

೧೪೬. ಯಾವದು ಅಸತ್ಯವೋ ಅದು ಕಪ್ಪೆಯಚಿಪ್ಪಿನ ಬೆಳ್ಳಿಯಂತೆ ಬಾಧಿತವಾಗುತ್ತದೆ. ಯಾವದು ಸತ್ಯವೋ ಅದು ಬಾಧಿತವಾಗುವದಿಲ್ಲ ; ಕಪ್ಪೆಯಚಿಪ್ಪೇ ಇದಕ್ಕೆ ಉದಾಹರಣೆ.

**ವಿಶ್ವಸ್ಯ ಭ್ರಾನ್ತಿಕಾರ್ಯತ್ವಾದಸತ್ಯತ್ವಂ ಚ ಬಾಧನಮ್ ।**
**ನ್ಯಾಯಯುಕ್ತಂ ತತೋ ವಿಶ್ವಂ ಬ್ರಹ್ಮಜ್ಞಾನೇನ ಬಾಧ್ಯತೇ ॥೧೪೭॥**

೧೪೭. ಪ್ರಪಂಚವು ಭ್ರಾಂತಿಯ ಕಾರ್ಯವಾಗಿರುವದರಿಂದ ಅದು ಅಸತ್ಯವೆಂಬುದೂ ಬಾಧಿತವಾಗತಕ್ಕದ್ದೆಂಬುದೂ ಯುಕ್ತವು. ಆದ್ದರಿಂದ ಪ್ರಪಂಚವು ಬ್ರಹ್ಮಜ್ಞಾನದಿಂದ ಬಾಧಿತವಾಗುತ್ತದೆ.[1]

**ಜಾಗ್ರತ್ಸ್ವಪ್ನಸುಷುಪ್ತಾದೌ ವ್ಯಭಿಚಾರಪ್ರದರ್ಶನಾತ್ ।**
**ಸ್ವತಃಸತ್ತಾದಿಶೂನ್ಯತ್ವಂ ಚಿತ್ತಸಂಭಾವಿತತ್ವತಃ ॥೧೪೮॥**

೧೪೮. ಎಚ್ಚರ, ಕನಸು, ತನಿನಿದ್ರೆ – ಇವೇ ಮುಂತಾದ ಅವಸ್ಥೆಗಳಲ್ಲಿ ಬೇರ್ಪಡುವದರಿಂದಲೂ ಚಿತ್ತದಿಂದ ಉಂಟಾಗಿರುವದರಿಂದಲೂ (ಅದಕ್ಕೆ) ಸ್ವತಃಸತ್ತೆಯೇ ಮುಂತಾದವು ಇರುವದಿಲ್ಲ.

**ವಿಶ್ವಸ್ಯ ಭ್ರಾನ್ತಿಕಾರ್ಯತ್ವಮಭ್ಯುಪೇತಂ ಮಹರ್ಷಿಭಿಃ ।**
**ನ ಹ್ಯಸ್ತಿ ಕಿಂಚಿತ್ಸತ್ಯತ್ವಂ ಭ್ರಾನ್ತ್ಯಾ ಕಲ್ಪಿತವಸ್ತುನಃ ॥೧೪೯॥**

೧೪೯. ಪ್ರಪಂಚವು ಭ್ರಾಂತಿಯ ಕಾರ್ಯವೆಂಬುದನ್ನು ಮಹರ್ಷಿಗಳು ಒಪ್ಪಿರುತ್ತಾರೆ. ಭ್ರಾಂತಿಯಿಂದ ಕಲ್ಪಿತವಾಗಿರುವ ವಸ್ತುವಿಗೆ ಸ್ವಲ್ಪವೂ ಸತ್ಯತ್ವವು ಇರುವದಿಲ್ಲವಷ್ಟೆ ?

**ರಜ್ಜ್ವಾಂ ಕಲ್ಪಿತಸರ್ಪಸ್ಯ ಸತ್ಯತ್ವಂ ಕೇನ ವೀಕ್ಷಿತಮ್ ।**
**ಯತ್ರ ಯತ್ಕಲ್ಪಿತಂ ಭ್ರಾನ್ತ್ಯಾ ತತ್ತು ತಸ್ಮಾನ್ನ ಭಿದ್ಯತೇ ॥೧೫೦॥**
**ಶುಕ್ತಿಕಲ್ಪಿತರೂಪ್ಯಸ್ಯ ಶುಕ್ತ್ಯಭಿನ್ನತ್ವದರ್ಶನಾತ್ ॥೧೫೦½॥**

1. ತೋರಿಕೆಯ ರೂಪದಿಂದ ಅಸತ್ಯವೆಂದೂ ನಿಶ್ಚಿತವಾಗುತ್ತದೆ.

೧೫೦–೧೫೦೧/₂. ಹಗ್ಗದಲ್ಲಿ ಕಲ್ಪಿತವಾದ ಹಾವು ಸತ್ಯವೆಂಬುದನ್ನು ಯಾವನು ಕಂಡಿರುತ್ತಾನೆ ? ಯಾವದು ಯಾವದರಲ್ಲಿ ಭ್ರಾಂತಿಯಿಂದ ಕಲ್ಪಿತವಾಗಿ ರುತ್ತದೆಯೋ ಅದು ಅದಕ್ಕಿಂತ ಬೇರೆಯಾಗಿರುವದಿಲ್ಲ ; ಏಕೆಂದರೆ ಕಪ್ಪೆಯ ಚಿಪ್ಪಿನಲ್ಲಿ ಕಲ್ಪಿತವಾಗಿರುವ ಬೆಳ್ಳಿಯು ಕಪ್ಪೆಯಚಿಪ್ಪಿಗಿಂತ ಬೇರೆಯಿಲ್ಲವೆಂಬುದು ಕಂಡಿರುತ್ತದೆ.

**ಪಾಷಾಣೇ ಪರಿಕಲ್ಪಿತೈರವಯವೈಃ ಪಾಣ್ಯಾದಿಭಿರ್ಭಾವಿತಃ**
**ಶ್ರೀವಿಷ್ಣುರ್ನಿಜರೂಪತೋ ನ ಹಿ ಶಿಲಾರೂಪಾತ್ಪೃಥಗ್ಭಿದ್ಯತೇ ।**
**ತದ್ವದ್ಬ್ರಹ್ಮಣಿ ಕಲ್ಪಿತಸ್ಯ ಜಗತೋ ಬ್ರಹ್ಮಸ್ವರೂಪಾತ್ಪೃಥಗ್**
**ಭೇದೋ ನಾಸ್ತಿ ಯತಸ್ತತಸ್ತದಖಿಲಂ ಬ್ರಹ್ಮೈವ ಸದ್ವಸ್ತುತಃ ॥೧೫೧॥**

೧೫೧. ಕಲ್ಲಿನಲ್ಲಿ ಮಾಡಿರುವ ಕೈ ಮುಂತಾದ ಅವಯವಗಳಿಂದ ಉಂಟಾ ಗಿರುವ ಶ್ರೀವಿಷ್ಣು(ಪ್ರತಿಮೆಯು) ಕಲ್ಲಿನ ರೂಪಕ್ಕಿಂತ ತನ್ನ ರೂಪದಲ್ಲಿ ಪ್ರತ್ಯೇಕ ವಾಗಿ ಬೇರೆಯಾಗಿರುವದಿಲ್ಲವಷ್ಟೆ ? ಅದರಂತೆ ಬ್ರಹ್ಮದಲ್ಲಿ ಕಲ್ಪಿತವಾದ ಜಗತ್ತಿಗೆ ಬ್ರಹ್ಮಸ್ವರೂಪಕ್ಕಿಂತ ಪ್ರತ್ಯೇಕವಾಗಿ ಭೇದವು[1] ಇರುವದಿಲ್ಲವಲ್ಲವೆ ? ಆದ್ದರಿಂದ ಅದೆಲ್ಲವೂ ವಾಸ್ತವಿಕವಾಗಿ ಬ್ರಹ್ಮವೇ ಆಗಿರುತ್ತದೆ.

**ಯತ್ಸರ್ವಂ ಖಲ್ವಿದಂ ಬ್ರಹ್ಮ ಸರ್ವಂ ಹ್ಯೇತದಿತಿ ಸ್ಫುಟಮ್ ।**
**ಬ್ರಹ್ಮೈವೇದಂ ವಿಶ್ವಮಿತಿ ಪ್ರಬ್ರುವೀತಿ ಸ್ವಯಂ ಶ್ರುತಿಃ ॥೧೫೨॥**

**ವಿಶ್ವಸ್ಯ ಬ್ರಹ್ಮಮಾತ್ರತ್ವಂ ತಾತ್ಪರ್ಯೇಣ ತತೋ ಜಗತ್ ।**
**ಸರ್ವಂ ಬ್ರಹ್ಮೈವ ನಾಸ್ತ್ಯತ್ರ ಸಂಶಯೋ ಬ್ರಹ್ಮವಾದಿನಾಮ್ ॥೧೫೩॥**

೧೫೨–೧೫೩. 'ಇದೆಲ್ಲವೂ ಬ್ರಹ್ಮವೇ' (ಛಾಂ.೩–೧೪–೧) 'ಇದೆಲ್ಲವೂ ಬ್ರಹ್ಮವಷ್ಟೆ' (ಮಾಂ.೨) 'ಈ ವಿಶ್ವವೂ ಬ್ರಹ್ಮವೇ' (ಮುಂ.೨–೨– ೧೧) ಎಂದು ಸ್ಫುಟವಾಗಿ ಶ್ರುತಿಯು ತಾನೇ ಎಲ್ಲವೂ ಬ್ರಹ್ಮಮಾತ್ರವಾಗಿದೆ ಎಂದು ತಾತ್ಪರ್ಯ ದಿಂದ ಹೇಳುತ್ತದೆಯಲ್ಲವೆ ? ಆದ್ದರಿಂದ ಜಗತ್ತೆಲ್ಲವೂ ಬ್ರಹ್ಮವೇ. ಈ ವಿಷಯ ದಲ್ಲಿ ಬ್ರಹ್ಮವಾದಿಗಳಿಗೆ ಸಂಶಯವಿಲ್ಲ.

## ಜೀವೇಶ್ವರರಲ್ಲಿರುವ ಅಜ್ಞತ್ವಸರ್ವಜ್ಞತ್ವಾದಿಗಳು

**ರೂಪ್ಯಸ್ಯ ಶುಕ್ತಿಮಾತ್ರತ್ವಂ ಯಥಾಽಸ್ಯ ಜಗತಸ್ತಥಾ ।**
**ಸಿದ್ಧೇ ತು ಬ್ರಹ್ಮಮಾತ್ರತ್ವೇ ಪರಸ್ಯ ಬ್ರಹ್ಮಣಃ ಸತಃ ॥೧೫೪॥**

---

1. ೧೪೯ ರಿಂದ ೧೫೦ರವರೆಗಿನ ಶ್ಲೋಕಗಳ ಅರ್ಥಕ್ಕೆ ವಿ. ೩೮೪ನ್ನು ನೋಡಿ.

2. ವಿ. ೨೨೯

ಸಿದ್ಧಮೇವಾದ್ವಿತೀಯತ್ವಂ ಪ್ರಮಾಣೈರಖಿಲೈರಪಿ ।
ಯತ ಏವಮತೋ ಹೀಶೇ ಸರ್ವಜ್ಞತ್ವಾದಯೋ ಮೃಷಾ ॥೧೫೫॥

ಸ್ವಾಜ್ಞಾನಕಲ್ಪಿತಾಃ ಸರ್ವೇ ಸ್ವಸ್ಮಿನ್ ಕಿಞ್ಚಿಜ್ಜ್ಞತಾದಿವತ್ ।
ಮಾಯಾಮಾತ್ರಮಿದಂ ದ್ವೈತಮಿತಿ ಶ್ರುತಿವಚೋಬಲಾತ್ ॥೧೫೬॥

ದ್ವೈತಸ್ಯ ಭ್ರಮಕಾರ್ಯತ್ವಾತ್ತದನ್ತಃಪಾತಿನೋರಪಿ ।
ದ್ವಯೋರ್ಜೀವೇಶ್ವರೋಪಾಧ್ಯೋಸ್ತಥೈವೋಭಯಗಾಮಿನಾಮ್ ॥
ಸರ್ವಜ್ಞತ್ವಾದಿಧರ್ಮಾಣಾಂ ಮೃಷಾತ್ವೇ ಕೋऽತ್ರ ಸಂಶಯಃ ॥೧೫೭॥

೧೫೪-೧೫೭. ಬೆಳ್ಳಿಯು ಕಪ್ಪೆಯಚಿಪ್ಪು ಮಾತ್ರವೇ ಹೇಗೋ ಹಾಗೆ ಈ ಜಗತ್ತು ಬ್ರಹ್ಮಮಾತ್ರವೇ ಎಂದು ಸಿದ್ಧವಾಗಲಾಗಿ ಸದ್ರೂಪವಾದ ಪರಬ್ರಹ್ಮವು ಅದ್ವಿತೀಯವೇ ಎಂದು ಎಲ್ಲಾ ಪ್ರಮಾಣಗಳಿಂದಲೂ ಸಿದ್ಧವಾಯಿತು. ಹೀಗಿರುವದರಿಂದ ಈಶ್ವರನಲ್ಲಿರುವ ಸರ್ವಜ್ಞತ್ವಾದಿಧರ್ಮಗಳು, ತನ್ನಲ್ಲಿ ಕಿಂಚಿಜ್ಜ್ಞತ್ವವೇ ಮುಂತಾದವುಗಳಂತೆ ಹುಸಿಯೇ, ತನ್ನ ಅಜ್ಞಾನದಿಂದ ಕಲ್ಪಿತವಾದವುಗಳೇ 'ಮಾಯಾಮಾತ್ರಮಿದಂ ದ್ವೈತಮ್' (ಗೌ.ಕಾ.೧-೧೭) ಎಂಬ ಶ್ರುತಿವಾಕ್ಯದ[1] ಬಲದಿಂದ ದ್ವೈತವು ಭ್ರಾಂತಿಯ ಕಾರ್ಯವಾಗಿರುತ್ತದೆಯಾಗಿ ಅದರೊಳಗೆ ಸೇರಿರುವ ಜೀವೇಶ್ವರರಿಬ್ಬರ ಉಪಾಧಿಗಳೂ[2] ಮತ್ತು ಇಬ್ಬರಿಗೂ ಸೇರಿರುವ ಸರ್ವಜ್ಞತ್ವಾದಿಧರ್ಮಗಳೂ ಹುಸಿಯೆಂಬುದರಲ್ಲಿ ಸಂಶಯವೇನು ?

## ಜೀವೇಶ್ವರೈಕ್ಯವು ಅವಿರುದ್ಧ

ಯತ ಏವಮತಃ ಶುದ್ಧಚಿನ್ಮಾತ್ರೈಕಸ್ವರೂಪಿಣೋಃ ।
ಯುಕ್ತಂ ಬ್ರಹ್ಮಾತ್ಮನೋರೈಕ್ಯಂ ಶ್ರುತ್ಯುಕ್ತಂ ನ ವಿರುಧ್ಯತೇ ೧೫೯॥

೧೫೯. ಹೀಗಿರುವದರಿಂದ ಶುದ್ಧಚಿನ್ಮಾತ್ರವೆಂಬುದೊಂದೇ ಸ್ವರೂಪವಾಗಿರುವ ಬ್ರಹ್ಮಾತ್ಮರುಗಳಿಗೆ ಶ್ರುತಿಯಲ್ಲಿ ಹೇಳಿರುವ[3] ಐಕ್ಯವು ಯುಕ್ತವಾಗಿರುತ್ತದೆ. ವಿರುದ್ಧವಲ್ಲ.

ಪಾಷಾಣಪ್ಲವನಂ ಚಾಪಿ ಸಿಧ್ಯೇತ್ ಕಾಲವಿಪರ್ಯಯೇ ।
ನ ಕ್ವಚಿಚ್ಛ್ರುತಿವಾಕ್ಯಾನಾಮಪ್ರಾಮಾಣ್ಯಂ ತು ವಿದ್ಯತೇ ॥೧೬೦॥

1. ಈ ಗೌಡಪಾದಕಾರಿಕೆಯನ್ನು ಗ್ರಂಥಕರ್ತರು ಶ್ರುತಿಯೆಂದೇ ಹಿಡಿದಿದ್ದಾರೆ. ವಿ. ೪೦೨ನ್ನು ನೋಡಿ.
2. ಉಪಾಧಿಗಳು ಮಿಥ್ಯೆಯೆಂಬುದಕ್ಕೆ ವಿ. ೨೪೧ನ್ನು ನೋಡಿ.
3. 'ತತ್ತ್ವಮಸಿ' ಮುಂತಾದ ಶ್ರುತಿಯಲ್ಲಿ ಹೇಳಿರುವ ಎಂದರ್ಥ.

೧೬೦. ಕಾಲವು ವ್ಯತ್ಯಸ್ತವಾದರೆ ಕಲ್ಲು ತೇಲುವದೆಂಬುದೂ ಸಿದ್ಧಿಸಬಹುದು, ಆದರೆ ಶ್ರುತಿವಾಕ್ಯಗಳಿಗೆ ಅಪ್ರಾಮಾಣ್ಯವು ಮಾತ್ರ ಎಂದಿಗೂ ಇರುವದಿಲ್ಲ.

## ಭೇದಜ್ಞಾನದಿಂದ ಸಂಸಾರ

**ತಾವದ್ಧ್ಯುಪಾಧಿಸಂಬನ್ಧೋ ಯಾವತ್ಸ್ಯಾದ್ಭೇದದರ್ಶನಮ್ ।**
**ನ ಭೇದದರ್ಶಿನೋ ಜನ್ತೋಃ ಸಂಸಾರೋ ವಿನಿವರ್ತತೇ ॥೧೬೧॥**

೧೬೧. ಎಲ್ಲಿಯವರೆಗೆ ಭೇದವು ಕಾಣುತ್ತಿರುವದೋ ಅಲ್ಲಿಯವರೆಗೂ ಉಪಾಧಿಯ ಸಂಬಂಧವಿರುತ್ತದೆ. ಭೇದವನ್ನು ಕಾಣುತ್ತಿರುವ ಜೀವನಿಗೆ ಸಂಸಾರವು ತೊಲಗದು.

**ಯದಾ ಹ್ಯೇವೈಷ ಏತಸ್ಮಿನ್ನಿತ್ಯೇವ ವದತಿ ಶ್ರುತಿಃ ।**
**ಭೇದದೃಷ್ಟೇಸ್ತು ಸಂಸಾರಂ ದುರನ್ತಂ ಭಯಲಕ್ಷಣಮ್ ॥೧೬೨॥**

೧೬೨. "ಯಾವಾಗ ಈತನು ಇದರಲ್ಲಿ" (ಯದಾ ಹ್ಯೇವೈಷ ಏತಸ್ಮಿನ್) ಎಂಬ (ತೈ. ೨-೭) ಶ್ರುತಿಯು[1] ಭೇದದೃಷ್ಟಿಯುಳ್ಳಾತನಿಗೆ ಭಯರೂಪವಾದ ಸಂಸಾರವು ಕೊನೆಗಾಣದೆ ಇರುವದೆಂದೇ ಹೇಳುತ್ತದೆ.

## ಸಂಸಾರನಾಶಕ್ಕೆ ಬ್ರಹ್ಮಾತ್ಮೈಕತ್ವಜ್ಞಾನವು ಬೇಕು

**ತತೋ ನಿಶ್ಶೇಷಸಂಸಾರೋಚ್ಛಿತ್ತ್ಯೈ ನಿತ್ಯಸುಖಾಪ್ತಯೇ ।**
**ಜ್ಞಾತವ್ಯಂ ವಿದುಷಾ ಸಮ್ಯಗ್ಬ್ರಹ್ಮಾಭಿನ್ನತ್ವಮಾತ್ಮನಃ ॥೧೬೩॥**

೧೬೩. ಆದ್ದರಿಂದ ಸಂಸಾರವು ಸ್ವಲ್ಪವೂ ಉಳಿಯದಂತೆ ನಾಶವಾಗುವದಕ್ಕೂ ನಿತ್ಯಸುಖವು ದೊರಕುವದಕ್ಕೂ ವಿವೇಕಿಯಾದವನು ಆತ್ಮನು ಬ್ರಹ್ಮಾಭಿನ್ನನೆಂಬುದನ್ನು[2] ಚೆನ್ನಾಗಿ ಅರಿತುಕೊಳ್ಳಬೇಕು.

**ತತಸ್ತಯೋರಖಣ್ಡತ್ವಮೇಕತ್ವಂ ಪ್ರತಿಪಾದ್ಯತೇ ।**
**ತಾತ್ಪರ್ಯೇಣ ಮುಹುಃ ಶ್ರುತ್ಯಾ ತಾರಣಾರ್ಥಂ ಮುಮುಕ್ಷತಾಮ್ ॥೧೬೪॥**

೧೬೪. ಆದ್ದರಿಂದ ಆ (ಬ್ರಹ್ಮಾತ್ಮರುಗಳಿಗೆ) ಅಖಂಡತ್ವವೆಂಬ ಏಕತ್ವವನ್ನು[3] ಶ್ರುತಿಯು ಮುಮುಕ್ಷುಗಳನ್ನು ದಾಟಿಸುವದಕ್ಕಾಗಿ ತಾತ್ಪರ್ಯದಿಂದ ಮತ್ತೆಮತ್ತೆ ಹೇಳುತ್ತಿರುವದು.

---

1. ವಿ. ೩೨೭. 2. ಬ್ರಹ್ಮಾಭಿನ್ನತ್ವಜ್ಞಾನವೇ ಮೋಕ್ಷಕ್ಕೆ ಕಾರಣವು. ವಿ. ೨೨೧.

3. ಅಖಂಡಭಾವವೇ ಜೀವೇಶ್ವರೈಕ್ಯವೆಂಬುದಕ್ಕೆ ವಿ. ೨೪೭ನ್ನು ನೋಡಿ. ಅಖಂಡ ಎಂಬ ಶಬ್ದವನ್ನುಪಯೋಗಿಸುವದು ಗ್ರಂಥಕರ್ತರಿಗೆ ಬಹಳ ಮೆಚ್ಚು. ವಿ॥ ಗ್ರಂಥದ ಶಬ್ದಾನುಕ್ರಮಣಿಕೆಯನ್ನು ನೋಡಿ.

ಯದ್ಯಸ್ಯ ಕಾರ್ಯಂ ಪರಿದೃಶ್ಯತೇ ತ-
ತ್ತನ್ಮಾತ್ರಮೇವಾವಧೃತಂ ಘಟಾದೌ ।
ಸದ್ಬ್ರಹ್ಮಣಃ ಕಾರ್ಯಮಿದಂ ಚ ವಿಶ್ವಂ
ಸದದ್ವಯಂ ಸರ್ವಮಿದಂ ಸದೇವ ॥೧೬೫॥

೧೬೫. ಯಾವದು ಯಾವದರ ಕಾರ್ಯವೆಂದು ಕಾಣಬರುತ್ತದೆಯೋ ಅದು ಮಾತ್ರವೇ ಎಂದು ನಿಶ್ಚಯಿಸಿರುವದು ಗಡಿಗೆ ಮುಂತಾದವುಗಳ ವಿಷಯದಲ್ಲಿ ಕಂಡುಬಂದಿದೆ. ಈ ಪ್ರಪಂಚವೆಲ್ಲ ಸದ್ಬ್ರಹ್ಮದ ಕಾರ್ಯವಾಗಿದೆ ; ಸತ್ತು ಅದ್ವಯವಾಗಿರುವದರಿಂದ ಇದೆಲ್ಲವೂ ಸತ್ತೇ (ಆಗಿರುತ್ತದೆ).[1]

ನಿರ್ದಿಶ್ಯಮಾನೋಽಪಿ(?)[2] ವಿಕಾರ ಏಷ
ಭ್ರಾನ್ತೈರಸದ್ಬುದ್ಧಿಭಿ[3]ರಾತ್ಮದೋಷಾತ್ ।
ಸತಃ ಪೃಥಗ್ರೂಪಯಿತುಂ ನ ಶಕ್ಯತೇ
ಮೃದಃ ಪೃಥಕ್ತ್ವೇನ ಘಟಾದಯೋ ಯಥಾ ॥೧೬೬॥
ಯತಸ್ತತೋ ವಿಶ್ವಮಿದಂ ಸಮಸ್ತಂ
ಬ್ರಹ್ಮೈವ ಮೃತ್ಸ್ನೈವ ಯಥಾ ಘಟಸ್ತಥಾ ॥೧೬೭॥

೧೬೬–೧೬೭. ಭ್ರಾಂತರೂ ತಪ್ಪುತಿಳಿವಳಿಕೆಯುಳ್ಳವರೂ ಆದ ಜನರು ಅಂತಃಕರಣದೋಷದಿಂದ ಈ ಕಾರ್ಯಪ್ರಪಂಚವನ್ನು ತೋರಿಸುತ್ತಿದ್ದರೂ– ಮಣ್ಣಿಗಿಂತ ಬೇರೆಯಾಗಿ ಗಡಿಗೆಯೇ ಮುಂತಾದವುಗಳನ್ನು ಹೇಗೆ ತೋರಿಸುವದಕ್ಕಾಗುವದಿಲ್ಲವೋ ಹಾಗೆ – ಸದ್ಬ್ರಹ್ಮಕ್ಕಿಂತ ಬೇರೆಯೆಂದು ಗೊತ್ತುಪಡಿಸುವದಕ್ಕೆ ಆಗುವದಿಲ್ಲ. ಹೀಗಿರುವದರಿಂದ ಗಡಿಗೆಯು ಹೇಗೆ ಮಣ್ಣೇ ಆಗಿರುವದೋ[4] ಹಾಗೆ ಈ ಪ್ರಪಂಚವೆಲ್ಲವೂ ಬ್ರಹ್ಮವೇ ಆಗಿರುತ್ತದೆ.

[5]ಮೂರ್ತಾಮೂರ್ತವಿಕಾರಜಾತಮುದಿತಂ ಸತ್ಯಾದಿಕಂ ಸರ್ವತಃ
ಸಚ್ಚೇ[6]ತ್ಯಾಗಮಬೋಧಿತಂ ಬಹುವಿಧಂ ಯನ್ನಾಮರೂಪಾತ್ಮಕಮ್ ।
ತತ್ಸರ್ವಂ ಸ್ವಯಮೇಕಮೇವ ಸದಭೂತ್ತಸ್ಮಾತ್ಪರಂ ಬ್ರಹ್ಮಣಃ
ಕಿಞ್ಚಿನ್ನಾಸ್ತಿ ವಿಚಾರಿತಂ ಸದಖಿಲಂ ಬ್ರಹ್ಮೈವ ಸದ್ವಸ್ತುತಃ ॥೧೬೮॥

1. ವಿ. ೨೨೬ ರಿಂದ ೨೨೮.
2. 'ನಿರೀಕ್ಷ್ಯಮಾಣೋಽಪಿ' ಎಂದಿದ್ದರೆ ಚೆನ್ನಾಗಿತ್ತು. ಈ ಪಾಠಕ್ಕೆ 'ಕಾಣುತ್ತಿದ್ದರೂ' ಎಂದು ಅರ್ಥ. 3. 'ಅತದ್ಬುದ್ಧಿಭಿಃ' ಎಂಬುದನ್ನು ಹೀಗೆ ತಿದ್ದಿಕೊಂಡಿದೆ.
4. ವಿ. ೨೨೬.
5. ೧೬೫, ೧೬೬, ೧೬೭ – ಈ ಶ್ಲೋಕಗಳು ಈ ಪ್ರಕರಣಕ್ಕಿಂತ ಶ್ಲೋ. ೧೨೭ರ ಪ್ರಕರಣಕ್ಕೆ ಹೆಚ್ಚು ಒಪ್ಪಾಗಿದೆ.
6. 'ಸ್ತಚ್ಚೇತ್ಯಾಗಮ' ಎಂಬ ಅಚ್ಚಿನ ಪುಸ್ತಕದ ಪಾಠವು ತಪ್ಪು.

೧೬೮. ಸತ್ಯವೇ ಮುಂತಾದ, ಸಚ್ಚ(ತ್ಯಚ್ಚಾಭವತ್ ತೈ.೨–೬) ಎಂಬ ಶ್ರುತಿಯಿಂದ ಬಹುವಿಧವಾಗಿ ಉಪದಿಷ್ಟವಾಗಿರುವ ನಾಮರೂಪಾತ್ಮಕವಾದ ಮೂರ್ತಾಮೂರ್ತವಿಕಾರಸಮೂಹವಿದೆಯಷ್ಟೆ[1], ಅದೆಲ್ಲವೂ ಸದ್ಬ್ರಹ್ಮವೊಂದೇ ಆಗಿರುತ್ತದೆ. ಆದ್ದರಿಂದ ಆ ಬ್ರಹ್ಮಕ್ಕಿಂತ ಹೆಚ್ಚಿನದು ಯಾವದೊಂದೂ ಇರುವದಿಲ್ಲ. ವಿಚಾರಮಾಡಿದರೆ ಎಲ್ಲವೂ ಬ್ರಹ್ಮವೇ. ಬ್ರಹ್ಮವೊಂದೇ ವಾಸ್ತವಿಕವಾಗಿ ಇದ್ದುಕೊಂಡಿದೆ.

## ಬ್ರಹ್ಮಾತ್ಮೈಕತ್ವ

**ಪ್ರತ್ಯಗೇಷ ಪರಂ ಬ್ರಹ್ಮ ಬ್ರಹ್ಮೈವ ಪ್ರತ್ಯಗೇಷಕಃ ।**
**ನೋಭಯೋರನ್ತರಂ ಕಿಂಚಿತ್ಸಹನ್ತೇ ಶ್ರುತಯಃ ಕ್ವಚಿತ್ ॥೧೬೯॥**

೧೬೯. ಪರಬ್ರಹ್ಮವು ಈ ಪ್ರತ್ಯಗಾತ್ಮನೇ, ಈ ಪ್ರತ್ಯಗಾತ್ಮನು ಬ್ರಹ್ಮವೇ.[2] (ಈ) ಎರಡಕ್ಕೂ ಒಂದಿಷ್ಟು ಭೇದವನ್ನೂ[3] ಶ್ರುತಿಗಳು ಎಲ್ಲಿಯೂ ಸಹಿಸುವದಿಲ್ಲ.

**ಶ್ರುತೇಃ ಸ್ಮೃತೇಶ್ಚಾಪಿ ತತ್ತ್ವಂ ಪರ್ಯಾಲೋಚ್ಯ ಸ್ವಯುಕ್ತಿಭಿಃ ।**
**ಬ್ರಹ್ಮಾತ್ಮನೋರ್ನೈವ ಭೇದಮೀಷತ್ಪಶ್ಯನ್ತಿ ಸೂರಯಃ ॥೧೭೦॥**

೧೭೦. ಶ್ರುತಿಯಿಂದಲೂ ಸ್ಮೃತಿಯಿಂದಲೂ ತತ್ತ್ವವನ್ನು ತನ್ನ ಯುಕ್ತಿಗಳಿಂದಲೂ ಪರ್ಯಾಲೋಚನೆಮಾಡಿ ವಿವೇಕಿಗಳಾದವರು ಬ್ರಹ್ಮಾತ್ಮರುಗಳಿಗೆ ಒಂದಿಷ್ಟೂ ಭೇದವನ್ನು ಕಾಣದೆ ಇರುತ್ತಾರೆ.[4]

**ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ ।**
**ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥೧೭೧॥**

---

1. ಸತ್, ತ್ಯತ್ (ಪ್ರತ್ಯಕ್ಷ ಪರೋಕ್ಷ) ; ನಿರುಕ್ತ, ಅನಿರುಕ್ತ (ಇಂಥದ್ದೆಂದು ಹೇಳಬಹುದಾದದ್ದು, ಹಾಗೆ ಹೇಳಲಾಗದ್ದು) ; ನಿಲಯನ, ಅನಿಲಯನ (ಆಶ್ರಯ, ಅಶ್ರಯವಲ್ಲದ್ದು) – ಇವು ಮೂರ್ತಾಮೂರ್ತಗಳ ಧರ್ಮಗಳೇ. ಮೂರ್ತವೆಂದರೆ ಪೃಥಿವ್ಯಪ್ತೇಜಸ್ಸುಗಳು, ಅಮೂರ್ತವೆಂದರೆ ವಾಯ್ವಾಕಾಶಗಳು ; ತೈ.ಭಾ.೨–೬, ಬೃ.ಭಾ.೩–೩–೧,೨ – ಇವನ್ನು ನೋಡಿ.
2. ಆತ್ಮನು ಬ್ರಹ್ಮವೇ ಎಂಬುದರಿಂದ ಸಂಸಾರಿತ್ವನಿವೃತ್ತಿಯೂ ಬ್ರಹ್ಮವು ಆತ್ಮನೇ ಎಂಬುದರಿಂದ ಪರೋಕ್ಷತ್ವನಿವೃತ್ತಿಯೂ ಆಗುವದು. ನೃ.ಉ.೯ರಲ್ಲಿ 'ಆತ್ಮಾ ಬ್ರಹ್ಮೈವ ಬ್ರಹ್ಮಾತ್ಮೈವ' ಎಂಬ ವಾಕ್ಯವಿದೆ.
3. 'ಉದರಮನ್ತರಂ ಕುರುತೇ' (ತೈ.೨–೭) ಎಂಬ ಶ್ರುತಿಯು ಸೂಚನೆ. ವಿ. ೩೨೭.
4. ಶಂ.ಗೀ. ೧೩–೨ರ ವ್ಯಾಖ್ಯಾನದಲ್ಲಿ ಉದಾಹರಿಸಿರುವ ಶ್ರುತಿಸ್ಮೃತಿಯುಕ್ತಿಗಳನ್ನು ಇಲ್ಲಿ ಮನದಂದುಕೊಳ್ಳಬೇಕು.

೧೭೧. (ಆತ್ಮಬ್ರಹ್ಮರುಗಳಿಗೆ) ಭೇದವನ್ನುಂಟುಮಾಡುವ ಅಜ್ಞಾನವು ಅತ್ಯಂತವಾಗಿ ನಾಶವಾಗಲಾಗಿ ಆತ್ಮನಿಗೂ ಬ್ರಹ್ಮನಿಗೂ ನಿಜವಾಗಿಲ್ಲದ ಭೇದವನ್ನು ಯಾವನು ತಾನೆ ಮಾಡಿಯಾನು ?[1]

**ನಾಮರೂಪಾದಯೋ ಯತ್ರ ಕಲ್ಪಿತಾಶ್ಚಿತ್ತವಿಭ್ರಮಾತ್ ।**
**ವ್ಯೋಮ್ನೀವ ನಗರಂ ಯತ್ತದ್ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೨॥**

೧೭೨. ಆಕಾಶದಲ್ಲಿ (ಗಂಧರ್ವ)ನಗರವು ಕಲ್ಪಿತವಾಗುವಂತೆ ನಾಮ ರೂಪಗಳೇ ಮುಂತಾದವು ಯಾವದರಲ್ಲಿ ಮನಸ್ಸಿನ ಭ್ರಮೆಯಿಂದ ಕಲ್ಪಿತವಾಗಿರುತ್ತವೆಯೋ, ಆ ಬ್ರಹ್ಮವೇ ನೀನಾಗಿರುವೆ[2] ; ನಿಶ್ಚಯ.

**ದ್ರಷ್ಟೃದರ್ಶನದೃಶ್ಯಾನಾಮಭಾವೋ ಯತ್ರ ದೃಶ್ಯತೇ ।**
**ಯದೇವ ಕೇವಲಂ ಶುದ್ಧಂ ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೩॥**

೧೭೩. ನೋಡುವವನು, ನೋಟ, ನೋಡಲ್ಪಡತಕ್ಕದ್ದು – ಇವುಗಳ ಅಭಾವವು ಏತರಲ್ಲಿ ಕಾಣುತ್ತಿರುವದೋ[3], ಯಾವದೊಂದೇ ಶುದ್ಧವಾದ ಬ್ರಹ್ಮವಾಗಿರುವದೋ ಆ ಬ್ರಹ್ಮವೇ ನೀನಾಗಿರುವೆ, ನಿಶ್ಚಯ.

**ಅನ್ತಃಪೂರ್ಣಂ ಬಹಿಃಪೂರ್ಣಂ ಸ್ವಯಮದ್ವಯಮಕ್ರಿಯಮ್ ।**
**ಯದನನ್ತಂ ಪರಂಜ್ಯೋತಿರ್ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೪॥**

೧೭೪. ಯಾವದು ಒಳಗೆ ಪೂರ್ಣವಾಗಿ, ಹೊರಗೂ ಪೂರ್ಣವಾಗಿ, ತಾನು ಅದ್ವಯವಾಗಿ ನಿಷ್ಕ್ರಿಯವಾಗಿರುವದೋ, ಯಾವದು ಅನಂತವಾದ ಪರಂಜ್ಯೋತಿಯಾಗಿರುವದೋ ಆ ಬ್ರಹ್ಮವೇ ನೀನಾಗಿರುವೆ, ನಿಶ್ಚಯ.

**ಯದ್ಗ್ರಾಹ್ಯಗ್ರಾಹಕಾದೀನಾಂ ಭಾಸಕಂ ತದ್ವಿಲಕ್ಷಣಮ್ ।**
**ಭಾಮಾತ್ರಂ ಪರಿತಃ ಪೂರ್ಣಂ ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೫॥**

೧೭೫. ಯಾವದು ಗ್ರಾಹ್ಯ, ಗ್ರಾಹಕ – ಮುಂತಾದವುಗಳನ್ನು ಬೆಳಗುವ ದಾಗಿ[4] ಅವುಗಳಿಗಿಂತ ವಿಲಕ್ಷಣವಾಗಿರುವದೋ, ಕೇವಲಪ್ರಕಾಶಮಾತ್ರವಾಗಿ[5] ಪೂರ್ಣವಾಗಿರುವದೋ ಆ ಬ್ರಹ್ಮವೇ ನೀನು, ನಿಶ್ಚಯ.

---

1. ವಿ.ಪು. ೬–೭–೯೬ರಲ್ಲಿ ಈ ಶ್ಲೋಕವಿದೆ ; ಶಂ.ಗೀ.೧೩–೨ರಲ್ಲಿ ಉದಾಹರಿಸಿದೆ.
2. ಈ ಶ್ಲೋಕದಿಂದ ಮುಂದಕ್ಕೆ 'ಬ್ರಹ್ಮ ತತ್ತ್ವಮಸಿ ಧ್ರುವಮ್' ಎಂಬ ಪಲ್ಲವಿಯಿರುವ ಶ್ಲೋಕಗಳೇ ಇರುತ್ತವೆ. ವಿ.೨೫೧ ರಿಂದ ೨೬೦ರವರೆಗಿನ ಶ್ಲೋಕಗಳನ್ನು ಇದಕ್ಕೆ ಹೋಲಿಸಿರಿ.
3. ಯೋ.ವಾ.ಉತ್ಪತ್ತಿ ೯–೭೫ನ್ನು ನೋಡಿ. ವಿ.೩೯೭. ಶಂ. ಗೀ. ೬–೪.
4. ಹೊರಗಿನ ವಸ್ತುಗಳು ಅವುಗಳನ್ನು ಬೆಳಗುವ ಸೂರ್ಯಚಂದ್ರಾದಿಗಳು, ಅವನ್ನು ಗ್ರಹಿಸುವ ಚಕ್ಷುರಾದಿಗಳು – ಎಲ್ಲವನ್ನೂ ತಿಳಿಸುವ. ಮುಂದಿನ ಎರಡು ಶ್ಲೋಕಗಳಲ್ಲಿ ಇದನ್ನು ವಿವರಿಸಿದೆ. 5. ಸ್ವಯಂಜ್ಯೋತಿಯಾದ.

ಭಾನುನಾ ಭಾಸಿತಂ ರೂಪಂ ಯಥಾ ಚಕ್ಷುಸ್ತಥಾ ಮನಃ ।
ಯೇನ ಭಾತಮಿದಂ ವೇತ್ತಿ ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೬॥

೧೭೬. ಸೂರ್ಯನಿಂದ ಬೆಳಗಲ್ಪಟ್ಟ ರೂಪವನ್ನು ಹೇಗೆ ಚಕ್ಷುಸ್ಸು, ಮತ್ತು ಮನಸ್ಸು – ಇವುಗಳು ತಿಳಿದುಕೊಳ್ಳುವವೋ, ಹಾಗೆ ಯಾವದರಿಂದ ಬೆಳಗಲ್ಪಟ್ಟ ಈ (ಜಗತ್ತನ್ನು ಜನವು) ತಿಳಿಯುತ್ತಿರುವದೋ[1] ಆ ಬ್ರಹ್ಮವೇ ನೀನಾಗಿರುವೆ, ನಿಶ್ಚಯ

ಸಕೃದ್ವಿಭಾತಂ ಪುರತಃ ಸರ್ವಸ್ಮಾತ್ಸುವಿಭಾತಿ ಯತ್ ।
ಯದ್ಭಾನಮನುಭಾತೀದಂ ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೭॥

೧೭೭. ಎಂದೆಂದಿಗೂ ಬೆಳಗುತ್ತಾ[2] ಎಲ್ಲಕ್ಕಿಂತಲೂ ಮೊದಲೇ ಯಾವದು ಚೆನ್ನಾಗಿ ಬೆಳಗುತ್ತಿರುವದೋ,[3] ಯಾವದು ಬೆಳಗುತ್ತಿರುವದನ್ನೇ ಅನುಸರಿಸಿ ಈ (ಎಲ್ಲವೂ) ಬೆಳಗುತ್ತಿರುವದೋ[4] ಆ ಬ್ರಹ್ಮವೇ ನೀನಾಗಿರುವೆ, ನಿಶ್ಚಯ.

[5]ದರ್ಶನಂ ಶ್ರವಣಂ ಜ್ಞಾನಂ ಯತ್ರ ನಾನ್ಯಸ್ಯ ವಿದ್ಯತೇ ।
ಸೂಕ್ಷ್ಮಮವ್ಯಪದೇಶ್ಯಂ ಯದ್ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೮॥

೧೭೮. ಎಲ್ಲಿ ಮತ್ತೊಂದನ್ನು ಕಾಣುವದಾಗಲಿ, ಕೇಳುವದಾಗಲಿ, ಅರಿಯುವದಾಗಲಿ ಇರುವದಿಲ್ಲವೋ[6], ಯಾವದು ಸೂಕ್ಷ್ಮವೂ ಹೀಗೆಂದು ಹೇಳುವದಕ್ಕೆ ಆಗದ್ದೂ[7] ಆಗಿರುವದೋ ಆ ಬ್ರಹ್ಮವೇ ನೀನಾಗಿರುವೆ, ನಿಶ್ಚಯ.

ನಿಷ್ಕಲಂ ನಿಷ್ಕ್ರಿಯಂ ಶಾನ್ತಂ ನಿರವದ್ಯಂ ನಿರಞ್ಜನಮ್ ।
ಶುದ್ಧಂ ವಿಜ್ಞಾನಮಾನನ್ದಂ ಬ್ರಹ್ಮ ತತ್ತ್ವಮಸಿ ಧ್ರುವಮ್ ॥೧೭೯॥

೧೭೯. ಅವಯವಗಳಿಲ್ಲದ್ದು, ಕ್ರಿಯೆಯಿಲ್ಲದ್ದು, ಶಾಂತವೂ, ನಿರ್ದುಷ್ಟವೂ, ಏತರ ಸೋಂಕೂ ಇಲ್ಲದ್ದು[8], ಶುದ್ಧವೂ ವಿಜ್ಞಾನವೂ ಆನಂದವೂ[9] ಆಗಿರುವ ಆ ಬ್ರಹ್ಮವೇ ನೀನು, ನಿಶ್ಚಯ

ಜಾಗ್ರತ್ಸ್ವಪ್ನಸುಷುಪ್ತ್ಯಾದಿಪ್ರಪಞ್ಚೋ ಯೇನ ಭಾಸ್ಯತೇ ।
ತದೇವಾಹಮಿತಿ ಜ್ಞಾತ್ವಾ ತ್ವನ್ಯತ್ರಾಽಽತ್ಮಮತಿಂ ತ್ಯಜ ॥೧೮೦॥

1. ಕ. ೨–೧–೩.
2. ಛಾಂ. ೮–೪–೨. ಯಾವಾಗಲೂ ಒಂದೇ ಚೈತನ್ಯರೂಪದಿಂದಲೇ ತೋರುತ್ತಾ – ಎಂದರ್ಥ.
3. ಮುಂ. ೨–೨–೭. 4. ಕ. ೨–೨–೧೫, ಮುಂ. ೨–೨–೧೧.
5. ಈ ಗ್ರಂಥದ ಮೊದಲನೆಯ ಶ್ಲೋಕದ ಪೂರ್ವಾರ್ಧವನ್ನು ನೋಡಿ.
6. ಛಾಂ. ೭–೨೪–೧. 7. ಮಾಂ.ಮಂ. ೭. 8. ಶ್ವೇ. ೬–೧೯.
9. ಬೃ. ೩–೯–೨೮–೭.

೧೮೦. ಎಚ್ಚರ, ಕನಸು, ನಿದ್ರೆ – ಮುಂತಾದ ಪ್ರಪಂಚವು ಏತರಿಂದ ಬೆಳಗಲ್ಪಡುತ್ತಿದೆಯೋ[1], ಅದೇ ನಾನು ಎಂದು ಅರಿತುಕೊಂಡು ಅದಕ್ಕಿಂತ ಬೇರೆಯಾದದ್ದರಲ್ಲಿ ನಾನೆಂಬ ಬುದ್ಧಿಯನ್ನು ತೊರೆ.

## ಶಿಷ್ಯನಿಗೆ ಬ್ರಹ್ಮಾತ್ಮತ್ವೋಪದೇಶ

**ಯದ್ವತ್ಸ್ವಪ್ನಶರೀರಕೇಽಹಮಿತಿ ಧೀಃ ಸಂಭಾವಿತಾ ನಿದ್ರಯಾ**
**ತದ್ವಜ್ಜಾಗ್ರತಿ ಮಾಯಯಾತ್ರ ವಪುಷಿ ಸ್ವಾತ್ಮತ್ವಧೀಃ ಕಲ್ಪಿತಾ ।**
**ಸತ್ಯಂ ನೈತದಸಿ ತ್ವಮಾತ್ಮನಿ ಧಿಯಾ ಪಶ್ಯ ಸ್ವಮೇಕಾಗ್ರಯಾ**
**ನಿತ್ಯಂ ಶುದ್ಧಮನನ್ತಮವ್ಯಯಸುಖಂ ಬ್ರಹ್ಮಾಸಿ ಸಾಕ್ಷಾತ್ಪರಮ್ ॥೧೮೧॥**

೧೮೧. ಹೇಗೆ ನಿದ್ರೆಯಿಂದ ಕನಸಿನ ಶರೀರದಲ್ಲಿ ನಾನೆಂಬ ಬುದ್ಧಿಯು ಸಂಭಾವಿತವಾಗಿರುವದೋ[2], ಹಾಗೆಯೇ ಎಚ್ಚರದಲ್ಲಿರುವ ಈ ಶರೀರದಲ್ಲಿ (ಇದು) ನನ್ನ ಆತ್ಮನೇ ಎಂಬ ಬುದ್ಧಿಯು ಮಾಯೆಯಿಂದ ಕಲ್ಪಿತವಾಗಿರುತ್ತದೆ. ನೀನು ನಿಜವಾಗಿಯೂ ಇದಲ್ಲ, ನಿನ್ನಲ್ಲಿಯೇ ಏಕಾಗ್ರವಾದ ಬುದ್ಧಿಯಿಂದ ನಿನ್ನನ್ನು ನೋಡಿಕೊ, ನಿತ್ಯವೂ ಶುದ್ಧವೂ ಅನಂತವೂ ಅವ್ಯಯವೂ, ಆನಂದವೂ ಆಗಿರುವ ಸಾಕ್ಷಾತ್ಪರಬ್ರಹ್ಮವೇ ಆಗಿದ್ದೀಯೆ.

**ದೇಹೇನ್ದ್ರಿಯಪ್ರಾಣಮನೋಽಹಮಾದ್ಯೈಃ**
**ಸಹ ಸ್ಥಿತಃ ಸನ್ನಪಿ ಸಙ್ಗಹೀನಃ ।**
**ವ್ಯೋಮೇವ ಮೇಘೈರಮಲಸ್ವರೂಪ–**
**ಸ್ತ್ವಂ ಪ್ರತ್ಯಗಾತ್ಮಾಽಸಿ ಸದಾಶಿವೋಽಸಿ ॥೧೮೨॥**

೧೮೨. ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು, ಅಹಂಕಾರ – ಇವೇ ಮುಂತಾದವು[3]ಗಳೊಡನೆಯೇ ಇದ್ದುಕೊಂಡಿದ್ದರೂ ಮೋಡಗಳಿಂದ (ಕೂಡಿರುವ) ಆಕಾಶಕ್ಕೆ (ಅವುಗಳ ಸಂಗವಿಲ್ಲ)ದಿರುವಂತೆ (ಅವುಗಳ) ಸಂಗವಿಲ್ಲದೆ, ನಿರ್ಮಲನಾಗಿರುವ ಪ್ರತ್ಯಗಾತ್ಮನೇ ನೀನಾಗಿರುವೆ, ಸದಾಶಿವನೇ ಆಗಿರುವೆ.[4]

1. ವಿ. ೨೧೫ ; ಈ ಶ್ಲೋಕದ ಮೂರು ಪಾದಗಳನ್ನು ಕೈ. ಉಪನಿಷತ್ತಿನ ೧–೧೭ಕ್ಕೆ ಹೋಲಿಸಿ.
2. ವಿ. ೧೬೨.
3. ದೇಹಾದಿಗಳು ಅನಾತ್ಮವೆಂಬುದಕ್ಕೆ ವಿ. ೧೨೨, ೩೬೭ ನೋಡಿರಿ.
4. ಇಲ್ಲಿಂದ ಮುಂದಕ್ಕೆ ಕೆಲವು ಶ್ಲೋಕಗಳ ಕೊನೆಯಲ್ಲಿ 'ತ್ವಂ ಪ್ರತ್ಯಗಾತ್ಮಾಸಿ, ಸದಾಶಿವೋಽಸಿ' ಎಂಬ ಮಾತುಗಳೇ ಬಂದಿರುತ್ತವೆ.

ಕ್ಷರಾಕ್ಷರಾಭ್ಯಾಂ ಚ ವಿಲಕ್ಷಣಃ ಸನ್
ಕ್ಷರಾಕ್ಷರವ್ಯಾಪೃತಿಹೇತುಭೂತಃ ।
ತಯೋಶ್ಚ ತತ್ತದ್ವಿಕೃತೇಶ್ಚ[1] ಸಾಕ್ಷೀ
ತ್ವಂ ಪ್ರತ್ಯಗಾತ್ಮಾಸಿ ಸದಾಶಿವೋಽಸಿ ॥೧೮೩॥

೧೮೩. ಕ್ಷರ, ಅಕ್ಷರ – ಇವೆರಡಕ್ಕೂ ವಿಲಕ್ಷಣನಾಗಿದ್ದುಕೊಂಡು[2] ಕ್ಷರ, ಅಕ್ಷರ– ಇವೆರಡರ ವ್ಯಾಪಾರಕ್ಕೂ[3] ಕಾರಣನಾಗಿ, ಅವುಗಳಿಗೂ ಆಯಾ ವಿಕಾರಕ್ಕೂ[4] ಸಾಕ್ಷಿಯಾಗಿರುವ ಪ್ರತ್ಯಗಾತ್ಮನೇ ನೀನಾಗಿರುವೆ, ಸದಾಶಿವನಾಗಿರುವೆ.

ಅನ್ತರ್ಬಹಿಶ್ಚೈಕರಸೋ ನಿರನ್ತೋ[5]
ವ್ಯೋಮೇವ ಪೂರ್ಣಂ ನಿರುಪಾಧಿರೇಕಃ
ನಿರನ್ತರಾನನ್ದಘನೋಽದ್ವಿತೀಯ–
ಸ್ತ್ವಂ ಪ್ರತ್ಯಗಾತ್ಮಾಸಿ ಸದಾಶಿವೋಽಸಿ ॥೧೮೪॥

೧೮೪. ಒಳಗೂ ಹೊರಗೂ ಏಕರಸನಾಗಿ, ಅಂತವಿಲ್ಲದವನಾಗಿರುವೆ. ಪೂರ್ಣವಾದ ಆಕಾಶದಂತೆ ಉಪಾಧಿಯಿಲ್ಲದವನೂ ಒಬ್ಬನೇ ಒಬ್ಬನೂ ಆಗಿರುವೆ. ನಿರಂತರವಾದ ಆನಂದಘನನೂ, ಅದ್ವಿತೀಯನೂ[6] ಆಗಿರುವ ಪ್ರತ್ಯಗಾತ್ಮನೇ ನೀನಾಗಿರುವೆ, ಸದಾಶಿವನಾಗಿರುವೆ.

ತ್ವಂ ದೃಶ್ಯಭಿನ್ನೋಽಸಿ[6] ದೃಶಿಸ್ವರೂಪಃ
ಶಶ್ವತ್ ಪ್ರತೀತೋಽಸ್ಯವಬೋಧಮಾತ್ರಃ ।
ಸದೇ(ದೈ)ಕರೂಪೋಽಸ್ಯಹಮಾದಿಮುಕ್ತ–
ಸ್ತ್ವಂ ಪ್ರತ್ಯಗಾತ್ಮಾಸಿ ಸದಾಶಿವೋಽಸಿ ॥೧೮೫॥

೧೮೫. ನೀನು ದೃಶ್ಯಕ್ಕಿಂತ ಬೇರೆಯಾಗಿರುವೆ[7], ದೃಗ್ರೂಪನಾಗಿರುವೆ, ಎಂದೆಂದಿಗೂ ತೋರಿಕೊಳ್ಳುವವನಾಗಿರುವೆ, ಚಿನ್ಮಾತ್ರಸ್ವರೂಪನಾಗಿರುವೆ,

---

1. 'ವಿಕೃತೇಷು' ಎಂಬ ಅಚ್ಚಿನ ಪುಸ್ತಕದ ಮೂಲವನ್ನು ಹೀಗೆಂದು ತಿದ್ದಿಕೊಂಡಿದೆ.
2. ಶಂ. ಗೀ. ೧೫–೧೮, ವಿ. ೨೫೮ – ಇವನ್ನು ನೋಡಿ.
3. ವ್ಯಾಕೃತಾವ್ಯಾಕೃತರೂಪದಿಂದ ತೋರಿಕೊಳ್ಳುತ್ತಿರುವ ಜಗತ್ತಿನ ವ್ಯಾಪಾರವು ಆತ್ಮನ ಸಾಂನಿಧ್ಯದಿಂದಲೇ ಆಗುತ್ತಿರುವದು.
4. ಕಾರ್ಯಕ್ಕೂ ಎಂದರ್ಥ. ಕ್ಷರಾಕ್ಷರಗಳ ವ್ಯಾಪಾರಕ್ಕೆ ಕಾರಣ, ಅದರ ಸಂಬಂಧವಿಲ್ಲದ ಸಾಕ್ಷಿ – ಎಂಬುದಕ್ಕೆ ಶಂ. ಗೀ. ೧೫–೧೭ನ್ನು ನೋಡಿ.
5. 'ನಿರನ್ತೋ' ಎಂಬುದರ ಬದಲು 'ನಿರನ್ತರೋ' ಎಂದೂ ಅದರ ಮುಂದಕ್ಕೆ 'ವ್ಯೋಮೇವ ಪೂರ್ಣೋ' ಎಂದೂ ಪಾಠಾಂತರವಿದ್ದಿರಬಹುದು.
6. 'ಭಿನ್ನೋಽಸಿ', 'ಪ್ರತೀತೋಽಸ್ಯವ', 'ರೂಪೋಽಸ್ಯಹ' – ಇಲ್ಲೆಲ್ಲ 'ಭಿನ್ನೋಽಪಿ' ಎಂದು ಮುಂತಾಗಿ ಸಕಾರಕ್ಕೆ ಬದಲು ಪಕಾರವೇ ಅಚ್ಚಿನಲ್ಲಿ ತಪ್ಪಾಗಿ ಬಿದ್ದಿದೆ.
7. ವಿಲಕ್ಷಣರೂಪನಾಗಿರುವೆ.

ಸತ್ತೆಂಬ ಒಂದೇ ರೂಪದವನಾಗಿರುವೆ[1], ಅಹಂಕಾರವೇ ಮುಂತಾದದ್ದರಿಂದ ಬಿಡುಗಡೆಯಾಗಿರುವೆ, ಪ್ರತ್ಯಗಾತ್ಮನೇ ನೀನಾಗಿರುವೆ, ಸದಾಶಿವನಾಗಿರುವೆ.

[2]ಅಶಬ್ದಮಸ್ಪರ್ಶಮರೂಪಮವ್ಯಯಂ
ತಥಾರಸಂ ನಿತ್ಯಮಗನ್ಧವಚ್ಚ ಯತ್ ।
ಅನಾದ್ಯನನ್ತಂ ಮಹತಃ ಪರಂ ಧ್ರುವಂ
ಸದಕ್ಷರಂ ತತ್ತ್ವಮಸಿ ಧ್ರುವಂ ಮುನೇ ॥೧೮೬॥

೧೮೬. ಶಬ್ದವಿಲ್ಲದ, ಸ್ಪರ್ಶವಿಲ್ಲದ, ರೂಪವಿಲ್ಲದ, ಅವ್ಯಯನಾದ[3], ಮತ್ತು ರಸವಿಲ್ಲದ, ನಿತ್ಯನಾದ, ಗಂಧವಿಲ್ಲದ, ಆದಿಯಿಲ್ಲದ ಅಂತವಿಲ್ಲದ[4] ಮಹತ್ತಿಗಿಂತಲೂ ಹೆಚ್ಚಿನ[5], ಧ್ರುವವಾದ[6], ಸದ್ರೂಪವಾದ ಅಕ್ಷರವಿದೆಯಲ್ಲ, ಅದೇ ನೀನಾಗಿರುವೆಯಯ್ಯ, ಮುನಿಯೆ !

ನ ಸ್ಥೂಲೋಽಸಿ ನ ಸೂಕ್ಷ್ಮೋಽಸಿ ನಾಪಿ ಕಾರಣವಿಗ್ರಹಃ ।
ಬ್ರಹ್ಮೈವಾಸಿ ನ ಸನ್ದೇಹಃ ಪ್ರತ್ಯಗ್ಬೋಧೈಕಲಕ್ಷಣಃ ॥೧೮೭॥

೧೮೭. ನೀನು ಸ್ಥೂಲ(ದೇಹ)ವಲ್ಲ, ಸೂಕ್ಷ್ಮಶರೀರವಲ್ಲ, ಕಾರಣ ಶರೀರವೂ[7] ಅಲ್ಲ, ಪ್ರತ್ಯಗ್ಬೋಧಮಾತ್ರರೂಪನಾದವನು, ಬ್ರಹ್ಮವೇ ನೀನಾಗಿ ರುವೆ, ; ಸಂಶಯವಿಲ್ಲ.

---

1. 'ಸದೇಕರೂಪೋಽಸಿ' ಎಂಬುದರ ಕನ್ನಡವಿದು ; ಮೂಲವು 'ಸದೈಕರೂಪೋಽಸಿ' ಎಂದಿದ್ದರೂ ಇರಬಹುದು, ಅದಕ್ಕೆ ಯಾವಾಗಲೂ ಒಂದೇ ರೂಪದಿಂದಿರುವನಾಗಿರುವೆ ಎಂದು ಅನುವಾದ. ಈ ಪಾಠಕ್ಕೆ ವಿ. ೩೦೩ನ್ನು ನೋಡಿ.

2. ಕ. ೧-೩-೧೫ರ ಮೂರು ಪಾದಗಳು ಇಲ್ಲಿವೆ. ಆ ಉಪನಿಷತ್ತಿನಲ್ಲಿ ನಾಲ್ಕನೆಯ ಪಾದವು 'ನಿಚಾಯ್ಯ ತಂ ಮೃತ್ಯುಮುಖಾತ್ಪ್ರಮುಚ್ಯತೇ ॥' ಎಂದಿದೆ.

3. ಶಬ್ದಾದಿಗುಣಗಳುಳ್ಳ ಆಕಾಶಾದಿಗಳು ಗುಣಗಳ ಹೆಚ್ಚುವಿಕೆ ಅಥವಾ ಕಡಿಮೆಯಾಗುವಿಕೆಯಿಂದ ಹೆಚ್ಚುಕಡಿಮೆಯಾಗುವದರಿಂದ ವ್ಯಯವಾಗುತ್ತವೆ ; ಆದರೆ ಇದಕ್ಕೆ ಯಾವ ಗುಣವೂ ಇಲ್ಲದ್ದರಿಂದ ಅವ್ಯಯ.

4. ಆದಿಯೆಂದರೆ ಕಾರಣ, ಅಂತವೆಂದರೆ ಕಾರ್ಯ ; ಈ ಎರಡೂ ಇಲ್ಲದ್ದರಿಂದ ನಿತ್ಯ.

5. ಮಹತ್ತೆಂಬ ಬುದ್ಧಿತತ್ತ್ವಕ್ಕಿಂತ ಹೆಚ್ಚಿನದು, ಏಕೆಂದರೆ ಬ್ರಹ್ಮವು ನಿತ್ಯಚೈತನ್ಯಸ್ವರೂಪವಾಗಿದೆ.

6. ಧ್ರುವವೆಂದರೆ ಕೂಟಸ್ಥನಿತ್ಯ, ಹಿಂದೆ ನಿತ್ಯ ಎಂದದ್ದು ಪರಿಣಾಮಿನಿತ್ಯವೆಂಬರ್ಥದಲ್ಲಿ.

7. ವಿ. ೧೧೯. ಸ್ಥೂಲಸೂಕ್ಷ್ಮಕಾರಣಶರೀರಗಳನ್ನು ಶಂ.ಗೀ. ೧೫-೧೭ರಲ್ಲಿ ಉಲ್ಲೇಖಿಸಿದೆ.

ಜನ್ಮಮೃತ್ಯುಜರಾರೋಗಾಃ ಕುಲಗೋತ್ರಾಶ್ರಮಾದಯಃ ।
ಸ್ಥೂಲಸ್ಯೈವ[1] ತವೈತೇಷಾಂ ಸಾಕ್ಷಿಣೋ ನೈವ ಕಶ್ಚನ ॥೧೮೮॥
ಅಜ್ಞಾನಜಡತಾಲಸ್ಯಮೋಹನಿದ್ರಾಭ್ರಮಾದಯಃ ।
ಕಾರಣಸ್ಯೈವ ತೇಽಮೀಷಾಂ ಸಾಕ್ಷಿಣೋ ನೈವ ಕಶ್ಚನ ॥೧೮೯॥

೧೮೮–೧೮೯. ಹುಟ್ಟು, ಸಾವು, ಮುಪ್ಪು, ಬೇನೆ – ಇವೂ ಕುಲ, ಗೋತ್ರ, ಆಶ್ರಮ – ಮುಂತಾದವುಗಳೂ ಸ್ಥೂಲಶರೀರಕ್ಕೇ[2] ಸೇರಿದವು ; ಅವುಗಳಿಗೆ ಸಾಕ್ಷಿಯಾಗಿರುವ ನಿನಗೆ ಅವುಗಳಲ್ಲಿ ಯಾವದೂ ಇಲ್ಲ. ಅಜ್ಞಾನ, ಜಾಡ್ಯ, ಆಲಸ್ಯ, ಮೋಹ, ನಿದ್ರೆ, ಭ್ರಮ–[3] ಇವೇ ಮುಂತಾದವುಗಳು ಕಾರಣ(ಶರೀರ)ಕ್ಕೇ, ಅವುಗಳ ಸಾಕ್ಷಿಗೆ ಯಾವದೊಂದೂ ಇಲ್ಲ.

ಕರ್ತೃತಾಭೋಕ್ತೃತಾಽಹನ್ತಾಮಮತಾದಿಕಲಕ್ಷಣಃ ।
ಬುದ್ಧೇರೇವೈಷ ಸಂಸಾರೋ ನ ತೇ ಸಂಸೃತಿಸಾಕ್ಷಿಣಃ ॥೧೯೦॥

೧೯೦. ಕರ್ತೃತ್ವ, ಭೋಕ್ತೃತ್ವ, ನಾನೆನ್ನುವಿಕೆ, ನನ್ನದೆನ್ನುವಿಕೆ – ಇವೇ ಮುಂತಾದ ಈ ಸಂಸಾರವು ಬುದ್ಧಿಗೇ[4], ಸಂಸಾರಕ್ಕೆ ಸಾಕ್ಷಿಯಾದ ನಿನಗಿಲ್ಲ.

ಸ್ಥೂಲಾದಿದೇಹಸಂಬನ್ಧೋ ಜನ್ಮಮೃತ್ಯುಶ್ಚ ಸಂಸೃತಿಃ ।
ಸ್ವಾಜ್ಞಾನೇನ ತ್ವಯಾ ಸ್ವಸ್ಮಿನ್ ಸರ್ವಮೇತತ್ಪ್ರಕಲ್ಪಿತಮ್ ॥೧೯೧॥

೧೯೧. ಸ್ಥೂಲವೇ ಮುಂತಾದ ದೇಹಗಳ ಸಂಬಂಧವೂ ಹುಟ್ಟೂ ಸಾವೂ (ಈ) ಸಂಸಾರವು ; ಇದೆಲ್ಲವೂ ನಿನ್ನಲ್ಲಿ ನಿನ್ನಿಂದ ಆತ್ಮಾಜ್ಞಾನದಿಂದಲೇ[5] ಕಲ್ಪಿತವಾಗಿರುತ್ತದೆ.

ರಾಹುಣಾ ಗ್ರಹಣಂ ಮೋಕ್ಷೋ ನೈವ ಭಾನೋರ್ಯಥಾ ತಥಾ ।
ಸಂಸಾರಬನ್ಧೋ ಮೋಕ್ಷಶ್ಚ ನೈವ ತೇ ನಿರ್ವಿಕಾರಿಣಃ ॥೧೯೨॥

೧೯೨. ರಾಹುವಿನಿಂದಾಗುವ ಗ್ರಹಣವೂ ಮೋಕ್ಷವೂ ಹೇಗೆ ಸೂರ್ಯನಿಗೆ ಅಲ್ಲವೇ ಅಲ್ಲವೋ[6] ಹಾಗೆ ಸಂಸಾರಬಂಧವೂ ಮೋಕ್ಷವೂ ನಿರ್ವಿಕಾರಿಯಾದ ನಿನಗೆ ಅಲ್ಲವೇಅಲ್ಲ.

---

1. ಇಲ್ಲಿ 'ಸೂಕ್ಷ್ಮಸ್ಯೈವ' ಎಂದು ಅಚ್ಚಿನ ಪುಸ್ತಕದಲ್ಲಿ ತಪ್ಪಾಗಿ ಬಿದ್ದಿದೆ. ಅನುವಾದದ ಟಿಪ್ಪಣಿಯನ್ನು ನೋಡಿ. 2. ಮೂಲದಲ್ಲಿ 'ಸೂಕ್ಷ್ಮಸ್ಯೈವ' ಎಂದೇ ಇದೆ. ಆದರೆ ಇದು ತಪ್ಪು. ಇವು ಸ್ಥೂಲಶರೀರದ ಧರ್ಮಗಳೆಂಬುದು ಸ್ಫುಟವಾಗಿದೆ. ವಿ.೯೧, ೨೯೪ – ಇವನ್ನು ನೋಡಿ. ಇದಾದಮೇಲೆ ಸೂಕ್ಷ್ಮಶರೀರದ ವಿಚಾರದ ಒಂದು ಶ್ಲೋಕವು ಲೇಖಕರ ಪ್ರಮಾದದಿಂದ ಬಿಟ್ಟಿರಬಹುದೆಂದು ತೋರುತ್ತದೆ.
3. ಇಲ್ಲಿ 'ಭ್ರಮ' ಎಂಬುದು ಹೇಗೆ ಬಂತೋ ತಿಳಿಯದು ; ವಿ. ೧೧೫.
4. ಇದೇ ಸೂಕ್ಷ್ಮಶರೀರಕ್ಕೆ ಸೇರಿದ್ದು. ವಿ. ೨೯೪ ನೋಡಿ. 5. ವಿ. ೫೦೫. 6. ವಿ. ೫೪೪

ಸ್ವಯಂತತ್ತ್ವಮವಿಜ್ಞಾಯ ಸರ್ವಂ ತ್ವಯಿ ವಿಕಲ್ಪಿತಮ್ ।
ನಿರ್ವಿಕಾರೇ ನಿರಾಕಾರೇ ವ್ಯೋಮನಿ ಶ್ಯಾಮತಾದಿವತ್ ॥೧೯೩॥

೧೯೩. ಆತ್ಮತತ್ತ್ವವನ್ನು[1] ಅರಿಯದ್ದರಿಂದ ಎಲ್ಲವೂ ನಿರ್ವಿಕಾರನೂ ನಿರಾಕಾರನೂ[2] ಆಗಿರುವ ನಿನ್ನಲ್ಲಿ, ಆಕಾಶದಲ್ಲಿ ಕಪ್ಪು(ಬಣ್ಣವೇ) ಮುಂತಾದದ್ದರಂತೆ, ಹುಟ್ಟುಗಟ್ಟಿಕೊಂಡದ್ದಾಗಿರುತ್ತದೆ.

ಆರೋಪಿತಃ ಸತ್ಯವದೇವ ಭಾತಿ
ಭ್ರಾನ್ತಸ್ಯ ಯದ್ಯಪ್ಯಸದೇವ ತತ್ತು ।
ಕುಮ್ಭಾಕೃತಿಃ ಕುಮ್ಭಮತಿಶ್ಚ ಜಾಯತೇ
ಕುಮ್ಭಾತ್ಮನಾ ಪಶ್ಯತಿ ಯಸ್ತು ಮೃತ್ಸ್ನಾಮ್ ॥೧೯೪॥

ಚಕ್ಷುಷ್ಮತೋ ಬುದ್ಧಿಮತೋ ವಿವೇಕಿನಃ
ಪ್ರಾಮಾಣಿಕಸ್ಯಾತ್ರ ಯಥಾರ್ಥದರ್ಶಿನಃ ।
ಅನ್ತರ್ಬಹಿಃ ಸರ್ವತ ಏವ ಕುಮ್ಭೋ
ಮೃದೇವ ಕಶ್ಚಿನ್ನ ತತಃ ಪರೋಽರ್ಥಃ ॥೧೯೫॥

೧೯೪–೧೯೫. ಭ್ರಾಂತನಾದವನಿಗೆ ಆರೋಪಿತವಾದದ್ದು ತಾನು ಅಸತ್ತೇ ಆಗಿದ್ದರೂ ಸತ್ಯ(ವಸ್ತು)ವಿನಂತೆಯೇ ಕಾಣುತ್ತದೆ. ಯಾವನು ಮಣ್ಣನ್ನು ಗಡಿಗೆಯ ರೂಪದಿಂದ ಕಾಣುವನೋ ಅವನಿಗೆ ಗಡಿಗೆಯ ಆಕಾರವೂ ಗಡಿಗೆಯ ಬುದ್ಧಿಯೂ ಉಂಟಾಗಿರುತ್ತದೆ.[3] ಸರಿಯಾಗಿ ಕಣ್ಣುಕಾಣುತ್ತಿರುವ ಬುದ್ಧಿವಂತನಾದವನಿಗೆ ವಿವೇಕಿಯಾಗಿ, ಪ್ರಮಾಣಜ್ಞನಾಗಿ ಇಲ್ಲಿ ಇದ್ದದ್ದನ್ನು ಇದ್ದಂತೆ ನೋಡಬಲ್ಲವನಿಗೆ ಗಡಿಗೆಯೆಂಬುದು ಒಳಗೆ, ಹೊರಗೆ, ಎಲ್ಲೆಲ್ಲಿಯೂ ಮಣ್ಣೇ ಹೊರತು ಅದಕ್ಕಿಂತ ಬೇರೆಯಾದ ಪದಾರ್ಥವಾಗಿರುವದಿಲ್ಲ.[4]

ವಿಜ್ಞಾತೇ ಸತ್ಯಧಿಷ್ಠಾನೇ ಕಲ್ಪಿತಂ ನೈವ ದೃಶ್ಯತೇ ।
ರೂಪ್ಯಂ ಕಿಂ ದೃಶ್ಯತೇ ಶುಕ್ತೌ ನೀಲಪೃಷ್ಠಾದಿದರ್ಶನೇ ॥೧೯೬॥

ರಜತಂ ರಜತತ್ವಂ ಚ ಚಾಕಚಕ್ಯಂ ಚ ಪಾಣ್ಡಿಮಾ ।
ಸಕಲಂ ಶುಕ್ತಿರೇವಾಸೀಚ್ಛುಕ್ತಿತತ್ತ್ವಾವಧಾರಣಾತ್ ॥೧೯೭॥

೧೯೬–೧೯೭. ಅಧಿಷ್ಠಾನವನ್ನು ಅರಿತುಕೊಂಡಾಗ ಕಲ್ಪಿತವಾದದ್ದು ಕಾಣುವದೇ ಇಲ್ಲ. ಕಪ್ಪೆಯಚಿಪ್ಪಿನಲ್ಲಿ ಕಪ್ಪುಬಣ್ಣದ ಹಿಂಭಾಗವೇ ಮುಂತಾದದ್ದನ್ನು ಕಂಡಾಗ ಬೆಳ್ಳಿಯು ಕಾಣುವದೇನು ? ರಜತ (ಬೆಳ್ಳಿ), ರಜತತ್ವ (ಬೆಳ್ಳಿಯ

1. 'ಆತ್ಮ' ಎಂಬರ್ಥದಲ್ಲಿ 'ಸ್ವಯಂ' ಎಂಬ ಮಾತನ್ನು ಉಪಯೋಗಿಸಿದೆ. ವಿ. ೧೮೯, ೩೮೬.
2. 'ನಿರ್ವಿಕಾರೇ ನಿರಾಕಾರೇ' ಎಂಬ ಪದಗಳ ಪ್ರಯೋಗಕ್ಕೆ ವಿ. ೩೯೬, ೩೯೭, ೩೯೮ ನೋಡಿ.
3. ಗಡಿಗೆಯ ಆಕಾರವೇ ಎದ್ದುಕಾಣುತ್ತದೆ, ಇದು ಗಡಿಗೆ ಎಂಬ ಬುದ್ಧಿಯೇ ಉಂಟಾಗುತ್ತದೆ.
4. ವಿ. ೨೨೭.

ಜಾತಿ), ಥಳಗುಟ್ಟುವದು, ಬಿಳುಪು – ಇದೆಲ್ಲವೂ ಕಪ್ಪೆಯಚಿಪ್ಪಿನ ತತ್ತ್ವವನ್ನು ನಿಶ್ಚಯಿಸಿಕೊಂಡದ್ದರಿಂದ ಕಪ್ಪೆಯಚಿಪ್ಪೇ ಆಗಿಬಿಟ್ಟಿರುತ್ತದೆ.[1]

**ತಥೈವ ಬ್ರಹ್ಮಣಿ ಜ್ಞಾತೇ ಸ್ವಾತ್ಮನಾ ಕೇವಲಾತ್ಮನಿ ।**
**ಬ್ರಹ್ಮೈವ ಸಕಲಂ ವಿಶ್ವಂ ಸ್ಥೂಲಸೂಕ್ಷ್ಮಾದಿಸಂಜ್ಞಿತಮ್ ॥೧೯೮॥**

೧೯೮. ಹಾಗೆಯೇ ಅದ್ವಿತೀಯಾತ್ಮನಾದ ಬ್ರಹ್ಮವೇ ತನ್ನ ಆತ್ಮನೆಂದು ಅರಿತುಕೊಂಡಾಗ, ಸ್ಥೂಲ, ಸೂಕ್ಷ್ಮ– ಮುಂತಾದ ಹೆಸರುಳ್ಳ ವಿಶ್ವವೆಲ್ಲವೂ ಬ್ರಹ್ಮವೇ (ಆಗಿರುತ್ತದೆ).

**ಚಿದೇವ ದೇಹೋಽಪ್ಯಸವಶ್ಚಿದೇವ**
**ಮನಶ್ಚಿದೇವಾಪಿ ಚ ಧೀಶ್ಚಿದೇವ ।**
**ಚಿದೇವ ಕರ್ತಾ ಚ ಚಿದೇವ ಭೋಕ್ತಾ**
**ಚಿದೇವ ಭೋಗ್ಯಂ ಚ ಚಿದೇವ ಸರ್ವಮ್ ॥೧೯೯॥**

**ಚಿದೇವ ಪಞ್ಚಭೂತಾನಿ ಚಿದೇವ ಭುವನತ್ರಯಮ್ ।**
**ಚಿದೇವಾಹಂ ಚಿದೇವ ತ್ವಂ ಸರ್ವಮೇತಚ್ಚಿದೇವ ಹಿ ॥೨೦೦॥**

೧೯೯–೨೦೦. ದೇಹವು ಚಿತ್ತೇ, ಪ್ರಾಣಗಳು ಚಿತ್ತೇ, ಮನಸ್ಸು ಚಿತ್ತೇ, ಬುದ್ಧಿಯು ಚಿತ್ತೇ, ಕರ್ತೃವು ಚಿತ್ತೇ, ಭೋಕ್ತೃವೂ ಚಿತ್ತೇ, ಭೋಗ್ಯವೂ ಚಿತ್ತೇ, ಎಲ್ಲವೂ ಚಿತ್ತೇ, ಪಂಚಭೂತಗಳೂ ಚಿತ್ತೇ, ಮೂರು ಲೋಕಗಳೂ ಚಿತ್ತೇ, ನಾನು ಚಿತ್ತೇ, ನೀನೂ ಚಿತ್ತೇ, ಇದೆಲ್ಲವೂ ಚಿತ್ತೇ ಸರಿ.[2]

**ಸದೇವೇದಂ ಸರ್ವಂ ತ್ವಿತಿ ವದತಿ ಸಾಕ್ಷಾಚ್ಛ್ರುತಿರಪಿ**
**ಧ್ರುವಂ ಸರ್ವಂ ವಿಶ್ವಂ ಭವತಿ ಚ ಚಿದೇವಾನುಭವತಃ ।**
**ಚಿತೋ ಭಿನ್ನಂ ಕಿಞ್ಚಿನ್ನ ಹಿ ಕಲಯಿತುಂ ಕ್ವಾಪಿ ವಿದುಷಾಂ**
**ಸತಾಂ ದೃಷ್ಟೇರಸ್ತಿ ದ್ವಯವಿರಹಿತೇ ಬ್ರಹ್ಮಣಿ ಪರೇ ॥೨೦೧॥**

೨೦೧. ಇದೆಲ್ಲವೂ ಸತ್ತೇ ಎಂದು ಸಾಕ್ಷಾತ್ತಾಗಿ ಶ್ರುತಿಯೂ ಹೇಳುತ್ತಿದೆ.[3] ಅನುಭವದಿಂದ (ನೋಡಿದರೆ) ವಿಶ್ವವೆಲ್ಲವೂ ನಿಜವಾಗಿ ಚಿತ್ತೇ ಆಗಿರುತ್ತದೆ ; ಏಕೆಂದರೆ ಜ್ಞಾನಿಗಳಾದ ಸತ್ಪುರುಷರ ದೃಷ್ಟಿಗೆ ಚಿತ್ತಿಗಿಂತ ಬೇರೆಯಾಗಿ ದ್ವೈತ ರಹಿತವಾದ ಪರಬ್ರಹ್ಮದಲ್ಲಿ ಯಾವದೊಂದೂ ಕಾಣಬರುವದಿಲ್ಲ.[4]

---

ವಿ. ೨೩೪. 2. 'ಚಿದ್ಧೀದಂ ಸರ್ವಮ್' ಎಂಬ ನೃ. ಉತ್ತರ ೭ನ್ನೂ 'ಅಖಣ್ಡೈಕ ರಸಚಿನ್ಮಾತ್ರ ಸ್ವರೂಪಂ ಬ್ರೂಹಿ'– ಎಂದು ಮೊದಲಾಗಿ ತೇಜೋಬಿಂದೂಪನಿಷತ್ತಿನ ೨ನೆಯ ಅಧ್ಯಾಯವನ್ನೂ ನೋಡಿ. 3. ಇದೆಲ್ಲಕ್ಕೂ ಸತ್ತೇ ಆತ್ಮನೆಂದು ಛಾಂ. ೬ನೆಯ ಅಧ್ಯಾಯದಿಂದ ೧೬ನೆಯ ವರೆಗಿನ ಖಂಡಗಳಲ್ಲಿದೆ.

4. ಚಿತ್ತಿನ (ಚೈತನ್ಯದ) ಸಂಬಂಧವಿಲ್ಲದೆ ಯಾವದೂ ತೋರಲಾರದು, ಆದಕ್ಕೆ ಸ್ವತಂತ್ರವಾದ ಇರವೆ ಇಲ್ಲ. ಚಿತ್ತೇ ಸತ್ತು ಎಂದು ನೃ. ಉತ್ತರತಾಪಿನಿ(೭)ಯಲ್ಲಿದೆ.

## ಆತ್ಮಾನಂದರತಿಯ ಉಪದೇಶ

*ಮೃದಾದಿದೃಷ್ಟಾನ್ತಬಲೇನ ಯುಕ್ತ್ಯಾ
ಶ್ರುತ್ಯಾಽನುಭೂತ್ಯಾ ಸದಿದಂ ವಿದಿತ್ವಾ ।
ನಿರ್ಮೂಲ್ಯ ಭೇದಂ ಸ್ವಮನಃಪ್ರಸೂತಂ
ಸ್ವಸ್ಮಿನ್ ರಮಸ್ವಾಽಽತ್ಮಸುಖೇನ ನಿತ್ಯಮ್ ॥೨೦೨॥

೨೦೨. ಮಣ್ಣು ಮುಂತಾದ ದೃಷ್ಟಾಂತಗಳ[1] ಬಲದಿಂದ ಒದಗುವ ಯುಕ್ತಿಯಿಂದಲೂ ಶ್ರುತಿಯಿಂದಲೂ,[2] ಅನುಭವದಿಂದಲೂ[3] ಇದು ಸತ್ತೇ ಎಂದು ತಿಳಿದುಕೊಂಡು ನಿನ್ನ ಮನಸ್ಸಿನಿಂದಾಗಿರುವ ಭೇದವನ್ನು ಬೇರುಸಹಿತ ಕಿತ್ತು ಹಾಕಿ, ಆತ್ಮಾನಂದದಿಂದಲೇ ನಿತ್ಯವೂ ನಿನ್ನ ಆತ್ಮನಲ್ಲಿ ಕ್ರೀಡಿಸುತ್ತಿರು.[4]

ನಿರಸ್ತಭೇದೇ ನಿಖಿಲಾತ್ಮನಾ ಸ್ಥಿತೇ
ನಿರಾಸ್ಪದೇ ಬ್ರಹ್ಮಣಿ ನಿತ್ಯಸಿದ್ಧೇ ।
ನಿರನ್ತರಾನನ್ದಘನೇ ನಿರೀಹೇ
ಸ್ವಸ್ಮಿನ್ ರಮಸ್ವಾತ್ಮಸುಖೇನ ನಿತ್ಯಮ್ ॥೨೦೩॥

೨೦೩. ಯಾವ ಭೇದವೂ ಇಲ್ಲದ, ಎಲ್ಲಕ್ಕೂ ಆತ್ಮನಾಗಿರುವ, ತನಗೆ ಮತ್ತೊಂದು ಆಧಾರವಿಲ್ಲದ, ನಿತ್ಯಸಿದ್ಧವಾಗಿರುವ, ನಡುವೆ ಬಿಡುವಿಲ್ಲದ ಆನಂದ ಘನವಾದ, ನಿಷ್ಕ್ರಿಯನಾದ ಬ್ರಹ್ಮವಾದ ನಿನ್ನ ಆತ್ಮನಲ್ಲಿ ಆತ್ಮಾನಂದದಿಂದಲೇ ನಿತ್ಯವೂ ಕ್ರೀಡಿಸುತ್ತಿರು.

ಅವಿದ್ಯಮಾನಾರ್ಥವಿಶೇಷಕಲ್ಪನಾ
ವಿಚಕ್ಷಣಂ ಸಂಸೃತಿಕಾರಣಂ ಮನಃ ।
ನಿಗೃಹ್ಯ ಸರ್ವೈಃ ಕರಣೈಃ ಸದಾತ್ಮನಿ
ಸ್ವಸ್ಮಿನ್ ರಮಸ್ವಾಽಽತ್ಮಸುಖೇನ ನಿತ್ಯಮ್ ॥೨೦೪॥

---

* ಇಲ್ಲಿಂದ ಮುಂದಕ್ಕೆ ೨೦೭ನೆಯ ಶ್ಲೋಕಗಳವರೆಗೂ 'ಸ್ವಸ್ಮಿನ್ ರಮಸ್ವಾತ್ಮಸುಖೇನ ನಿತ್ಯಮ್' ಎಂಬ ಪಲ್ಲವಿಯಿದೆ.

1. ಮಣ್ಣು ಕಬ್ಬಿಣ – ಮುಂತಾದ ದೃಷ್ಟಾಂತಗಳ ಬಲದಿಂದ ಒಂದನ್ನರಿತರೆ ಎಲ್ಲವನ್ನೂ ಅರಿತಂತೆ ಆಗುವದೆಂದು ಛಾಂದೋಗ್ಯಾದಿಗಳಲ್ಲಿ (ಛಾಂ. ೬–೧–೪, ೫, ೬) ಹೇಳಿದೆ. ಇದರಂತೆ ಯುಕ್ತಿಯಿಂದ ಎಲ್ಲವೂ ಸತ್ತೇ ಎಂದಾಯಿತು.
2. ಇದೆಲ್ಲವೂ ಸತ್ತೇ ಎಂದು ಶ್ರುತಿಯಲ್ಲಿ ಹೇಳಿಯೂ ಇದೆ.
3. ಜ್ಞಾನಿಯ ಅನುಭವದ ದೃಷ್ಟಿಯಿಂದ ನೋಡಿದರೆ ಸತ್ತಿಗಿಂತ ಬೇರೆಯಾಗಿ ಯಾವದೂ ತೋರುವದೇ ಇಲ್ಲ.
4. 'ಆತ್ಮರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನನ್ದಃ' ಎಂಬ ಛಾಂ. ೭–೨೫–೨ ವಾಕ್ಯವನ್ನು ಇಲ್ಲಿ ಮನಸ್ಸಿಗೆ ತಂದುಕೊಳ್ಳಬಹುದು.

೨೦೪. ಇಲ್ಲದಿರುವ ಒಂದೊಂದು ಪದಾರ್ಥವನ್ನು ಕಲ್ಪಿಸುವದರಲ್ಲಿ ಕುಶಲವಾಗಿ ಸಂಸಾರಕ್ಕೆ ಕಾರಣವಾಗಿರುವ ಮನಸ್ಸನ್ನು ಸಕಲಕರಣಗಳೊಡನೆ ಹಿಡಿದಿಟ್ಟುಕೊಂಡು ಸದ್ರೂಪನಾಗಿರುವ ನಿನ್ನ ಆತ್ಮನಲ್ಲಿ ಆತ್ಮಾನಂದದಿಂದಲೇ ನಿತ್ಯವೂ ಕ್ರೀಡಿಸುತ್ತಿರು.

ಅಸಾರಸಂಸಾರನಿದಾನವಾಸನಾ–
ಗ್ರನ್ಥಿಕ್ಷಯಂ ಸಾಧು ವಿಧಾಯ ಯುಕ್ತ್ಯಾ ।
ಅಖಣ್ಡಬೋಧೈಕರಸೇ ಸದಾತ್ಮನಿ
ಸ್ವಸ್ಮಿನ್ ರಮಸ್ವಾತ್ಮಸುಖೇನ ನಿತ್ಯಮ್ ॥೨೦೫॥

೨೦೫. ನಿಸ್ಸಾರವಾಗಿರುವ ಸಂಸಾರಕ್ಕೆ ಕಾರಣವಾಗಿರುವ ವಾಸನಾ ಗ್ರಂಥಿಯ ಕ್ಷಯವನ್ನು[1] ಚೆನ್ನಾಗಿ ಯುಕ್ತಿಯಿಂದ ಮಾಡಿಕೊಂಡು ಅಖಂಡ ಬೋಧೈಕರಸನಾಗಿರುವ[2] ಸದ್ರೂಪನಾಗಿರುವ ನಿನ್ನ ಆತ್ಮನಲ್ಲಿ ಆತ್ಮಾನಂದ ದಿಂದಲೇ ನಿತ್ಯವೂ ಕ್ರೀಡಿಸುತ್ತಿರು.

ಪಶ್ಚಾತ್ಪುರಸ್ತಾದಪಿ ಚೋಪರಿಷ್ಟಾ–
ದ್ದಿಶಃ ಸಮನ್ತಾದ್ವಿದಿಶೋಽಪ್ಯಧಸ್ತಾತ್ ।
ಪೂರ್ಣಂ ಸದಾತ್ಮಾನಮವೇಕ್ಷಮಾಣಃ
ಸ್ವಸ್ಮಿನ್ ರಮಸ್ವಾತ್ಮಸುಖೇನ ನಿತ್ಯಮ್ ॥೨೦೬॥

೨೦೬. ಹಿಂದೆ, ಮುಂದೆ, ಮತ್ತು ಮೇಲೆ, ದಿಕ್ಕುಗಳ ಎಲ್ಲಾ ಕಡೆಗಳಲ್ಲಿ ವಿದಿಕ್ಕುಗಳಲ್ಲೆಲ್ಲ, ಕೆಳಗಡೆ[3] – (ಹೀಗೆ ಎಲ್ಲೆಲ್ಲಿಯೂ) ತುಂಬಿರುವ ಸದ್ರೂಪನಾಗಿ ರುವ ನಿನ್ನ ಆತ್ಮನನ್ನು ನೋಡುತ್ತಾ ಆತ್ಮಾನಂದದಿಂದಲೇ ನಿತ್ಯವೂ ಕ್ರೀಡಿಸುತ್ತಿರು.

ಸ್ವಾನನ್ದಪೀಯೂಷನಿಧೌ ನಿಮಗ್ನೋ
ನಿಗೃಹ್ಯ ಬಾಹ್ಯನ್ತರಧೀಪ್ರಚಾರಮ್ ।
ತದೇಕತಾಪನ್ನಮನಾ ನಿರೀಹಃ
ಸ್ವಸ್ಮಿನ್ ರಮಸ್ವಾತ್ಮಸುಖೇನ ನಿತ್ಯಮ್ ॥೨೦೭॥

---

1. ವಾಸನಾಕ್ಷಯಕ್ಕೆ ಯೋ.ವಾ.೫–೯೨–೧೪, ೧೭, ವಿ.೨೭೪ – ಇವನ್ನು ನೋಡಿ.
2. ಅಖಣ್ಡಬೋಧವೆಂಬ ಮಾತು ಗ್ರಂಥಕಾರರಿಗೆ ಬಲುಮೆಚ್ಚು. ವಿ. ೨೧೪, ೨೪೮ – ಮುಂತಾದವುಗಳಲ್ಲಿ ಇದರ ಪ್ರಯೋಗವಿದೆ. ವಿ.ಯ. ಶಬ್ದಾನುಕ್ರಮಣಿಕೆಯನ್ನು ನೋಡಿ.
3. ಛಾಂ.೭–೨೫, ೨ ; ವಿ. ೩೮೬.

೨೦೭. ಆತ್ಮಾನಂದವೆಂಬ ಅಮೃತದ ಕಡಲಿನಲ್ಲಿ ಮುಳುಗಿ, ಒಳಗೂ ಹೊರಗೂ[1] ಹರಿದಾಡುವ ಬುದ್ಧಿವೃತ್ತಿಯನ್ನು ತಡೆಹಿಡುಕೊಂಡು ಆ (ಆತ್ಮನಲ್ಲಿಯೇ) ಒಂದುಗೆಯನ್ನು ಪಡೆದ ಮನಸ್ಸುಳ್ಳವನಾಗಿ, ನಿಷ್ಕ್ರಿಯನಾಗಿ ಆತ್ಮಾನಂದದಿಂದಲೇ ನಿನ್ನ ಸ್ವರೂಪದಲ್ಲಿ ಕ್ರೀಡಿಸುತ್ತಿರು.

## ವಿಷಯಸುಖತ್ಯಾಗೋಪದೇಶ

**ಕೋ ನಾಮ ವಿದ್ವಾನಪಹಾಯ ನಿತ್ಯಂ**
**ಬ್ರಾಹ್ಮಂ ಸ್ವತಃ ಪ್ರಾಪ್ತಮಖಣ್ಡಸೌಖ್ಯಮ್ ।**
**ಕಥಂ ರಮೇತಾಽಸತಿ ತುಚ್ಛಕಲ್ಪೇ**
**ಮೃಷಾತ್ಮಕೇ ವೈಷಯಿಕೇ ಸುಖೇಽತ್ರ ॥೨೦೮॥**

೨೦೮. ತಿಳಿದವನು ಯಾವನುತಾನೆ ನಿತ್ಯವಾದ ಸ್ವತಃಪ್ರಾಪ್ತವಾದ ಬ್ರಹ್ಮ ಸಂಬಂಧವಾದ ಅಖಂಡಸೌಖ್ಯವನ್ನು ಬಿಟ್ಟು ಅಸತ್ತಾಗಿರುವ ತುಚ್ಛಕಲ್ಪವಾದ ಮೃಷಾರೂಪವಾದ[2] ಈ ವಿಷಯಾನಂದದಲ್ಲಿ ರತನಾದಾನು[3]?

**ತ್ಯಕ್ತ್ವಾತ್ಮಾನಂ ಸದಾನನ್ದಂ ವಿಷಯಾನ್ ಯಸ್ತು ಸೇವತೇ ।**
**ಪಿಪಾಸಾರ್ಥಂ ಸುಧಾಂ ತ್ಯಕ್ತ್ವಾ ಗರಳಂ ಪಾತುಮಿಚ್ಛತಿ ॥೨೦೯॥**

೨೦೯. ನಿತ್ಯಾನಂದಸ್ವರೂಪನಾಗಿರುವ ಆತ್ಮನನ್ನು ಬಿಟ್ಟು ಯಾವನು ವಿಷಯಗಳನ್ನು ಸೇವಿಸುತ್ತಾನೋ, ಅವನು ನೀರಡಿಕೆಯನ್ನು (ಇಂಗಿಸುವದ)ಕ್ಕಾಗಿ ಅಮೃತವನ್ನು ಬಿಟ್ಟು ವಿಷವನ್ನು ಕುಡಿಯಲಿಚ್ಛಿಸಿದವ(ನಾಗು)ತ್ತಾನೆ.

**ಯಸ್ತ್ವಾತ್ಮಸುಖಮುತ್ಸೃಜ್ಯ ಸುಖಂ ಬಾಹ್ಯಮಪೇಕ್ಷತೇ ।**
**ಕರಸ್ಥಂ ಪಾಯಸಂ ತ್ಯಕ್ತ್ವಾ ಸ ಮೂಢೋ ಲೇಢಿ ಕೂರ್ಪರಮ್ ॥**

೨೧೦. ಯಾವನಾದರೆ ಆತ್ಮಸುಖವನ್ನು ಬಿಟ್ಟು ಹೊರಗಿನ (ವಿಷಯ) ಸುಖವನ್ನು ಬಯಸುತ್ತಾನೋ, ಅವನು ಕೈಯಲ್ಲಿರುವ ಪಾಯಸವನ್ನು ಬಿಟ್ಟು ಮೊಳಕೈಯನ್ನು ನೆಕ್ಕು(ವವನಾಗು)ತ್ತಾನೆ.

---

1. ಬಾಹ್ಯನಿರೋಧವನ್ನು ವಿ. ೩೩೨ರಲ್ಲಿ ಉಪದೇಶಿಸಿದೆ. ಇಲ್ಲಿ ಎಲ್ಲಾ ಚಿತ್ತವೃತ್ತಿಗಳ ನಿರೋಧವನ್ನೇ ಹೇಳಿದೆ. ವಿ. ೩೬೫ನ್ನು ನೋಡಿ.

2. ವಿಷಯಾನಂದವು ಪರಮಾರ್ಥವಲ್ಲ ಎಂಬುದನ್ನು ತಿಳಿಸುವದಕ್ಕಾಗಿ ಅಸತ್ತು (ಇಲ್ಲದಿರುವದು), ತುಚ್ಛಕಲ್ಪ(ಶೂನ್ಯದಂತಿರುವದು), ಮೃಷಾ (ಮಿಥ್ಯೆ) – ಎಂಬ ಮೂರು ಮಾತುಗಳಿಂದ ಹಳಿದಿದೆ.

3. ವಿಷಯಚಿಂತಾತ್ಯಾಗವನ್ನು ವಿ. ೩೨೬ ರಿಂದ ೩೩೪ರವರೆಗೆ ಬೋಧಿಸಿದೆ.

ಯದ್ಯಾನನ್ದಂ ಸ್ವಮಾತ್ಮಾನಂ ತ್ಯಕ್ತ್ವೇಚ್ಛೇತ್ಪರತಃ ಸುಖಮ್ ।
ಸ್ವಾನನ್ದಾನುಭವಾಭಾವಸ್ತೇನೈವಾಸ್ಯಾನುಮೀಯತೇ ॥೨೧೧॥

೨೧೧. ಆನಂದ(ರೂಪ)ನಾದ ತನ್ನ ಆತ್ಮನನ್ನು ಬಿಟ್ಟು ಮತ್ತೊಂದರಿಂದ ಸುಖವನ್ನು ಬಯಸುತ್ತಾನಾದರೆ, ಅವನಿಗೆ ಆತ್ಮಾನಂದಾನುಭವವು ಇಲ್ಲವೆಂದು ಅದರಿಂದಲೇ ಊಹಿಸಬೇಕಾಗುತ್ತದೆ.

ಭೋಗ್ಯದೃಷ್ಟಿಃ ಸದಾ ಯಸ್ಯ ನ ತಸ್ಯ ಬ್ರಹ್ಮದರ್ಶನಮ್ ।
ಯಸ್ಯಾಸ್ತಿ ಸರ್ವದಾ ಧ್ವಾನ್ತಂ ನ ತಸ್ಯಾರ್ಕವಿಲೋಕನಮ್ ॥೨೧೨॥

೨೧೨. ಯಾವನಿಗೆ ಭೋಗ್ಯದೃಷ್ಟಿಯು ಯಾವಾಗಲೂ ಇರುವದೋ ಅವನಿಗೆ ಬ್ರಹ್ಮದರ್ಶನವಿರುವದಿಲ್ಲ. ಯಾವನಿಗೆ ಯಾವಾಗಲೂ ಕತ್ತಲೆಯೇ ಇರುವದೋ ಅವನಿಗೆ ಸೂರ್ಯದರ್ಶನವಿರುವದಿಲ್ಲ.[1]

## ಬ್ರಹ್ಮಜ್ಞಾನಿಗೆ ಬಾಹ್ಯಸುಖಾಭಿಲಾಷೆಯಿರುವದೇ ಇಲ್ಲ

ಅದ್ವಿತೀಯಂ ಪರಂ ಬ್ರಹ್ಮ ಸರ್ವತಃ ಪಶ್ಯತಃ ಸತಃ ।
ಪ್ರಪಂಚದರ್ಶನಂ ನಷ್ಟಂ ಕುತೋ ಭೋಗ್ಯಾಭಿಮರ್ಶನಮ್ ॥೨೧೩॥

೨೧೩. ಎಲ್ಲೆಲ್ಲಿಯೂ ಅದ್ವಿತೀಯಪರಬ್ರಹ್ಮವನ್ನೇ ಕಾಣುತ್ತಿರುವವನಿಗೆ ಪ್ರಪಂಚವನ್ನು ಕಾಣುವದೇ ಆಗಲಾರದು. (ಇನ್ನು) ಭೋಗ್ಯದ ಚಿಂತೆಯು ಎಲ್ಲಿಂದ (ಬರಬೇಕು) ?

ಬ್ರಹ್ಮವಿದ್ ಬ್ರಹ್ಮಭೂತಃ ಸನ್ ಬ್ರಹ್ಮಣ್ಯೇವ ರಮತ್ಯಲಮ್
ಇಷ್ಟಾನಿಷ್ಟಾರ್ಥಯೋಃ ಕ್ವಾಪಿ ನ ಹೃಷ್ಯತಿ ನ ಶೋಚತಿ ॥೨೧೪॥

೨೧೪. ಬ್ರಹ್ಮವನ್ನು ಅರಿತು ಬ್ರಹ್ಮವೇ ಆದವನಾಗಿ[2] ಬ್ರಹ್ಮದಲ್ಲಿಯೇ ಪೂರ್ಣವಾಗಿ ರತನಾಗಿರುತ್ತಾನೆ. ಇಷ್ಟಾನಿಷ್ಟಗಳು ಬಂದೊದಗಿದರೆ ಎಂದಿಗೂ ಹೃಷ್ಟನಾಗುವದಿಲ್ಲ, ಸೋಕಿಸುವದೂ ಇಲ್ಲ.[3]

ಅಖಣ್ಡಸಚ್ಚಿದಾನನ್ದಬ್ರಹ್ಮೈವಾಸ್ಮಿ ನ ಚೇತರತ್ ।
ಇತ್ಯಾತ್ಮಸ್ವಾನುಭವತೋ ಬ್ರಹ್ಮನಿಷ್ಠಸ್ಯ ಯೋಗಿನಃ ॥
ಯತೇರ್ನಿಷ್ಪದ್ಯತೇ ನಿತ್ಯಂ ನಿರ್ವಾಣಸುಖಮುತ್ತಮಮ್ ॥೨೧೫॥

1. ಶಂ. ಗೀ. ೨–೬೯
2. ಮುಂ. ೩–೨–೯ರ ಸೂಚನೆಯೂ ಇಲ್ಲಿರಬಹುದು.
3. ಶಂ. ಗೀ. ೧೨–೧೭.

೨೧೫. ನಾನು ಅಖಂಡ[1] ಸಚ್ಚಿದಾನಂದಬ್ರಹ್ಮವೇ ಹೊರತು ಮತ್ತೊಂದಲ್ಲ– ಎಂಬ ಆತ್ಮಾನುಭವದಿಂದ ಬ್ರಹ್ಮನಿಷ್ಠನಾಗಿರುವ ಯೋಗಿಯಾದ ಯತಿಗೆ ನಿತ್ಯವೂ ಉತ್ತಮವಾದ ನಿರ್ವಾಣಸುಖವು[2] ಉಂಟಾಗಿರುತ್ತದೆ.

**ತ್ಯಕ್ತ್ವಾ ಬಾಹ್ಯಮಿದಂ ಮನೋನಿಲಯನಂ[3]**
**ತುಚ್ಛಂ ವೃಷೇತಿ ಸ್ವಯಂ**
**ಬುದ್ಧ್ಯಾ ನಿಶ್ಚಲಯಾ ಗುರೂಕ್ತಿಪರಯಾ ವಿಜ್ಞಾಯ**
**ತತ್ತ್ವಂ ಮುನೇಃ[4] ।**
**ಬ್ರಹ್ಮಣ್ಯಸ್ತಭಿದೇ ಚಿದಾತ್ಮನಿ ಸದಾನನ್ದಾದ್ವಯೇ ನಿರ್ಗುಣೇ**
**ಲೀನಸ್ಯಾನ್ತರತಃ[5] ಸುಖೇನ ವಸತಸ್ತೂಷ್ಣೀಂ ಕಿಮನ್ಯೈರ್ಭ್ರಮೈಃ ॥**

೨೧೬. ಮನಸ್ಸಿನಲ್ಲಿಯೇ ಮನೆಮಾಡಿಕೊಂಡಿರುವ ಈ ಬಾಹ್ಯವಿಷಯ ವನ್ನು ತುಚ್ಛ, ಮಿಥ್ಯೆ – ಎಂದು ಬಿಟ್ಟು ಗುರೂಕ್ತಿಯಲ್ಲಿಯೇ ತಾತ್ಪರ್ಯವುಳ್ಳ ನಿಶ್ಚಲವಾದ ತನ್ನ ಬುದ್ಧಿಯಿಂದ ತತ್ತ್ವವನ್ನು ಅರಿತುಕೊಂಡು, ಭೇದವೆಲ್ಲವೂ ಅಳಿದುಹೋಗಿರುವ ಚಿದ್ರೂಪವಾದ, ನಿತ್ಯಾನಂದರೂಪವಾದ, ಅದ್ವಯವಾದ ನಿರ್ಗುಣವಾದ ಬ್ರಹ್ಮದಲ್ಲಿ ಲೀನನಾಗಿರುವ, ಒಳಗೇ ಸುಖದಿಂದ ಸುಮ್ಮನೆ ಇದ್ದು ಕೊಂಡಿರುವ ಮುನಿಗೆ ಉಳಿದ ಭ್ರಮೆಗಳಿಂದ (ಆಗತಕ್ಕ)ದ್ದೇನು[6] ?

## ಮುಕ್ತನ ಲಕ್ಷಣ

**ಅಸ್ಮಾಚ್ಛರೀರಾದಹಮಾದಿಕಾನ್ಮುನಿಃ**
**ಸಮ್ಯಕ್ ಸುಮುಕ್ತೋ ಯದಿ ಬೋಧದೃಷ್ಟ್ಯಾ ।**
**ಜ್ಯೋತಿಃ ಪರಂ ತತ್ತ್ವಮುಪೇತ್ಯ ತೇನ**
**ಸ್ವೇನಾಽಽತ್ಮನಾ ತಿಷ್ಠತಿ ಯಃ ಸ ಮುಕ್ತಃ ॥೨೧೭॥**

1. 'ಅಖಂಡ' ಎಂಬ ಮಾತನ್ನು ಗ್ರಂಥಕರ್ತರು ಬಳಸುವದು ಹೆಚ್ಚು. ವಿ.ಶಬ್ದಾನುಕ್ರಮಣಿಕೆಯನ್ನು ನೋಡಿ.
2. ಶಂ.ಗೀ. ೬–೨೭ರ ಸಾರವಿದೆಂದು ಕಾಣುತ್ತದೆ.
3. 'ಮನೋವಿಲಯನಂ' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.
4. 'ಮುನೇ' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ.
5. 'ಅನ್ತಗತಿಃ' ಎಂಬ ಮೂಲವನ್ನು ಹೀಗೆ ತಿದ್ದಿಕೊಂಡಿದೆ. ಒಟ್ಟಿನಲ್ಲಿ ಈ ಶ್ಲೋಕದ ಪಾಠವು ಲೇಖಕರ ಪ್ರಮಾದದಿಂದ ತೀರ ಕೆಟ್ಟುಹೋಗಿರುತ್ತದೆ. ಅಲ್ಲಲ್ಲಿ ಶಬ್ದರೂಪಗಳನ್ನು ಬೇರೆಯಾಗಿ ಕಲ್ಪಿಸಿಕೊಂಡು ಅರ್ಥವನ್ನು ಬರೆಯಲಾಗಿದೆ.
6. ವಿ. ೩೭೫ನೆಯ ಶ್ಲೋಕಕ್ಕೆ ಇದನ್ನು ಹೋಲಿಸಿರಿ.

೨೧೭. ಈ ಶರೀರದಿಂದಲೂ ಅಹಂಕಾರವೇ ಮುಂತಾದದ್ದರಿಂದಲೂ[1] ಚೆನ್ನಾಗಿ ಪೂರ್ಣವಾಗಿ ಬಿಡುಗಡೆಯನ್ನು ಹೊಂದಿ, ಜ್ಞಾನದೃಷ್ಟಿಯಿಂದ ಪರಂಜ್ಯೋತಿಯಾದ ತತ್ತ್ವವನ್ನು ಸೇರಿ ಆ ತನ್ನ ಸ್ವರೂಪದಿಂದ ಯಾವನು ನಿಂತಿರುವನೋ ಅವನು ಮುಕ್ತನು.

ಪ್ರತ್ಯಗ್ದೃಶಾ ಸ್ವಾತ್ಮತಯೈವ ನಿತ್ಯಂ
ಪಶ್ಯನ್ನಪಾವೃತ್ತಬಹಿಃಪ್ರವೃತ್ತಿಃ ।
ನಿರನ್ತರಾನನ್ದರಸಾಭಿಪೂರ್ಣಯಾ
ವೃತ್ತ್ಯಾ ಸದಾ ತಿಷ್ಠತಿ ಯಃ ಸ ಮುಕ್ತಃ ॥೨೧೮॥

೨೧೮. ಪ್ರತ್ಯಗ್ದೃಷ್ಟಿ (ಒಳಗಡೆಗೆ ತಿರುಗಿದ ದೃಷ್ಟಿ)ಯಿಂದ[2] (ತತ್ತ್ವವನ್ನು) ತನ್ನ ಆತ್ಮನೆಂದೇ ಯಾವಾಗಲೂ ಕಾಣುತ್ತಾ, ಹೊರಗಡೆಗೆ (ಮನಸ್ಸಿನ) ಪ್ರವೃತ್ತಿಯಿಲ್ಲದೆ, ಬಿಡುವಿಲ್ಲದ ಆನಂದರಸದಿಂದ ತುಂಬಿದ ವೃತ್ತಿಯಿಂದ ಯಾವನು ಯಾವಾಗಲೂ ಕೂಡಿರುವನೋ ಅವನು ಮುಕ್ತನು.

ಉನ್ಮತ್ತವದ್ಬಾಲವದಪ್ರಯತ್ನಾ-
ನ್ನಿರ್ವರ್ತ್ಯ ದೇಹಸ್ಥಿತಿಮಾತ್ಮನಿಷ್ಠಃ ।
[3] ಸದೇಹಗೇಹಾನುಗತಾತ್ಮವೃತ್ತಿ-
ರೇವಾತ್ಮನಾ ತಿಷ್ಠತಿ ಯಃ ಸ ಮುಕ್ತಃ ॥೨೧೯॥

೨೧೯. ಹುಚ್ಚನಂತೆಯೂ ಚಿಕ್ಕಹುಡುಗನಂತೆಯೂ[4] ಶರೀರಯಾತ್ರೆಯನ್ನು (ಹೇಗೋ) ಮಾಡಿಕೊಂಡು, ಆತ್ಮನಿಷ್ಠನಾಗಿ ದೇಹ, ಮನೆ-ಮುಂತಾದವುಗಳಲ್ಲಿಯೂ ಅನುಗತವಾಗಿರುವ ಆತ್ಮವೃತ್ತಿಯುಳ್ಳವನಾಗಿ[5] ಅದ್ವಿತೀಯಾತ್ಮರೂಪದಿಂದ ಯಾವನು ನಿಂತಿರುವನೋ ಅವನು ಮುಕ್ತನು.

---

1. 'ಅಹಂಕಾರವೇ ಮುಂತಾದ ಈ ಶರೀರದಿಂದ' ಎಂದೂ ಅನ್ವಯಿಸಬಹುದು. ಸ್ಥೂಲಸೂಕ್ಷ್ಮರೂಪವಾದ ಸರ್ವಶರೀರದಿಂದಲೂ ಎಂದರ್ಥ. ವಿ. ೧೫೨. ಇಲ್ಲಿಂದ ಮುಂದಕ್ಕೆ ೨೨೧ರವರೆಗೆ 'ಯಃ ಸ ಮುಕ್ತಃ' ಎಂಬ ಪಲ್ಲವಿಯ ಶ್ಲೋಕಗಳಿವೆ.
2. ಪ್ರತ್ಯಗ್ದೃಷ್ಟಿಯಿಂದ ಆತ್ಮನಲ್ಲಿ ನಿಲ್ಲಬೇಕೆಂಬ ಉಪದೇಶಕ್ಕೆ ವಿ.೨೬೪ ನೋಡಿ.
3. ವಿ.೫೩೭ ; ಶಂ.ಗೀ. ೬-೩೧, ತುರೀಯಾತೀತೋಪನಿಷತ್ತು ; 'ಸರ್ವದಾನುನ್ಮತ್ತೋ ಬಾಲೋನ್ಮತ್ತಪಿಶಾಚವದೇಕಾಕೀ ಸಂಚರನ್ ॥'
4. ಹೊರಗೆ ಕಾಣುವ ದೇಹಾದ್ಯನಾತ್ಮಗಳೆಲ್ಲದರಲ್ಲಿಯೂ ಆತ್ಮಬುದ್ಧಿಯೇ ಇರುವವನಾಗಿ ಎಂದರ್ಥ.
5. 'ಸದೇಕಗಾಹಾ' ಎಂಬ ಪಾಠದಲ್ಲಿ ಸನ್ಮಾತ್ರವನ್ನೇ ಎಲ್ಲೆಲ್ಲಿಯೂ ಅರಿಯುವ ಅನುಗತವಾದ ಆತ್ಮವೃತ್ತಿಯುಳ್ಳ – ಎಂದು ಹೇಗೋ ಕನ್ನಡಿಸಬೇಕಾಗುವದು.

ಸಾಕ್ಷಿಣ್ಯಶೇಷಂ ಪ್ರವಿಲಾಪ್ಯ ದೃಶ್ಯಂ
ತಮದ್ವಯೇ ಬ್ರಹ್ಮಣಿ ನಿಷ್ಪ್ರಪಞ್ಚೇ ।
ತತಃ ಸ್ವಯಂ ವ್ಯೋಮವದೇವ ಪೂರ್ಣಾ–
ತ್ಮನಾತ್ಮನಾ ತಿಷ್ಠತಿ ಯಃ ಸ ಮುಕ್ತಃ ॥೨೨೦॥

೨೨೦. ಸಾಕ್ಷಿಯಲ್ಲಿ ಎಲ್ಲಾ ದೃಶ್ಯವನ್ನೂ ಅಡಗಿಸಿಕೊಂಡು, ಆ (ಸಾಕ್ಷಿ) ಯನ್ನು ಅದ್ವಿತೀಯವಾದ ನಿಷ್ಪ್ರಪಂಚವಾದ ಬ್ರಹ್ಮದಲ್ಲಿ (ಲಯಮಾಡಿಕೊಂಡು), ಆ ಬಳಿಕ ತಾನು ಆಕಾಶದಂತೆಯೇ ಪೂರ್ಣಾತ್ಮರೂಪದಿಂದಿರುವ ಸ್ವರೂಪ ವುಳ್ಳವನಾಗಿ ಯಾವನು ಇದ್ದುಕೊಂಡಿರುವನೋ ಅವನು ಮುಕ್ತನು.[1]

ಸರ್ವೇಷು ಭೂತೇಷ್ವವಲೋಕ್ಯ ಚ ಸ್ವಂ
ಸರ್ವಾಣಿ ಭೂತಾನ್ಯಪಿ ಚಾತ್ಮನಿ ಸ್ವೇ ।
ಸ್ವಮೇವ ಸರ್ವಂ ಸಮವೇಕ್ಷ್ಯ ಪಶ್ಚಾ–
ತ್ಸರ್ವಾತ್ಮನಾ ತಿಷ್ಠತಿ ಯಃ ಸ ಮುಕ್ತಃ ॥೨೨೧॥

೨೨೧. ಸರ್ವಭೂತಗಳಲ್ಲಿಯೂ ತನ್ನನ್ನೂ ತನ್ನ ಆತ್ಮನಲ್ಲಿ ಸರ್ವಭೂತ ಗಳನ್ನೂ[2] ತನ್ನನ್ನೇ ಸರ್ವವೆಂಬುದನ್ನೂ ಕಂಡುಕೊಂಡು ಆ ಬಳಿಕ ಯಾವನು ಸರ್ವಾತ್ಮರೂಪದಿಂದ ಇರುತ್ತಿರುವನೋ ಅವನು ಮುಕ್ತನು.

ಆಶಾ ಯಸ್ಯ ವಿಲೋಕಿತೇಽಪಿ ವಿಷಯೇ ನೋದೇತಿ ನಾಪ್ಯಾಗ್ರಹೋ
ಬ್ರಹ್ಮಣ್ಯೇವ ತದಾತ್ಮನಾ ಸ್ಥಿತತಯಾ ನಾಹಂಮತಿರ್ವರ್ಷ್ಮಣಿ ।
ನೇದಂ ಕಾರ್ಯಮಕಾರ್ಯಮಿತ್ಯಪಿ ಕಥಾ ಬಾಹ್ಯಾರ್ಥಸಂಭಾವನಾ
ಜೀವನ್ನೇವ ಸ ಮುಕ್ತ ಇತ್ಯಭಿದಧೇ ಪ್ರಾಚೀನವಾಚಂಯಮೀ[3]॥

೨೨೨. ವಿಷಯವನ್ನು ನೋಡಿದರೂ ಯಾವನಿಗೆ (ಅದರಲ್ಲಿ) ಆಶೆಯು ಉಂಟಾಗುವದಿಲ್ಲವೋ, (ಅದು ಬೇಕೇಬೇಕೆಂಬ) ಆಗ್ರಹವೂ ಇರುವದಿಲ್ಲವೋ ಬ್ರಹ್ಮದಲ್ಲಿಯೇ ಆ (ಬ್ರಹ್ಮದ) ರೂಪದಿಂದ ಇದ್ದುಕೊಂಡಿರುವದರಿಂದ ಶರೀರದಲ್ಲಿ ನಾನು ಎಂಬ ಬುದ್ಧಿಯು ಇರುವದಿಲ್ಲವೋ, ಇದು ಕಾರ್ಯವು (ಇದು) ಅಕಾರ್ಯವು– ಎಂಬ ಹೊರಗಿನ ಮಾತೂ ವಿಷಯದ ಭಾವನೆಯೂ

1. ಸಾಕ್ಷಿಗಿಂತ ವ್ಯತಿರಿಕ್ತವಾಗಿ ಅನಾತ್ಮವಿಲ್ಲವೆಂಬುದನ್ನು ತಿಳಿದು ಅದೆಲ್ಲವನ್ನೂ ಸಾಕ್ಷಿಯಾಗಿ ಕಂಡುಕೊಂಡು ಆ ಸಾಕ್ಷಿಯನ್ನು ಬ್ರಹ್ಮನಿಷ್ಠೆಯಿಂದ ಬ್ರಹ್ಮವಾಗಿಯೇ ಕಾಣುತ್ತಿರುವವನು ಮುಕ್ತನು. ವಿ. ೩೧೭.

2. ಶಂ. ಗೀ. ೬–೨೯, ಈ. ೬.

3. 'ವಾಚಾ ಯಮೀ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ.

(ಯಾವನಿಗೆ) ಇರುವದಿಲ್ಲವೋ, ಅವನು ಬದುಕಿರುವಾಗಲೇ ಮುಕ್ತನು (ಜೀವನ್ಮುಕ್ತನು) ಎಂದು ಪುರಾತನಮೌನಿಯು[1] ಹೇಳಿರುತ್ತಾನೆ.

ತ್ವಂ ನಿರ್ವಿಕಲ್ಪೇನ ಸಮಾಧಿನಾ ಸ್ವಂ
ಸರ್ವಾತ್ಮಕಂ ವೀಕ್ಷ್ಯ ವಿವೇಕದೃಷ್ಟ್ಯಾ ।
ಸ್ವಾತ್ಮನ್ಯಶೇಷಂ ಪ್ರವಿಲಾಪ್ಯ ದೃಶ್ಯಂ
ಪೂರ್ಣಾತ್ಮನಾ ತಿಷ್ಠ ಸುಖಂ ವಿಮುಕ್ತಃ ॥೨೨೩॥

೨೨೩. ನೀನು ನಿರ್ವಿಕಲ್ಪಸಮಾಧಿಯಿಂದ ನಿನ್ನ ಆತ್ಮನನ್ನು ಸರ್ವಾತ್ಮನೆಂದು ಕಂಡುಕೊಂಡು ವಿವೇಕದೃಷ್ಟಿಯಿಂದ ದೃಶ್ಯವನ್ನೆಲ್ಲ ನಿನ್ನ ಆತ್ಮನಲ್ಲಿಯೇ ಲಯ ಮಾಡಿಕೊಂಡು, ಪೂರ್ಣಾತ್ಮನಾಗಿ ವಿಮುಕ್ತನಾಗಿ ಸುಖದಿಂದಿರು.[2]

[3]ವಿಷಯಾಣಾಂ ಸ್ಮೃತಿಶ್ಚಾಽಽಶಾ ಪಕ್ಷೌ ದ್ವೌ ಚಿತ್ತಪಕ್ಷಿಣಃ ।
ತಾಭ್ಯಾಮುಡ್ಡೀಯತೇ ಚಿತ್ತಂ ತದುಚ್ಛೇದೇನ ಶಾಮ್ಯತಿ ॥೨೨೪॥

೨೨೪. ವಿಷಯಗಳ ಸ್ಮೃತಿಯೂ ಆಶೆಯೂ ಚಿತ್ತವೆಂಬ ಹಕ್ಕಿಗೆ ಎರಡು ರೆಕ್ಕೆಗಳು. ಅವೆರಡರಿಂದಲೇ ಚಿತ್ತವು ಮೇಲಕ್ಕೆ ಹಾರುತ್ತದೆ ; ಅವುಗಳನ್ನು ಕತ್ತರಿಸಿದರೆ ಸುಮ್ಮನಾಗುತ್ತದೆ.

## ಮುಮುಕ್ಷುಗಳಿಗೆ ಕರ್ಮವು ಬೇಡ

ನ ಸ್ನಾನಮನ್ತ್ರಾರ್ಚನಕೀರ್ತನಾದಿ-
ರ್ನ ತೀರ್ಥಸೇವಾದಿ ಚ ಕರ್ಮ ಭಿಕ್ಷೋಃ ।
ಯುಕ್ತಂ ಯತೋಽನಾತ್ಮಮತಿಪ್ರವರ್ಧಕಂ
ಹ್ಯನಾತ್ಮಶಾಸ್ತ್ರೇರಿತಮಪ್ಯಶೇಷಮ್ ॥೨೨೫॥

೨೨೫. ಸ್ನಾನ, ಮಂತ್ರಗಳು, ಪೂಜೆ, ಕೀರ್ತನವೇ ಮುಂತಾದದ್ದೂ, ತೀರ್ಥಸೇವನವೇ ಮುಂತಾದ ಕರ್ಮವೂ ಭಿಕ್ಷುವಿಗೆ ಸರಿಯಲ್ಲ. ಏಕೆಂದರೆ ಅನಾತ್ಮ ಶಾಸ್ತ್ರದಲ್ಲಿ[4] ಉಕ್ತವಾಗಿದ್ದರೂ ಅದೆಲ್ಲವೂ ಅನಾತ್ಮಬುದ್ಧಿಯನ್ನು ಬೆಳೆಯಿಸುತ್ತದೆ.

---

1. ವಾಸಿಷ್ಠಋಷಿಯು ಎಂದರ್ಥ. ಯೋ.ವಾ.ಉತ್ಪತ್ತಿ ೯-೯ನ್ನು ನೋಡಿ. ಅಲ್ಲಿರುವ ಶ್ಲೋಕಗಳ ಅರ್ಥವನ್ನು ವಿವೇಕಚೂಡಾಮಣಿಯಲ್ಲಿಯೂ ಜೀವನ್ಮುಕ್ತನ ಲಕ್ಷಣವನ್ನು ಹೇಳುವಾಗ ಶ್ಲೋಕ ೪೨೫ ರಿಂದ ಮುಂದಕ್ಕೆ ಅನುವಾದಮಾಡಿದೆ. ಶಂ.ಗೀ.೧೮-೧೭.

2. ವಿ. ೩೫೩, ೩೬೬.

3. ಇದಾದಮೇಲೆ 'ಮಾಮಯಂ ಹನ್ತಿ ವಿಷಯೋ ಬನ್ಧಕತ್ವಸ್ವಭಾವತಃ' ಎಂಬ ಅರ್ಧಶ್ಲೋಕವಿದೆ. ಈ ವಿಷಯವು ಬಂಧಕವಾದ ಸ್ವಭಾವವುಳ್ಳದ್ದಾದ್ದರಿಂದ ನನ್ನನ್ನು ನಾಶಗೊಳಿಸುತ್ತದೆ - ಎಂದು ಅದಕ್ಕೆ ಅರ್ಥ. ಇದರ ಉತ್ತರಾರ್ಧವು ಮೂಲದಲ್ಲಿದ್ದು ಬರೆಯುವವರ ಕೈತಪ್ಪಿನಿಂದ ಬಿಟ್ಟುಹೋಗಿದೆ ಎಂದು ತೋರುತ್ತದೆ.

4. ಆತ್ಮನನ್ನು ಹೇಳದ ಕರ್ಮಶಾಸ್ತ್ರದಲ್ಲಿ(?)

ನ ಕರ್ಮ ಮೋಕ್ಷಂ ಪ್ರತಿ ಕಾರಣಂ ತ್ವಿತಿ
ಸ್ವಯಂ ವಿನಿಶ್ಚಿತ್ಯ ವಿಮುಕ್ತಿಮಿಚ್ಛತಾಮ್ ।
ನ ಕರ್ಮಣಾ ನ ಪ್ರಜಯೇತಿ ಸಾಕ್ಷಾತ್
ಕರ್ಮಾಖಿಲಂ ಸಾಧು ನಿಷೇಧತಿ ಶ್ರುತಿಃ ॥೨೨೬॥

೨೨೬. ಕರ್ಮವು ಮೋಕ್ಷಕ್ಕೆ ಕಾರಣವಲ್ಲವೆಂದು ತಾನೇ ನಿಶ್ಚಯಿಸಿಯೇ ಮೋಕ್ಷವನ್ನು ಬಯಸುವವರಿಗೆ 'ಕರ್ಮದಿಂದಲ್ಲ, ಪ್ರಜೆಯಿಂದಲೂ ಅಲ್ಲ' (ತೈ.ನಾ.೧೨) ಎಂಬ ಶ್ರುತಿಯು ನೇರಾಗಿಯೇ ಕರ್ಮವೆಲ್ಲವನ್ನೂ ಚೆನ್ನಾಗಿ[1] ಅಲ್ಲಗಳೆದಿರುತ್ತದೆ.

ಸಂನ್ಯಸ್ಯ ಶ್ರವಣಂ ಕುರ್ಯಾದಿತ್ಯಾದಿಸ್ಮೃತಿರಪ್ಯಲಮ್ ।
ವಿಧತ್ತೇ ಶ್ರವಣಂ ಭಿಕ್ಷೋರ್ಮೋಕ್ಷಮಾತ್ರೈಕಕಾಙ್ಕ್ಷಿಣಃ ॥೨೨೭॥

೨೨೭. ''ಸಂನ್ಯಾಸಮಾಡಿ ಶ್ರವಣಮಾಡಬೇಕು'' (?) ಎಂದು ಮುಂತಾಗಿರುವ ಸ್ಮೃತಿಯುಕೂಡ[2] ಮೋಕ್ಷವೊಂದನ್ನೇ ಬಯಸುವ ಭಿಕ್ಷುವಿಗೆ ಸ್ಪಷ್ಟವಾಗಿ ಶ್ರವಣವನ್ನು ವಿಧಿಸುತ್ತದೆ.

ಅಯಮೇವ ಯತೇರ್ಧರ್ಮಃ ಕರ್ತವ್ಯೋ ಮೋಕ್ಷಕಾಙ್ಕ್ಷಿಣಃ ।
ನೈವ ಸ್ನಾನಂ ನಾಪಿ ಜಪೋ ನ ಪೂಜಾಪಿ ನ ಕೀರ್ತನಮ್ ॥೨೨೮॥

೨೨೮. ಮೋಕ್ಷವನ್ನು ಬಯಸುವ ಯತಿಗೆ ಇದೇ ಕರ್ತವ್ಯಕರ್ಮವೇ ಹೊರತು ಸ್ನಾನವಲ್ಲವೇ ಅಲ್ಲ, ಜಪವೂ ಅಲ್ಲ, ಪೂಜೆಯೂ ಅಲ್ಲ, ಕೀರ್ತನವೂ ಅಲ್ಲ.[3]

ಯಥಾ ತಣ್ಡುಲಸಂಪರ್ಕಾನ್ನಾರಿಕೇಳಂ ವಿನಶ್ಯತಿ ।
ಯಥೈವೋದಕಸಂಪರ್ಕಾತ್ಸಮೂಲಂ ಮಧು ನಶ್ಯತಿ ॥೨೨೯॥
*ತಥಾ ಶ್ರವಣಜೋ ಬೋಧಃ ಕರ್ಮಯೋಗಾದ್ವಿನಶ್ಯತಿ ।
ತತೋ ಮುಮುಕ್ಷೋಸ್ತು ಯತೇರ್ನ ಕಾರ್ಯಂ ಕರ್ಮ ಕಿಞ್ಚನ ॥೨೩೦॥

1. ಯುಕ್ತಿಯುಕ್ತವಾಗಿಯೇ ಎಂದರ್ಥ ; ಕರ್ಮದಿಸಾಧ್ಯವಾದರೆ ಅನಿತ್ಯವಾಗುವದೆಂಬುದೇ ಯುಕ್ತಿ

2. ಶಂ.ಗೀ.ಯಲ್ಲಿ ಈ ಸ್ಮೃತಿಯನ್ನು ಮತ್ತೆಮತ್ತೆ ಉದಾಹರಿಸಿರುತ್ತದೆ. ಉದಾಹರಣೆಗೆ ೪–೨೧ರಲ್ಲಿ ''ಸಂನ್ಯಸ್ಯ ಶ್ರವಣಂ ಕುರ್ಯಾನ್ನಾನ್ಯತ್ಕುರ್ಯಾದ್ಯತಿಃ ಕ್ವಚಿತ್'' ಎಂದು ಶ್ಲೋಕಾರ್ಧವನ್ನು ಕೊಟ್ಟಿದೆ.

3. ಶಂ.ಗೀ. ೪–೨೧. * ಈ ಶ್ಲೋಕವಾದ ಬಳಿಕ 'ಸಂನ್ಯಸ್ಯ ಸರ್ವಕರ್ಮಾಣೀತ್ಯೇವಂ ವಕ್ತಿ ಸ್ವಯಂ ಶ್ರುತಿಃ (ಸ್ಮೃತಿಃ ?) ॥' ಎಂಬ ಅರ್ಧಶ್ಲೋಕವೊಂದು ಅಚ್ಚಿನ ಪುಸ್ತಕದಲ್ಲಿ ಹೆಚ್ಚಾಗಿದೆ. 'ಸಂನ್ಯಸ್ಯ ಸರ್ವಕರ್ಮಾಣಿ' ಎಂಬ ವಾಕ್ಯಭಾಗವು ವಿ. ೧೧ರಲ್ಲಿಯೂ ಸಿಕ್ಕುತ್ತದೆ. ಅದನ್ನು ಬಿಟ್ಟಿದ್ದರಿಂದ ನಾವು ಕೊಟ್ಟಿರುವ ಶ್ಲೋಕ ಸಂಖ್ಯಾನುಕ್ರಮದಲ್ಲಿ ಹೆಚ್ಚುಕಡಿಮೆಯಾಗಿದೆ.

೨೨೯–೨೩೦. ಹೇಗೆ ಅಕ್ಕಿಯ ಸೋಂಕಿನಿಂದ ತೆಂಗಿನಕಾಯಿ ನಾಶವಾಗುವದೋ ಮತ್ತು ಹೇಗೆ ನೀರಿನ ಸಂಬಂಧದಿಂದ ಜೇನುತುಪ್ಪವು ತೀರ ನಾಶವಾಗುತ್ತದೆಯೋ, ಹಾಗೆಯೇ ಶ್ರವಣದಿಂದಾದ ಜ್ಞಾನವು ಕರ್ಮದ ಸಂಬಂಧದಿಂದ ನಾಶವಾಗುತ್ತದೆ.[1] ಆದ್ದರಿಂದ ಮುಮುಕ್ಷುವಾದ ಯತಿಗೆ ಮಾಡತಕ್ಕ ಕರ್ಮವು ಒಂದಿಷ್ಟೂ ಇರುವದಿಲ್ಲ.

## ಬ್ರಹ್ಮಾತ್ಮೈಕತ್ವವಾಗುವವರೆಗೂ ಶ್ರವಣಾದಿಗಳನ್ನು ಮಾಡಬೇಕು

**ಶ್ರವಣಾದೇಃ ಫಲಂ ಪ್ರಾಹುರ್ಬ್ರಹ್ಮಾತ್ಮೈಕತ್ವಬೋಧನಮ್ ।**
**ತದಭಾವೇ ಯತೇರಸ್ಯ ನಿಷ್ಫಲಂ ಶುಕಜಲ್ಪವತ್**
**ದಶಧಾ ಶತಧಾ ವಾಪಿ ಶ್ರುತ್ವಾ ಮತ್ವಾಪಿ ವಾ ಯತೇಃ ॥೨೩೧॥**

೨೩೧. ಶ್ರವಣಾದಿಗಳಿಗೆ ಬ್ರಹ್ಮಾತ್ಮೈಕತ್ವಜ್ಞಾನವೇ ಫಲವೆನ್ನುತ್ತಾರೆ. ಅದಿಲ್ಲದಿದ್ದರೆ ಹತ್ತುಸಲ, ನೂರುಸಲ ಶ್ರವಣಮಾಡಿ ಮನನಮಾಡಿದರೂ[2] ಯತಿಗೆ ಗಿಳಿಯ ಮಾತಿನಂತೆ ಯಾವ ಫಲವೂ ಇಲ್ಲ.

**ಸಂಸಾರಧ್ವಂಸಕಂ ಜ್ಞಾನಂ ಸಂಪಾದ್ಯಮತಿಯತ್ನತಃ[3] ॥೨೩೨॥**
**ತತ ಆಲಸ್ಯಮುತ್ಸೃಜ್ಯ ಶತಧಾಪಿ ಸಹಸ್ರಧಾ**
**ಕರ್ತವ್ಯಂ ಶ್ರವಣಂ ಭಿಕ್ಷೋರ್ನಿಕಟೇ ಬ್ರಹ್ಮವಿದ್ಗುರೋಃ ॥೨೩೩॥**

೨೩೨–೨೩೩. ಸಂಸಾರವನ್ನು ನಾಶಮಾಡುವ ಜ್ಞಾನವನ್ನು ಅತಿಯತ್ನದಿಂದ ಸಂಪಾದಿಸಿಕೊಳ್ಳಬೇಕು. ಆದ್ದರಿಂದ ಆಲಸ್ಯವನ್ನು ಬಿಟ್ಟು ನೂರುಸಲ ಸಾವಿರ ಸಲವಾದರೂ[4] ಭಿಕ್ಷುವಾದ ಬ್ರಹ್ಮವೇತ್ತನಾದ ಗುರುವಿನ ಬಳಿಯಲ್ಲಿ ಶ್ರವಣವನ್ನು ಮಾಡಬೇಕು.

---

1. ಅದು ಅನುಭವಪರ್ಯಂತವಾಗುವದಿಲ್ಲ ಎಂಬ ಅಭಿಪ್ರಾಯವಿರಬಹುದು.
2. ಶ್ರವಣಮನನಗಳನ್ನು ಎಷ್ಟುಸಲ ಮಾಡಿದರೂ ಬ್ರಹ್ಮಾತ್ಮೈಕತ್ವಜ್ಞಾನವಾಗದೆ ಇದ್ದರೆ ಅದೆಲ್ಲವೂ ವ್ಯರ್ಥ ; ಶ್ರವಣಮನನಗಳನ್ನು ಎಷ್ಟುಬಾರಿ ಮಾಡಿರೂ ಸಮಾಧಿಯಿಂದ ಬ್ರಹ್ಮನಿಷ್ಠೆಯನ್ನು ಪಡೆದ ಹೊರತು ಎಂದಿಗೂ ಬ್ರಹ್ಮಾತ್ಮೈಕತ್ವಜ್ಞಾನವಾಗಲಾರದು – ಎಂದು ಶಂ.ಗೀ.ಯಲ್ಲಿ ಮತ್ತೆಮತ್ತೆ ಹೇಳಿರುತ್ತದೆ. ಶಂ.ಗೀ.೨–೫೪, ೬೪, ೬೬, ೬೭, ೭೨ ; ೬–೧೦.
3. ಹಿಂದೆ ಹೆಚ್ಚಾಗಿದ್ದ ಅರ್ಧಶ್ಲೋಕವನ್ನು ಸೇರಿಸಿ ಎಣಿಸಿದೆ.
4. ಆತ್ಮತತ್ತ್ವವು ಅತಿಸೂಕ್ಷ್ಮವೂ ದುರ್ವಿಜ್ಞೇಯವೂ ಆಗಿರುವದರಿಂದ ಮತ್ತೆ ಮತ್ತೆ ತ್ವಂಪದಾರ್ಥಶೋಧನವನ್ನು ಮಾಡಬೇಕು ಎಂದು ಭಾವ. ಶಂ. ಗೀ. ೨–೧೩.

## ಶ್ರುತಿವಾಕ್ಯದಲ್ಲಿ ಶ್ರದ್ಧೆಯಿರಬೇಕು

**ಶ್ರುತ್ವಾ ತತ್ತ್ವಮಸೀತ್ಯೇವಂ ಬೋಧ್ಯಮಾನೋಽಪ್ಯನೇಕಧಾ ।**
**ನ ವಿಜಾನಾತ್ಯಯಂ ತತ್ತ್ವಮೀಶಾನುಗ್ರಹವರ್ಜಿತಃ ॥೨೩೪॥**

**ಸೂತಕಾದಿ ನಿರಾಕಾರಂ ಸಾಕಾರಮಿವ ಪಶ್ಯತಿ ।**
**ಸ್ವಸ್ಮಿನ್ ದೃಢಪ್ರತ್ಯಯೇನ ಸೂತಕ್ಯಹಮಿತಿ ಸ್ಫುಟಮ್ ॥೨೩೫॥**

**ನ ತಥಾ ಬೋಧಿತಃ ಶ್ರುತ್ಯಾ ಮುಹುಸ್ತತ್ತ್ವಮಸೀತ್ಯಲಮ್ ।**
**ವಿದ್ವಾನಪಿ ವಿಜಾನಾತಿ ಸ್ವತತ್ತ್ವಂ ಮಹದದ್ಭುತಮ್ ॥೨೩೬॥**

೨೩೪–೨೩೬. ಅನೇಕಾವೃತ್ತಿ ಹೇಳಿಕೊಟ್ಟ ತತ್ತ್ವಮಸಿ (ಅದೇ ನೀನಾಗಿರುವೆ) ಎಂಬ ವಾಕ್ಯವನ್ನು ಕೇಳಿದರೂ ಈಶ್ವರಾನುಗ್ರಹವಿಲ್ಲದವನು ತತ್ತ್ವವನ್ನು ಅರಿತುಕೊಳ್ಳುವದಿಲ್ಲ. ಸೂತಕವೇ ಮುಂತಾಗಿ ತನ್ನಲ್ಲಿ ಗಟ್ಟಿಯಾದ ಯಾವ ಅರಿವಿನಿಂದ ನಾನು ಸೂತಕಿಯು (ನನಗೆ ಸೂತಕವು ಬಂದಿದೆ) ಎಂದು ನಿರಾಕಾರವಾದ ಸೂತಕವೇ ಮುಂತಾದದ್ದನ್ನು ಸಾಕಾರವೋ ಎಂಬಂತೆ ತಿಳಿದು ಕೊಳ್ಳುತ್ತಾನೆ.[1] ವಿದ್ವಾಂಸನಾದವನು ಕೂಡ ಶ್ರುತಿಯು ಮತ್ತೆಮತ್ತೆ 'ತತ್ತ್ವಮಸಿ' ಎಂದು ಹೇಳಿಕೊಟ್ಟರೂ ಹಾಗೆ ತನ್ನ ತತ್ತ್ವವನ್ನು ಕೂಡ ಗಟ್ಟಿಯಾಗಿ ತಿಳಿದುಕೊಳ್ಳದೆ ಇರುತ್ತಾನೆ, ಮಹಾ ಆಶ್ಚರ್ಯವಿದು.

**ಸಂದರ್ಶ್ಯಾಥ ಶಿಲಾಂ ಶಿಲಾಮಯಗೃಹೇ ಸಾಕ್ಷಾದಯಂ ಶ್ರೀಹರಿ–**
**ರ್ಭಕ್ತೇಭ್ಯೋ ವಿವಿಧಾನ್ ಪ್ರಯಚ್ಛತಿ ವರಾನ್ ಸಂಸೇವ್ಯಮಾನಸ್ತ್ವಿತಿ ।**
**ಉಕ್ತಾಂ ದೇವಲಕಸ್ಯ ವಾಚಮಧಿಕಂ ವಿಶ್ವಸ್ಯ ಸಂಸೇವತೇ**
**ತ್ವರ್ಥಂ ತತ್ತ್ವಮಸೀತಿ ವೇದಗದಿತಂ ನೋ ವಿಶ್ವಸಿತ್ಯಲ್ಪಧೀಃ ॥೨೩೭॥**

೨೩೭. ಕಲ್ಲಿನ ಮನೆಯಲ್ಲಿ ಕಲ್ಲನ್ನು ತೋರಿಸಿ 'ಈತನು ಸಾಕ್ಷಾತ್ ಶ್ರೀಹರಿ, ಸೇವೆಗೈದರೆ ಭಕ್ತರಿಗೆ ಬಗೆಬಗೆಯ ವರಗಳನ್ನು ಕೊಡುತ್ತಾನೆ' ಎಂದು ದೇವಲಕನು ಹೇಳಿದ ಮಾತನ್ನು ಬಹಳವಾಗಿ ನಂಬಿ ಅಲ್ಪಮತಿಯಾದವನು ಸೇವೆ ಗೈಯುತ್ತಾನೆ. 'ತತ್ತ್ವಮಸಿ' ಅದೇ ನೀನಾಗಿರುವೆ– ಎಂದು ವೇದವು ಹೇಳಿದ್ದನ್ನು ನಂಬುವದಿಲ್ಲ ![2]

---

1. ಕರ್ಮಶಾಸ್ತ್ರೋಕ್ತವಾದ ಜಾತಾಶೌಚವೇ ಮುಂತಾದವುಗಳು ತನಗೆ ನಿಜವಾಗಿ ಬಂದಿವೆಯೆಂದು ಕೇವಲಶಾಸ್ತ್ರಶ್ರದ್ಧೆಯಿಂದ ನಂಬುತ್ತಾನೆ ; ಆದರೆ 'ತತ್ತ್ವಮಸಿ' ಎಂದು ಶ್ರುತಿಯು ಒಂಬತ್ತು ಸಲ ಹೇಳಿರುವ ಬ್ರಹ್ಮಾತ್ಮೈಕತ್ವವು ಸ್ವಯಂಸಿದ್ಧವಾಗಿದ್ದರೂ ಅದನ್ನು ಅರಿತುಕೊಳ್ಳದೆ ಇರುತ್ತಾನಲ್ಲ! ಆಶ್ರರ್ಯವಿದು – ಎಂದು ಅಭಿಪ್ರಾಯ.

2. ಮನೆಯೂ ಕಲ್ಲಿನದಾದರೂ ಅದನ್ನು ಲೆಕ್ಕಿಸುವದಿಲ್ಲ ; ಶಿಲಾವಿಗ್ರಹವು ಶ್ರೀಹರಿಯದೆಂಬುದಕ್ಕೆ ಮತ್ತೊಬ್ಬರ ಉಕ್ತಿಮಾತ್ರವೇ ಪ್ರಮಾಣವಾಗಿರುತ್ತದೆಯಾದರೂ ವಿಶ್ವಾಸಮಾಡುತ್ತಾನೆ. ಶ್ರುತ್ಯುಕ್ತವಾದದ್ದು ಸ್ವಯಂಸಿದ್ಧವಾದರೂ ಅರಿತುಕೊಳ್ಳಲಾರದೆ ಇರುತ್ತಾನೆ.

**ಲೌಕಿಕೇ ವಚನೇ ಶ್ರದ್ಧಾ ಶಾಸ್ತ್ರೀಯೇ ಚ ಯಥಾ ತಥಾ ।**
**ವಾಕ್ಯೇ ತತ್ತ್ವಮಸೀತ್ಯೇವಂ ವದನ್ತ್ಯಾ ನ ಶ್ರುತೇರ್ನೃಣಾಮ್ ॥೨೩೮॥**

೨೩೮. ಜನರಿಗೆ ಲೋಕದ ಮಾತಿನಲ್ಲಿ ಹೇಗೆ ಶ್ರದ್ಧೆ ಇರುವದೋ, (ಕರ್ಮ) ಶಾಸ್ತ್ರದ ವಚನದಲ್ಲಿ ಹೇಗೆ (ಶ್ರದ್ಧೆ)ಯಿರುವದೋ, 'ತತ್ತ್ವಮಸಿ' ಎಂದು ಹೇಳುವ ಶ್ರುತಿಯ ವಾಕ್ಯದಲ್ಲಿ ಹಾಗಿರುವದಿಲ್ಲ[1] !

## ಅನಾತ್ಮವನ್ನು ತೊಲಗಿಸಿದ್ದರಿಂದಲೇ ಬ್ರಹ್ಮವು ಪ್ರಕಾಶವಾಗುತ್ತದೆ

**ನಾನಾಯೋನಿಸಹಸ್ರಸಂಭವಕರಂ ನಾನಾವಿಧಾರ್ತಿಪ್ರದಂ**
**ಕರ್ಮಾಪಾಸ್ಯ ಹೃದಿ ಸ್ಥಿತಂ ಸದನಿಶಂ ಚಿತ್ತೇ ಪ್ರಸೀದನ್ (?) ಸ್ವಯಮ್ ।**
**ರುದ್ಧ್ವಾನಾತ್ಮರತಿಂ ತದಾತ್ಮಕಮತಿಂ ಸಂವರ್ಧಯೇಚ್ಛೃಣ್ವತೋ**
**(ಮನ್ವಾನಸ್ಯ ಚ ಭಾನುಭಾಜಲ ದೃಢೇ ದ್ವಂದ್ವೇ ವಿವೇಕಾದ್ವ್ರತಮ್[2])**

೨೩೮. ಬಗೆಬಗೆಯ ಯೋನಿಸಹಸ್ರದಲ್ಲಿ ಜನ್ಮವನ್ನುಂಟುಮಾಡುವದಾಗಿ ಬಗೆಬಗೆಯ ಸಂಕಟಗಳನ್ನುಂಟುಮಾಡುತ್ತಿರುವ ಕರ್ಮವನ್ನು ಬಿಟ್ಟು, ಹೃದಯ ದಲ್ಲಿರುವ ಚಿತ್ತದಲ್ಲಿ ತಾನೆ ಪ್ರಸನ್ನವಾಗುತ್ತಿರುವ ಸದ್ಬ್ರಹ್ಮವನ್ನು (?) ಅನಾತ್ಮ ಬುದ್ಧಿಯನ್ನು ತಡೆದು ಅದೇ ನಾನೆಂಬ ಬುದ್ಧಿಯನ್ನು ಬೆಳೆಸಬೇಕು – (?)

**ಯೋ ಮೋಹಯತಿ ಭೂತಾನಿ ಸ್ನೇಹಪಾಶಾನುಬನ್ಧನೈಃ ।**
**ಸರ್ಗಸ್ಯ ರಕ್ಷಣಾರ್ಥಾಯ ತಸ್ಮೈ ಮೋಹಾತ್ಮನೇ ನಮಃ ॥೨೩೯॥**

೨೩೯. ಯಾವಾತನು ಸೃಷ್ಟಿಯ ರಕ್ಷಣೆಗಾಗಿ ಪ್ರಾಣಿಗಳನ್ನು ಸ್ನೇಹಪಾಶದ ಕಟ್ಟುಗಳಿಂದ ಮೋಹಗೊಳಿಸುತ್ತಿರುವನೋ ಅಂಥ ಮೋಹಾತ್ಮನಿಗೆ ನಮಸ್ಕಾರ[3] !

**ದೃಶ್ಯಪ್ರತ್ಯಯಸನ್ತತ್ಯಾ ಬ್ರಹ್ಮತತ್ತ್ವಂ ತಿರೋಹಿತಮ್ ।**
**ತಸ್ಯಾ ನಿರಾಸೇ ಬ್ರಹ್ಮೈವ ಕೇವಲಂ ಪರಿದೃಶ್ಯತೇ ॥೨೪೦॥**

---

1. ಹಿಂದಿನ ಎರಡು ಶ್ಲೋಕಗಳ ಅಭಿಪ್ರಾಯದಿಂದ ಸಿದ್ಧವಾದದ್ದಿದು.
2. ಇದೂ ಮುಂದಿನ ಶ್ಲೋಕವೂ ಇಲ್ಲಿ ಏತಕ್ಕೆ ಬಂದಿವೆಯೆಂಬುದು ತಿಳಿಯಲಿಲ್ಲ. ಈ ಶ್ಲೋಕದ ಕೊನೆಯ ಎರಡು ಪಾದಗಳಲ್ಲಿರುವ ವಾಕ್ಯಗಳು ಅನನ್ವಿತಾರ್ಥವಾಗಿವೆ. ಲೇಖಕರ ಪ್ರಮಾದದಿಂದ ಏನೋ ತಪ್ಪಾಗಿದೆ. ಅಚ್ಚಿನ ಪುಸ್ತಕಗಳಲ್ಲಿ ಹೀಗೆಯೇ ಇದೆ.
3. ಇದು ಭೀಷ್ಮಸ್ತವರಾಜದ ಶ್ಲೋಕ.

೨೪೦. ದೃಶ್ಯಪ್ರತ್ಯಯಗಳ ಪ್ರವಾಹದಿಂದ ಬ್ರಹ್ಮತತ್ತ್ವವು ಮರೆಯಾಗಿರುತ್ತದೆ.[1] ಆ ಪ್ರವಾಹವನ್ನು ತೆಗೆದುಹಾಕಿದರೆ ಕೇವಲ ಬ್ರಹ್ಮವೇ ಕಾಣಬರುತ್ತದೆ.

**ಅವಿದ್ಯಯಾ ಕಲ್ಪಿತನಾಮರೂಪ–**
**ವ್ಯಪೋಹ ಏವ ಪ್ರಯತೇತ ವಿದ್ವಾನ್**
**ನ ಬ್ರಹ್ಮಬೋಧೇ ತದಪೋಹಮಾತ್ರಾದ್**
**ಬ್ರಹ್ಮಾವಭಾತಿ ಸ್ವಯಮೇವ ಸಾಕ್ಷಾತ್ ॥೨೪೧॥**

೨೪೧. ಅವಿದ್ಯೆಯಿಂದ ಕಲ್ಪಿತವಾದ ನಾಮರೂಪಗಳನ್ನು ತೆಗೆದು ಹಾಕುವದರಲ್ಲಿಯೇ ವಿವೇಕಿಯಾದವನು ಪ್ರಯತ್ನಿಸಬೇಕೇ ಹೊರತು ಬ್ರಹ್ಮಜ್ಞಾನಕ್ಕಾಗಿ (ಪ್ರಯತ್ನಿಸಬೇಕಾ)ದದ್ದಿಲ್ಲ. ಅವುಗಳನ್ನು ತೆಗೆದುಹಾಕಿದ ಮಾತ್ರದಿಂದಲೇ ಬ್ರಹ್ಮವು ತಾನೇ ಬೆಳಗುತ್ತದೆ.

**ಶೈವಾಲಮಾತ್ರಾಪನಯೇ ಪಿಪಾಸೋಃ**
**ಕಾರ್ಯಃ ಪ್ರಯತ್ನೋ ನ ತು ತೋಯಸಿದ್ಧ್ಯೈ**
**ತಸ್ಮಿನ್ನಪೇತೇ ಸ್ವಯಮೇವ ತೋಯಂ**
**ಶುದ್ಧಂ ಪ್ರಸನ್ನಂ ವಿಷಯತ್ವಮೇತಿ ॥೨೪೨॥**

೨೪೨. ನೀರಡಿಸಿರುವಾತನು ಪಾಚಿಯನ್ನು ತೆಗೆದುಹಾಕುವದಕ್ಕೆ ಮಾತ್ರ ಪ್ರಯತ್ನವನ್ನು ಮಾಡಬೇಕಾಗಿರುವದೇ ಹೊರತು, (ಅದರಡಿಯಿಂದ) ನೀರಿನ ಸಿದ್ಧಿಗೆ ಪ್ರಯತ್ನಿಸಬೇಕಾದದ್ದಿರುವದಿಲ್ಲ. ಆ ಪಾಚಿಯನ್ನು ತೆಗೆದುಹಾಕಿದರೆ ಶುದ್ಧವಾದ ತಿಳಿಯಾದ ನೀರು ತಾನೇ ಗೋಚರವಾಗುವದು[2].

## ಬ್ರಹ್ಮಾತ್ಮನ ಸತ್ತೆಯೇ ದೇಹಾದಿಗಳ ಸತ್ತೆ

**ಘಟಸ್ತದನ್ತಃ ಸಲಿಲಂ ತದಗ್ರೇ**
**ಸ್ಥಿತಂ ಶರಾವಂ ಚ ತದನ್ತರಮ್ಬು ।**
**ಉಷ್ಣತ್ವಮಗ್ನೇರ್ವಹತಿ ಪ್ರಸಾದಾ–**
**ತ್ತಥಾಹಮಾದಿಶ್ಚ ಸತಃ ಪ್ರಸಾದಾತ್ ॥೨೪೩॥**

೨೪೩. ಗಡಿಗೆ, ಅದರೊಳಗೆ ನೀರು, ಅದರ ಮೇಲಿರುವ ಶ್ರಾವೆ, ಅದರೊಳಗಿನ ನೀರು – ಹೀಗೆ (ಕ್ರಮಕ್ರಮವಾಗಿ) ಬೆಂಕಿಯ ಪ್ರಸಾದದಿಂದ

1. ವಿ. ೩೧೭. ಇದನ್ನು ಶಂ.ಗೀ. ೧೮–೫೦ರಲ್ಲಿ ವಿವರಿಸಿದೆ. ಅನಾತ್ಮಪ್ರತ್ಯಯವನ್ನು ತೆಗೆದುಹಾಕುವದಕ್ಕೆ ಸಮಾಧಿಯೋಗವು ಅವಶ್ಯವೆಂದು ಅಲ್ಲಿ ಹೇಳಿದೆ. ದೃಶ್ಯವಿಲಯವನ್ನು ಸಮಾಧಿಯಿಂದ ಮಾಡಿಕೊಳ್ಳಬೇಕೆಂಬುದನ್ನು ವಿವೇಕಚೂಡಾಮಣಿಯಲ್ಲಿ ಬಹಳ ಕಡೆ ಹೇಳಿರುತ್ತದೆ. ಆ ಗ್ರಂಥದ ಶಬ್ದಾನುಕ್ರಮಣಿಕೆಯನ್ನು ನೋಡಿ.

2. ಅನಾತ್ಮವು ಶುದ್ಧವಾದ ಆತ್ಮತತ್ತ್ವಕ್ಕೆ ನೀರಿಗೆ ಪಾಚಿಯಂತೆ ಆವರಣವಾಗಿರುತ್ತದೆ ; ವಿ. ೧೪೮, ೧೪೯.

ಶಾಖವನ್ನು ಪಡೆದುಕೊಳ್ಳುವವು. ಇದರಂತೆಯೇ ಅಹಮಾದಿ (ಅನಾತ್ಮವೂ) ಸತ್ತಿನ ಪ್ರಸಾದದಿಂದ (ಅದರ ಧರ್ಮವನ್ನು ಪಡೆಯುವವು).

ದೇಹೇನ್ದ್ರಿಯಪ್ರಾಣಮನೋಧ್ಯಹಙ್ಕೃತೇ–
ರ್ಬ್ರಹ್ಮಪ್ರಸಾದಾತ್ಖಲು ಚೇತನತ್ವಮ್ ।
ಸತ್ತಾಭಿಧಾನಂ ಚ ನ ತು ಕ್ವಚಿತ್ ಸ್ವಯಂ
ಜಡಾತ್ಮಕಾ ಭಾನ್ತ್ಯಹಮಾದಯೋಽಮೀ ॥೨೪೪॥

೨೪೪. ದೇಹ, ಇಂದ್ರಿಯಗಳು, ಪ್ರಾಣ, ಮನಸ್ಸು, (ಬುದ್ಧಿ), ಅಹಂಕಾರ– ಇವಕ್ಕೆ ಬ್ರಹ್ಮಪ್ರಸಾದದಿಂದಲ್ಲವೆ, ಚೈತನ್ಯವು, ಮತ್ತೆ ಸತ್ತೆ (ಇರವು)– ಎಂಬ ಹೆಸರು ? ಜಡಸ್ವರೂಪವಾದ ಈ ಅಹಮಾದಿಗಳು ಎಂದೂ ತಾವುತಾವೇ ತೋರಿಕೊಳ್ಳುವದಿಲ್ಲ.[1]

## ಬ್ರಹ್ಮಸ್ವರೂಪರಾಗಿರುವವರಿಗೆ ದೇವತೆಗಳಿಂದಾಗಲಿ ಅವರ ಲೋಕದಿಂದಾಗಲಿ ಆಗಬೇಕಾದದ್ದಿಲ್ಲ

ನಿತ್ಯಂ ಸದಾನನ್ದರಸಾನುಭೂತಿ–
ಮಭಿನ್ನವೃತ್ತ್ಯಾತ್ಮನಿ ಕುರ್ವತಾಂ ಸತಾಮ್ ।
ಇನ್ದ್ರಸ್ಯ ಲೋಕೇನ ಕಿಮಬ್ಜಯೋನೇಃ
ಕಿಂ ವಾ ಹರೇಃ ಕಿನ್ನು ಶಿವಸ್ಯ ಸಾಕ್ಷಾತ್ ॥೨೪೫॥

೨೪೫. ಯಾವಾಗಲೂ ಸದಾನಂದರಸದ[2] ಅನುಭವವನ್ನು ಅಭೇದ ವೃತ್ತಿಯಿಂದ ತಮ್ಮಲ್ಲಿ ಮಾಡಿಕೊಂಡಿರುವ ಸತ್ಪುರುಷರಿಗೆ ಇಂದ್ರನ ಲೋಕ ದಿಂದೇನು ? ಬ್ರಹ್ಮನ ಲೋಕದಿಂದೇನು ? ಹರಿಯ ಲೋಕದಿಂದಲಾದರೂ ಏನು? ಸಾಕ್ಷಾತ್ ಶಿವನ ಲೋಕದಿಂದಲಾದರೂ ಏನು ಆಗತಕ್ಕದ್ದಿದೆ ?

---

1. ಹಿಂದಿನ ಶ್ಲೋಕದ ದೃಷ್ಟಾಂತಕ್ಕೆ ಇಲ್ಲಿ ದಾರ್ಷ್ಟಾರ್ನ್ತಿಕವನ್ನು ಕೊಟ್ಟಿದೆ. ಚಿದಾತ್ಮಕವಾದ ಬ್ರಹ್ಮದ ಸಂಪರ್ಕದಿಂದ ಅಹಂಕಾರ, ಮನಸ್ಸು, ಪ್ರಾಣ, ಇಂದ್ರಿಯಗಳು, ದೇಹ – ಇವಕ್ಕೆ ಕ್ರಮಕ್ರಮವಾಗಿ ಚೈತನ್ಯದ ಆಭಾಸವೂ ಸತ್ತೆಯ ಆಭಾಸವೂ ಬರುತ್ತದೆ. ಸ್ವತಃ ಅವಕ್ಕೆ ಸತ್ತ್ವವಾಗಲಿ ತೋರಿಕೆಯಾಗಲಿ ಇಲ್ಲ ಎಂದರ್ಥ.

2. ಶಂ.ಗೀ. ೬–೨೨ ; ವಿವೇಕಚೂಡಾಣಿಯಲ್ಲಿ ಶಬ್ದಾನುಕ್ರಮಣಿಕೆಯಲ್ಲಿ ರಸ ಎಂಬ ಶಬ್ದವನ್ನು ನೋಡಿ. 'ಸದಾನಂದರಸ' ಎಂಬ ಶಬ್ದಕ್ಕೆ ನಿತ್ಯಾನಂದೈಕರಸ ಎಂದೂ ಅರ್ಥಮಾಡಬಹುದು. ಆದರೆ ಸತ್ತು ಮತ್ತು ಆನಂದ – ಇವುಗಳು ಏಕರಸವಾಗಿರುವದು ಎಂಬ ಅಭಿಪ್ರಾಯವೂ ಗ್ರಂಥಕರ್ತರಿಗೆ ಇದ್ದಂತೆ ಕಾಣುತ್ತದೆ. ಶಂ.ಗೀ. ೬–೨೦ ರ ವ್ಯಾಖ್ಯಾನದ ಕೊನೆಯ ಭಾಗವನ್ನು ನೋಡಿ.

ಬ್ರಹ್ಮೈವ ಪಶ್ಯತಾಂ ಸರ್ವಂ ಬ್ರಹ್ಮಭೂತಾನ್ತರಾತ್ಮನಾಮ್ ।
ಕೋ ಬ್ರಹ್ಮಾ ಕೋ ನು ವಿಷ್ಣುರ್ವಾ ಕಾ ತಲ್ಲೋಕಸುಖಪ್ರಥಾ[1] ॥೨೪೭॥

೨೪೭. ಸರ್ವವೂ ಬ್ರಹ್ಮವೇ ಎಂದು ಕಂಡುಕೊಂಡು ಬ್ರಹ್ಮವೇ ಆಗಿ ಬಿಟ್ಟಿರುವ ಅಂತರಾತ್ಮನುಳ್ಳವರಿಗೆ ಬ್ರಹ್ಮವೆಂದರೆ ಯಾರು ? ವಿಷ್ಣುವೆಂದರೆ ಯಾರು ? ಅವರ ಲೋಕದ ಸುಖದ ಪ್ರತೀತಿಯಾದರೂ ಯಾವದು ?

## ಮನೋಜಯಕ್ಕೆ ಉಪಾಯವು ಬ್ರಹ್ಮಾಕಾರವೃತ್ತಿಯೇ

ಯತ್ರಾಸಕ್ತಿರ್ಮನಸ್ತತ್ರ ತದಾಕಾರೇಣ ತಿಷ್ಠತಿ ।
ಸ ಏಷ ಮನಸೋ ಧರ್ಮಃ ಸ್ವಾನುಷಕ್ತಾತ್ಮನಾ ಸ್ಥಿತಿಃ ॥೨೪೭॥

ವಿಷಯಾಕಾರತಾಪತ್ತಿವೃತ್ತಿರ್ಯೇನ ನಿಗೃಹ್ಯತೇ ।
ವಿಪಶ್ಚಿತಾ ಮನಸ್ತೇನ ನಿರ್ಜಿತಂ ನಾತ್ರ ಸಂಶಯಃ ॥೨೪೮॥

೨೪೭–೨೪೮. ಮನಸ್ಸಿಗೆ ಯಾವದರಲ್ಲಿ ಆಸಕ್ತಿಯಿರುವದೋ ಅದರಲ್ಲಿ ಅದರ ಆಕಾರದಿಂದಲೇ ಅದು ಇರುತ್ತದೆ. ಹೀಗೆ ತನಗೆ ಅಂಟಿದ ವಸ್ತುವಿನ ಸ್ವರೂಪದಿಂದ ಇದ್ದುಕೊಂಡಿರುವದೆಂಬುದು ಮನಸ್ಸಿನ ಧರ್ಮವು. ವಿಷಯಾಕಾರವಾಗಿ ಆಗುವ ವೃತ್ತಿಯನ್ನು ಯಾವ ಜಾಣನು ನಿಗ್ರಹಿಸಿಕೊಳ್ಳುವನೋ ಅವನು ಮನಸ್ಸನ್ನು ಜಯಿಸಿದಂತೆಯೇ. ಇದರಲ್ಲಿ ಸಂಶಯವಿಲ್ಲ.

ಉನ್ಮೇಷಶ್ಚ ನಿಮೇಷಶ್ಚ ಸುಕರಃ ಸ್ಯಾದ್ಯಥಾ ತಥಾ ।
ಮನೋಜಯೋಽಪಿ ಸುಕರಃ ಪುರುಷಸ್ಯಾಽಽತ್ಮವೇದಿನಃ ॥೨೪೯॥

೨೪೯. ಕಣ್ಣುಬಿಡುವದು, ಕಣ್ಣುಮುಚ್ಚಿಕೊಳ್ಳುವದು – ಇವು ಎಷ್ಟು ಸುಕರವೋ ಆತ್ಮಜ್ಞಾನಿಯಾದ ಪುರುಷನಿಗೆ ಮನೋಜಯವೂ ಅಷ್ಟೇ ಸುಕರವು.

*ಬ್ರಹ್ಮೈವಾಹಂ ನ ದೇಹಾದಿರಿತಿ ಸ್ವಂ ಬೋಧವಿಗ್ರಹಮ್ ।
ಪಶ್ಯತೋ ವಿದುಷಶ್ಚಿತ್ತಂ ವದ ಕುತ್ರ ಗಮಿಷ್ಯತಿ ॥೨೫೦॥

೨೫೦. ನಾನು ಬ್ರಹ್ಮವೇ, ದೇಹಾದಿಗಳಲ್ಲ – ಎಂದು ತನ್ನನ್ನು ಚಿನ್ಮಾತ್ರ ವಿಗ್ರಹನನ್ನಾಗಿ ಕಂಡುಕೊಂಡಿರುವ ಜ್ಞಾನಿಯು ಚಿತ್ತವು ಎಲ್ಲಿಗೆ ಹೋದೀತು, ಹೇಳು !

---

1. ಅಚ್ಚಿನ ಪುಸ್ತಕದಲ್ಲಿ 'ಪ್ರದಾ' ಎಂದಿದೆ.

* ಇಲ್ಲಿಂದ ಮುಂದಿನ ಕೆಲವು ಶ್ಲೋಕಗಳಲ್ಲಿ 'ಚಿತ್ತಂ ವದ ಕುತ್ರ ಗಮಿಷ್ಯತಿ' ಎಂಬ ಪಲ್ಲವಿ ಬರುತ್ತದೆ. ಚಿತ್ತವೂ ವಿಷಯವೂ ಬ್ರಹ್ಮವೇ ಆಗಿಬಿಟ್ಟಿರುತ್ತದೆಯಾದ್ದರಿಂದ ಚಿತ್ತವು ಹರಿದಾಡುವ ಅಂಜಿಕೆ ಅವನಿಗಿರುವದಿಲ್ಲ ಎಂಬುದು ಅಭಿಪ್ರಾಯ. ಶಂ.ಗೀ. ೨–೭೦ರ ವ್ಯಾಖ್ಯಾನವನ್ನು ನೋಡಿ.

**ವಿಷಯಾಕಾರತಾಪತ್ತಿರ್ಮೇವ ವೃತ್ತೇರ್ನಿರಸ್ಯತಃ ।**
**ಸರ್ವತೋ ವಿದುಷಶ್ಚಿತ್ತಂ ವದ ಕುತ್ರ ಗಮಿಷ್ಯತಿ ॥೨೫೧॥**

೨೫೧. ವೃತ್ತಿಯು ವಿಷಯಾಕಾರವಾಗುವದನ್ನೇ ಎಲ್ಲಾ ವಿಧದಿಂದಲೂ ತೊಲಗಿಸಿಕೊಂಡಿರುವ ಜ್ಞಾನಿಯ ಚಿತ್ತವು ಎಲ್ಲಿಗೆ ಹೋದೀತು, ಹೇಳು !

**ಶ್ರುತಂ ದೃಷ್ಟಂ ಸ್ಮೃತಂ ಸ್ಪೃಷ್ಟಂ[1] ಸರ್ವಂ ಬ್ರಹ್ಮೇತಿ ಚಿದ್ಧಿಯಾ ।**
**ಪಶ್ಯತೋ ವಿದುಷಶ್ಚಿತ್ತಂ ವದ ಕುತ್ರ ಗಮಿಷ್ಯತಿ ॥೨೫೨॥**

೨೫೨. ಕೇಳಿದ್ದು, ಕಂಡದ್ದು, ನೆನಪಿಸಿಕೊಂಡದ್ದು, ಮುಟ್ಟಿದ್ದು – ಎಲ್ಲವನ್ನೂ ಬ್ರಹ್ಮವೇ ಎಂದು ಚಿದ್ಬುದ್ಧಿಯಿಂದ ಕಾಣುತ್ತಿರುವ ಜ್ಞಾನಿಯ ಚಿತ್ತವು ಎಲ್ಲಿಗೆ ಹೋದೀತು, ಹೇಳು !

**ಅಹಮಿದಮದ ಇತಿ[2] ಕಲ್ಪನಾವಕಾಶೋ**
**ಯದಿ ಮನಸೋಽಸ್ತಿ ತದಾ ಬಹಿಃಪ್ರವೃತ್ತಿಃ ।**
**ಅಹಮಿದಮಖಿಲಂ ಸದೇವ ಶುದ್ಧಂ**
**ಪರಮಿತಿ ದೃಷ್ಟವತಃ ಕುತೋಽವಕಾಶಃ ॥೨೫೩॥**

೨೫೩. ನಾನು, ಇದು, ಅದು – ಎಂದು ಕಲ್ಪಿಸುವ ಅವಕಾಶವು ಮನಸ್ಸಿಗೆ ಇದ್ದರೆ ಆಗ ಹೊರಕ್ಕೆ ಪ್ರವೃತ್ತಿಯುಂಟಾಗುವದು. ನಾನು, ಇದೆಲ್ಲವೂ ಶುದ್ಧವಾದ ಪರಮಾತ್ಮರೂಪವಾದ ಸತ್ತೇ – ಎಂದು ಕಂಡುಕೊಂಡವನಿಗೆ (ಪ್ರವೃತ್ತಿಗೆ) ಅವಕಾಶವೆಲ್ಲಿ ?

**ನಿರನ್ತರಾಭ್ಯಾಸವಶಾತ್ಸ್ವಯಂ ಪಕ್ವೋ ಭವೇನ್ಮುನಿಃ ।**
**ಬ್ರಹ್ಮಾನನ್ದಸುಖಾಸಕ್ತ್ಯಾ ಸತಿ ಬ್ರಹ್ಮಣಿ ತಿಷ್ಠತಿ ॥೨೫೪॥**

೨೫೪. ಎಡೆಬಿಡದೆ ಅಭ್ಯಾಸಮಾಡುವದರಿಂದ[3] ಮುನಿಯಾದವನು ತಾನೇ ಪಕ್ವವಾಗುವನು. ಬ್ರಹ್ಮಾನಂದಸುಖದಲ್ಲಿಯೇ ಆಸಕ್ತಿಯುಳ್ಳವನಾಗಿ ಬ್ರಹ್ಮದಲ್ಲಿಯೇ ನಿಂತುಕೊಳ್ಳುವನು.

---

1. 'ಪುಷ್ಟಮ್' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. ಶಂ.ಗೀ. ೨–೬೬ರಲ್ಲಿ ''ಶ್ರುತಂ ಸೃಷ್ಟಂ ಸ್ಪೃಷ್ಟಂ ಮತಂ ವಿಜ್ಞಾತಂ ಸ್ವಯಂ ಚ ಸರ್ವಂ ಚಿದ್ರೂಪಂ ಬ್ರಹ್ಮೈವ'' ಎಂದಿರುವದನ್ನು ನೋಡಿ.
2. 'ಇದಮಿತಿ' ಎಂಬ ಮೂಲವನ್ನು 'ಅದ ಇತಿ' ಎಂದು ತಿದ್ದಿಕೊಂಡಿದೆ.
3. ವಿ.೩೫೯. ಶಂ. ಗೀ. ೧೮–೫೦ರಲ್ಲಿ ಅಭ್ಯಾಸದಿಂದ ವಿಜ್ಞಾನವು ಪಕ್ವವಾಗುವದೆಂಬರ್ಥದ ಸ್ಮೃತಿಯನ್ನು ಉದಾಹರಿಸಿದೆ. 'ಅಭ್ಯಾಸಾತ್ ಪಕ್ವವಿಜ್ಞಾನಃ ಕೈವಲ್ಯಂ ಲಭತೇ ನರಃ' ಎಂಬ ವಾಕ್ಯವು ಎಲ್ಲಿಯದೆಂಬುದು ತಿಳಿಯಲಿಲ್ಲ. ಜ್ಞಾನವು ಪಕ್ವವಾಗುವದೆಂದರೆ ಶುದ್ಧಸತ್ತ್ವಭಾವದಲ್ಲಿ ನಿಂತು ಇದೆಲ್ಲವೂ ನಾನೂ ಬ್ರಹ್ಮವೇ ಎಂಬ ಅರಿವು ಉಂಟಾಗುವದೆಂದು ಅಲ್ಲಿ ವಿವರಿಸಿದೆ.

ಏಷೋಽಹಮಿದಮಿತ್ಯಾದಿಪ್ರತ್ಯಯೋ ಮನ ಉಚ್ಯತೇ ।
ತದಭಾವೋಽಮನಸ್ಕತ್ವಮದ್ವಯಂ ಬ್ರಹ್ಮ ಕೇವಲಮ್ ॥೨೫೫॥

೨೫೫. ಇವನು, ನಾನು, ಇದು – ಎಂದು ಮುಂತಾಗಿರುವ ಅರಿವೇ ಮನಸ್ಸೆನಿಸುವದು. ಅದಿಲ್ಲದಿರುವದೇ ಅಮನಸ್ಕತ್ವವು ; (ಅದು) ಅದ್ವಯವಾದ ಕೇವಲ ಬ್ರಹ್ಮವೇ.[1]

ಜ್ಞಾತ್ರಾದಿಭೇದಂ ಸ್ವಯಮೇವ ಧೃತ್ವಾ
ನಾನಾತ್ಮನಾಽಥೋ ಮನ ಏವ ಜೃಮ್ಭತೇ ।
ಮನೋವಿನಾಶೇ ಸತಿ ನೈವ ಭೇದೋ
ಯಥಾ ಸುಷುಪ್ತೌ ಚ ತಥಾ ಸಮಾಧೌ ॥೨೫೬॥

೨೫೬. ಆದ್ದರಿಂದ ಜ್ಞಾತೃವೇ ಮುಂತಾದ ಭೇದವನ್ನು ತಾನೇ ಧರಿಸಿ ಕೊಂಡು ಮನಸ್ಸೇ ನಾನಾರೂಪದಿಂದ ಹರಡಿಕೊಂಡಿರುತ್ತದೆ. ಮನಸ್ಸು ವಿನಾಶವಾದರೆ ಸುಷುಪ್ತಿಯಲ್ಲಿಯೂ ಸಮಾಧಿಯಲ್ಲಿಯೂ ಹೇಗೋ ಹಾಗೆ – ಭೇದವೇ ಇರುವದಿಲ್ಲ.[2]

ಶೃಣುಷ್ವ ವಿದ್ವನ್ ಮನ ಏವ ಜೀವೋ
ಮನೋ ಹಿ ವಿಶ್ವಂ ಮನ ಏವ ಚೇಶಃ ।
ಮನೋ ಹಿ ಮಾಯಾ ಮನ ಏವ ಬನ್ಧೋ
ಮನೋಲಯೋ ಮುಕ್ತಿರಯಂ ಯಥಾರ್ಥಃ ॥೨೫೭॥

೨೫೭. ವಿವೇಕಿಯೆ ಕೇಳು : ಮನಸ್ಸೇ ಜೀವನು, ಮನಸ್ಸೇ ವಿಶ್ವವು, ಮನಸ್ಸೇ ಈಶ್ವರನು ; ಮನಸ್ಸೇ ಮಾಯೆಯು, ಮನಸ್ಸೇ ಬಂಧವು, ಮನೋ ಲಯವೇ ಮುಕ್ತಿಯು.[3] ಇದೇ ಪರಮಾರ್ಥವು.

ಜ್ಞಾತ್ರಾದಿಕಲ್ಪನಾಬೀಜೇ ವಿಲೀನೇ ಮನಸಿ ಸ್ವಯಮ್ ।
ತತಃ ಕೇವಲರೂಪೇಣ ಪೂರ್ಣಾನನ್ದಾತ್ಮನಾ ಸ್ಥಿತಃ ॥೨೫೮॥

ನಾನ್ತರಂ ನಾಪಿ ವಾ ಬಾಹ್ಯಂ ವಿದ್ವಾನ್ ಜಾನಾತಿ ಕಿಞ್ಚನ ।
ಸ ಏಷ ಪರಮೋ ಲಾಭಃ ಸೈಷಾಸ್ಯ ಪರಮಾ ಗತಿಃ ॥೨೫೯॥

ಸ ಏಷ ಪರಮಾನನ್ದೋ ಯಾ ಸ್ಥಿತಿಃ ಕೇವಲಾತ್ಮನಾ ।
ವಿದ್ವಾನನಾತ್ಮತಾದಾತ್ಮ್ಯಂ ನಿರ್ದಹ್ಯ ಜ್ಞಾನವಹ್ನಿನಾ ॥೨೬೦॥

---

1. ಅಮನಸ್ಕತ್ವವೆಂದರೆ ಪ್ರತ್ಯಗಭಿನ್ನಬ್ರಹ್ಮವೇ. 2. ವಿ. ೧೬೮, ೧೬೯.

3. ೧೮೧, ೧೮೨ – ಈ ಶ್ಲೋಕಗಳಲ್ಲಿಯೂ ಈ ಅಭಿಪ್ರಾಯವು ಬಂದಿದೆ. ಇಲ್ಲಿ ಸಮಾಧಿಯ ಅಭ್ಯಾಸದಿಂದ ಮನೋಜಯವಾಗುವದೆಂಬ ವಿಚಾರಪ್ರಸಂಗದಿಂದ ಮತ್ತೆ ಹೇಳಿದೆಯೆಂತ ಕಾಣುತ್ತದೆ.

೨೫೮–೨೬೦. ಜ್ಞಾತೃವೇ ಮುಂತಾದ ಕಲ್ಪನೆಗೆ ಕಾರಣವಾದ ಮನಸ್ಸು ತಾನೇ ವಿಲಯವಾದರೆ ಆಗ ಪೂರ್ಣಾನಂದಸ್ವರೂಪವಾದ ಕೇವಲರೂಪದಿಂದ ಇರುವವನು ಒಳಗನ್ನಾಗಲಿ ಹೊರಗನ್ನಾಗಲಿ ಅರಿಯದೆ ಇರುತ್ತಾನೆ. ವಿವೇಕಿಯಾದವನು ಅನಾತ್ಮತಾದಾತ್ಮ್ಯವನ್ನು ಜ್ಞಾನವೆಂಬ ಬೆಂಕಿಯಿಂದ ಸುಟ್ಟು ಕೇವಲಾತ್ಮನಲ್ಲಿ ನಿಲ್ಲುವನು. ಆ ಇದೇ ಪರಮಲಾಭವು, ಆ ಇದೇ ಪರಮಗತಿಯು, ಆ ಇದೇ ಪರಮಾನಂದವು.[1]

## ಜೀವನ್ಮುಕ್ತನ ಲಕ್ಷಣ

**ಜೀವನ್ನೇವ ವಿನಿರ್ಮುಕ್ತೋ ಯತೋ ಬ್ರಹ್ಮಾತ್ಮನಾ ಸ್ಥಿತಃ ।**
**ಬ್ರಹ್ಮಾತ್ಮನಾ ವಸನ್ ವಿದ್ವಾನ್ ಮುಕ್ತಃ ಸ್ಥೂಲಾದ್ಯುಪಾಧಿಭಿಃ ॥೨೬೧॥**

೨೬೧. ಏಕೆಂದರೆ ಬ್ರಹ್ಮರೂಪದಿಂದ ಇರುವಾತನು ಬದುಕಿರುವಾಗಲೇ ಸಂಪೂರ್ಣವಾಗಿ ಮುಕ್ತನಾಗಿರುತ್ತಾನೆ. ಬ್ರಹ್ಮರೂಪದಿಂದ ಇರುವ ಜ್ಞಾನಿಯು ಸ್ಥೂಲವೇ ಮುಂತಾದ ಉಪಾಧಿಗಳಿಂದ[2] ಮುಕ್ತನಾಗಿರುತ್ತಾನೆ.

**ಲೋಕದೃಷ್ಟ್ಯಾಪ್ಯಸೌ ಜೀವನ್ಮುಕ್ತ ಏವಾಸ್ತಸಂಸೃತಿಃ ।**
**ಅಯಮೇವ ಹಿ ಸಂಸಾರೋ ಯೋಽಹಂಮಮಮತಿಃ ಸತಾಮ್ ॥೨೬೨॥**

೨೬೨. ಸಂಸಾರವನ್ನು ನಾಶಮಾಡಿಕೊಂಡಿರುವ ಈತನು ಲೋಕದೃಷ್ಟಿಯಿಂದಲೂ[3] ಜೀವನ್ಮುಕ್ತನೇ. ಅಹಂಮಮಮತಿ (ನಾನು, ನನ್ನದು – ಎಂಬ ಬುದ್ಧಿ)ಯೇ ಅಲ್ಲವೆ, ಸತ್ಪುರುಷರ ಮತದಲ್ಲಿ ಸಂಸಾರವೆಂಬುದು ?

**ದೇಹತದ್ಧರ್ಮತತ್ಕರ್ಮತದವಸ್ಥಾಸು ವಿಭ್ರಮಾತ್ ।**
**ಜೀವತಾ ಯತ್ತು ಕರ್ತವ್ಯಂ ಜೀವಂಸ್ತನ್ನ ಕರೋತಿ ಯಃ ॥೨೬೩॥**

**ತಂ ವದನ್ತಿ ಜನಾಃ ಸರ್ವೇ ಜೀವನ್ಮುಕ್ತ ಇತಿ ಕ್ಷಿತೌ ।**
**ಯಥಾ ಮುಕ್ತಸ್ತಥಾ ಜೀವನ್ ಬ್ರಹ್ಮಣ್ಯೇವಾತ್ಮತಾಧಿಯಾ ॥೨೬೪॥**

**ಯೋಽಹನ್ತಾಂ ಮಮತಾಂ ದೇಹೇ ದೇಹಧರ್ಮೇ ಪರಿಗ್ರಹೇ ।**
**ನ ಕುರ್ಯಾತ್ತಮಿಮಂ ಪ್ರಾಹುರ್ಜೀವನ್ಮುಕ್ತಂ ಮಹರ್ಷಯಃ ॥೨೬೫॥**

---

1. ಬೃ.೪–೩–೨೧ ಮತ್ತು ೩೨ರಲ್ಲಿ ಸುಷುಪ್ತಿಯ ವಿಷಯಕ್ಕೆ ಹೇಳಿರುವದನ್ನು ನೋಡಿ.
2. ತಾನು ಬ್ರಹ್ಮವೇ ಎಂಬ ಜ್ಞಾನವುಂಟಾಗಿರುವವನಿಗೆ ಸ್ಥೂಲ, ಸೂಕ್ಷ್ಮ, ಕಾರಣ – ಎಂಬ ಮೂರೂ ದೇಹಗಳು ಇರುವದಿಲ್ಲವಾದ್ದರಿಂದ ಅವನು ಮುಕ್ತನು.
3. ಜ್ಞಾನಿಯ ದೃಷ್ಟಿಯಿಂದ ದೇಹತ್ರಯವಿಲ್ಲವೆಂಬ ಕಾರಣದಿಂದಲೇ ಅಲ್ಲ ; ಅವನು ದೇಹಾದಿಗಳಲ್ಲಿ ನಾನುನನ್ನದೆಂಬ ಬುದ್ಧಿಯನ್ನು ಮಾಡುವದಿಲ್ಲವೆಂಬ ಕಾರಣದಿಂದ ಲೋಕದೃಷ್ಟಿಯಿಂದಲೂ ಜೀವನ್ಮುಕ್ತನು ಎಂದರ್ಥ.

೨೬೩–೨೬೫. ಬದುಕಿರುವಾತನು ದೇಹ, ಅದರ ಧರ್ಮ, ಅದರ ಕರ್ಮ, ಅದರ ಅವಸ್ಥೆಗಳು[1]– ಇವುಗಳಲ್ಲಿ ತಾನುತನ್ನದೆಂಬ ಭ್ರಾಂತಿಯಿಂದ ಯಾವದನ್ನು ಮಾಡಬೇಕೋ, ಅದನ್ನು ಯಾವನು ಮಾಡದೆ ಇರುವನೋ, ಅವನನ್ನು ಭೂಲೋಕದಲ್ಲಿ ಎಲ್ಲಾ ಜನರೂ ಜೀವನ್ಮುಕ್ತನು ಎಂದು ಕರೆಯುವರು. ಮುಕ್ತನಂತೆಯೇ ಬದುಕಿರುವಾಗಲೂ ಬ್ರಹ್ಮದಲ್ಲಿಯೇ ತಾನೆಂಬ ಬುದ್ಧಿಯಿಂದ ಯಾವನು ದೇಹದಲ್ಲಿಯೂ ದೇಹಧರ್ಮದಲ್ಲಿಯೂ ತನ್ನದೆಂಬ ಸ್ವತ್ತಿನಲ್ಲಿಯೂ ನಾನುನನ್ನದೆಂಬ ಭಾವವನ್ನು ಮಾಡಿಕೊಳ್ಳದೆ ಇರುವನೋ[2] ಅಂಥ ಇವನನ್ನು ಮಹರ್ಷಿಗಳು ಜೀವನ್ಮುಕ್ತನು ಎಂದು ಕರೆಯುತ್ತಾರೆ.

**ದೇಹೇನ್ದ್ರಿಯಾದೌ ಕರ್ತವ್ಯೇ ಮಮಾಹಂಭಾವವರ್ಜಿತಃ ।**
**ಔದಾಸೀನ್ಯೇನ ಯಸ್ತಿಷ್ಠೇಜ್ಜೀವನ್ಮುಕ್ತಃ ಸ ಉಚ್ಯತೇ[3] ॥೨೬೬॥**

೨೬೬. ದೇಹ, ಇಂದ್ರಿಯಗಳು – ಮುಂತಾದವುಗಳಲ್ಲಿಯೂ ಮಾಡಬೇಕಾಗಿರುವ ಕರ್ಮದಲ್ಲಿಯೂ ನಾನು–ನನ್ನದು ಎಂಬ ಭಾವವಿಲ್ಲದೆ ಯಾವನು ಔದಾಸೀನ್ಯದಿಂದಿರುವನೋ ಅವನು ಜೀವನ್ಮುಕ್ತನೆನಿಸುವನು.

**ಬ್ರಹ್ಮೈವೇದಂ ಸರ್ವಮಿತ್ಯೇವ ಸಮ್ಯಕ್**
**ಪಶ್ಯನ್ ಮನ್ವಾನೋ ವಿಜಾನನ್ ಮಹಾತ್ಮಾ ।**
**ಬ್ರಹ್ಮಣ್ಯೇವ ಬ್ರಹ್ಮರೂಪೇಣ ತಿಷ್ಠನ್**
**ಬ್ರಹ್ಮಾನನ್ದಂ ಬ್ರಹ್ಮವಿದ್ಭ್ಯೇಷ ಭುಙ್ಕ್ತೇ ॥೨೬೭॥**

೨೬೭. ಇದೆಲ್ಲವೂ ಬ್ರಹ್ಮವೇ ಎಂದು ಚೆನ್ನಾಗಿ ಕಂಡುಕೊಂಡು, ಮನನ ಮಾಡುತ್ತಾ, ಅರಿತುಕೊಳ್ಳುತ್ತಾ[4] ಮಹಾತ್ಮನಾದ ಈ ಬ್ರಹ್ಮಜ್ಞಾನಿಯು ಬ್ರಹ್ಮದಲ್ಲಿಯೇ ಬ್ರಹ್ಮರೂಪದಿಂದ ಇದ್ದುಕೊಂಡು ಬ್ರಹ್ಮಾನಂದವನ್ನೇ ಅನುಭವಿಸುತ್ತಿರುವನು.

**ಏಷ ವಿದ್ವಾನಾತ್ಮರತಿರಾತ್ಮಜ್ಯೋತಿರಶೇಷದೃಕ್ ।**
**ಆತ್ಮಕ್ರೀಡ ಆತ್ಮಮಿಥುನ ಆತ್ಮಾನನ್ದಃ ಸದಾ ಮುನಿಃ ॥೨೬೮॥**

**ಆತ್ಮತೃಪ್ತ ಆತ್ಮಸುಖಿ ಆತ್ಮಾರಾಮೋ ವಿನಿಷ್ಕ್ರಿಯಃ ।**
**ಜೀವನ್ನೇವ ವಿಮುಕ್ತಃ ಸನ್ ಖೇಲತ್ಯಾನನ್ದವಾರಿಧೌ ॥೨೬೯॥**

1. ದೇಹತದ್ಧರ್ಮತತ್ಕರ್ಮತದವಸ್ಥಾ – ಎಂಬ ಶಬ್ದಯೋಜನೆ ಗ್ರಂಥಕರ್ತರಿಗೆ ಮೆಚ್ಚಾದದ್ದು. ವಿ. ೧೫೬, ಶಂ.ಗೀ.೨–೨೨, ೬–೨೯ – ಮುಂತಾದವುಗಳನ್ನು ನೋಡಿ.
2. ವಿ. ೪೫೨.
3. ವಿ. ೪೩೩ರಲ್ಲಿ ಇದೇ ಶ್ಲೋಕವಿದೆ ; ಅಲ್ಲಿ 'ಸ ಜೀವನ್ಮುಕ್ತಲಕ್ಷಣಃ' ಎಂದು ಕೊನೆಯ ಪಾದ.
4. ಛಾಂ. ೭–೨೬–೧.

೨೬೮–೨೬೯. ಈ ಜ್ಞಾನಿಯು ಆತ್ಮನಲ್ಲಿಯೇ ರಮಿಸುತ್ತಾ, ಆತ್ಮನನ್ನೇ ಜ್ಯೋತಿಯಾಗಿ ಮಾಡಿಕೊಂಡು, ಎಲ್ಲವನ್ನೂ ನೋಡುತ್ತಾ ಆತ್ಮನಲ್ಲಿಯೇ ಕ್ರೀಡಿಸುತ್ತಾ[1] ಆತ್ಮನಲ್ಲಿಯೇ ಮಿಥುನಭಾವವನ್ನು ಹೊಂದಿ ಯಾವಾಗಲೂ ಆತ್ಮನಲ್ಲಿಯೇ ಆನಂದವನ್ನು ಕಾಣುತ್ತಾ ಮುನಿಯಾಗಿ, ಆತ್ಮತೃಪ್ತನಾಗಿ ಆತ್ಮಸುಖಿನಾಗಿ ಆತ್ಮಾರಾಮನಾಗಿ ಯಾವ ಕ್ರಿಯೆಯೂ ಇಲ್ಲದೆ ಬದುಕಿರುವಾಗಲೆ ವಿಮುಕ್ತನಾಗಿ ಆನಂದಸಮುದ್ರದಲ್ಲಿ ಆಡುತ್ತಿರುವನು.

ಅಹಂ ಮಮೇತಿ ವ್ಯವಹಾರತೋ ಯೋ
ಮುಕ್ತಃ ಸ ಜೀವನ್ ಯದಿ ಮುಕ್ತ ಇಷ್ಯತೇ ।
ಮುಕ್ತಸ್ಯ ಬದ್ಧಸ್ಯ[2] ವಿಶೇಷ ಏಷ
ದೇಹಾದ್ಯಹಂಭಾವನಿವೃತ್ತಿರೇವ ॥೨೭೦॥

೨೭೦. ನಾನು–ನನ್ನದು ಎಂಬ ವ್ಯವಹಾರದಿಂದ ಮುಕ್ತನಾದವನೇ ಜೀವನ್ಮುಕ್ತನು ಎಂದು ಒಪ್ಪಿದರೆ ಮುಕ್ತನಿಗೂ ಬದ್ಧನಿಗೂ ಈ ದೇಹಾದಿಗಳಲ್ಲಿ ಅಹಂಭಾವವು ಹೋದದ್ದೇ ವಿಶೇಷವೆಂದಾಯಿತು.

*ವರ್ತಮಾನೇಽಪಿ ದೇಹೇಽಸ್ಮಿಂಶ್ಛಾಯಾವದನುವರ್ತಿನಿ ।
ಅಹನ್ತಾಮಮತಾಭಾವೋ ಜೀವನ್ಮುಕ್ತಸ್ಯ ಲಕ್ಷಣಮ್ ॥೨೭೧॥

೨೭೧. ನೆರಳಿನಂತೆ ತನ್ನನ್ನು ಅನುಸರಿಸಿಕೊಂಡುಬರುತ್ತಿರುವ ಈಗಿರುವ ದೇಹದಲ್ಲಿಯೂ ನಾನು, ನನ್ನದು– ಎಂಬ ಭಾವವಿಲ್ಲದಿರುವದೇ ಜೀವನ್ಮುಕ್ತನ ಲಕ್ಷಣವು.

+ಅತೀತಾನನುಸಂಧಾನಂ ಭವಿಷ್ಯದವಿಚಾರಣಮ್ ।
ಔದಾಸೀನ್ಯಮಪಿ ಪ್ರಾಪ್ತೇ ಜೀವನ್ಮುಕ್ತಸ್ಯ ಲಕ್ಷಣಮ್ ॥೨೭೨॥

1. ಛಾಂ. ೭–೨೫–೨ರಲ್ಲಿ ಈ ಶ್ಲೋಕಗಳ ಅರ್ಥವಿದೆ. ಶಂ.ಗೀ. ೨–೬೯ರಲ್ಲಿ 'ಆತ್ಮರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಜ್ಯೋತಿರಾತ್ಮಾನನ್ದೋ ಭೂತ್ವಾ ಸರ್ವದಾ ಆಸ್ತೇ' – ಎಂಬ ವಾಕ್ಯವಿದೆ. ಗೀ. ೫–೨೪ ನೋಡಿ.

2. 'ಬದ್ಧಾದ್ಧಿ' ಎಂದಿದ್ದರೆ ಚೆನ್ನಾಗಿತ್ತು. 'ಮುಕ್ತಸ್ಯ ಬದ್ಧಸ್ಯ ಚ' ಎಂದು ಈಗ ಅನ್ವಯಿಸಿಕೊಳ್ಳಬೇಕಾಗಿದೆ.

* ವಿ. ೪೨೮ರಲ್ಲಿ ಇದೇ ಶ್ಲೋಕವಿದೆ ; ಅದಕ್ಕನುಗುಣವಾಗಿ ಇಲ್ಲಿಯೂ 'ಛಾಯಾವದನುವರ್ತಿನಿ' ಎಂದು ತಿದ್ದಿಕೊಂಡಿದೆ. ಛಾಯಾಶರೀರದ ದೃಷ್ಟಾಂತಕ್ಕೆ ವಿ. ೧೬೨, ೪೧೦ – ಇವನ್ನು ನೋಡಿ. ಇಲ್ಲಿಂದ ಮುಂದಕ್ಕಿರುವ ನಾಲ್ಕು ಶ್ಲೋಕಗಳಲ್ಲಿ 'ಜೀವನ್ಮುಕ್ತಸ್ಯ ಲಕ್ಷಣಮ್' ಎಂಬ ಪಲ್ಲವಿಯಿದೆ.

\+ ವಿ. ೪೨೯ರಲ್ಲಿ ಇದೇ ಶ್ಲೋಕವಿದೆ ; ಅದಕ್ಕನುಗುಣವಾಗಿ 'ಔದಾಸೀನ್ಯಮಪಿ' ಎಂದು ತಿದ್ದಿಕೊಂಡಿದೆ.

೨೭೨. ಹಿಂದೆ ಆಗಿಹೋಗಿರುವದನ್ನು ಸ್ಮರಿಸಿಕೊಳ್ಳದೆ ಇರುವದು, ಮುಂದೆ ಆಗುವದನ್ನು ವಿಚಾರಮಾಡದೆ ಇರುವದು. ಈಗ ಬಂದೊದಗಿದ್ದರಲ್ಲಿ ಉದಾಸೀನನಾಗಿರುವದು – ಇದೇ ಜೀವನ್ಮುಕ್ತನ ಲಕ್ಷಣವು.

***ಗುಣದೋಷವಿಶಿಷ್ಟೇಽಸ್ಮಿನ್ ಸ್ವಭಾವೇನ ವಿಲಕ್ಷಣೇ ।**
**ಸರ್ವತ್ರ ಸಮದರ್ಶಿತ್ವಂ ಜೀವನ್ಮುಕ್ತಸ್ಯ ಲಕ್ಷಣಮ್ ॥೨೭೩॥**

೨೭೩. ಗುಣದೋಷಗಳಿಂದ ಕೂಡಿ ಸ್ವಭಾವದಿಂದಲೇ ವಿಲಕ್ಷಣವಾಗಿರುವ ಈ (ಪ್ರಪಂಚದಲ್ಲಿ) ಎಲ್ಲೆಲ್ಲಿಯೂ ಸಮದರ್ಶಿಯಾಗಿರುವದು ಜೀವನ್ಮುಕ್ತನ ಲಕ್ಷಣ.

**+ಇಷ್ಟಾನಿಷ್ಟಾರ್ಥಸಂಪ್ರಾಪ್ತೌ ಸಮದರ್ಶಿತಯಾಽಽತ್ಮನಿ ।**
**ಉಭಯತ್ರಾವಿಕಾರಿತ್ವಂ ಜೀವನ್ಮುಕ್ತಸ್ಯ ಲಕ್ಷಣಮ್ ॥೨೭೪॥**

೨೭೪. ಇಷ್ಟವಾದ, (ಅಥವಾ) ಅನಿಷ್ಟವಾದ ಅರ್ಥವು ಬಂದೊದಗಿದರೆ (ಎರಡರಲ್ಲಿಯೂ) ಸಮದರ್ಶಿಯಾಗಿದ್ದುಕೊಂಡು ಎರಡರಿಂದಲೂ ವಿಕಾರವನ್ನು ಹೊಂದದೆ ಇರುವದು ಜೀವನ್ಮುಕ್ತನ ಲಕ್ಷಣವು.

## ಆತ್ಮಾನಂದದ ಹೆಚ್ಚುಗಾರಿಕೆ

**ಯಸ್ಯಾಂಶಲೇಶಲವವಿಸ್ಫುರಣೇನ ವಿಶ್ವ–[2]**
**ಮಾನನ್ದತಿ ಪ್ರಚುರಸೌಖ್ಯವದಾವಿರಿಞ್ಚಮ್ ।**
**ತದ್ಬ್ರಹ್ಮ ಪೂರ್ಣಸುಖಮಾತ್ಮತಯೋಪಲಭ್ಯ–**
**ಕಸ್ತತ್ತ್ವವಿದ್ ಭ್ರಮಿತುಮಿಚ್ಛತಿ ಶೂನ್ಯಕಲ್ಪೇ ॥೨೭೫॥**

೨೭೫. ಯಾವದರ ಅಂಶದ ಲೇಶದ ಲವವು ತೋರಿಕೊಂಡಮಾತ್ರದಿಂದ ಬ್ರಹ್ಮನವರೆಗಿನ ಪ್ರಪಂಚವೆಲ್ಲವೂ ಪ್ರಚುರಸೌಖ್ಯವುಳ್ಳದ್ದಾಗಿ ಆನಂದಿಸುವದೋ ಆ ಪೂರ್ಣಸುಖವಾದ ಬ್ರಹ್ಮವನ್ನು ತನ್ನ ಆತ್ಮನೆಂದು ಅರಿತುಕೊಂಡ ಬಳಿಕ ಶೂನ್ಯಕಲ್ಪವಾದ (ವಿಷಯಸುಖದಲ್ಲಿ) ಯಾವ ತತ್ತ್ವಜ್ಞಾನಿಯುತಾನೆ ತೊಳಲುವದಕ್ಕೆ ಇಚ್ಛಿಸಿಯಾನು ?

**ಬಾಲೋಽಪಿ ಶರ್ಕರಾಂ ಲಬ್ಧ್ವಾ ತಯಾ ನನ್ದತಿ ನೋ ಮೃದಾ ।**
**ಕಥಂ ನು ಬ್ರಹ್ಮವಿದ್ ಬ್ರಹ್ಮ ಹಿತ್ವಾಽಽನನ್ದೇನ್ಮೃಷಾತ್ಮನಿ ॥೨೭೬॥**

---

* ವಿ. ೪೩೦ರಲ್ಲಿ ಇದೇ ಶ್ಲೋಕ. + ವಿ. ೪೩೧ರಲ್ಲಿ ಇದೇ ಶ್ಲೋಕ.

2. ಮನೀಷಾಪಂಚಕದಲ್ಲಿರುವ 'ಯತ್ಸೌಖ್ಯಾಂಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾಃ' ಎಂಬ ಶ್ಲೋಕಪಾದಕ್ಕೆ ಈ ಶ್ಲೋಕಾರ್ಥವನ್ನು ಹೋಲಿಸಿ.

೨೭೬. ಹುಡುಗನು ಕೂಡ ಸಕ್ಕರೆಯು ಸಿಕ್ಕಿದರೆ ಅದರಿಂದಲೇ ಆನಂದಿಸುತ್ತಿರುವನೇ ಹೊರತು ಮಣ್ಣಿನಿಂದ ಆನಂದಿಸುವದಿಲ್ಲ. (ಹೀಗಿರುವಲ್ಲಿ) ಬ್ರಹ್ಮಜ್ಞಾನಿಯು ಬ್ರಹ್ಮವನ್ನು ಬಿಟ್ಟು ಮಿಥ್ಯಾರೂಪವಾದ (ವಸ್ತುವಿನಲ್ಲಿ) ಹೇಗೆ ತಾನೆ ಆನಂದಿಸಿಯಾನು ?

**ಸ್ವಾತ್ಮಾನಮೇವ ವಿಷಯೇಷು ವಿಭಾವ್ಯ ತತ್ರಾ-**
**ನನ್ದಂ ವಹಾಮ ಇತಿ ಚಾऽऽತ್ಮನಿ ಭಾವನೀಯಮ್ ।**
**ಕ್ಷೀರಂ ಸ್ವಕೀಯಮುಪಗೃಹ್ಯ ಪರಸ್ಯ ಗೇಹೇ**
**ಪಾತುಂ ಕ[1] ಇಚ್ಛತಿ ಜನೋ ಗುರುಲಾಘವಜ್ಞಃ ॥೨೭೭॥**

೨೭೭. ನನ್ನ ಆತ್ಮನನ್ನೇ ವಿಷಯಗಳಲ್ಲಿರುವಂತೆ ಭಾವಿಸಿಕೊಂಡು ಅವುಗಳಲ್ಲಿ ಆನಂದವನ್ನು ಹೊಂದುತ್ತೇವೆ – ಎಂದು ತನ್ನಲ್ಲಿಯೇ ಭಾವಿಸಿಕೊಳ್ಳಬೇಕು.[2] ತನ್ನ ಹಾಲನ್ನೇ ತೆಗೆದುಕೊಂಡು ಹೋಗಿ ಮತ್ತೊಬ್ಬರ ಮನೆಯಲ್ಲಿ ಕುಡಿಯಬೇಕೆಂದು ಗುರುಲಾಘವವನ್ನರಿತ[3] ಯಾವನುತಾನೆ ಇಚ್ಛಿಸಿಯಾನು ?

## ವಾಸನಾಕ್ಷಯೋಪದೇಶ

**ಸಂಸಾರಕಾರಣಂ ವಿದ್ವನ್ ವಾಸನೈವಾತ್ರ ದೇಹಿನಾಮ್ ।**
**ಶಕ್ತಿಃ ಸಾ ಪ್ರಕೃತಿಃ ಸೈವಾವಿದ್ಯಾ ವಿಕ್ಷೇಪನಾಮಿಕಾ ॥೨೭೮॥**

೨೭೮. ಎಲೈ ಜಾಣನೆ, ಇಲ್ಲಿರುವ ದೇಹಿಗಳ ಸಂಸಾರಕ್ಕೆ ಕಾರಣವು ವಾಸನೆಯೇ. ಅದೇ ಶಕ್ತಿ; (ಅದೇ) ಪ್ರಕೃತಿಯು. ಅದೇ ವಿಕ್ಷೇಪವೆಂಬ ಹೆಸರಿನ ಅವಿದ್ಯೆ.[4]

**ಸುಷುಪ್ತೇ ಪುನರಾಯಾನ್ತಿ ಸತ್ಸಂಪದ್ಯಾಪಿ ಜನ್ತವಃ ।**
**ಆವೃತೇರ್ವಾಸನಾಯಾಶ್ಚ ಬಲೇನೈವ ಚ ಕರ್ಮಣಾ ॥೨೭೯॥**

೨೭೯. ಸುಷುಪ್ತಿಯಲ್ಲಿ ಸದ್ರೂಪವಾದ ಬ್ರಹ್ಮವನ್ನು ಸೇರಿ ಒಂದಾದರೂ ಜೀವರು ಆವರಣ[5], ವಾಸನೆ – ಇವುಗಳ ಬಲದಿಂದಲೂ ಕರ್ಮದಿಂದಲೂ ಮತ್ತೂ ಹೊರಕ್ಕೆ ಬರುತ್ತಾರೆ.

1. 'ಸ ಇಚ್ಛತಿ' ಎಂಬ ಅಚ್ಚಿನ ಪಾಠವನ್ನು ಹೀಗೆ ತಿದ್ದಿಕೊಂಡಿದೆ. 2. ವಿಷಯಾನಂದವೆಂಬುದು ಆತ್ಮಾನಂದದ ನೆರಳೇ. 3. ತನ್ನ ಆನಂದವನ್ನು ತನ್ನಲ್ಲಿ ಕಂಡುಕೊಳ್ಳುವದರಲ್ಲಿ ಲಾಘವವಿದೆ ; ಹೊರಗಿನ ವಿಷಯಗಳಲ್ಲಿ ಕಾಣುವದಕ್ಕೆ ಯತ್ನಿಸುವದರಲ್ಲಿ ಗೌರವವಿದೆ.

4. ವಾಸನೆಯೇ ಜಗತ್ಕಾರಣವಾದ ಶಕ್ತಿ ಅಥವಾ ಲಯಲಕ್ಷಣಾವಿದ್ಯೆ ; ಅದೇ ವಿಕ್ಷೇಪರೂಪವಾಗಿ ದ್ವೈತರೂಪದಿಂದ ತೋರಿಕೊಳ್ಳುವ ಅವಿದ್ಯೆ – ಎಂದು ಅಭಿಪ್ರಾಯ. ಶಂ. ಗೀ. ೫–೨೯. 5. ಆವರಣದ ಜೊತೆಗೆ ವಾಸನೆಯನ್ನು ಹೇಳಿರುವದರಿಂದ ಮಿಥ್ಯಾಜ್ಞಾನಸಂಸ್ಕಾರಕ್ಕಿಂತ ಬೇರೆಯಾಗಿ ಅವಿದ್ಯಾವರಣವನ್ನು ಇಲ್ಲಿ ಒಪ್ಪಿದಂತೆ ಆಗುತ್ತದೆ. ಶಂ.ಗೀ. ೨–೬೯ರಲ್ಲಿ 'ಅವಿದ್ಯಾಂ ತತ್ಕಾರ್ಯಂ ಚ ಅಧ್ಯಾಸಾದಿಕಂ ನಿರ್ಮೂಲ್ಯ' ಎಂಬ ವಾಕ್ಯವನ್ನು ನೋಡಿ.

ಸ್ವವಾಸನಾಪ್ರೇರಿತ ಏವ ವರ್ತತೇ
ಸರ್ವೋಽಪಿ ಲೋಕಃ ಸಕಲಕ್ರಿಯಾಸು ।
ಸಂಸಾರಬನ್ಧಃ ಖಲು ವಾಸನಾಕೃತ–
ಸ್ತನ್ಮುಕ್ತಿರೇವಾಽಽತ್ಮವಿದಾಂ ವಿಮುಕ್ತಿಃ ॥೨೮೦॥

೨೮೦. ತನ್ನ ವಾಸನೆಯಿಂದ ಪ್ರೇರಿತನಾಗಿಯೇ ಪ್ರತಿಯೊಬ್ಬ ಮನುಷ್ಯನೂ ಎಲ್ಲಾ ಕ್ರಿಯೆಗಳಲ್ಲಿಯೂ ತೊಡಗುತ್ತಿರುವನು. ಸಂಸಾರಬಂಧವು ವಾಸನಾಕೃತವೇ ಆಗಿರುತ್ತದೆ. ಅದರಿಂದ ಬಿಡುಗಡೆಯನ್ನು ಹೊಂದುವದೇ ಆತ್ಮಜ್ಞನಿಗೆ ಮುಕ್ತಿಯು.[1]

ವಾಸನಾತಾನವಂ ರಾಮ ಮುಕ್ತಿರಿತ್ಯಾತ್ಮವಿತ್ತಮಃ ।
ವಸಿಷ್ಠಃ ಪ್ರಾಹ ಯತ್ತಸ್ಮಾತ್ಕರ್ತವ್ಯೋ ವಾಸನಾಕ್ಷಯಃ ॥೨೮೧॥

೨೮೧. 'ಎಲೈ ರಾಮನೆ, ವಾಸನೆಯನ್ನು ಸವೆಯಿಸಿಕೊಳ್ಳುವದೇ ಮುಕ್ತಿಯು' ಎಂದು ಆತ್ಮಜ್ಞಾನಿಶ್ರೇಷ್ಠವಾದ ವಸಿಷ್ಠನು ಹೇಳಿರುತ್ತಾನೆ[2] ; ಆದ್ದರಿಂದ ವಾಸನಾಕ್ಷಯವನ್ನು ಮಾಡಿಕೊಳ್ಳಬೇಕು.

ಬ್ರಹ್ಮಾತ್ಮೈಕತ್ವಬೋಧೇನ ವಿನಷ್ಟಾವರಣಸ್ಯ ತು ।
ವಾಸನಾನಾಂ ಕ್ಷಯಃ ಕರ್ತುಂ ಶಕ್ಯತೇ ಬ್ರಹ್ಮನಿಷ್ಠಯಾ ॥೨೮೨॥

೨೮೨. ಬ್ರಹ್ಮಾತ್ಮೈಕತ್ವಜ್ಞಾನದಿಂದ ಆವರಣವು ನಾಶವಾದವನಿಗೇ ಬ್ರಹ್ಮನಿಷ್ಠೆಯಿಂದ ವಾಸನೆಗಳ ಕ್ಷಯವನ್ನು ಮಾಡಿಕೊಳ್ಳುವದು ಶಕ್ಯವಾಗುತ್ತದೆ.[3]

ನಿಃಶೇಷಾವೃತಿವಿಧ್ವಂಸೇ ವಾಸನಾಸನ್ತತಿಕ್ಷಯೇ ।
ಯತೇರ್ವಿದೇಹಕೈವಲ್ಯಂ ಸ್ವಯಂ ಸಿಧ್ಯತಿ ನಾನ್ಯಥಾ ॥೨೮೩॥

೨೮೩. ನಿಃಶೇಷವಾಗಿ ಆವರಣವು ನಾಶವಾದರೆ, ವಾಸನಾಪ್ರವಾಹವೂ ಕ್ಷಯವಾದರೆ, ಯತಿಯಾದವನಿಗೆ **ವಿದೇಹಕೈವಲ್ಯವು**[4] ಸಿದ್ಧಿಸುತ್ತದೆಯೇ ಹೊರತು ಬೇರೆಪ್ರಕಾರದಿಂದ ಸಿದ್ಧಿಸದು.

## ತ್ರಿವಿಧಶರೀರನಾಶೋಪದೇಶ

ಸ್ಥೂಲಸ್ಯಾಪಿ ಚ ಸೂಕ್ಷ್ಮಸ್ಯ ಕಾರಣಸ್ಯಾಪಿ ವರ್ಷ್ಮಣಃ ।
ಸಮ್ಯಗ್ವಿನಾಶಃ ಕರ್ತವ್ಯಸ್ತತ್ತನ್ನಿಯತಸಾಧನೈಃ ॥೨೮೪॥

1. ಯೋ.ವಾ.೪–೫೭–೧೯ ; ವಿ. ೨೬೯, ೩೧೪.

2. ಯೋ.ವಾ.೨–೨–೫ ; ವಿ. ೨೬೪.    3. ವಿ. ೨೭೪.

4. ಚಿದಾನಂದೈಕರಸಬ್ರಹ್ಮರೂಪದಿಂದ ಇದ್ದುಕೊಂಡಿರುವದೇ ವಿದೇಹಮುಕ್ತಿ ಶಂ. ಗೀ. ೨–೬೬; ಅವಿದ್ಯಾಪ್ರಪಞ್ಚೋಪಶಮವೇ ವಿದೇಹಮುಕ್ತಿ ಶಂ.ಗೀ. ೨–೭೦ ಇವೇ ಮುಂತಾದಕಡೆಗಳಲ್ಲಿ 'ವಿದೇಹಮುಕ್ತಿ' ಶಬ್ದಕ್ಕೆ ಗ್ರಂಥಕರ್ತರು ತಮ್ಮದೇ ಆದ ಅರ್ಥವನ್ನು ಇಟ್ಟುಕೊಂಡಿರುತ್ತಾರೆ.

೨೮೪. ಸ್ಥೂಲದ, ಸೂಕ್ಷ್ಮದ ಮತ್ತು ಕಾರಣಶರೀರದ ಸಂಪೂರ್ಣ ನಾಶವನ್ನು ಅದದಕ್ಕೆ ಗೊತ್ತಾಗಿರುವ ಸಾಧನಗಳಿಂದ ಮಾಡಿಕೊಳ್ಳಬೇಕು.

**ಸ್ಥೂಲಸ್ತ್ವನ್ನಮಯೋ ದೇಹಃ ಸೂಕ್ಷ್ಮಃ ಸ್ಯಾದ್ವಾಸನಾಮಯಃ ।**
**ಮೂಲಾಜ್ಞಾನಂ ಯತ್ತದೇವ ಶರೀರಂ ಕಾರಣಾಭಿದಮ್ ॥೨೮೫॥**

೨೮೫. ಸ್ಥೂಲವೆಂದರೆ ಅನ್ನಮಯಶರೀರವು ; ಸೂಕ್ಷ್ಮವೆಂದರೆ ವಾಸನಾಮಯಶರೀರವು. ಮೂಲಾಜ್ಞಾನವೆಂಬುದಿದೆಯಲ್ಲಾ, ಅದೇ ಕಾರಣಶರೀರವೆಂಬ ಹೆಸರುಳ್ಳದ್ದು.[1]

**ಬ್ರಹ್ಮಾತ್ಮೈಕತ್ವವಿಜ್ಞಾನಶಕ್ತ್ಯೈವ ಬ್ರಹ್ಮವಿದ್ಯತಿಃ ।**
**ನಾಶಯೇತ್ಕಾರಣಂ ದೇಹಮಕುರ್ವನ್ ಕಿಞ್ಚಿದನ್ತರಮ್ ॥೨೮೬॥**

೨೮೬. ಬ್ರಹ್ಮಾತ್ಮೈಕತ್ವಜ್ಞಾನದ ಬಲದಿಂದಲೇ ಬ್ರಹ್ಮಜ್ಞಾನಿಯಾದ ಯತಿಯು ಕಾರಣದೇಹವನ್ನು ಸ್ವಲ್ಪವೂ ಭೇದಬುದ್ಧಿಯನ್ನು ಮಾಡದೆ ನಾಶಗೊಳಿಸಿಕೊಳ್ಳಬೇಕು.

**ವಿಶ್ವಂ ಬ್ರಹ್ಮಾತ್ಮನಾ ಪಶ್ಯನ್ನಜಸ್ರಂ ವಾಸನಾತನುಮ್ ।**
**ನಿರ್ಮೂಲ್ಯ ಬ್ರಹ್ಮವಿದ್ ಯಾತಿ ಮುಕ್ತಿಂ ನಿರ್ವಾಣಲಕ್ಷಣಾಮ್ ॥೨೮೭॥**

೨೮೭. ಪ್ರಪಂಚವನ್ನೆಲ್ಲ ಯಾವಾಗಲೂ ಬ್ರಹ್ಮರೂಪದಿಂದ ಕಂಡುಕೊಳ್ಳುತ್ತಾ, ವಾಸನಾಶರೀರವನ್ನು ನಿರ್ಮೂಲಮಾಡಿಕೊಂಡರೆ ಬ್ರಹ್ಮಜ್ಞಾನಿಯು ನಿರ್ವಾಣರೂಪವಾದ ಮುಕ್ತಿಯನ್ನು ಹೊಂದುವನು.

**ಅಕರ್ತ್ರಾತ್ಮಜ್ಞಾನವಹ್ನಿಜ್ವಾಲಾಯಾಂ ತ್ರಿವಿಧಂ ಸ್ಫುಟಮ್ ।**
**ಕರ್ಮ ದಗ್ಧ್ವಾ ಸ್ವಯಂ ತಸ್ಮಾನ್ಮುಕ್ತಃ ಸ್ಥೂಲಂ ವಿನಾಶಯೇತ್ ॥೨೮೮॥**

೨೮೮. (ನಾನು) ಅಕರ್ತೃ ಎಂಬ ಆತ್ಮಜ್ಞಾನದ ಬೆಂಕಿಯ ಉರಿಯಲ್ಲಿ 'ಮೂರು ಬಗೆಯ ಕರ್ಮವನ್ನು'[2] ಸುಟ್ಟು ಅದರಿಂದ ಮುಕ್ತನಾಗಿ ಸ್ಥೂಲ(ಶರೀರ)ವನ್ನು ನಾಶಗೊಳಿಸಿಕೊಳ್ಳಬೇಕು.

**ಬ್ರಹ್ಮೈವಾಹಮಿದಂ ವಿಶ್ವಮಿತಿ ವಿಶ್ವಸ್ಯ ಚಾತ್ಮನಃ ।**
**ಬ್ರಹ್ಮಮಾತ್ರತ್ವವಿಜ್ಞಾನಂ ನಿರರ್ಗಳಮನಾರತಮ್ ॥೨೮೯॥**

---

1. ಆಚಾರ್ಯರು ಮೂಲಾಜ್ಞಾನವೇ ಕಾರಣಶರೀರವೆಂದು ತಮ್ಮ ಪ್ರಸ್ಥಾನತ್ರಯ ಭಾಷ್ಯದಲ್ಲಿ ಎಲ್ಲಿಯೂ ಹೇಳಿಲ್ಲ. ವಿ. ೧೨೯ರಲ್ಲಿ ತ್ರಿಗುಣಾತ್ಮಕವಾದ ಅವ್ಯಕ್ತವೇ ಕಾರಣಶರೀರವೆಂದು ಹೇಳಿದೆ. ವಿ.೧೨೦ರಲ್ಲಿ ಬುದ್ಧಿಯು ಬೀಜರೂಪದಲ್ಲಿರುವದೇ ಸುಷುಪ್ತಿ ಎಂದಿದೆ.

2. ಸಂಚಿತಾಗಾಮಿಪ್ರಾರಬ್ಧಗಳನ್ನು. ಶಂ.ಗೀ.೪–೩೭, ವಿ. ೪೫೦.

ಯದಾ ತದಾಽಽಮೃತೇ[1]ರ್ನಾಶೋ ನಿಃಶೇಷ ಇತಿ ಬುಧ್ಯತಾಮ್ ॥
ನಾಹಂ ಮಮೇದಮಿತ್ಯಾದಿಪ್ರತ್ಯಯಃ ಪರಬೋಧನಾತ್ ।
ಯದಾ ಭವತಿ ಸೂಕ್ಷ್ಮಸ್ಯ ತದಾ ನಾಶ ಇತೀಷ್ಯತಾಮ್ ॥೨೯೦॥
ಕಾರಣಸ್ಯಾಪಿ ಸೂಕ್ಷ್ಮಸ್ಯ ವಿನಾಶೇ ಸತಿ ವರ್ಷ್ಮಣಃ ।
ಪ್ರತಿಕ್ರಿಯಾಂ ವಿನಾ ಭೋಗಃ ಪ್ರಾಪ್ತಯೋಃ ಸುಖದುಃಖಯೋಃ ॥೨೯೧॥
ಯದಾ ಸಮಾಪ್ತಿಃ ಸ್ಥೂಲಸ್ಯ ತದಾನ್ತ ಇತಿ ಮೀಯತಾಮ್[2] ॥೨೯೨॥

೨೮೯–೨೯೨. ಈ ವಿಶ್ವವೂ ನಾನೂ ಬ್ರಹ್ಮವೇ ಎಂದು ವಿಶ್ವವನ್ನೂ ತನ್ನನ್ನೂ ಬ್ರಹ್ಮಮಾತ್ರವಾಗಿ ಅರಿತುಕೊಂಡದ್ದು ಯಾವ ಅಡ್ಡಿಯೂ ಇಲ್ಲದೆ ಸಂತತವಾಗಿ ಯಾವಾಗ ನಡೆದಿರುವದೋ ಆಗ ಆವರಣದ ನಾಶವು[3] ನಿಃಶೇಷವಾಯಿತೆಂದು ತಿಳಿಯಬೇಕು. ಇದು ನಾನು, ನನ್ನದು – ಎಂದು ಮುಂತಾದ ಪ್ರತ್ಯಯವು ಪರಮಾತ್ಮಜ್ಞಾನದಿಂದ ಯಾವಾಗ ಆಗದೆ ಇರುವದೋ ಆಗ ಸೂಕ್ಷ್ಮ(ಶರೀರದ) ನಾಶವಾಯಿತೆಂದು ತಿಳಿಯಬೇಕು. ಕಾರಣದ ಮತ್ತು ಸೂಕ್ಷ್ಮಶರೀರದ ವಿನಾಶವಾಗಿ ಬಂದೊದಗುತ್ತಿರುವ ಸುಖದುಃಖಗಳನ್ನು ಪ್ರತೀಕಾರವಿಲ್ಲದೆ ಯಾವಾಗ ಭೋಗಿಸುವದು ಸಮಾಪ್ತವಾಯಿತೋ ಆಗ ಸ್ಥೂಲಶರೀರದ ಅಂತವಾಯಿತೆಂದು ತಿಳಿಯಬೇಕು.[4]

ಸ್ಥೂಲಕಾರಣಸೂಕ್ಷ್ಮಾಣಾಂ ತ್ರಯಾಣಾಂ ಯಸ್ಯ ಕಸ್ಯಚಿತ್ ।
ಯತ್ಕಿಂಚಿದವಶಿಷ್ಟತ್ವೇ ಸತಾಂ ಮುಕ್ತಿರ್ದವೀಯಸೀ ॥೨೯೩॥

೨೯೩. ಸ್ಥೂಲ, ಕಾರಣ, ಸೂಕ್ಷ್ಮ – ಎಂಬೀ ಮೂರರಲ್ಲಿ ಯಾವದೊಂದಾದರೂ ಒಂದಿಷ್ಟು ಉಳಿದುಕೊಂಡಿದ್ದರೂ ಸತ್ಪುರುಷರಿಗೆ ಮುಕ್ತಿಯು ದೂರವಾಗಿರುವದು.

ತಸ್ಮಾದ್ದೇಹತ್ರಯಂ ಸದ್ಭಿಸ್ತತ್ತತ್ಸಾಧನನಿಷ್ಠಯಾ ।
ವಿಧ್ವಸ್ಯತಾಂ ಪ್ರಯತ್ನೇನ ನಿರ್ವಾಣಸುಖಸಿದ್ಧಯೇ ॥೨೯೪॥

೨೯೪. ಆದ್ದರಿಂದ ಸಜ್ಜನರು ನಿರ್ವಾಣದ ಸುಖವು ಸಿದ್ಧವಾಗುವದಕ್ಕಾಗಿ ಶರೀರತ್ರಯವನ್ನು ಪ್ರಯತ್ನದಿಂದ ಆಯಾ ಸಾಧನದಲ್ಲಿ ನಿಷ್ಠರಾಗಿ ನಾಶಗೊಳಿಸಿಕೊಳ್ಳಬೇಕು.

---

1. 'ಆಮೃತೇಃ' ಎಂದು ಅಚ್ಚಿನಲ್ಲಿ ತಪ್ಪುಪಾಠ.
2. ಹಿಂದೆ ಹೆಚ್ಚಾಗಿದ್ದ ಅರ್ಧಶ್ಲೋಕವನ್ನು ಸೇರಿಸಿದರೆ ಒಂದು ಶ್ಲೋಕವಾಗುತ್ತದೆ.
3. ಕಾರಣಶರೀರದ ನಾಶವೆಂದರ್ಥ. ವಿ. ೩೪೧, ೩೪೩, ೩೪೪. 4. ವಿ. ೪೨೨. ಶರೀರತ್ರಯ ನಾಶಕ್ರಮವನ್ನು ಹೀಗೆ ಪ್ರಸ್ಥಾನತ್ರಯಭಾಷ್ಯದಲ್ಲಿ ವರ್ಣಿಸಿರುವದು ಎಲ್ಲಿಯೂ ಕಾಣಬರುವದಿಲ್ಲ. ವಿ. ೪೫೨ ರಿಂದ ೪೫೪ರವರೆಗಿನ ಶ್ಲೋಕಗಳನ್ನು ಇದಕ್ಕೆ ಹೋಲಿಸಿರಿ.

## ಮಿಥ್ಯಾವಿಷಯದಲ್ಲಿ ಪ್ರವೃತ್ತಿಯಿರಬಾರದು

ಅಸತ್ಪ್ರವೃತ್ತಿಮೇವಾಹುರ್ನಿಷ್ಠಾಯಾಃ ಪ್ರತಿಬನ್ಧಕಮ್ ।
ಸತ್ಪ್ರವೃತ್ತ್ಯಾ ಹ್ಯಹಂಭಾವ ಇಚ್ಛಾದೋಷೋಽಪಿ ವರ್ಧತೇ ॥೨೯೫॥
ವಿದ್ವಾನಪಿ ಚ ತದ್ವೃದ್ಧ್ಯಾ ಪತತ್ಯೇವ ನ ಸಂಶಯಃ ॥೨೯೬॥

೨೯೫–೨೯೬. ನಿಷ್ಠೆಗೆ ಮಿಥ್ಯಾವಸ್ತುವಿನಲ್ಲಾಗುವ ಪ್ರವೃತ್ತಿಯೇ ಅಡ್ಡಿಯೆನ್ನುವರು. ಅಸತ್ಪ್ರವೃತ್ತಿಯಿಂದ ಅಹಂಕಾರವೂ ಇಚ್ಛಾರೂಪದ ದೋಷವೂ ಹೆಚ್ಚುವದು. ಅದು ಹೆಚ್ಚಿಕೊಂಡರೆ ಜ್ಞಾನಿಯೂ[1] ಪತಿತನಾಗಿಯೇಬಿಡುವನು. ಇದಕ್ಕೆ ಸಂಶಯವಿಲ್ಲ.

ಆತ್ಮಾನಂ ಚ ಜಗಚ್ಚಾಪಿ ಪೂರ್ಣಬ್ರಹ್ಮೈವ[2] ಪಶ್ಯತಃ ।
ಯತೇರೇವ ವಿಮುಕ್ತಿಃ ಸ್ಯಾನ್ನ ಕಿಞ್ಚಿದ್ಭೇದದರ್ಶಿನಃ ॥೨೯೭॥

೨೯೭. ತನ್ನನ್ನೂ ಜಗತ್ತನ್ನೂ ಪೂರ್ಣಬ್ರಹ್ಮವಾಗಿಯೇ ಕಾಣುತ್ತಿರುವ ಯತಿಗೇ ಮುಕ್ತಿಯಾಗುವದೇ ಹೊರತು ಒಂದಿಷ್ಟಾದರೂ ಭೇದವನ್ನು ಕಾಣುವವನಿಗೆ ಆಗಲಾರದು.

ಯದಾ ಹ್ಯೇವೈಷ ಏತಸ್ಮಿನ್ನುದರಮಿತ್ಯೇವ ಹಿ ಶ್ರುತಿಃ ।
ಮುಕ್ತ್ಯಭಾವಂ ಜ್ಞಾನಿನೋಽಪಿ ಪ್ರಬ್ರೂತೇ ಭೇದದರ್ಶಿನಃ ॥೨೯೮॥

೨೯೮. ಯಾವಾಗಲಾದರೆ ಈತನು ಇದರಲ್ಲಿ ಸ್ವಲ್ಪಭೇದವನ್ನು ಮಾಡುವನೋ (ಆಗ ಅವನಿಗೆ ಭಯವಾಗುವದು ತೈ.೨–೭) ಎಂದೇ ಶ್ರುತಿಯು ಭೇದದರ್ಶಿಯಾದ ಜ್ಞಾನಿಗೂ[3] ಮುಕ್ತಿಯಿಲ್ಲವೆಂದು ಹೇಳುತ್ತದೆ.

ಯಃ ಸರ್ವತ್ರ ಬ್ರಹ್ಮದೃಷ್ಟ್ಯಾ ಸರ್ವಂ ಬ್ರಹ್ಮೈವ ಪಶ್ಯತಿ ।
ವಾಸನಾಸ್ತಸ್ಯ ಲೀಯನ್ತೇ ಸ್ವಕಾರ್ಯೈಃ ಸಹಸಾ ಸಹ ॥೨೯೯॥

೨೯೯. ಯಾವನು ಎಲ್ಲೆಲ್ಲಿಯೂ ಬ್ರಹ್ಮದೃಷ್ಟಿಯಿಂದ ಎಲ್ಲವನ್ನೂ ಬ್ರಹ್ಮವೆಂದೇ ಕಾಣುತ್ತಾನೋ- ಅವನಿಗೆ ವಾಸನೆಗಳು ತಮ್ಮ ಕಾರ್ಯಗಳೊಡನೆ ತಟ್ಟನೆ ಒಟ್ಟಿಗೇ ನಾಶವಾಗುವವು.

ತ್ವಮಹಮಿದಮಿತೀವ ಭೇದದೃಷ್ಟಿಃ
ಪ್ರಭವತಿ ವಾಸನಯಾ ವಿಪಶ್ಚಿತೋಽಪಿ ।
ತದಪನಯನತೋಽಖಿಲಾತ್ಮಭಾವೋ
ಭವತಿ ತದಾಽಪ್ರತಿಬದ್ಧಬೋಧಸಿದ್ಧಿಃ ॥೩೦೦॥

1. ಬಹಿಃಪ್ರವೃತ್ತನಾದ ಜ್ಞಾನಿಗೂ ಅನರ್ಥವ್ರಾತವುಂಟೆಂಬುದಕ್ಕೆ ಶಂ.ಗೀ. ೨–೬೮ನ್ನು ನೋಡಿ.
2. 'ಪೂರ್ಣಂ ಬ್ರಹ್ಮೈವ' ಎಂದು ಪಾ॥
3. ಈ ಶ್ರುತಿಯು ಸಾಧಕನ ವಿಷಯವೆಂದು ಭಾಷ್ಯದಲ್ಲಿದೆ. ಆದರೆ ಶಂ.ಗೀ. ೭–೧೮ರಲ್ಲಿ ಇದು ನಿರ್ವಿಶೇಷೋಪಾಸಕನಾದ ಜ್ಞಾನಿಗೂ ಅನ್ವಯಿಸುತ್ತದೆ ಎಂದು ಸ್ಪಷ್ಟವಾಗಿ ಹೇಳಿದೆ.

೩೦೦. ನೀನು, ನಾನು, ಇದು – ಎಂಬಂತಿರುವ ಭೇದದೃಷ್ಟಿಯು ವಾಸನೆಯಿಂದ ಜ್ಞಾನಿಗೂ ಉಂಟಾಗುತ್ತಿರುವದು. ಅದನ್ನು ಅಲ್ಲಗಳೆಯುವದರಿಂದ **ಸರ್ವಾತ್ಮಭಾವವು** (ಯಾವಾಗ ಆಗುವದೋ) ಆಗ **ಪ್ರತಿಬಂಧರಹಿತವಾದ**[1] ಜ್ಞಾನದ ಸಿದ್ಧಿಯಾಗುವದು.

**ಅಪ್ರತಿಬನ್ಧೇ ಸತಿ ಬೋಧೇ**
**ಸರ್ವಂ ಬ್ರಹ್ಮೈವ ಚೇತಸೋ ಭವತಿ ।**
**ನಾಸ್ತಿ ತದಾ ಸಂಸಾರೋ**
**ಭವತಿ ಸದಾನನ್ದಸೌಖ್ಯವಿಸ್ಫೂರ್ತಿಃ ॥೩೦೧॥**

೩೦೧. ಜ್ಞಾನಕ್ಕೆ ಪ್ರತಿಬಂಧವು ಇಲ್ಲವಾಗಲು ಚಿತ್ತಕ್ಕೆ ಎಲ್ಲವೂ ಬ್ರಹ್ಮವೇ ಆಗುತ್ತದೆ. ಆಗ ಸಂಸಾರವಿರುವದಿಲ್ಲ. ಸದಾನಂದಸೌಖ್ಯದ ತೋರುವಿಕೆಯೂ ಆಗಿಬಿಡುತ್ತದೆ.

**ಜಗದ್ಭಾವಂ ಪರಿತ್ಯಜ್ಯ ಬ್ರಹ್ಮಮಾತ್ರತ್ವಭಾವನಾ ।**
**ವಾಸನಾಪ್ರಕ್ಷಯೋಪಾಯಃ ಸುಲಭಃ ಸೂರಿಸಂಮತಃ ॥೩೦೨॥**

೩೦೨. ಜಗತ್ತೆಂಬ ಭಾವನೆಯನ್ನು ಬಿಟ್ಟು ಬ್ರಹ್ಮಮಾತ್ರತ್ವ(ಬ್ರಹ್ಮಮಾತ್ರವೇ ಇದೆಂಬ) ಭಾವನೆಯು ವಾಸನಾಕ್ಷಯಕ್ಕೆ ಸುಲಭೋಪಾಯವೆಂದು ವಿದ್ವತ್ಸಂಮತವಾಗಿರುತ್ತದೆ.

**ಸನ್ಮಾತ್ರತ್ವಾವಲೋಕೇನ ಸದಾ ಸರ್ವತ್ರ ಸರ್ವತಃ ।**
**ವಾಸನಾಕ್ಷಯಮಾಯಾತಿ ಸತ್ಯಮತ್ರ ನ ಸಂಶಯಃ ॥೩೦೩॥**

೩೦೩. ಯಾವಾಗಲೂ ಎಲ್ಲೆಲ್ಲಿಯೂ ಎಲ್ಲಾ ಪ್ರಕಾರದಿಂದಲೂ ಸನ್ಮಾತ್ರವೇ ಎಂದು ಕಾಣುವದರಿಂದ ವಾಸನೆಯು ಕ್ಷಯವಾಗುತ್ತದೆ. ಇದಕ್ಕೆ ಸಂಶಯವಿಲ್ಲ.[2]

**ಚಣ್ಡಾಲಸ್ಪೃಷ್ಟಿವದ್ದೇಹತಾದಾತ್ಮ್ಯಂ ದೂರತಸ್ತ್ಯಜನ್ ।**
**ಸತ್ತಾಮಾತ್ರತನುರ್ಭೂತ್ವಾ ಸ್ವರೂಪೇ ನಿವಸೇನ್ಮುನಿಃ ॥೩೦೪॥**

೩೦೪. ಮುನಿಯಾದವನು ದೇಹವೇ ತಾನೆಂಬ ಬುದ್ಧಿಯನ್ನು ಚಂಡಾಲಸ್ಪರ್ಶದಂತೆ ದೂರದಲ್ಲಿ ಬಿಟ್ಟು ಸತ್ತಾಮಾತ್ರಶರೀರನಾಗಿ ತನ್ನ ಸ್ವರೂಪದಲ್ಲಿಯೇ ಇದ್ದುಕೊಂಡಿರಬೇಕು.

---

1. ಸಮಾಧಿಯಿಂದಲೇ ಇದೆಲ್ಲವೂ ನಾನೂ ಬ್ರಹ್ಮವೇ ಎಂಬ ಅಪರೋಕ್ಷಜ್ಞಾನವು ಅಪ್ರತಿಬದ್ಧವಾಗಿ ಆಗುತ್ತದೆ ; ಅವಿದ್ಯೆಯೂ ಅದರಿಂದಾಗುವ ಸಕಲಸಂಸಾರವ್ಯವಹಾರವೂ ನಾಶವಾಗುತ್ತದೆ – ಎಂಬುದಕ್ಕೆ ಶಂ.ಗೀ. ೨–೬೯ನ್ನು ನೋಡಿ.

2. ಈ ಅಭಿಪ್ರಾಯವು ಶಂ. ಗೀ. ೨–೬೯ ಮುಂತಾದ ಕಡೆಗಳಲ್ಲಿ ಮತ್ತೆಮತ್ತೆ ಬರುತ್ತದೆ.

**ಬ್ರಹ್ಮೈವಾಹಮಿದಂ ಸರ್ವಮಿತಿ ವಿಜ್ಞಾನವಹ್ನಿನಾ ।**
**ದಗ್ಧ್ವಾ ದ್ವೈತವನಂ ಸಮ್ಯಗದ್ವಿತೀಯೋ ಭವೇನ್ಮುನಿಃ ॥೩೦೫॥**

೩೦೫. ಮುನಿಯಾದವನು ನಾನೂ ಇದೆಲ್ಲವೂ ಬ್ರಹ್ಮವೇ ಎಂಬ ವಿಜ್ಞಾನಾಗ್ನಿಯಿಂದ ದ್ವೈತವನ್ನು ಚೆನ್ನಾಗಿ ಸುಟ್ಟುಹಾಕಿ ಅದ್ವಿತೀಯನಾಗಬೇಕು.

**ಬ್ರಹ್ಮೈವಾಸ್ಮೀತಿ ಬೋಧೇನ ದೇಹೋಽಹಮಿತಿ ಧೀಪಶುಮ್ ।**
**ಕೃತ್ವಾ ಪೂರ್ಣಾಹುತಿಂ ಬ್ರಹ್ಮಣ್ಯಶರೀರೋ ಭವೇನ್ಮುನಿಃ ॥೩೦೬॥**

೩೦೬. ಮುನಿಯಾದವನು ಬ್ರಹ್ಮವೇ ಆಗಿದೇನೆ – ಎಂಬ ಅರಿವಿನಿಂದ ದೇಹವೇ ನಾನು – ಎಂಬ ಬುದ್ಧಿಯ ರೂಪದ ಪಶುವನ್ನು ಬ್ರಹ್ಮದಲ್ಲಿ ಪೂರ್ಣಾಹುತಿಯಾಗಿ ಮಾಡಿ ಅಶರೀರನಾಗಬೇಕು.

**ಸ್ವಪ್ನಾರ್ಥವಜ್ಜಗತ್ಸರ್ವಮುಪಶ್ಯನ್ನೇವ ಸರ್ವದಾ ।**
**ಶಾನ್ತಾತ್ಮಾ ಬ್ರಹ್ಮರೂಪೇಣ ಸರ್ವದಾ ನಿವಸೇನ್ಮುನಿಃ ॥೩೦೭॥**

೩೦೭. ಮುನಿಯಾದವನು ಜಗತ್ತೆಲ್ಲವನ್ನೂ ಸ್ವಪ್ನದ ಪದಾರ್ಥದಂತೆ ಎಂದಿಗೂ ಕಾಣುತ್ತಾ ಶಾಂತಾತ್ಮನಾಗಿ ಬ್ರಹ್ಮರೂಪದಿಂದ ಯಾವಾಗಲೂ ಇದ್ದುಕೊಂಡಿರಬೇಕು.[1]

**ವಿದ್ವಾನಹನ್ತಾಂ ಮಮತಾಮಿದನ್ತಾಂ**
**ತ್ಯಕ್ತ್ವಾ ಪರಬ್ರಹ್ಮ ಸಮೀಕ್ಷ್ಯ ಸರ್ವಮ್ ।**
**ತದೇಕವೃತ್ತ್ಯಾ ಸ್ವಯಮೇವ ತೂಷ್ಣೀ-**
**ಮಾಸ್ತೇ ಯದೈವೈಷ ಸಮಾಧಿನಿಷ್ಠಃ ॥೩೦೮॥**

೩೦೮. ವಿದ್ವಾಂಸನಾದವನು ಯಾವಾಗ ಸಮಾಧಿನಿಷ್ಠನಾಗಿರುವನೋ ಆಗಲೇ ನಾನು, ನನ್ನದು, ಇದು–ಎಂಬ ಭಾವವನ್ನು ಬಿಟ್ಟು ಎಲ್ಲವೂ ಪರಬ್ರಹ್ಮವೇ ಎಂದು ಕಂಡುಕೊಂಡು ತನ್ಮಾತ್ರವೃತ್ತಿಯಿಂದ ತಾನೇ ಸುಮ್ಮನೆ ಇರುವನು.[2]

**ಯತ್ತು ಪೃಷ್ಟಂ ತ್ವಯಾ ಪೂರ್ವಂ ಪ್ರಕೃತಿಪ್ರವಿಲಾಪನಮ್ ।**
**ತದಿದಾನೀಂ ಪ್ರವಕ್ಷ್ಯಾಮಿ ಸಮಾಸೇನೈವ ಸಾದರಮ್ ॥೩೦೯॥**

೩೦೯. ನೀನು ಹಿಂದೆ ಪ್ರಕೃತಿಪ್ರವಿಲಯವನ್ನು ಕೇಳಿದ್ದೆಯಲ್ಲ[3], ಅದನ್ನು ಈಗ ಸಂಗ್ರಹವಾಗಿಯೇ ಆದರಪೂರ್ವಕವಾಗಿ ಹೇಳುವೆನು.

1. ಶಂ. ಗೀ. ೨–೬೯.

2. ಭೇದವನ್ನೆಲ್ಲ ಲಯಮಾಡಿಕೊಂಡು ಬ್ರಹ್ಮವೇ ತಾನೆಂಬ ವೃತ್ತಿಯಿಂದಿರುವ ಸಮಾಧಿ ಅಥವಾ 'ತೂಷ್ಣೀಂಭಾವ'ವನ್ನು ಗ್ರಂಥಕಾರರು ಮತ್ತೆಮತ್ತೆ ಹೊಗಳುತ್ತಾರೆ. ವಿ. ೨೮೫, ೩೦೫, ೫೨೩. ಶಂ. ಗೀ. ೨–೬೫, ೬೬ ; ೫–೧೩.

3. ಈ ಪ್ರಶ್ನಭಾಗವು ಉಪಲಬ್ಧಗ್ರಂಥಭಾಗದಲ್ಲಿ ಕಾಣುವದಿಲ್ಲ. ಪೀಠಿಕೆಯನ್ನು ನೋಡಿ.

**ಸರ್ವಾಸಾಂ ದೃಶ್ಯವೃತ್ತೀನಾಂ ತತ್ತದ್ವಾಸನಯಾ ಸಹ ।**
**ಬ್ರಹ್ಮಾತ್ಮದರ್ಶನಂ ಯತ್ತು ಪ್ರಕೃತೇರ್ಲಾಪನಂ ಹಿ ತತ್ ॥೩೧೦॥**

೩೧೦. ದೃಶ್ಯವೃತ್ತಿಗಳೆಲ್ಲವನ್ನೂ ಆಯಾ ವಾಸನೆಯ ಸಹಿತವಾಗಿ ಬ್ರಹ್ಮಾತ್ಮನೇ ಎಂದು ಕಾಣುವದೆಂಬುದೇ **ಪ್ರಕೃತಿಯ**[1] **ಲಯಗೊಳಿಸುವಿಕೆ.**

**ರಜ್ಜ್ವಾ ಪ್ರತೀತೋ ಭುಜಗೋ ವಿವೇಕಾ–**
**ದ್ಬುಧೈರ್ಯಥಾ ರಜ್ಜುತಯೈವ ಗೃಹ್ಯತೇ ।**
**ವಿಲಾಪನಂ ತಜ್ಜಗತಸ್ತಥಾಯಂ**
**ಪ್ರತ್ಯಗ್ದೃಶಾ ಬ್ರಹ್ಮತಯಾವಧಾರಣಮ್ ॥೩೧೧॥**

೩೧೧. ಹಗ್ಗದಲ್ಲಿ ತೋರುವ ಹಾವನ್ನು ಬಲ್ಲವರು ಹೇಗೆ ವಿವೇಚನೆಯಿಂದ ಹಗ್ಗವೇ ಎಂದು ಗ್ರಹಿಸುವರೋ, ಹಾಗೆಯೇ ಜಗತ್ತನ್ನು ಪ್ರತ್ಯಗ್ದೃಷ್ಟಿಯಿಂದ ಬ್ರಹ್ಮವೆಂದು ನಿಶ್ಚಯಿಸುವದೆಂಬ ಇದೇ **ಜಗತ್ತಿನ ವಿಲಾಪನವು.**

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ
ಶ್ರೀಮದದ್ವೈತವಿದ್ಯಾಚಾರ್ಯ ಶ್ರೀಭಾಷ್ಯಕಾರ
ಶಂಕರಭಗವತ್ಪಾದವಿರಚಿತಂ[2]
ಮಹಾವಾಕ್ಯದರ್ಪಣಂ
ಸಮಾಪ್ತಮ್

---

1. 'ಪ್ರಕೃತಿವಿಲಾಪನ'ವೆಂದರೆ ಸಮಾಧಿಯಿಂದ ವಾಸನೆಗಳನ್ನು ಕ್ಷಯಗೊಳಿಸಿಕೊಳ್ಳುವದು ಎಂದು ಹೇಳಿದಂತೆ ಆಯಿತು.

2. ಈ ವಿಶೇಷಣದ ವಿಷಯಕ್ಕೆ ಪೀಠಿಕೆಯನ್ನು ನೋಡಿ.

# ಗ್ರಂಥದ ಸಾರ
[ವಿ. ಸೂ. ಇಲ್ಲಿ ಕೊಟ್ಟಿರುವವು ಶ್ಲೋಕಸಂಖ್ಯೆಗಳು]

೧. ಯಾವದರಲ್ಲಿ ಮತ್ತೊಂದು ಕಾಣಿಸುವದಿಲ್ಲವೋ, ಕೇಳಿಸುವದಿಲ್ಲವೋ, ಅರಿಯುವದಕ್ಕಾಗುವದಿಲ್ಲವೋ – ಅದೇ ಅದ್ವಿತೀಯವಾದ ಅಖಂಡೈಕರಸವಸ್ತುವಾದ ಬ್ರಹ್ಮವು.

೨–೧೧. ಅಜ್ಞರ ಅಜ್ಞಾನವೆಂಬುದು ವಿಚಿತ್ರವಾದದ್ದು : ಅವರಿಗೆ ಕನಸು ಹುಸಿ, ಎಚ್ಚರವು ದಿಟ. ಅನಿತ್ಯವಾದದ್ದು ನಿತ್ಯ, ಅಶುಚಿಯಾದದ್ದು ಶುಚಿ, ದುಃಖಾತ್ಮಕವಾದದ್ದು ಸುಖಾತ್ಮಕ. ಆತ್ಮನು ಅನಾತ್ಮ, ಅನಾತ್ಮವೇ ಆತ್ಮ ; ಆತ್ಮನಿರುವದು ತಮ್ಮಲ್ಲಲ್ಲ, ಪುಸ್ತಕಗಳಲ್ಲಿ, ಸದ್ರೂಪನೂ ಆನಂದರೂಪನೂ ಆದ ಆತ್ಮನು ಬೇಡ, ದೇವತೆಗಳನ್ನು ಯಾಗದಿಂದ ತೃಪ್ತಿಪಡಿಸಿ ಸುಖವನ್ನು ಗಳಿಸಿಕೊಳ್ಳಬೇಕು. ತಮ್ಮ ಸ್ವರೂಪವು ದೇವರಲ್ಲ, ಪ್ರತಿಮೆಯೇ ದೇವರು. ತಾವು ನಿತ್ಯಮುಕ್ತರಲ್ಲ, ಕ್ಷೇತ್ರವಾಸದಿಂದ ಮುಕ್ತಿ ದೊರಕಬೇಕು. ಆತ್ಮನು ಸರ್ವಜ್ಞನಲ್ಲ, ಶಾಸ್ತ್ರಗಳಿಂದ ಜ್ಞಾನವು ಬೇಕು. ಕನಸಿನಲ್ಲಿ ಸ್ಥೂಲದೇಹಕ್ಕಿಂತ ಭಿನ್ನನೆಂದು ಆತ್ಮನನ್ನು ಕಂಡಮೇಲೂ ಸ್ಥೂಲದೇಹದಲ್ಲಿ ಆತ್ಮಬುದ್ಧಿ ; ಅಶುಚಿಯಾದ ಆ ದೇಹವೇ ತಾವೆಂದುಕೊಂಡು ಶುದ್ಧಿಮಾಡಿಕೊಳ್ಳಲೆಳಸುವದು. ದೇಹ, ಮಲ – ಎರಡೂ ಅನ್ನದಿಂದಾದದ್ದಾದರೂ ದೇಹವು ತಾವು, ಮಲವು ಹಾಗಲ್ಲ !

೧೨–೨೧. ಬಹುಜನ್ಮಗಳಲ್ಲಿ ಪುಣ್ಯವನ್ನು ಮಾಡಿದ ಸಜ್ಜನರಿಗೆ ಆತ್ಮತತ್ತ್ವವನ್ನು ಅರಿತುಕೊಳ್ಳಬೇಕೆಂಬ ಆಶೆಯುಂಟಾಗುವದು. ಛಾಂದೋಗ್ಯದಲ್ಲಿ 'ತತ್ತ್ವಮಸಿ' ಎಂಬ ಮಹಾವಾಕ್ಯವುಂಟು. ಅದರಲ್ಲಿ ತ್ವಮ್ (ನೀನು) ಎಂಬ ಪದಕ್ಕೆ ಪ್ರತ್ಯಗಾತ್ಮನೆಂದೂ ತತ್ (ಅದು) ಎಂಬುದಕ್ಕೆ ಶುದ್ಧಾನಂದಸ್ವರೂಪವಾದ ಬ್ರಹ್ಮವೆಂದೂ ಅರ್ಥ. ಈ ಎರಡೂ ಅಖಂಡವೆಂದು ಶ್ರುತಿಯು ಮತ್ತೆಮತ್ತೆ ಸಾರುತ್ತಿರುವದು. ಚಿತ್ತಶುದ್ಧಿಯಿಲ್ಲದವರಿಗೆ ಅದರ ಅರ್ಥವು ತಿಳಿಯಲಾರದು. ಮುಮುಕ್ಷುಗಳು ಮಾಡಿದ ಶ್ರವಣಾದಿಗಳೇ ಸಾರ್ಥಕವಾಗುವವು.

೨೨–೨೩. ಒಂದೇ ಬ್ರಹ್ಮವು ಶುದ್ಧಸತ್ತ್ವೋಪಾಧಿಯಿಂದ ಈಶ್ವರನೆನಿಸುವದು, ಮಲಿನ ಸತ್ತ್ವೋಪಾಧಿಯಿಂದ ಜೀವನೆನಿಸುವದು. ಈ ಉಪಾಧಿಭೇದದಿಂದ ಜೀವೇಶ್ವರರಿಗೆ ತಾರತಮ್ಯವುಂಟಾಗಿರುತ್ತದೆ.

೨೪–೩೩. ಅಜ್ಞಾನದಿಂದ ಸಂಸಾರಬಂಧವುಂಟಾಗಿ ಕರ್ಮದಿಂದ ಬೆಳೆದುಕೊಂಡಿದೆ ; ಅದು ಜ್ಞಾನದಿಂದ ಹೋದೀತೇ ಹೊರತು ಕರ್ಮಗಳನ್ನು ಎಷ್ಟುಮಾಡಿದರೂ ತೊಲಗಲಾರದು. ವಾಕ್ಯದಲ್ಲಿರುವ ಪದಗಳ ಅರ್ಥವನ್ನು ವಿಚಾರಮಾಡಿದರೆ ತತ್ತ್ವಾವಬೋಧವು ಉಂಟಾದೀತೇ ಹೊರತು ಸ್ನಾನಾದಿಗಳನ್ನಾಚರಿಸುವದರಿಂದ ಉಂಟಾಗಲಾರದು. ತಪ್ಪು ತಿಳಿವಳಿಕೆಯು ಸರಿಯಾದ ಜ್ಞಾನದಿಂದಲೇ ಹೋಗಬೇಕು ; ಸರಿಯಾದ ಜ್ಞಾನವು ವಿಚಾರದಿಂದಲೇ ಉಂಟಾಗಬೇಕು. ಆದ್ದರಿಂದ ಕರ್ಮವನ್ನು ಸಂನ್ಯಾಸಮಾಡಿ ತತ್ತ್ವಂಪದಗಳ ಅರ್ಥವನ್ನು ಚೆನ್ನಾಗಿ ವಿಚಾರಮಾಡಿ ಬ್ರಹ್ಮಾತ್ಮೈಕತ್ವಜ್ಞಾನವನ್ನು ಪಡೆದುಕೊಂಡು ಸಂಸಾರವನ್ನು ಶಮನಮಾಡಿಕೊಳ್ಳಬೇಕು.

೩೪–೪೯. ಈಗ ಪ್ರತ್ಯಗಾತ್ಮತತ್ತ್ವವನ್ನು ತಿಳಿಸುವೆನು. ಸಕಲಕರಣಗಳ ವ್ಯಾಪಾರಕ್ಕೂ ಕಾರಣನಾಗಿ ಎಲ್ಲವನ್ನೂ ಅರಿಯುತ್ತಾ 'ನಾನು, ನಾನು' ಎಂಬ ಪ್ರತ್ಯಯಕ್ಕೆ ವಿಷಯನಾಗಿರುವವನೇ ಪ್ರತ್ಯಗಾತ್ಮನು ; ಅವನು ಶುದ್ಧಚೈತನ್ಯಸ್ವರೂಪನು. ಅನಿತ್ಯವಾದ ಆಕಾಶಗಳು ನಿತ್ಯವೆನಿಸಿರುವದೂ

ಇಂದ್ರಿಯಗಳಿಗೂ ವೇದಶಾಸ್ತ್ರಗಳಿಗೂ ಪ್ರಾಮಾಣ್ಯವು ಬಂದಿರುವದೂ ಬುದ್ಧ್ಯಾದ್ಯಚೇತನಗಳು ಚೇತನವಂದೆನಿಸಿರುವದೂ ಯಾವಾತನ ಮಹಿಮೆಯಿಂದಲೋ ಆ ಸದಸದ್ವಿಲಕ್ಷಣನಾದ ಆತನೇ ಪ್ರತ್ಯಗಾತ್ಮನು. ಬುದ್ಧ್ಯಾದಿಗಳು ತೋರುವದು. ಇರುವದು,, ಮರೆಯಾಗುವದು – ಎಲ್ಲಕ್ಕೂ ಸಾಕ್ಷಿಯು. ಈತನೇ ಅಹಂಕಾರವು ಚೇತನವೆಂದೂ ಜ್ಞಾತೃವೆಂದೂ ನಿತ್ಯವೆಂದೂ ತೋರಿಕೊಂಡು ಈ ಆತ್ಮನನ್ನು ಮರೆಮಾಡಿರುವದು. ಕನಸಿನ ಪ್ರಪಂಚವನ್ನೆಲ್ಲ ಬೆಳಗುತ್ತಿರುವದರಿಂದ ಈತನು ಸ್ವಯಂಜ್ಯೋತಿ. ಕನಸಿನಲ್ಲಿ ಬೆಳಗಲ್ಪಡುವ ಅಂತಃಕರಣಾಂಶವನ್ನು ಬಿಟ್ಟರೆ ಈತನ ಚಿನ್ಮಾತ್ರಸ್ವರೂಪವು ಉಳಿದುಕೊಳ್ಳುತ್ತದೆ. ಸುಷುಪ್ತಿಯಲ್ಲಿ ಯಾವ ಉಪಾಧಿಯೂ ಇಲ್ಲದ್ದರಿಂದ ಆನಂದರೂಪದಿಂದ ಇವನು ತೋರಿಕೊಳ್ಳುತ್ತಾನೆ. ಈ ಸುಷುಪ್ತಿಸಾಕ್ಷಿಯನ್ನೇ ನಾನು ಎಂದು ತಿಳಿದುಕೊ.

೫೦–೫೮. ಶರೀರವನ್ನೇ ತಾನೆಂದು ತಿಳಿಯುವವನು ಪಶುತುಲ್ಯನು ; ಅದೇ ಗುಣದೋಷಯುಕ್ತವಾಗಿರುತ್ತದೆ, ಆತ್ಮನಲ್ಲ. ಆತ್ಮನು ಅತ್ಯಂತ ಅಶುಚಿಯಾದ ದೇಹಕ್ಕಿಂತ ವಿಲಕ್ಷಣನಾಗಿ ಚಿನ್ಮಾತ್ರನೂ ಆನಂದಘನನೂ ಆಗಿರುತ್ತಾನೆ. ಒಬ್ಬನಾಗಿರುವ ಇವನನ್ನು ಅನೇಕನೆಂದೂ ಅಸಂಸಾರಿಯಾಗಿರುವ ಇವನನ್ನು ಸಂಸಾರಿಯೆಂದೂ ತೋರಿಸುತ್ತಿರುವದು ಅಜ್ಞಾನವು. ಕರ್ಮವು ಕಾರ್ಯಕರಣಸಂಘಾತದಿಂದ ಆಗತಕ್ಕದ್ದೆಂದು ತಿಳಿಯಲಾರದೆ, ಅಜ್ಞರು ತಾನೇ ಕರ್ತೃವೆಂದುಕೊಳ್ಳುತ್ತಿರುವರು.

೫೯–೬೬. ಕನಸಿನಲ್ಲಿ ಹೇಗೋ ಹಾಗೆ ಎಚ್ಚರದಲ್ಲಿಯೂ ಮನಸ್ಸೇ ಆತ್ಮನಲ್ಲಿ ಸಂಸಾರವನ್ನು ಕಲ್ಪಿಸುತ್ತಿರುವದೆಂದು ತಿಳಿಯಬೇಕು. ಏಕೆಂದರೆ ಮನಸ್ಸಿಲ್ಲದ ಸುಷುಪ್ತಿಯಲ್ಲಿ ಸಂಸಾರವು ತೋರುವದಿಲ್ಲ. ಬ್ರಹ್ಮಾತ್ಮದೃಷ್ಟಿಯಿಂದ ಯಾವಾಗಲೂ ಆನಂದವೇ ಉಂಟಾಗುತ್ತಿದ್ದರೂ ಮನಸ್ಸಿನಿಂದಲೇ ಸಂಕಲ್ಪವಿಕಲ್ಪಕಾಮಾದಿರೂಪದ ಸಂಸಾರವುಂಟಾಗಿದೆಯಾದ್ದರಿಂದ ಅದನ್ನು ನಿಗ್ರಹಮಾಡಿಕೊಂಡು ಮುಕ್ತನಾಗಬೇಕು.

೬೭–೮೭. ಜ್ಞಾನಕ್ರಿಯಾಶಕ್ತಿಗಳುಳ್ಳ ಅಹಂಕಾರವೇ ವಿಜ್ಞಾನವೆಂಬ ಹೆಸರಿನ ಮೊಟ್ಟ ಮೊದಲನೆಯ ವಿಕಾರವು. ಆತ್ಮನ ಸಂನಿಧಿಯಿಂದ ಚಿದಾತ್ಮಕವೆಂಬಂತೆ ತೋರಿಕೊಳ್ಳುತ್ತಾ ಸರ್ವ ಸಂಸಾರಕ್ಕೂ ಕಾರಣವಾಗಿರುವದಿದು. ದೇಹದಲ್ಲಿಯೂ ಅದರ ಧರ್ಮದಲ್ಲಿಯೂ ನಾನು ನನ್ನದೆಂಬ ಅಭಿಮಾನವನ್ನು ಮಾಡಿಕೊಳ್ಳುತ್ತಿರುವ ಜೀವನು ಇದೇ. ಪಾಪಪುಣ್ಯಗಳನ್ನು ಮಾಡಿ ಸುಖದುಃಖಗಳನ್ನನುಭವಿಸುವದೂ ಸತ್ತ್ವಾದಿಗುಣಗಳ ಧರ್ಮವನ್ನು ತಳೆದು ಅವಸ್ಥಾತ್ರಯವನ್ನನುಭವಿಸುವದೂ ಇದೇ. ಇದನ್ನೇ ವಿಜ್ಞಾನಮಯಕೋಶವೆನ್ನುತ್ತಾರೆ. ಬೆಂಕಿಯ ಸಂಪರ್ಕದಿಂದ ಕಬ್ಬಿಣವೂ ಬೆಂಕಿಯ ಹಾಗೆ ತೋರುವಂತೆ ಚಿದಾತ್ಮನ ಸಂಪರ್ಕರೂಪದಿಂದ ಜನರು ತನ್ನನ್ನು ಆತ್ಮನೆಂದು ಅರಿಯುವಂತೆ ಭ್ರಾಂತಿಯನ್ನುಂಟುಮಾಡುತ್ತಿರುವದು. ನಿಜವಾಗಿ ಇದು ಜ್ಞೇಯವು, ಇದನ್ನರಿಯುವ ಜ್ಞಾತೃವೇ ಆತ್ಮನು. ಆತ್ಮನು ಅಖಂಡಬೋಧನಾಗಿಅಹಂಕಾರಾದ್ಯಖಿಲವನ್ನೂ ಅರಿಯುವ ಅಖಂಡಚಿನ್ಮಾತ್ರನೂ ಅವಸ್ಥಾತ್ರಯಸಾಕ್ಷಿಯೂ ಸರ್ವಗತನೂ ನಿತ್ಯನೂ ಆಗಿರುತ್ತಾನೆ. ಅಹಂಕಾರವು ಹತ್ತಿರವಿರುವದೆಂಬ ದೋಷದಿಂದ ಈ ಆತ್ಮನಲ್ಲಿ ಜೀವತ್ವವು ಕಲ್ಪಿತವಾಗಿರುವದು. ಈ ಕಲ್ಪನೆಗೆ ಅಜ್ಞಾನವೇ ಕಾರಣ. ನಿಜವಾಗಿ ನೋಡಿದರೆ ಕನಸಿನಲ್ಲಿ ತೋರುವ ಸಂಸಾರದಂತೆಯೇ ಎಚ್ಚರದಲ್ಲಿ ತೋರುವ ಸಂಸಾರವೂ ಅಸತ್ಯ. ಆತ್ಮನು ಎಂದೆಂದಿಗೂ ಅವಿದ್ಯಾತತ್ಕಾರ್ಯಗಳ ಸಂಬಂಧವಿಲ್ಲದೆ ಇರುತ್ತಾನೆ. ಆದ್ದರಿಂದಲೇ ಶ್ರುತಿಯು 'ತತ್ತ್ವಮಸಿ' (ಅದೇ ನೀನಾಗಿರುವೆ) ಎಂದು ಮತ್ತೆಮತ್ತೆ ಹೇಳುತ್ತಿರುತ್ತದೆ.

೮೮–೧೧೪. ಯಾವದು ಏತರ ಕಾರ್ಯವೋ ಅದು– ಗಡಿಗೆಯು ಮಣ್ಣೇ ಆಗಿರುವಂತೆ – ಆ ಕಾರಣವೇ ಆಗಿರುತ್ತದೆ. ಹಾಗಾದರೆ ದ್ವೈತಕ್ಕೆ ಕಾರಣವೇನು ?– ಎಂದರೆ ಅದೆಲ್ಲವೂ ಬ್ರಹ್ಮದ **ವಿವರ್ತವೇ** ಆಗಿರುತ್ತದೆ, ಬ್ರಹ್ಮದಿಂದ ಹುಟ್ಟಿರುವದಿಲ್ಲ. ಮರುಭೂಮಿಯು ನೀರಿನಂತೆಯೂ ಹಗ್ಗವೇ ಹಾವಿನಂತೆಯೂ ತೋರುವಹಾಗೆ ಬ್ರಹ್ಮವೇ ಜಗದ್ರೂಪವಾಗಿ ಕಾಣಿಸುತ್ತಿರುತ್ತದೆ. ಅಧಿಷ್ಠಾನವಾದ ಬ್ರಹ್ಮವನ್ನು ಅರಿತಕೂಡಲೆ ಅದರಲ್ಲಿ ತೋರುತ್ತಿರುವ ಜಗತ್ತೆಲ್ಲವೂ ಬ್ರಹ್ಮಮಾತ್ರವೇ ಆಗಿಬಿಡುವದು. ಆರೋಪಿತವಾಗಿರುವದು ಅಧಿಷ್ಠಾನರೂಪದಿಂದಲೇ ಇದ್ದುಕೊಂಡಿರುವದೇ ಹೊರತು, ಅದು ಅಧಿಷ್ಠಾನದಿಂದ ಹೊರಕ್ಕೆ ಬರುವದಾಗಲಿ ಅದರಲ್ಲಿ ಲಯವಾಗುವದಾಗಲಿ ಎಂದಿಗೂ ಇಲ್ಲ. ಇಷ್ಟುಮಾತ್ರದಿಂದ ಬ್ರಹ್ಮವು ಜಡತ್ವಾದಿದೋಷವುಳ್ಳದ್ದೆಂದಾಗುವದಿಲ್ಲ. ಏಕೆಂದರೆ ಆರೋಪಿತವಾಗಿರುವದರ ಗುಣವಾಗಲಿ ದೋಷವಾಗಲಿ ಅಧಿಷ್ಠಾನಕ್ಕೆ ಎಂದಿಗೂ ಬರಲಾರದು. ತೋರುತ್ತಿರುವ ಜಗತ್ತಿಗೆ ಅಧಿಷ್ಠಾನವನ್ನು ಬಿಟ್ಟರೆ ಬೇರೆ ಸ್ವರೂಪವು ಇರುವದೇ ಇಲ್ಲ. ಮರುಜಲಕ್ಕೆ ಮರುಭೂಮಿ, ಸರ್ಪಕ್ಕೆ ರಜ್ಜು, ಮರದಾನೆಗೆ ಮರ – ಇವನ್ನು ಬಿಟ್ಟರೆ ಬೇರೆಯ ಸ್ವರೂಪವಿಲ್ಲವಷ್ಟೆ? ಆದ್ದರಿಂದ ಸರಿಯಾಗಿ ವಿಚಾರಮಾಡಿದರೆ ಶ್ರುತಿಸ್ಮೃತಿಯುಕ್ತಿಗಳ ಆಧಾರದಿಂದ ಜಗತ್ತೆಲ್ಲವೂ ಕೇವಲ ಬ್ರಹ್ಮವೇ ಎಂದಾಗುತ್ತದೆ.

೧೧೫–೧೨೮. ಆದ್ದರಿಂದ ಅಜ್ಞಾನಿಗಳಿಗೆ ಎಲ್ಲವೂ ಜಗತ್ತೇ ಆಗಿ ತೋರುತ್ತಿದ್ದರೂ ಶುದ್ಧಾತ್ಮರಾದ ಜ್ಞಾನಿಗಳಿಗೆ ಎಲ್ಲವೂ ಬ್ರಹ್ಮವೇ ಆಗಿರುತ್ತದೆ. ಅಧಿಷ್ಠಾನದ ಸ್ವರೂಪವನ್ನು ತಿಳಿದವರಿಗೆ ಇದೆಲ್ಲವೂ ಬ್ರಹ್ಮವೇ.

೧೨೯–೧೪೨. ಹೀಗೆ ಜಗತ್ತೆಲ್ಲವೂ ಅಧಿಷ್ಠಾನವಾದ ಬ್ರಹ್ಮವೇ ಆಗಿರುವದರಿಂದ ಅದಕ್ಕೆ ಅಭಾವವಿಲ್ಲ. ಜಗತ್ತಿನ ಅಭಾವವೆಂಬುದು ಬರಿಯ ಮಾತೇ, ಅಭಾವವೆಂಬ ವಸ್ತುವೇ ಇಲ್ಲ. ಭಾವ, ಅಭಾವ – ಎಲ್ಲವೂ ಬ್ರಹ್ಮವೇ ; ಸತ್ಯವೂ ಅನೃತವೂ ಎಲ್ಲವೂ ಸತ್ಯವೇ ಆಯಿತು – ಎಂದು ಶ್ರುತಿಯು ಹೀಗೆಂದು ಸ್ಫುಟವಾಗಿ ಹೇಳುತ್ತಿದೆ. ಅಲ್ಲಿ ಸತ್ಯವೆಂದರೆ ಬ್ರಹ್ಮವೇ. ಅರಿಯುವವನು ತಪ್ಪಾಗಿ ತಿಳಿದುಕೊಂಡದ್ದರಿಂದ – ಸ್ಥಾಣುವು ಚೋರನೆಂದೂ ರಜ್ಜುವು ಸರ್ಪವೆಂದೂ ತಪ್ಪಾಗಿ ತೋರುವಂತೆ– ಜಗತ್ತಿನ ರೂಪದಿಂದ ಬ್ರಹ್ಮವು ತೋರುತ್ತಿರುವದು. ಅನಾದ್ಯವಿದ್ಯಾವಾಸನೆಯೇ ಇದಕ್ಕೆ ಕಾರಣ. ಕನಸಿನ ಪ್ರಪಂಚವಾಗಲಿ ಎಚ್ಚರದ ಪ್ರಪಂಚವಾಗಲಿ ಇರುವಂತೆ ಕಾಣುತ್ತಿರುವದು ಚಿತ್ತಮಾತ್ರದಿಂದ ; ಏಕೆಂದರೆ ಅವು ಒಂದಿರುವಾಗ ಒಂದಿರುವದಿಲ್ಲ. ಚಿತ್ತವಿಲ್ಲದ ಸುಷುಪ್ತಿಯಲ್ಲಿ ಯಾವದೂ ಇರುವದೇ ಇಲ್ಲ.

೧೪೩–೧೫೩. ಈ ಜಗತ್ತು ಬ್ರಹ್ಮಜ್ಞಾನದಿಂದ ಬಾಧಿತವಾಗುವದರಿಂದ ಭ್ರಾಂತಿಮಾತ್ರವೇ. ಶುಕ್ತಿಯೇ ಮುಂತಾದವುಗಳನ್ನು ಅರಿಯದಿದ್ದಾಗ ತೋರಿ ಅವನ್ನು ಅರಿತ ಕೂಡಲೆ ಹೋಗುವ ರಜತಾದಿಗಳಂತೆ ಬ್ರಹ್ಮಜ್ಞಾನದಿಂದ ಜಗತ್ತು ಬಾಧಿತವಾಗುತ್ತದೆ. ಜಾಗ್ರದಾದ್ಯವಸ್ಥೆಗಳಲ್ಲಿ ವ್ಯಭಿಚರಿತಸ್ವರೂಪವುಳ್ಳದ್ದಾದ್ದರಿಂದ ಇದು ಭ್ರಾಂತಿಮಾತ್ರವೆಂದು ಬಲ್ಲವರು ಹೇಳುತ್ತಾರೆ ; ಆದ್ದರಿಂದ ಇದರ ಸ್ವರೂಪವು ಬ್ರಹ್ಮಮಾತ್ರವಾಗಿದೆ. ಆದ್ದರಿಂದಲೇ ಎಲ್ಲವೂ ಬ್ರಹ್ಮವೇ ಎಂದು ಶ್ರುತಿ ಹೇಳುತ್ತಿದೆ.

೧೫೪–೧೬೦. ಹೀಗಿರುವದರಿಂದ ಈಶ್ವರನ ಸರ್ವಜ್ಞತ್ವಾದಿಗಳೂ ಜೀವನ ಕಿಂಚಿಜ್ಜ್ಞತ್ವಾದಿಗಳೂ ಮಾಯಾಮಾತ್ರವಾಗಿರುತ್ತವೆ ; ಈ ಉಪಾಧಿಗಳೂ ಭ್ರಾಂತಿಕಾರ್ಯವಾದ

ಜಗತ್ತಿನಲ್ಲಿಯೇ ಅಡಕವಾಗಿರುವವಲ್ಲವೆ ? ಆದ್ದರಿಂದ ಪ್ರಮಾಣಭೂತವಾದ ಶ್ರುತಿಯು ಹೇಳುವ ಜೀವೇಶ್ವರೈಕ್ಯವು ವಿರುದ್ಧವಲ್ಲ.

೧೬೧–೧೮೦. ಅಜ್ಞಾನದಿಂದ ಭೇದವನ್ನು ಕಾಣುತ್ತಿರುವವರೆಗೂ ಸಂಸಾರವಿರುತ್ತದೆ. ಹಾಗೆಂದು ಶ್ರುತಿಯು ಹೇಳುತ್ತದೆ. ಆದ್ದರಿಂದ ಸಂಸಾರನಾಶಕ್ಕಾಗಿ ಆತ್ಮನು ಬ್ರಹ್ಮಾಭಿನ್ನನೆಂದು ಅರಿತುಕೊಳ್ಳಬೇಕು. ಆದ್ದರಿಂದಲೇ ಶ್ರುತಿಯು ಅವರಿಬ್ಬರಿಗೂ ಅಖಂಡತ್ವವನ್ನು ಹೇಳುತ್ತಿದೆ. ಪ್ರತ್ಯಗಾತ್ಮನಿಗೂ ಬ್ರಹ್ಮಕ್ಕೂ ಎಳ್ಳಷ್ಟೂ ಭೇದವಿಲ್ಲ. ನಾಮರೂಪಾದಿಗಳು ಏತರಲ್ಲಿ ಕಲ್ಪಿತವಾಗಿರುವವೋ, ದ್ರಷ್ಟೃದರ್ಶನದೃಶ್ಯಗಳೆಂಬವು ಏತರಲ್ಲಿರುವದಿಲ್ಲವೋ, ಯಾವದು ಎಲ್ಲೆಲ್ಲಿಯೂ ತುಂಬಿಕೊಂಡಿರುವದೋ, ಯಾವದು ಗ್ರಾಹ್ಯಗ್ರಾಹಕಗಳನ್ನು ಬೆಳಗುತ್ತಾ ಅವುಗಳಿಗಿಂತ ವಿಲಕ್ಷಣವಾಗಿರುವದೋ, ಯಾವದು ಬೆಳಗಿ ತೋರಿಸಿದ್ದನ್ನೇ ಚಕ್ಷುರಾದಿಗಳು ಬೆಳಗುವವೋ, ಯಾವದನ್ನು ಬಿಟ್ಟು ಮತ್ತೊಂದನ್ನು ನೋಡುವದಾಗಲಿ ಕೇಳುವದಾಗಲಿ ಅರಿಯುವದಾಗಲಿ ಆಗುವಂತಿಲ್ಲವೋ, ಯಾವದು ನಿಷ್ಕಲನಿಷ್ಕ್ರಿಯಶಾಂತನಿರವದ್ಯನಿರಂಜನವಾಗಿರುವದೋ, ಯಾವದು ಅವಸ್ಥಾತ್ರಯವನ್ನೆಲ್ಲ ಬೆಳಗಿ ತೋರುತ್ತಿರುವದೋ ಅದೇ ನೀನೆಂದು ತಿಳಿದುಕೊ. ಮಿಕ್ಕದ್ದರಲ್ಲಿ ಆತ್ಮಬುದ್ಧಿಯನ್ನು ಬಿಡು.

೧೮೧–೨೦೧. ನೀನು ಹೇಗೆ ಕನಸಿನ ಶರೀರವಲ್ಲವೋ ಹಾಗೆಯೇ ಎಚ್ಚರದ ಶರೀರವೂ ಅಲ್ಲ, ದೇಹೇಂದ್ರಿಯಾದಿಗಳಲ್ಲ, ಕ್ಷರಾಕ್ಷರಗಳಾಗಲಿ ಅವುಗಳ ಕಾರ್ಯವಾಗಲಿ ಅಲ್ಲ, ಇವೆಲ್ಲಕ್ಕೂ ಸಾಕ್ಷಿ ನೀನು. ಒಳಗೂ ಹೊರಗೂ ಎಡೆಬಿಡದೆ ಆಕಾಶದಂತೆ ತುಂಬಿಕೊಂಡಿರುವವನು ನೀನು, ದೃಶ್ಯಭಿನ್ನವಾದ ದೃಗ್ರೂಪನು. ಇಂಥ ಪ್ರತ್ಯಗಾತ್ಮಸದಾಶಿವನು ನೀನು. ಶಬ್ದಸ್ಪರ್ಶಾದಿಗಳಿಲ್ಲದ ಅನಾದ್ಯನಂತಧ್ರುವಸ್ವರೂಪನು ನೀನು. ಸ್ಥೂಲಸೂಕ್ಷ್ಮಕಾರಣಶರೀರಗಳಿಗಿಂತ ಭಿನ್ನನಾದ ಪ್ರತ್ಯಕ್ಚೈತನ್ಯಸ್ವರೂಪನು. ಆ ದೇಹಗಳ ಧರ್ಮಗಳು ಯಾವವೂ ನಿನಗಿಲ್ಲ. ಈ ಆತ್ಮತತ್ತ್ವವನ್ನರಿಯದೆ ಇದ್ದದ್ದರಿಂದ ನಿನ್ನಲ್ಲಿ ಇದೆಲ್ಲವೂ ಕಲ್ಪಿತವಾಗಿರುವದು, ಸತ್ಯವೆಂದೇ ತೋರುತ್ತಿರುವದು. ಅಧಿಷ್ಠಾನವಾದ ಬ್ರಹ್ಮವನ್ನರಿತಕೂಡಲೆ ಎಲ್ಲವೂ ಬ್ರಹ್ಮವೇ ಆಗಿಬಿಡುವದು. ಎಲ್ಲವೂ ಚಿತ್ತೇ, ಚಿದ್ಭಿನ್ನವಾದದ್ದು ಯಾವದೊಂದೂ ಇರುವದೇ ಇಲ್ಲ.

೨೦೨–೨೦೭. ಮೃದಾದಿದೃಷ್ಟಾಂತಗಳ ಯುಕ್ತಿಯಿಂದಲೂ ಶ್ರುತಿಯಿಂದಲೂ ಅನುಭವದಿಂದಲೂ ಮನಃಕಲ್ಪಿತವಾದ ದ್ವೈತವನ್ನು ತೊಲಗಿಸಿಕೊಂಡು ನಿನ್ನಲ್ಲಿ ನೀನು ರಮಿಸುತ್ತಿರು. ಇಲ್ಲದಿರುವದನ್ನು ಕಲ್ಪಿಸುತ್ತಿರುವ ಮನಸ್ಸನ್ನು ನಿಗ್ರಹಿಸಿ ನಿನ್ನಲ್ಲಿ ನೀನು ರಮಿಸುತ್ತಿರು. ಅನಾದಿವಾಸನಾಗ್ರಂಥಿಯನ್ನು ಕತ್ತರಿಸಿಹಾಕಿ ನಿನ್ನಲ್ಲಿ ನೀನು ಸುಖದಿಂದ ರಮಿಸುತ್ತಿರು. ಎಲ್ಲೆಲ್ಲಿಯೂ ಆತ್ಮನೇ ಎಂದು ತಿಳಿದು ನಿನ್ನಲ್ಲಿ ನೀನು ರಮಿಸುತ್ತಿರು, ಎಲ್ಲೆಲ್ಲಿಯೂ ಆತ್ಮಾನಂದವನ್ನು ಕಂಡು ಅದರಲ್ಲಿಯೇ ಮುಳುಗಿ ನಿನ್ನಲ್ಲಿ ನೀನು ರಮಿಸುತ್ತಿರು.

೨೦೮–೨೧೬. ಯಾವ ವಿವೇಕಿಯುತಾನೆ ಈ ನಿತ್ಯಬ್ರಹ್ಮಸಂಬಂಧವಾದ ಅಖಂಡಾನಂದವನ್ನು ಬಿಟ್ಟು ಅತ್ಯಂತತುಚ್ಛವಾದ ವೈಷಯಿಕಸುಖದಲ್ಲಿ ರತನಾದಾನು ? ಆತ್ಮಸುಖವನ್ನು ಬಿಟ್ಟು ವಿಷಯದತ್ತ ತಿರುಗುವವನು ಮಹಾಮೂಢನು ; ಬ್ರಹ್ಮಜ್ಞಾನಿಯಾದವನಿಗೆ ಪ್ರಪಂಚವೇ ಕಾಣಿಸುವದಿಲ್ಲ ; ಇನ್ನು ಅವನು ಅಲ್ಲಿ ಭೋಗವನ್ನೆಲ್ಲಿ ಕಂಡಾನು ? ಅವನಿಗೆ ನಿತ್ಯನಿರ್ವಾಣಸುಖವು

ದೊರಕಿರುತ್ತದೆ. ಮನಃಕಲ್ಪಿತವಾದ ಬಾಹ್ಯವನ್ನು ಬಿಟ್ಟು ನೀನು ಅದ್ವಿತೀಯಸದಾನಂದಚಿದಾತ್ಮನಲ್ಲಿಯೇ ಆನಂದವನ್ನು ಅಭವಿಸುತ್ತಾ ಇರು.

೨೧೭–೨೨೪. ಯಾವನು ಈ ಶರೀರಾದಿಗಳಿಂದ ಮುಕ್ತನಾಗಿ ಪರಂಜ್ಯೋತಿಯಾದ ಆತ್ಮನಲ್ಲಿಯೇ ನಿಂತಿರುವನೋ ಅವನು ಮುಕ್ತನು. ಮುಕ್ತನು ಪ್ರತ್ಯಗ್ದೃಷ್ಟಿಯಿಂದ ಬಾಹ್ಯಪ್ರವೃತ್ತಿಗಳನ್ನು ತೊಲಗಿಸಿಕೊಂಡು ಆತ್ಮಾನಂದರಸವನ್ನನುಭವಿಸುತ್ತಿರುವನು. ಉನ್ಮತ್ತನಂತೆಯೂ ಬಾಲನಂತೆಯೂ ಎಲ್ಲೆಲ್ಲಿಯೂ ಆತ್ಮವೃತ್ತಿಯಿಂದೊಡಗೂಡಿರುವನು. ದೃಶ್ಯವೆಲ್ಲವನ್ನೂ ಸಾಕ್ಷಿಯಾದ ಬ್ರಹ್ಮದಲ್ಲಿ ಪ್ರಲಯಮಾಡಿಕೊಂಡು ಪೂರ್ಣಸ್ವರೂಪದಿಂದಲೇ ಇರುತ್ತಿರುವನು. ಸರ್ವಭೂತಗಳಲ್ಲಿಯೂ ಆತ್ಮನನ್ನು ಆತ್ಮನಲ್ಲಿ ಸರ್ವಭೂತಗಳನ್ನೂ ಕಂಡುಕೊಂಡು ಸರ್ವಾತ್ಮಭಾವದಿಂದ ಇರುತ್ತಿರುವನು. ಯಾವನಿಗೆ ಶರೀರದಲ್ಲಿ ಆಶೆಯಿರುವದಿಲ್ಲವೋ, ಅದು ಬೇಕೆಂಬ ಆಗ್ರಹವೂ ಇರುವದಿಲ್ಲವೋ, ಯಾವನಿಗೆ ಬ್ರಹ್ಮದಲ್ಲಿಯೇ ನೆಲೆನಿಂತಿರುವದರಿಂದ ಶರೀರದಲ್ಲಿ ಆತ್ಮಬುದ್ಧಿಯಿರುವದಿಲ್ಲವೋ, ಇದು ಕಾರ್ಯ, ಇದು ಅಕಾರ್ಯ – ಎಂಬ ಬುದ್ಧಿಯೂ ಯಾವನಿಗಿರುವದಿಲ್ಲವೋ ಅವನು ಜೀವನ್ಮುಕ್ತನು – ಎಂದು ವಸಿಷ್ಠ ಮುನಿಯು ಹೇಳಿರುತ್ತಾನೆ. ನೀನು ನಿರ್ವಿಕಲ್ಪಸಮಾಧಿಯಿಂದ ನಿನ್ನ ಆತ್ಮನೇ ಸರ್ವಾತ್ಮನೆಂಬುದನ್ನು ಕಂಡುಕೊಂಡು, ನಿನ್ನ ಆತ್ಮನಲ್ಲಿಯೇ ಎಲ್ಲವನ್ನೂ ಲಯಮಾಡಿಕೊಂಡು ಪೂರ್ಣಾತ್ಮರೂಪದಿಂದ ಇರು. ಚಿತ್ತಪಕ್ಷಿಗೆ ವಿಷಯಾಶೆ, ವಿಷಯಸ್ಮೃತಿ– ಎಂಬ ಎರಡು ರೆಕ್ಕೆಗಳಿವೆ ; ಅವುಗಳನ್ನು ಕತ್ತರಿಸಿದರೆ ಅದು ಸುಮ್ಮನಾಗುವದು.

೨೨೫–೩೩೧. ಮುಮುಕ್ಷುವಾದ ಯತಿಗೆ ಸ್ನಾನಮಂತ್ರಾರ್ಚನಕೀರ್ತನಾದಿಗಳು ಬೇಕಿಲ್ಲ, ಅವು ಅನಾತ್ಮಬುದ್ಧಿಯನ್ನು ಬೆಳೆಯಿಸುತ್ತವೆ. ಶ್ರುತಿಯು ಕರ್ಮದಿಂದಲಾಗಲಿ ಪ್ರಜೆಯಿಂದಲಾಗಲಿ ಅಮೃತತ್ವವು ಲಭಿಸುವದಿಲ್ಲವೆಂದು ಹೇಳುತ್ತದೆ. ಕರ್ಮಸಂನ್ಯಾಸವನ್ನು ಮಾಡಿ ಶ್ರವಣಮಾಡಬೇಕು ಎಂದು ಸ್ಮೃತಿಯಿದೆ. ಅದ್ದರಿಂದ ಶ್ರವಣವನ್ನೇ ಮಾಡುತ್ತಿರಬೇಕು ; ಕರ್ಮಸಂಬಂಧದಿಂದ ಶ್ರವಣಜನ್ಯಜ್ಞಾನವು ನಾಶವಾಗುತ್ತದೆ.

೨೩೨–೨೩೬. ಬ್ರಹ್ಮಾತ್ಮೈಕತ್ವಜ್ಞಾನವಾಗುವವರೆಗೂ ಸದ್ಗುರುವಿನ ಬಳಿಯಲ್ಲಿದ್ದು ಕೊಂಡು ಶ್ರವಣವನ್ನು ಮಾಡುತ್ತಿರಬೇಕು. ಶ್ರುತಿವಾಕ್ಯದಲ್ಲಿ ಶ್ರದ್ಧೆಯಿರಬೇಕು. ಲೌಕಿಕವಚನಗಳು, ಕರ್ಮಶಾಸ್ತ್ರ – ಇವುಗಳಿಗಿಂತಲೂ ತತ್ತ್ವಮಸಿ ಎಂಬ ಶ್ರುತಿಯು ಹೆಚ್ಚಿನ ಪ್ರಮಾಣವೆಂದೂ ನಂಬಬೇಕು.

೨೩೮–೨೪೪. ಅನಾತ್ಮದಲ್ಲಿರುವ ಪ್ರೀತಿಯನ್ನು ಬಿಟ್ಟು ಆತ್ಮಬುದ್ಧಿಯನ್ನು ಬೆಳೆಯಿಸಿಕೊಳ್ಳಬೇಕು. ಅವಿದ್ಯಾಕಲ್ಪಿತವಾದ ಅನಾತ್ಮವನ್ನು ಅಲ್ಲಗಳೆದಮಾತ್ರದಿಂದ ಬ್ರಹ್ಮವು ತಾನೇ ಬೆಳಗುತ್ತದೆ. ಅನಾತ್ಮಕ್ಕೆ ಬ್ರಹ್ಮದ ಇರವನ್ನು ಬಿಟ್ಟರೆ ಮತ್ತೆ ಯಾವ ಇರವೂ ಇರುವದಿಲ್ಲ ; ಅವುಗಳಲ್ಲಿ ಕಾಣುವ ಚೈತನ್ಯವೂ ಅದರದೇ.

೨೪೫–೨೪೬. ತಮ್ಮ ಆತ್ಮನೇ ಬ್ರಹ್ಮವೆಂದೂ ಸರ್ವವೂ ಬ್ರಹ್ಮವೇ ಎಂದೂ ಕಂಡುಕೊಂಡವರಿಗೆ ಮತ್ತೆ ಯಾವ ದೇವಲೋಕಗಳಲ್ಲಿಯೂ ರುಚಿಯಿರುವದಿಲ್ಲ, ಆ ದೇವತೆಗಳಾಗಲಿ ಅವರ ಲೋಕಗಳಾಗಲಿ ಬ್ರಹ್ಮಕ್ಕಿಂತ ಬೇರೆಯಾಗಿರುವದೂ ಇಲ್ಲ.

೨೪೭–೨೬೦. ಯಾವದರಲ್ಲಿ ಮನಸ್ಸಿರುವದೋ ಅದರ ಆಕಾರವಾಗಿಯೇ ಅದು ಆಗಿಬಿಡುತ್ತದೆ. ಆದ್ದರಿಂದ ಆತ್ಮಜ್ಞಾನಿಗಳಿಗೆ ಮನೋಜಯವೂ ಬಹಳ ಸುಲಭ. ಬ್ರಹ್ಮವೇ ತಾನೆಂದೂ ಎಲ್ಲವೂ ಬ್ರಹ್ಮವೆಂದೂ ತಿಳಿದುಕೊಂಡಿರುವವನಿಗೆ ಮನಸ್ಸು ವಿಷಯಾಕಾರವಾಗಿ ಆಗುವದಾಗಲಿ ಹೊರಕ್ಕೆ ಹೋಗುವದೆಂಬುದಾಗಲಿ ಇರುವದಿಲ್ಲ. ಅವನ ಜ್ಞಾನವು ಪಕ್ವವಾಗಿ ಬ್ರಹ್ಮದಲ್ಲಿಯೇ ನಿಂತುಬಿಡುವದು. ವಿವಿಧಕಲ್ಪನೆಗಳನ್ನು ಮಾಡುವದೇ ಮನಸ್ಸು, ಅದಿಲ್ಲದಿದ್ದರೆ **ಅಮನಸ್ಕತ್ವವೇ,** ಅದ್ವಯಬ್ರಹ್ಮವೇ ; ಮನಸ್ಸೇ ಜ್ಞಾತೃಜ್ಞಾನಾದಿಭೇದಗಳಾಗಿ ತೋರಿಕೊಳ್ಳುತ್ತದೆ ; ಸುಷುಪ್ತಿಯಲ್ಲಿ ಹೇಗೋ ಹಾಗೆ ಸುಷುಪ್ತಿಸಮಾಧಿಗಳಲ್ಲಿ ಅದು ನಾಶವಾದಾಗ ಯಾವ ನಾನಾತ್ವವೂ ಇರುವದಿಲ್ಲ. ಆದ್ದರಿಂದ ಮನೋಲಯವನ್ನು ಮಾಡಿಕೊಳ್ಳುವದೇ ಮುಕ್ತಿ. ಅದಕ್ಕಿಂತ ಪರಮಪುರುಷಾರ್ಥವು ಬೇರೆಯಿಲ್ಲ.

೨೬೧–೨೭೭. ಬ್ರಹ್ಮಸ್ವರೂಪದಿಂದಿರುವಾತನು ಸ್ಥೂಲದೇಹಾದಿಗಳಿಂದ ಮುಕ್ತನಾಗಿರುತ್ತಾನಾದ್ದರಿಂದ ಅವನು **ಜೀವನ್ಮುಕ್ತನು.** ಅವನು ದೇಹಾದಿಗಳಲ್ಲಿ ನಾನುನನ್ನದೆಂಬ ಬುದ್ಧಿಯನ್ನು ಮಾಡುವದಿಲ್ಲವಾಗಿ ಲೋಕದೃಷ್ಟಿಯಿಂದಲೂ ಅವನು ಜೀವನ್ಮುಕ್ತನು. ಹೀಗೆ ದೇಹೇಂದ್ರಿಯಾದಿಗಳಲ್ಲಿ ನಾನುನನ್ನದೆಂಬ ಭಾವವಿಲ್ಲದವನು ಜೀವನ್ಮುಕ್ತನೇ. ಬ್ರಹ್ಮಜ್ಞಾನಿಯಾದವನು ಬ್ರಹ್ಮದಲ್ಲಿಯೇ ಬ್ರಹ್ಮರೂಪದಿಂದ ನೆಲೆನಿಂತು ಬ್ರಹ್ಮಾನಂದವನ್ನೇ ಅನುಭವಿಸುತ್ತಿರುವನು. ಅವನು ತನ್ನ ಆತ್ಮನಲ್ಲಿಯೇ ನಿಂತು ಆತ್ಮಾರಾಮನಾಗಿರುವವನು. ದೇಹಾದಿಗಳಲ್ಲಿ ಅಹಂಭಾವನೆಯಿಲ್ಲದ್ದೇ **ಮುಕ್ತನಿಗೆ** ಲಕ್ಷಣವು. ಹಿಂದೆ ಆದದ್ದನ್ನು ನೆನೆಸದೆ ಮುಂದೆ ಬರಲಿರುವದನ್ನು ವಿಚಾರಿಸದೆ ಬಂದದ್ದರಲ್ಲಿ ಉದಾಸೀನನಾಗಿರುವದೇ **ಜೀವನ್ಮುಕ್ತಲಕ್ಷಣವು.** ಎಲ್ಲೆಲ್ಲಿಯೂ ಸಮದರ್ಶಿಯಾಗಿ ಇಷ್ಟಾನಿಷ್ಟಾರ್ಥಗಳಿಂದ ವಿಕಾರವನ್ನು ಪಡೆಯದೆ ಇರುವದೇ **ಜೀವನ್ಮುಕ್ತಲಕ್ಷಣವು.** ಇಂಥ ಬ್ರಹ್ಮಜ್ಞಾನಿಯು ಬ್ರಹ್ಮಾನಂದವನ್ನು ಬಿಟ್ಟು ವಿಷಯಸುಖದಲ್ಲಿ ಹೇಗೆ ಮನಸ್ಸಿಟ್ಟಾನು ? ನಿಜವಾಗಿ ವಿಷಯಗಳಲ್ಲಿ ಸಿಕ್ಕುವ ಆನಂದವೂ ಆತ್ಮಾನಂದವೇ ಎಂದು ತಿಳಿಯಬೇಕು.

೨೭೮–೨೮೩. ಸಂಸಾರಕ್ಕೆ ವಾಸನೆಯೇ ಕಾರಣವು. ಅದೇ **ಶಕ್ತಿ ಪ್ರಕೃತಿ, ಅವಿದ್ಯೆ.** ಸುಷುಪ್ತಿಯಿಂದ ಮತ್ತೆ ಜೀವರು ಹಿಂತಿರುಗುವದಕ್ಕೆ ವಾಸನೆಯೇ ಕಾರಣ. ವಾಸನೆಯಿಂದಲೇ ಸಂಸಾರಬಂಧ, ವಾಸನಾಮುಕ್ತಿಯೇ ಮುಕ್ತಿ; ಹೀಗೆಂದು ವಸಿಷ್ಠರು ಹೇಳಿರುತ್ತಾರೆ. ಬ್ರಹ್ಮನಿಷ್ಠೆಯಿಂದ ವಾಸನೆಯ ಕ್ಷಯವಾಗುತ್ತದೆ.

೨೮೪–೨೯೫. ಸ್ಥೂಲಸೂಕ್ಷ್ಮಕಾರಣಶರೀರಗಳನ್ನು ಅದಕ್ಕೆ ಗೊತ್ತಾದ ಸಾಧನದಿಂದ ನಾಶಗೊಳಿಸಿಕೊಳ್ಳಬೇಕು. ಬ್ರಹ್ಮಾತ್ಮೈಕತ್ವಜ್ಞಾನದಿಂದ ಕಾರಣಶರೀರವಾದ **ಮೂಲಾವಿದ್ಯೆಯ** ನಾಶವಾಗುವದು. ಪ್ರಪಂಚವನ್ನೆಲ್ಲ ಬ್ರಹ್ಮರೂಪದಿಂದ ಕಂಡು ವಾಸನಾ(ಸೂಕ್ಷ್ಮ) ಶರೀರವನ್ನು ನಾಶಗೊಳಿಸಬೇಕು. ಅಕರ್ತ್ರಾತ್ಮಜ್ಞಾನದಿಂದ ಮೂರು ಬಗೆಯ ಕರ್ಮಗಳನ್ನೂ ಸುಟ್ಟುಹಾಕಿ ಸ್ಥೂಲ ಶರೀರವನ್ನು ನಾಶಗೊಳಿಸಿಕೊಳ್ಳಬೇಕು. ವಿಶ್ವವೂ ತಾನೂ ಬ್ರಹ್ಮಮಾತ್ರವೆಂದು ಸಂತತವಾಗಿ ಜ್ಞಾನವಿದ್ದರೆ ಆವೃತಿಯ (ಕಾರಣಶರೀರ)ನಾಶವಾಗುವದು ; ನಾನು, ನನ್ನದು – ಎಂಬ ಪ್ರತ್ಯಯವುಂಟಾಗದೆ ಇದ್ದಲ್ಲಿ ಸೂಕ್ಷ್ಮಶರೀರನಾಶವಾಗುವದು. ಕಾರಣಸೂಕ್ಷ್ಮಶರೀರಗಳ ನಾಶವಾಗಿ ಸುಖದುಃಖಗಳನ್ನು ಪ್ರತಿಕ್ರಿಯೆಯಿಲ್ಲದೆ ಭೋಗಿಸುವದಾದರೆ ಸ್ಥೂಲದೇಹನಾಶವಾಯಿತೆಂದು ತಿಳಿಯಬೇಕು. ಈ ಮೂರರಲ್ಲಿ ಯಾವದೊಂದೂ ಉಳಿದರೂ ಮುಕ್ತಿಯಾದಂತಲ್ಲ.

